ಸಂವಾದ

ಸೆಪ್ಟೆಂಬರ್ ೨೦೦೫ ರೂ.೨೦

ರಾಜಕೀಯ ಮತ್ತು ಧರ್ಮ

ಸಂವಾದ
ಮಾಸ ಪತ್ರಿಕೆ

ಸಂಪುಟ ೩. ಸಂಚಿಕೆ ೧೧
ಸೆಪ್ಟೆಂಬರ್ ೨೦೦೫

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ|| ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
✆ ೨೩೨೮೭೯೪೩ / ೯೪೪೮೦ ೪೮೩೦೬
ಇ-ಮೇಲ್ ವಿಳಾಸ : samvaada@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ...

❑ ಪತ್ರಗಳು ೩
❑ ಬೈದೇ ಬಾಳುವವರು ೪
○ ಅರವಿಂದ ಚೊಕ್ಕಾಡಿ
❑ ಅಂತರಂಗ ೫
❑ ಸಂಪಾದಕರೊಂದಿಗೆ ಸಂವಾದ ೬
○ ಸಿ.ಹರೀಶ್ ಕುಮಾರ ಗಂಗನ ಬೀಡು
❑ ರಾಜಕೀಯದಿಂದ ಧರ್ಮ ದೂರವಿರಲಿ ೮
○ ಬಿ.ವಿ.ವೀರಭದ್ರಪ್ಪ



❑ ಅಡ್ವಾಣಿ, ಜಿನ್ನಾ ಮತ್ತು ಸೆಕ್ಯೂಲರಿಸಂ ೧೦
○ ನಾ.ದಿವಾಕರ್
❑ ಜಡತೆ ಮತ್ತು ಚಲನಶೀಲತೆ ೧೪
○ ಡಾ||ಸಣ್ಣರಾಮ
❑ ಮುಸ್ಲಿಂ ನಿಖಾನಾಮಕ್ಕೆ ನೂತನ ಭಾಷ್ಯ ಬರೆದ ಮಹಿಳೆಯರು ೧೮
○ ಕೆ.ಷರೀಫಾ
❑ ಗೊಲ್ಲ ಜನಾಂಗದ ಆರ್ಥಿಕತೆ ೨೨
○ ಡಾ.ವಾಸುದೇವ ಸೇಡಂ
○ ಎಚ್. ವಿಠೋಬ ಭೀಮಣ್ಣ
❑ ಹೊಸ ಪುಸ್ತಕ ೨೬
❑ ಭೀಮಸೇನಾನಿ: ಬಿ.ಶ್ಯಾಮಸುಂದರ ೨೮
○ ಡಾ||ಎಚ್.ಟಿ.ಪೋತೆ
○ ಡಾ||ಜಗನ್ನಾಥ ಸಿಂಧೆ
❑ ದಲಿತ ಶರಣ-ವಚನಕಾರರು - ೨ ೩೧
ಎರಡನೇ ಸ್ವಾತಂತ್ರ್ಯ ಹೋರಟ
○ ಶಂಕರ ಮ.ಪಾಟೀಲ
❑ ಜಾಗತೀಕರಣ ಮತ್ತು ದೇಶೀದಂಗೆ ೩೪
○ ಡಾ||ಅರವಿಂದ ಮಾಲಗತ್ತಿ
❑ ದಲಿತ್ ಡೈರಿ ೩೮
ನವರತ್ನಗಳು ಎಲ್ಲಿ ಹೋದವು?
○ ಚಂದ್ರಭಾನ್ ಪ್ರಸಾದ್
❑ ಬುದ್ಧಾಯಣ ೪೨
○ ಸಿ.ಎಚ್. ರಾಜಶೇಖರ್



ಕವನಗಳು : ❑ ಬಾಬಾರಲ್ಲಿ ಮೊರೆ ೩೦ ❑ ಚಂದ್ರಹಾಸ ಬಾಲಕನ ಬಾಲಲೀಲೆ ೩೭
❑ ಪರೀಕ್ಷೆ ೨೧

ಮುಖಪುಟ ಕಲೆ: ಇರಾನ್‌ದೇಶದ ಪ್ರಾಚೀನ ಶಿಲ್ಪ ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಮಹಿಳೆ: ಹೊಸ ಚಿಂತನೆ, ಸವಾಲು

ಗೌರವಾನ್ವಿತ ಹೊನ್ನಾಪುರ ಅವರಿಗೆ,

ಮಹಿಳಾ ಚಳವಳಿ–ಸ್ತ್ರೀ ಸಮಾನತೆ ಇತ್ಯಾದಿಗಳೆಲ್ಲ ಕೇವಲ ಮೇಲ್ವರ್ಗದ ಮಹಿಳೆಯರ ಹಿತಾಸಕ್ತಿಗಳನ್ನು ಕಾಪಾಡುತ್ತಲೇ ಸೊರಗುತ್ತಿರುವ ಈ ದಿನಗಳಲ್ಲಿ ಡಾ॥ ವಸು ಅವರು ಮಹಿಳಾ ಚಳವಳಿಗೆ ಹೊಸ ವ್ಯಾಖ್ಯಾನ ನೀಡಲು ಹೊರಟಿರುವುದು ಆಶಾದಾಯಕವಾಗಿ ಕಾಣುತ್ತಿದೆ.

'ಸಾಂಸ್ಕೃತಿಕ ಭ್ರೂಣ ಹತ್ಯೆ' ಎಂಬ ಹೊಸ ಆಯಾಮದ ಕಲ್ಪನೆಯೇ ಅದ್ಭುತವಾಗಿದೆ. ಸ್ತ್ರೀವಾದಿ ಚಿಂತನೆಗಳು ಕೂಡ ಹೇಗೆ ಮೇಲ್ವರ್ಗದ ಹಿತಾಸಕ್ತಿಗಳನ್ನು ಮಾತ್ರ ಪೋಷಿಸುತ್ತವೆ ಎಂಬುದು ಲೇಖನ'ದಲ್ಲಿ ನಿಚ್ಚಳವಾಗಿ ವ್ಯಕ್ತವಾಗಿದೆ. ಆದರೆ, ಒಟ್ಟಾರೆ ಮಹಿಳೆಯೇ ಅಲಕ್ಷ್ಯಕ್ಕೆ ಒಳಗಾಗಿರುವುದರಿಂದ ಮಹಿಳಾ ಚಳವಳಿಯಲ್ಲಿನ ಮೇಲ್ವರ್ಗದ ಹಿತಾಸಕ್ತಿಗಳನ್ನು ಸಹ ಕೆಲಕಾಲ ನಾವೆಲ್ಲ ಸಹಿಸಬೇಕಾಗುತ್ತದೆ!

ಮಹಿಳೆ ಮೇಲ್ವರ್ಗದವಳಿರಲಿ, ಕೆಳವರ್ಗದವಳಿರಲಿ– ಕೆಲವು ಸಮಾನ ಶೋಷಣೆಯ ಅಂಶಗಳು ಇಬ್ಬರಿಗೂ ಅನ್ವಯಿಸುತ್ತವೆ. ಎಲ್ಲವೂ ಕೆಳವರ್ಗದ ದೃಷ್ಟಿಕೋನದಿಂದಲೇ ಆಗಬೇಕು ಎಂದಾದರೆ, ಇಂಥ ಚಳವಳಿಗಳು ಆರಂಭವಾಗದೇ ಭ್ರೂಣದಲ್ಲೇ ಕರಗಿ ಹೋಗಿ ಬಿಡಬಹುದು. ಡಾ॥ವಸು ಅವರ ಚಿಂತನಾಕ್ರಮ ಒಟ್ಟಾರೆ ಮಹಿಳಾ ಚಳವಳಿಯನ್ನು ಪ್ರಶ್ನಿಸದೆ ಅದರ ದಿಕ್ಕನ್ನು ಮಾತ್ರ ಪ್ರಶ್ನಿಸಿರುವುದು ಮತ್ತು ಅದು ಹಿಡಿಯಬೇಕಾದ ದಾರಿಯನ್ನು ಗುರುತಿಸಿರುವುದು ಈ ಹಿನ್ನೆಲೆಯಲ್ಲಿ ಔಚಿತ್ಯಪೂರ್ಣವಾಗಿದೆ.

ದಲಿತ ಚಳವಳಿಗಳಾಗಲಿ, ರೈತ ಚಳವಳಿಗಳಾಗಲಿ, ಕಾರ್ಮಿಕ ಚಳವಳಿಗಳಾಗಲಿ, ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವನ್ನೇನೂ ಕೊಟ್ಟಿಲ್ಲ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಆಯಾ ವರ್ಗದ ಮಹಿಳೆಯರಲ್ಲಿ ಇನ್ನೂ ಜಾಗೃತಿ ಮೂಡಿಲ್ಲ 'ಹೊರಗೆ' ಓಡಾಡುವ ವಿಚಾರದಲ್ಲೇ ಇನ್ನು ಮೀನ ಮೇಷ ಎಣಿಸುವ ವಾತಾವರಣ ಇದೆ. ಪುರುಷ ಚಳವಳಿಗಾರರೊಂದಿಗೆ ಬೆರೆಯುವಲ್ಲಿ ಕೂಡ ಅವರು ಅಳುಕುತ್ತಾರೆ. ಇಂಥ ಕಡೆ ಈಗಾಗಲೇ ಜಾಗೃತಿಗೊಂಡಿರುವ ಮಹಿಳೆಯರು ಮುಂದಾಗಿ ಕೆಲಸ ಮಾಡಬೇಕಾಗಿದೆ. ವಿಚಿತ್ರ ಎಂದರೆ, ಮಹಿಳೆಯರು ತಮ್ಮ ಸ್ವಾತಂತ್ರ್ಯವನ್ನು ಬೇರೆಯವರಿಂದ 'ಪಡೆಯಲು' ಪ್ರಯತ್ನಿಸುತ್ತಿದ್ದಾರೆಯೇ ವಿನಾ 'ಕಿತ್ತು ಕೊಳ್ಳಲು' ಹೋರಾಡುತ್ತಿಲ್ಲ. ಮದುವೆ–ಸಂಸಾರ ಇದಿಷ್ಟೇ ಸರ್ವಸ್ವ ಎಂದು ಮನೆ ಸೇರಿರುವ ಮಾಜಿ ಹೋರಾಟಗಾರ್ತಿಯರು ಇದಕ್ಕೆ ಉತ್ತರ ಕೊಡಬೇಕು. ಈ ಕುರಿತು ಪೂರ್ವಾಗ್ರಹವಿಲ್ಲದ, ಮುಕ್ತ ಚರ್ಚೆ ಆಗಬೇಕು.

ಡಾ॥ ಅನಿತ ಸವಣೂರ, ಧಾರವಾಡ

ಭಾಷೆಯಾಗಿ ಇಂಗ್ಲೀಷ್

ಪ್ರಿಯ ಸಂಪಾದಕರೇ,

ಪ್ರಾಥಮಿಕ ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಕೆಗೆ ವಿರೋಧಿಸುತ್ತಿರುವವರ ವಿಚಾರಗಳು ನನಗೇಕೋ ಸರಿಕಾಣುತ್ತಿಲ್ಲ. ನಾ.ದಿವಾಕರ್ ಸಮಸ್ಯೆಯ ಎರಡೂ ಬದಿಗಳನ್ನು ವಿಶ್ಲೇಷಿಸಿದ್ದರೆ, ಶಿವ ಸುಂದರ್ ಅವರು ಇಂಗ್ಲೀಷ್ ಭೂತವನ್ನು ಮೈಮೇಲೆ ಬರಿಸಿಕೊಂಡಿದ್ದಾರೆ. ಜಾಗತೀಕರಣಕ್ಕೂ ಇಂಗ್ಲೀಷ್ ಕಲಿಕೆಗೂ ಸಂಬಂಧ ಕಲ್ಪಿಸುವುದು ಸಮಂಜಸವಲ್ಲ. ಅವರ ವಾದ ಸಂಪೂರ್ಣ ಪೂರ್ವಾಗ್ರಹವಾದುದಾಗಿದ್ದು, ಕೆಳವರ್ಗಗಳ ಆಶಯಕ್ಕೆ ವಿರುದ್ಧವಾದುದಾಗಿದೆ. ಕನ್ನಡ ಸಂಸ್ಕೃತಿ ಕೇವಲ ಇಂಗ್ಲೀಷ್ ಕಲಿಕೆಯಿಂದ ನಾಶವಾಗುವುದಾದರೆ ಅದು ಇಷ್ಟು ವರ್ಷಗಳ ಕಾಲ ಇರುತ್ತಲೇ ಇರಲಿಲ್ಲ. ಕನ್ನಡ ಚಳವಳಿಕಾರರು ಕನ್ನಡಿಗರ ಜೀವನವನ್ನು ಉತ್ತಮ ಪಡಿಸುವ ಯಾವ ಕೆಲಸವನ್ನೂ ಮಾಡದೆ ಕೇವಲ ಭಾಷೆ ಉಳಿಸುವ ಬೂಟಾಟಿಕೆ ಪ್ರದರ್ಶಿಸುತ್ತಿದ್ದಾರೆ ಅಷ್ಟೆ. ಇನ್ನಾದರೂ ಅವರು ತಮ್ಮ ಹೋರಾಟದ ಮಾರ್ಗಗಳನ್ನು ಬದಲಾಯಿಸಿಕೊಂಡರೆ ಒಳ್ಳೆಯದು.

ಅರುಣಾಚಲ ಮೂರ್ತಿ, ಬೆಂಗಳೂರು,

ದಯವಿಟ್ಟು ಹೀಗೆ ಮಾಡಬೇಡಿ

ಪ್ರೀತಿಯ ಇಂದೂಧರ್ ಸಾರ್‌ಗೆ,

ನನ್ನ ಪ್ರೀತಿಯ 'ಸಂವಾದ'ವನ್ನು ಈ ಸಾರಿ ನೋಡಿ ತುಂಬಾ ನೊಂದುಕೊಂಡೆ. ವಿಷಯ ವೈವಿಧ್ಯ ಅದ್ಭುತವಾಗಿದ್ದರೂ ಪತ್ರಿಕೆಯಲ್ಲಿ ಅಸಂಖ್ಯ ಕಾಗುಣಿತದ ತಪ್ಪುಗಳಿಂದಾಗಿ, ಓದಲು ತುಂಬಾ ತೊಂದರೆ ಆಯಿತು. ಕರಡು ತಿದ್ದುವವರಿಗೆ ಅಷ್ಟೊಂದು ತೊಂದರೆಯೇ? ನಾನು ಮೈಸೂರಿನಲ್ಲಿದ್ದೇನೆ. ಇಲ್ಲದಿದ್ದರೆ ನಾನೇ ಬಂದು ಬಿಡುವಿನ ವೇಳೆ ನಿಮಗೆ ಸಹಾಯ ಮಾಡುತ್ತಿದ್ದೆ! ಆದರೂ ದಯವಿಟ್ಟು ಇದನ್ನು ಸರಿಪಡಿಸಿ. ನಿಮ್ಮ ಸಂಪಾದಕತ್ವದ ಪತ್ರಿಕೆಯಲ್ಲಿ ಇಂಥದ್ದನ್ನು ನಾನು ನಿರೀಕ್ಷಿಸಲಾರೆ ! ದಯವಿಟ್ಟು ಕ್ಷಮಿಸಿ.

ಎಸ್.ಎಂ. ಸಿದ್ದರಾಜು, ಮೈಸೂರು.

ಪತ್ರಾಗಾರ

ಪ್ರಬುದ್ಧ ಪತ್ರಿಕೆ

ಮಾನ್ಯ ಸಂಪಾದಕರೇ,

'ಸಂವಾದ' ತಿಂಗಳ ಪತ್ರಿಕೆ ನೋಡಿದೆ. ನನ್ನ ಗೆಳೆಯರಾದ ಬಂಡಾಯ ಸಾಹಿತಿ ಪಿರ್ ಭಾಷಾ ರವರನ್ನು ಕಾಣಲೆಂದು ಹೂವಿನ ಹಡಗಲಿಗೆ ಹೋಗಿದ್ದ ನನಗೆ ಅವರ ಹತ್ತಿರ ಟೇಬಲ್ ಮೇಲೆ ಪವಡಿಸಿದ್ದ ಪತ್ರಿಕೆ ನನ್ನ ಕಣ್ಣು ಕುಕ್ಕಿತು. ಪ್ರಬುದ್ಧ ಬರಹಗಾರರ ವೈಚಾರಿಕ– ವೈಜ್ಞಾನಿಕ ದೃಷ್ಟಿಕೋನದ ಲೇಖನಗಳು, ಸಂಪಾದಕೀಯ ನಿಜಕ್ಕೂ ಓದುಗರನ್ನ ತನ್ನತ್ತ ಬರಸೆಳೆದು ಕೊಳ್ಳುವಂತಿವೆ. ನಮ್ಮ ರಾಷ್ಟ್ರ, ರಾಜ್ಯ, ಜಾಗತಿಕ ಮಟ್ಟದ ವಿದ್ಯಾಮಾನಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಅಪಾಯ, ಆತಂಕ, ಬಂದೆರಗಬಹುದಾದ ದುರಂತಗಳ ಬಗ್ಗೆ ಸ್ಪಷ್ಟವಾಗಿ ಸ್ಫುಟವಾಗಿ ಸೂಕ್ಷ್ಮವಾಗಿ ಎಚ್ಚರಿಸಿ ಜಾಗೃತಿ ಗೊಳಿಸುವ ಬರಹಗಳು ವಸ್ತುಸ್ಥಿತಿಯ ಖಚಿತತೆಗೆ ಬದ್ಧವಿರುವ ಲೇಖನಗಳು....

ಹೊಸಳ್ಳಿ ಮಲ್ಲೇಶ್, ಹರಪನಹಳ್ಳಿ

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ	ರೂ. ೨೫೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. / ಡಿ.ಡಿ. ಮಾತ್ರ ಕಳುಹಿಸಬೇಕು.

ಪಾಳೇಕರರ ಜೀವಾಮೃತ

ಸನ್ಮಾನ್ಯ ಹೊನ್ನಾಪುರ ಅವರಿಗೆ,

ಸ್ವಾಮಿ ಆನಂದ್ ಅವರು ಬರೆದಿರುವ ಪಾಳೇಕರರ ಜೀವಾಮೃತ ಲೇಖನ ನಾಡಿನ ರೈತಾಪಿ ಜನಗಳಿಗೆ ಆಧುನಿಕ ಕಾಲದ ಅತ್ಯದ್ಭುತ ವರವಾಗಿ ಮೂಡಿ ಬಂದಿದೆ. ಗ್ರಾಮೀಣ ಭಾರತದಲ್ಲಿರುವ ಅಜ್ಞಾನ–ಬಡತನಗಳು ತೊಲಗಬೇಕಾದರೆ ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಪಾಳೇಕರರ ಈ ಕೃಷಿ ಸಂಜೀವಿನಿಯನ್ನು ಎಲ್ಲ ರೈತರ ಮನೆ–ಮನಗಳಿಗೆ ಮುಟ್ಟಿಸಬೇಕಾಗಿದೆ.

ಆಧುನಿಕ ಕೃಷಿ ಪದ್ಧತಿಗಾಗಿ ಸರ್ಕಾರ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿ ಸಾವಿರಾರು ರೈತರನ್ನು ಆತ್ಮ ಹತ್ಯೆಗೆ ದೂಡುತ್ತಿರುವ ಈ ಸಂದರ್ಭದಲ್ಲಿ, ಸಮಾಜದ ಉದ್ಧಾರಕ್ಕಾಗಿ ದುಡಿಯುವ ಎಲ್ಲರೂ, ಸರ್ಕಾರದ ಮೇಲೆ ಒತ್ತಡ ತಂದು ಸರ್ಕಾರವೇ ಮುಂದೆ ನಿಂತು ಈ ಕೃಷಿ ಪದ್ಧತಿಯ ಪ್ರಚಾರ ಮಾಡಬೇಕಾಗಿದೆ. ಅಲ್ಲದೆ, ದಲಿತ ಮತ್ತು ರೈತ ಸಂಘಗಳು ಕನಿಷ್ಟ ಒಂದೆರಡು ವರ್ಷಗಳ ಕಾಲ ತಮ್ಮೆಲ್ಲ ಕಾರ್ಯಕ್ರಮಗಳನ್ನು ರದ್ದುಪಡಿಸಿ, ಪಾಳೇಕರರ ಕೃಷಿ ಪದ್ಧತಿಯನ್ನು ಪ್ರಚಾರಗೊಳಿಸಿದರೆ ಅದರಂಥ ಸಾಧನೆ ಮತ್ತೊಂದು ಇರಲಾರದು.

ಬಸವರಾಜಹಾದಿಮನಿ, ಮುದ್ದೇಬಿಹಾಳ

ದಯವಿಟ್ಟು ಗಮನಿಸಿ:

ಕಾರಣಗಳಿಂದಾಗಿ 'ನೈಸರ್ಗಿಕ ಕೃಷಿ:ಜೀವಾಮೃತ' ಕುರಿತ ಲೇಖನದ ಮುಂದುವರಿದ ಭಾಗವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಬೈದೇ ಬಾಳುವವರು

ಪ್ರತಿಕ್ರಿಯೆ

○ ಅರವಿಂದ ಚೊಕ್ಕಾಡಿ

'ಸಂವಾದ' ಜುಲೈ - ಆಗಸ್ಟ್ ಸಂಚಿಕೆಯಲ್ಲಿ ನಾ.ದಿವಾಕರ್ ಅವರು ಬರೆದಿರುವ ಪ್ರಾಥಮಿಕ ಶಿಕ್ಷಣ - ಇಂಗ್ಲಿಷ್ ಕಲಿಕೆ ಕುರಿತು ತಮ್ಮ ವಿಚಾರಗಳನ್ನು ಸಮರ್ಥವಾಗಿ ಮಂಡಿಸಿದ್ದು ಅದಕ್ಕಾಗಿ ಅವರು ಅಭಿನಂದನಾರ್ಹರು. ಆದರೆ ಇಡೀ ವಿವಾದದಲ್ಲಿರುವ ಮೂರು ಗುಂಪುಗಳು ಎಂದು ವಿವಾದದಲ್ಲಿ ನಾನಾರೂಪದಲ್ಲಿ ಭಾಗವಹಿಸಿದವರನ್ನು ವಿಭಜಿಸಿದ ಅವರ ಕ್ರಮ ಅಸಮಂಜಸ, ಅಸಮರ್ಥನೀಯ, ಅವೈಚಾರಿಕ ಮತ್ತು ಅವೈಜ್ಞಾನಿಕವಾಗಿದೆ. ಭುವನೇಶ್ವರಿಯ ಆರಾಧನೆಯನ್ನು ಲೇಖಕರು ಅಂಧ ಆರಾಧನೆ ಎನ್ನುವುದಾದರೆ ರಾಮ, ಕೃಷ್ಣ ಏಸು, ಬುದ್ಧ ಗಾಂಧಿ, ಅಂಬೇಡ್ಕರ್ ಇವರೆಲ್ಲರ ಆರಾಧಕರೂ ಅಂಧ ಆರಾಧಕರೇ ಆಗುತ್ತಾರೆ. ಹಾಗಾದರೆ ಎಂ.ಜಿ.ರೋಡ್, ಅಂಬೇಡ್ಕರ್ ಬೀದಿ, ಕಲ್ಯಾಣನಗರಿ ಎಂಬಂತಹ ಹೆಸರುಗಳನ್ನೇ ಯಾಕೆ ಇಡಬೇಕು? ಮುಷ್ಟಿ ಮೈಥುನ ಬೀದಿ, ಮಲಬದ್ಧತೆ ಬೀದಿ, ಸೂಳೆಗಾರಿಕೆ ಬೀದಿ ಅಂತೆಲ್ಲ ಹೆಸರುಗಳನ್ನೇಕೆ ಇಡಬಾರದು? ಈ ಹೆಸರುಗಳೇ ಹೆಚ್ಚು ಅನ್ವರ್ಥವಾಗಬಹುದಲ್ವೇ? ಅಂದರೆ ಆರಾಧನೆ ಎನ್ನುವುದು ಅಂಧವಲ್ಲ, ನಮ್ಮ ಪ್ರೀತಿಯನ್ನು, ಅಭಿಮಾನವನ್ನು, ಗೌರವವನ್ನು ಪ್ರಕಟಪಡಿಸಲು ಇರುವ ಕ್ರಮ. ಮನೆಗೆ ಬಂದ ಅತಿಥಿಗೆ ನಾವು ಕಾಫಿ ಕೊಡುವುದು ಆತನಿಗೆ ಕಾಫಿ ಕುಡಿಯಲಾರದಂತಹ ದುರ್ಗತಿ ಬಂದಿದೆ ಎಂದಲ್ಲ, ನಮಗೆ ಅವನ ಮೇಲಿರುವ ಪ್ರೀತಿಯನ್ನು ಸಾಂಕೇತಿಕವಾಗಿ ವ್ಯಕ್ತಪಡಿಸುವ ಕ್ರಮ ಅದು.

ಎರಡನೆಯದಾಗಿ, ಆಂಗ್ಲ ಭಾಷೆಯ ಅರಿವಿಲ್ಲದಿರುವುದರಿಂದಾಗಿಯೇ ಅವಕಾಶವಂಚಿತರಾದವರ ವರ್ಗ ಎಂದು ಜನರನ್ನು ಪ್ರತ್ಯೇಕಿಸಲಾಗಿದ್ದು ಅವರ ಪ್ರತಿಪಾದನೆಯೇ ಸರಿಯಾದದ್ದು ಎಂದು ಬಿಂಬಿಸುವ ಮುಖೇನ ಈ ಜನರು ಚರ್ಚೆಯನ್ನು ಮುಕ್ತವಾಗಿ ನೋಡದಂತೆ ಮಾಡುವ ತಂತ್ರಗಾರಿಕೆಯನ್ನು ಲೇಖಕರು ಬಳಸಿದ್ದಾರೆ. ಅದಕ್ಕೆ ತಕ್ಕಹಾಗೆ ಕಿ.ರಂ.ನಾಗರಾಜ್‌ರನ್ನು ಉಲ್ಲೇಖಿಸುತ್ತಾ ಎಲ್ಲ ಸೌಲಭ್ಯ ಪಡೆದು ಗ್ರಾಮೀಣ ಜನತೆಯನ್ನು ವಂಚಿಸುತ್ತಿರುವ ಯಥಾಸ್ಥಿತಿವಾದಿಗಳನ್ನು ಜನರನ್ನು ವರ್ಗೀಕರಿಸಿ ಇವರು ಮಾಡುತ್ತಿರುವ ಚರ್ಚೆಯಲ್ಲಿ ಏನಾದರೂ ಸತ್ಯವಿದೆಯಾ ಎಂದು ಯೋಚಿಸದ ಹಾಗೆ ಗ್ರಾಮೀಣ ಜನರ ಬ್ರೈನ್‌ವಾಶ್ ಮಾಡುವ ಟೆಕ್ನಿಕ್ ಅನ್ನು ಲೇಖಕರು ಬಳಸಿದ್ದಾರೆ. ಒಬ್ಬ ಒಳ್ಳೆಯ ಲೇಖಕ ಓದುಗರಿಗೆ ಯೋಚನೆ ಮಾಡಲು ಸ್ಪೇಸ್ ಓಪನ್ ಮಾಡಿಕೊಡಬೇಕೇ ಹೊರತು ಬ್ಲಾಕ್ ಮಾಡುವುದಲ್ಲ. ಕಿ.ರಂ. ನಾಗರಾಜ್ ಯಾರನ್ನೋ ಏನೋ ಕರೆದುಬಿಟ್ಟಿದ್ದಾರೆಂದ ಮಾತ್ರಕ್ಕೆ ಅದು ಸರ್ವಮಾನ್ಯ ಅಭಿಪ್ರಾಯವಲ್ಲ. ಅವರು ಇಡೀ ರಾಜ್ಯದ ಸಾಂಸ್ಕೃತಿಕ ಲೋಕದ ಸರ್ವಾಧಿಕಾರಿಯೂ ಅಲ್ಲ. ಎಲ್ಲ ಸೌಕರ್ಯ ಪಡೆದವರು ಹಿಂದುಳಿದವರನ್ನು ಅಂಧಕಾರದಲ್ಲಿಡುವುದಕ್ಕಾಗಿ... ಎಂದೆಲ್ಲ ಲೇಖಕರು ಹೇಳಿದ್ದಾರಲ್ಲ, ನಾನು ಎಲ್ಲ ಸೌಕರ್ಯ ಪಡೆದವನಲ್ಲ. ನನಗೆ ಸಿಗುವ ಮೂರು ಕಾಸು ಸಂಬಳ ವರ್ಷಕ್ಕೆ ಹತ್ತೇ ತಿಂಗಳು ಸಿಗುತ್ತದೆ. ಸ್ವಂತದ್ದೆನ್ನುವ ಮನೆಯೂ ನನಗಿಲ್ಲ. ಕೂಲಿಕೆಲಸ ಮಾಡಿಯೇ ನಾನು ಕಲಿತದ್ದು. ಆದರೆ ಇಂಗ್ಲಿಷ್‌ನಿಂದಲೇ ನನಗೆ ಮುಕ್ತಿ ಎಂದು ನಾನೆಂದೂ ಯೋಚಿಸಿಲ್ಲ. ಇವತ್ತು ನನ್ನ ಅಭಿಪ್ರಾಯವನ್ನು ದಿಟ್ಟವಾಗಿ ಹೇಳುವ ಶಕ್ತಿ ನನಗೆ ಕೊಟ್ಟಿರುವುದು ಕನ್ನಡವೇ ಹೊರತು ಇಂಗ್ಲಿಷಲ್ಲ. ಸ್ವತಃ ಕಿ.ರಂ.ನಾಗರಾಜ್ ಕೂಡ ಇವತ್ತು ಹೆಸರು ಮಾಡಿದ್ದು ಕನ್ನಡದಿಂದಲೇ ಹೊರತು ಇಂಗ್ಲಿಷ್‌ನಿಂದಲ್ಲ. ಇಂಗ್ಲಿಷ್ ಕಲಿತರೆ ಉದ್ಯೋಗ ಸಿಗಲು ಸಾಧ್ಯ ಎನ್ನುವವರೆಲ್ಲ ಉದ್ಯೋಗ ಜನರೇಟ್ ಆಗುವುದು ಹೇಗೆ ಎಂದು ಯೋಚಿಸಬೇಕು. ಉತ್ಪಾದನೆಯಾದ ಸರಕು ಮತ್ತು ಸೇವೆಗಳಿಗೆ ಪರಿಣಾಮಕಾರಿ ಬೇಡಿಕೆ ಸಿಕ್ಕಿದರೆ ಮಾತ್ರ ಉದ್ಯೋಗ ಜನರೇಟ್ ಆಗುತ್ತದೆ. ಅಮೆರಿಕಕ್ಕೆ ಆ ದೇಶದ ಸಾಂಪತ್ತಿಕ ತೃಪ್ತ ಜನರಿಂದ ಅಂತಹ ಬೇಡಿಕೆ ಸಿಗದಿರುವು ದರಿಂದ ಅದು ಸಾಂಪತ್ತಿಕ ಅತೃಪ್ತಿ ಜಾಸ್ತಿ ಇರುವ ತೃತೀಯ ವಿಶ್ವದ ಮಾರುಕಟ್ಟೆಯನ್ನು ವ್ಯಾಪಿಸಿಕೊಳ್ಳುವುದಕ್ಕಾಗಿ ಜಾಗತೀಕರಣವನ್ನು ಹುಟ್ಟುಹಾಕಿತು. ಅತಿಹೆಚ್ಚು ಸಾಂಪತ್ತಿಕ ಅತೃಪ್ತ ಜನಸಂಖ್ಯೆ ಇರುವ ದೇಶಗಳು ಅದಕ್ಕೆ ಬೇಕು. ಚೈನಾದ ಕಮ್ಯುನಿಸ್ಟ್ ಆಳ್ವಿಕೆಯಿಂದಾಗಿ ಅಲ್ಲಿ ಬೇಕಾದಂತೆ ಒಳ ಪ್ರವೇಶಿಸಲು ಅಮೆರಿಕಕ್ಕೆ ಆಗುತ್ತಿಲ್ಲ. ಅದಕ್ಕಾಗಿಯೇ ಅದಕ್ಕೆ ಈಗ ಭಾರತದ ಮೇಲೆ ಭಾರೀ ಪ್ರೀತಿ. ಆದರೆ ಭಾರತದ ಸಾಂಸ್ಕೃತಿಕ ನೇಲೆಗಳು ಅವುಗಳದೆ ಆದ ಆರ್ಥಿಕ ಬೇಡಿಕೆ ಹೊಂದಿದ್ದು ,ಅದನ್ನು ಸಣ್ಣ ಪ್ರಮಾಣದ ಘಟಕಗಳು ಮಾತ್ರ ಪೂರೈಸಬಲ್ಲವು. ಆದರೆ ಅಮೆರಿಕದ ಬಳಿ ಇರುವುದು ದೊಡ್ಡ ಪ್ರಮಾಣದ ಘಟಕಗಳು. ಅಂಥಲ್ಲಿ ಅದರ ಸರಕು ಮತ್ತು ಸೇವೆಗಳ ಮಾರುಕಟ್ಟೆ ವಿಸ್ತರಿಸಬೇಕಾದರೆ ದೇಶೀಯ ಅಭಿರುಚಿ ಬದಲಾಗಬೇಕು. ಅದಕ್ಕೆ ಸಾಂಸ್ಕೃತಿಕ ಶೈಥಿಲ್ಯ ಉಂಟಾಗಿ ಸಣ್ಣ ದೇಶೀ ಘಟಕಗಳು ಮುಚ್ಚಬೇಕು. ಹಾಗಾದಾಗ ಅದರ ವಿಪರೀತ ಉತ್ಪಾದನೆಯ ಸಣ್ಣದೊಂದು ಅಂಶ ಮಾರಾಟವಾಗುತ್ತದೆ. ಆದರೆ ಯಾಂತ್ರೀಕೃತ ಘಟಕದ ಉತ್ಪಾದನೆಗೆ ಮಿತಿಯಿಲ್ಲ. ದೀರ್ಘಾವಧಿಯಲ್ಲಿ ಆದಕ್ಕೆ ಬೇಡಿಕೆ ಸಿಗುವುದಿಲ್ಲ. ಅಂದರೆ ಉದ್ಯೋಗ ಜನರೇಟ್ ಆಗುವುದಿಲ್ಲ. ನಮ್ಮ ಮಕ್ಕಳು ವಿಶ್ವದ ಎಲ್ಲ ಭಾಷೆ ಕಲಿತರೂ ಉದ್ಯೋಗವೇ ಜನರೇಟ್ ಆಗದಿದ್ದರೆ ಉದ್ಯೋಗ ಸಿಗುವುದೆಲ್ಲಿಗೆ? ಈಗ ಒಂದನೆ ತರಗತಿಯಿಂದ ಇಂಗ್ಲಿಷ್ ಕಲಿಯುವ ಮಕ್ಕಳು ಉದ್ಯೋಗ ಕೇಳುವುದು ಸುಮಾರು ಇಪ್ಪತ್ತು ವರ್ಷಗಳ ನಂತರ. ಈಗಿರುವ ಸ್ಥಿತಿಯೇ ಅಲ್ಲಿಯ ತನಕ ಮುಂದುವರಿದರೆ ಕಾರ್ಪೊರೇಟ್ ಪ್ರಪಂಚದಲ್ಲಿ ಉದ್ಯೋಗವೇ ಇರುವುದಿಲ್ಲ. ಆಗ ಇಂಗ್ಲಿಷನ್ನು ತಿಪ್ಪೆಗೆ ಸೆಯಬೇಕಷ್ಟೆ. ಆದರೆ ಸಾಂಸ್ಕೃತಿಕ ವೈಶಿಷ್ಟವನ್ನು ಉಳಿಸಿಕೊಂಡು ಅವು ಕೇಳುವ ಸಣ್ಣ ಪ್ರಮಾಣದ ಸರಕು ಮತ್ತು ಸೇವೆಗಳ ಉತ್ಪಾದನಾ ಘಟಕಗಳನ್ನು ಉಳಿಸಿಕೊಂಡರೆ ಅವು ಹೆಚ್ಚು ಸ್ಥಳೀಯವಾಗಿದ್ದು ಉತ್ಪಾದನೆ ಮತ್ತು ಬೇಡಿಕೆಗಳ ಸಮತೋಲನವನ್ನು ಕಾಯ್ದುಕೊಳ್ಳುವುದರಿಂದ ಅಲ್ಲಿ ಉದ್ಯೋಗ ಸೃಷ್ಟಿ ಒಂದು ಪ್ರಮಾಣದಲ್ಲಾದರೂ ಇರುತ್ತದೆ. ಅಲ್ಲಿ ಕೂಡ ನಮ್ಮ ಮಕ್ಕಳಿಗೆ ಉದ್ಯೋಗ ಸಿಗಬಾರದೆಂಬ ಧಾವಂತವಿದ್ದರೆ ಕನ್ನಡ ಭಾಷೆಯನ್ನು ಕನ್ನಡ ಸಂಸ್ಕೃತಿಯನ್ನು ಸಾಯಿಸಿಬಿಡಿ ಚಿಂತೆಯೇನಿಲ್ಲ. ಒಂದನೆಯ ತರಗತಿಗೆ ಇಂಗ್ಲಿಷ್ ಹಾಕಿದಾಗ ಏನಾಗುತ್ತದೆ ಎಂದು ಯೋಚಿಸಿ. ಈಗ ಶಾಲೆಯಲ್ಲಿ ಕನ್ನಡ ಮಾತಾಡಬೇಕು ತುಳು ಮಾತಾಡಬಾರದು ಎನ್ನುವ ಶಿಕ್ಷಕರು ಅನಿವಾರ್ಯವಾಗಿ ಇಂಗ್ಲಿಷ್ ಮಾತಾಡಬೇಕು ಕನ್ನಡ ಮಾತಾಡಬಾರದು ಎನ್ನತೊಡಗುತ್ತಾರೆ. ಅಂದರೆ ಕರ್ನಾಟಕದಲ್ಲಿ ಇಂಗ್ಲಿಷ್ ಯಜಮಾನ ಭಾಷೆಯ ಸ್ಥಾನಕ್ಕೇರುತ್ತದೆ. ಅದ ರಿಂದ ಆಗುವ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಭಾಷಿಕ, ಶೈಕ್ಷಣಿಕ ಶೈಥಿಲ್ಯಗಳಿಗೆಲ್ಲ ನಾ.ದಿವಾಕರ್, ಕಿ.ರಂ. ನಾಗರಾಜ್ ರಂತಹ ವಿದ್ವಾಂಸರೇ ಹೊಣೆಗಾರರಾಗಬೇಕಾಗುತ್ತದೆ.

ಮೂರನೆಯದಾಗಿ ಶಿಕ್ಷಣವು ಸಂವಿಧಾನದ ಕನ್‌ಕರೆಂಟ್ ಲಿಸ್ಟ್‌ನಲ್ಲಿರುವಾಗ ರಾಜ್ಯ ಸರಕಾರ ಮನಬಂದಂತೆ ಆದೇಶ ಹಾಕಲು ಬರುವುದಿಲ್ಲ. ಸಾಂವಿಧಾನಿಕ ನಿಯಮದ ಪ್ರಕಾರ ಕನ್‌ಕರೆಂಟ್ ಲಿಸ್ಟ್‌ಗೆ ಒಳಪಡುವ ವಿಷಯದಲ್ಲಿ ಕೇಂದ್ರ ಸರಕಾರದ ಕಾನೂನಿಗೆ ವಿರುದ್ಧವಾಗಿದ್ದರೆ ರಾಜ್ಯದ ಕಾನೂನು ಬಿದ್ದುಹೋಗುತ್ತದೆ. 1986ರಲ್ಲಿ ಕೇಂದ್ರವು ಜಾರಿ ಗೊಳಿಸಿದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒಂದರಿಂದ ನಾಲ್ಕರ ತನಕ ಮಾತೃಭಾಷೆಯನ್ನು ಮಾತ್ರ ಕಲಿಸಲು ಅವಕಾಶವಿದೆ. ಅದನ್ನು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೂಡ ಸಮರ್ಥಿಸಿದೆ. ಇದೀಗ ಯು.ಪಿ.ಎ.ಸರಕಾರ ಚರ್ಚೆಗೆ ಬಿಟ್ಟಿರುವ ರಾಷ್ಟ್ರೀಯ ಪಠ್ಯಕ್ರಮದಲ್ಲಿ 'ಜಾಗತೀಕರಣದ ಹಿನ್ನಲೆಯಲ್ಲಿ ಒಂದರಿಂದ ಇಂಗ್ಲಿಷ್ ಕಲಿಸುವ ಬೇಡಿಕೆ ಬಂದಿದೆ. ಆದರೆ ಮಾತ್ರ

(೨೭ ನೇ ಪುಟಕ್ಕೆ)

ನಾನು ಎಲ್ಲ ಸೌಕರ್ಯ ಪಡೆದವನಲ್ಲ. ನನಗೆ ಸಿಗುವ ಮೂರು ಕಾಸು ಸಂಬಳ ವರ್ಷಕ್ಕೆ ಹತ್ತೇ ತಿಂಗಳು ಸಿಗುತ್ತದೆ. ಸ್ವಂತದ್ದೆನ್ನುವ ಮನೆಯೂ ನನಗಿಲ್ಲ. ಕೂಲಿಕೆಲಸ ಮಾಡಿಯೇ ನಾನು ಕಲಿತದ್ದು. ಆದರೆ ಇಂಗ್ಲಿಷ್‌ನಿಂದಲೇ ನನಗೆ ಮುಕ್ತಿ ಎಂದು ನಾನೆಂದೂ ಯೋಚಿಸಿಲ್ಲ. ಇವತ್ತು ನನ್ನ ಅಭಿಪ್ರಾಯವನ್ನು ದಿಟ್ಟವಾಗಿ ಹೇಳುವ ಶಕ್ತಿ ನನಗೆ ಕೊಟ್ಟಿರುವುದು ಕನ್ನಡವೇ ಹೊರತು ಇಂಗ್ಲಿಷಲ್ಲ. ಇಂಗ್ಲಿಷ್ ಕಲಿತರೆ ಉದ್ಯೋಗ ಸಿಗಲು ಸಾಧ್ಯ ಎನ್ನುವವರೆಲ್ಲ ಉದ್ಯೋಗ ಜನರೇಟ್ ಆಗುವುದು ಹೇಗೆ ಎಂದು ಯೋಚಿ ಸಬೇಕು. ಉತ್ಪಾದನೆಯಾದ ಸರಕು ಮತ್ತು ಸೇವೆಗಳಿಗೆ ಪರಿಣಾಮಕಾರಿ ಬೇಡಿಕೆ ಸಿಕ್ಕಿದರೆ ಮಾತ್ರ ಉದ್ಯೋಗ ಜನರೇಟ್ ಆಗುತ್ತದೆ.

ಸಂಪಾದಕೀಯ



ಅಂತರಂಗ

'ಅಹಿಂದ' ರಾಜಕಾರಣ

ರಾಜ್ಯ ರಾಜಕಾರಣದಲ್ಲೀಗ ತಲ್ಲಣದ ಅಲೆಗಳು ಎದ್ದಿವೆ. ಕಾಂಗ್ರೆಸ್. ಬಿ.ಜೆ.ಪಿ. ಹೊರತಾದ ಜನತಾ ಪರಿವಾರದ ಜಾತ್ಯಾತೀತ ಜನತಾದಳ ಬಹುದೊಡ್ಡ ಸಾಮಾಜಿಕ, ರಾಜಕೀಯ ಸ್ಥಿತ್ಯಂತರಕ್ಕೆ ಕಾರಾಣವಾಗುವಂತೆ ಕಾಣುತ್ತಿದೆ. ಕಳೆದ ೨೫-೩೦ ವರ್ಷಗಳಿಂದ ಸಿದ್ಧಗೊಂಡಿದ್ದ ರಾಜಕೀಯ ವೇದಿಕೆಯೊಂದು ಕುಸಿಯಲಾರಂಭಿಸಿದೆ. ಪರಸ್ಪರ ಪೂರಕವಾಗಿದ್ದ ಎರಡು ದೊಡ್ಡ ರಾಜಕೀಯ ಶಕ್ತಿಗಳು ಬೇರೆಯಾಗುವ ಮೂಲಕ ಸಮುದಾಯ ಶಕ್ತಿಗಳೂ ವಿಭಜನೆ ಯಾಗುವ ಹಂತಕ್ಕೆ ಮುಂದುವರೆಯುವ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತಿವೆ.

ಕರ್ನಾಟಕದ ರಾಜಕೀಯ ಚರಿತ್ರೆಯೇ ಹಾಗಿದೆ. ಮೊದಲು ಪ್ರಭಲ ಕೋಮುಗಳ ನಡುವಿದ್ದ ಹಣಾಹಣಿ ಈಗ ಹಿಂದುಳಿದ ವರ್ಗಗಳತ್ತ ತಿರುಗಿದೆ. ಒಕ್ಕಲಿಗ ಲಿಂಗಾಯಿತರು ಪರಸ್ಪರ ವೈರಿಗಳಾಗಿದ್ದರೂ, ಶಕ್ತಿ ರಾಜಕಾರಣದ ಸಾರಥ್ಯ ನಾಡಿನ ಈ ಎರಡು ಪ್ರಭಲ ಕೋಮುಗಳ ಕೈ ಜಾರದಂತೆ ಪರಸ್ಪರರು ಎಚ್ಚರಿಕೆ ವಹಿಸುತ್ತಿದ್ದರು. ಈ ಎರಡೂ ಶಕ್ತಿಗಳನ್ನು ಯಾಮಾರಿಸಿ ಅಗಾಗ್ಗೆ ಬ್ರಾಹ್ಮಣರು ಹಿಡಿದದ್ದು ನಮ್ಮ ಕಣ್ಣೆದುರಿಗಿನ ಇತಿಹಾಸವೇ! ಈ ಎಲ್ಲಾ ಜಟಾಪಟಿ ನಡುವೆ ಶಾಸ್ತ್ರಿಕ್ಕಾದರೂ ಕಾಂಗ್ರೆಸ್ ನೆಲೆಯಲ್ಲಿ ಸಾರಥ್ಯದ ಚಾಟಿ ಹಿಡಿದ ಕಾಂಗ್ರೆಸ್ ನೆಲೆಯಲ್ಲಿ ಒಬ್ಬಿಬ್ಬ ಹಿಂದುಳಿದ ವರ್ಗದ ನಾಯಕರು, ನಾಡು ಗುತುತಿಸುವಂಥ ಕೆಲಸವೇನನ್ನೂ ಮಾಡಲಾಗಲಿಲ್ಲ.

೭೦-೮೦ರ ದಶಕ, 'ಅಹಿಂದ' ಹಿತದೃಷ್ಟಿಯಿಂದ ಎಲ್ಲ ರೀತಿಯಿಂದಲೂ ಕರ್ನಾಟಕದ ಭಾಗ್ಯದ ದಶಕಗಳೆಂದೇ ಕಾಣಿಸುತ್ತವೆ. ಒಂದು ಕಡೆ ದೇವರಾಜ ಆರಸರಂಥ ಆಲ್ಪಸಂಖ್ಯಾತ ಮುಂದುವರೆದ ಕೋಮಿನ ಮನುಷ್ಯ, ಪ್ರಭಲ ಕೋಮುಗಳ ಕಪಿಮುಷ್ಟಿಗೆ ದಕ್ಕದೆ ನಾಡಿನ ಸಾರಥ್ಯ ನಿರ್ವಹಿಸಲು ಸಾಧ್ಯವಾಯಿತು. ಹಾಗೇ ದುರ್ಬಲ ವರ್ಗಗಳು ರಾಜಕೀಯ ಪ್ರಜ್ಞೆ ಬೆಳಸಿಕೊಂಡು ಸಂಘಟಿತರಾಗಲು ಸಾಧ್ಯವಾಯಿತು.

ನಾಡಿನ ಸಾಕ್ಷೀ ಪ್ರಜ್ಞೆಗೆ ಸಮುದಾಯದ ದನಿ ನೀಡಿದ ದಲಿತ ಮತ್ತು ರೈತ ಚಳವಳಿಗಳು ಮುಂಚೂಣಿಗೆ ಬಂದವು. ಸಮಾಜದ ಮುಖ್ಯ ವಾಹಿನಿಯಲ್ಲಿ ಅಲಕ್ಷಿತ ಮುಖಗಳು ಕಾಣಿಸಿಕೊಂಡವು. ಪ್ರಧಾನಿ ಇಂದಿರಾ ಗಾಂಧಿಯವರ 'ಗರೀಬಿಹಟಾವೋ' ಘೋಷಣೆ ಬಳಸಿಕೊಂಡ ದೇವರಾಜ ಅರಸರು ಇಡೀ ದೇಶವೇ ಕಣ್ತೆರೆದು ನೋಡುವಂತ ಸಾಮಾಜಿಕ ಪರಿವರ್ತನೆಗೆ ಕಾರಣರಾದರು ಹೊಸ ಗಾಳಿ-ಬೆಳಕು ನಾಡಿನ ಮೂಲೆ ಮೂಲೆಗೆ ಹಬ್ಬಿತು. ಬಡ ಬಗ್ಗರು ಅಲಕ್ಷಿತರು ಮಾತಾಡುವಂತಾಯಿತು.

ದೇವರಾಜ ಆರಸು ಅವರು ಅಂದು ಬಿತ್ತಿದ ಬೆಳೆ ಇಂದು ಕುಯ್ಲಿಗೆ ಬಂದಿದೆ. ನಾಡಿನ ಬಹುಸಂಖ್ಯಾತ ದುರ್ಬಲ ವರ್ಗ ಒಂದಾಗಿ ರಾಜಕೀಯ ಶಕ್ತಿಯನ್ನು ಪ್ರದರ್ಶಿಸಲು ಸಜ್ಜಾಗಿವೆ. ವೈಯಕ್ತಿಕ ಲಾಭದ ರಾಜಕೀಯ ನಡೆ ಏನೇ ಇರಲಿ ಸಾಮುದಾಯಿಕ ರಾಜಕೀಯ ಇಚ್ಚಾಶಕ್ತಿ ಪ್ರಭಲವಾಗುವ ಸೂಚನೆ ಗಾಢವಾಗುತ್ತಿದೆ.

ದೇವೇಗೌಡ ಮತ್ತು ಸಿದ್ಧರಾಮಯ್ಯ ನಡುವಿನ ವಿವಾದ ವ್ಯಕ್ತಿಗತ ಎನ್ನವುದು ಬಹಳ ಸೀಮಿತ ಸತ್ಯ ಮಾತ್ರ. ಅದರ ವಿಸ್ತ್ರತ ಅಲೆಗಳ ದಲಿತರು. ಹಿಂದುಳಿದವರು ಮತ್ತು ಅಲ್ಪ ಸಂಖ್ಯಾತರ ಮನಸ್ಸಿನಲ್ಲಿ ತೀವ್ರ ದುಃಖ ಮತ್ತು ವಿಷಾದವನ್ನು ಹುಟ್ಟಸಿವೆ. ಈ ದುಃಖ ಮತ್ತು ವಿಷಾದ, ಸಿಟ್ಟಾಗಿ, ರಾಜಕೀಯ ಇಚ್ಚಾಶಕ್ತಿಯಾಗಿ ಪರಿವರ್ತನೆಯಾಗುವ ಎಲ್ಲ ಸಾಧ್ಯತೆಗಳೂ ನಿಚ್ಚಳವಾಗಿವೆ. ಅದನ್ನು ಬಳಸಿಕೊಳ್ಳವ ರಾಜಕೀಯ ಜಾಣ್ಮೆ ಮತ್ತು ಚತುರತೆ ಮಾತ್ರ ಸಿದ್ಧರಾಮಯ್ಯ ಮತ್ತವರ ಸಂಗಡಿಗರಿಗೆ ಬೇಕಾಗಿದೆ.

ಮೇಲ್ನೋಟಕ್ಕೆ ಇದು ಅಷ್ಟು ಸುಲಭದ ಕೆಲಸವಲ್ಲ ಸಿದ್ಧರಾಮಯ್ಯ ತಮ್ಮ ದಕ್ಷತೆಯನ್ನು ಆಡಳಿತ ಹಾಗೂ ಜನಪರ ಚಿಂತನೆಗಳಲ್ಲಿ ತೋರಿಸಿರುವಷ್ಟು ಪ್ರಮಾಣದಲ್ಲಿ ರಾಜಕೀಯ ಚತುರತೆಯಲ್ಲಿ ತೋರಿಸಿಲ್ಲ. ದೇವರಾಜ ಅರಸರಿಗಿದ್ದ ರಾಜಕೀಯ ಚಾತುರ್ಯ ಸಿದ್ಧರಾಮಯ್ಯನವರಿಗೆ ಇರುವ ಬಗೆಗೆ ಅವರ ಗೆಳೆಯರಲ್ಲೇ ಅನುಮಾನವಿದೆ. ಕಳೆದ ಚುನಾವಣೆಯನಂತರ ಅವರು ರಾಜಕೀಯದಲ್ಲಿ ಜಿಗುಪ್ಸ ಗೊಂಡವರಂತೆ ಮಾತನಾಡುತ್ತಿರುವುದು ಅವರು ರಾಜಕೀಯ ನಾಯಕತ್ವದ ಕೌಶಲ್ಯದಲ್ಲಿ ಪಳಗಿಲ್ಲ ಅನ್ನುವುದನ್ನು ತೋರಿಸಿದೆ. ಆದರೂ ಅಹಿಂದ ಸಮಾವೇಶದ ನಂತರದ ಬೆಳವಣಿಗೆಗಳು ಅವರಲ್ಲಿ ಹೊಸ ಚೈತನ್ಯವನ್ನು ತುಂಬಿರುವಂತೆ ಕಾಣಿಸುತ್ತಿದೆ.

ಆದರೆ 'ಅಹಿಂದ' ರಾಜಕಾರಣ ಮತ್ತು ಶಕ್ತಿ ರಾಜಕಾರಣ ಜೊತೆ ಜೊತೆಯಾಗಿ ನಡೆಯಲು ಸಧ್ಯವೇ ಎನ್ನುವುದು ಇನ್ನೂ ನಿರ್ಧಾರವಾಗಬೇಕಾದ ಅಂಶ. ಅರಸು ತನ್ನ ನಡೆಯನ್ನು ಬಹಿರಂಗ ಪಡಿಸದೆ ಅಧಿಕಾರ ಹಿಡಿದು, ಸ್ಥಾನ ಭದ್ರಪಡಿಸಿಕೊಂಡು, ನಂತರ ಒಂದೊಂದೇ ಕಾರ್ಯಕ್ರಮ ಜಾರಿಗೊಳಿಸಿ ಯಶಸ್ವಿಯಾದರು. ಆದರೆ ಈಗಿನ ಪರಿಸ್ಥಿತಿ ಹಾಗಿಲ್ಲ. ಸಿದ್ಧರಾಮಯ್ಯನವರ ಕಾರ್ಯಕ್ರಮ ಬಹಿರಂಗ ಗೊಂಡಿವೆ. ಬಲಾಡ್ಯರು ಅವರನ್ನು ಯುದ್ಧಕ್ಕೆ ಮೊದಲೇ ಮಣಿಸಲು ಸನ್ನದ್ಧರಾಗಿದ್ದಾರೆ. ಅಹಿಂದ ಸಮುದಾಯ ತನ್ನ ನೋವು ಸಂಕಟಗಳನ್ನು ಸಂಪೂರ್ಣವಾಗಿ ಮತಗಳನ್ನಾಗಿ ಪರಿವರ್ತಿಸಿದರೆ ಮಾತ್ರ ಈ ಪ್ರಯತ್ನದಲ್ಲಿ ಸಿದ್ಧರಾಮಯ್ಯ ವಿಜಯಿಯಾವಾಗಲು ಸಾಧ್ಯ. ವೈಯಕ್ತಿಕ ಲಾಭ ಹಾಗೂ ಅಧಿಕಾರಕ್ಕಾಗಿ ಎಲ್ಲವನ್ನೂ ಮಾರಿಕೊಳ್ಳಲು ಸಿದ್ಧವಿರುವ 'ಅಹಿಂದ' ಸಮುದಾಯಗಳ ಮುಖಂಡರೂ ಸಾಕಷ್ಟು ಸಂಖ್ಯೆಯಲ್ಲಿ ಇರುವುದರಿಂದ ಇದು ಸಾಧ್ಯವೇ ಎಂಬ ದೊಡ್ಡ ಪ್ರಶ್ನೆ ನಮ್ಮ ಮುಂದಿದೆ. ದೇವೇಗೌಡರು ಈಗಾಗಲೇ ಇಂಥ ಪ್ರಯತ್ನಕ್ಕೆ ಕೈಹಾಕಿದ್ದಾರೆ. ತತ್ವ-ಸಿದ್ಧಾಂತಗಳಿಲ್ಲದ ಜನತಾದಳದಲ್ಲಿರುವ ಅಹಿಂದ ಸಮುದಾಯದ ಬಹಳ ಜನ ಮುಖಂಡರು ಅವರೊಂದಿಗೇ ಇದ್ದಾರೆ. ಇದು ಸಿದ್ಧರಾಮಯ್ಯನವರಿಗೆ ಬಹುದೊಡ್ಡ ಸವಾಲು.

'ಅಹಿಂದ'ವನ್ನು ರಾಜಕೀಯೇತರ ಸಂಘಟನೆಯನ್ನಾಗಿ ಉಳಿಸಿಕೊಳ್ಳವ ಮಾತುಗಳನ್ನು ಸಿದ್ಧರಾಮಯ್ಯ ಆಡಿದ್ದಾರೆ. ಇದು ಒಂದು ತಂತ್ರ ಮಾತ್ರವಾಗಿದ್ದರೆ ಸರಿ. ಇಲ್ಲದಿದ್ದರೆ ಅದಕ್ಕೆ ಅರ್ಥವೇ ಇಲ್ಲ. ರಾಜಕೀಯದ ಹೊರತಾದ ಯಾವುದೇ ಚಳವಳಿ ಇರಲು ಸಾಧ್ಯವಿಲ್ಲ. ಧರ್ಮ- ಸಂಸ್ಕೃತಿಗಳೇ ಪೂರ್ಣಪ್ರಮಾಣದ ರಾಜಕೀಯದಲ್ಲಿ ತೊಡಗಿರುವಾಗ 'ಅಹಿಂದ' ದಂತ ಸಾಮಾಜಿಕ ಚಳವಳಿ ರಾಜಕೀಯದ ಹೊರತಾಗಿರುವ ಅಗತ್ಯವಿಲ್ಲ. 'ಅಹಿಂದ'ಕ್ಕೆ ಇಂದು ಬೇಕಿದರುವುದೇ ರಾಜಕೀಯ ಇಚ್ಚಾಶಕ್ತಿ ಮತ್ತು ಜಾಗೃತಿ. ರಾಜಕೀಯವಾಗಿ 'ಅಹಿಂದ' ಶಕ್ತಿ ಪ್ರದರ್ಶಿಸಿದಾಗ ಮಾತ್ರ ಅದರ ಉದ್ದೇಶಗಳು ಸಾರ್ಥಕವಾಗುತ್ತದೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಸಮಾಜದಲ್ಲಿ ಯಾವುದೇ ದ್ವೇಷ-ಅಸೂಯೆಗಳು ಮೂಡದಂತೆ ಮಾಡುವುದು ಅಗತ್ಯವಾಗಿದೆ. 'ಅಹಿಂದ' ಸಮುದಾಯದ ಏಳಿಗೆಯಷ್ಟೇ ಈ ಚಳವಳಿಯ ಗುರಿಯಾಗ ಬಾರದು. ಸಮಾಜದ ಸಮಸ್ತರೂ ನೆಮ್ಮದಿಯಿಂದ ಬದುಕುವ ಸಮಾಜ ನಿರ್ಮಾಣವೇ ಅದರ ಗುರಿಯಾಗಬೇಕು. ಯಾರನ್ನೇ ಗುರಿಯಾಗಿಸಿ ನಡೆಸುವ ಯಾವುದೇ ಚಳವಳಿ-ಹೋರಾಟ ತನ್ನ ಸಧ್ಯದ ಉದ್ದೇಶವನ್ನಷ್ಟೇ ಈಡೇರಿಸಿ ಕೊಳ್ಳಬಹುದೇ ಹೊರತು ಸಮಾಜದ ನೆಮ್ಮದಿಯನ್ನು ಕಾಪಾಡಲಾರದು.

○ ಇಂದೂಧರ ಹೊನ್ನಾಪುರ

ಸಹ ಭಾಗಿತ್ವದ ಅವಕಾಶಕ್ಕೆ ಅಡ್ಡಿ

ಸಂಪಾದಕರೊಡನೆ ಸಂವಾದ

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಬೇಕೊ, ಬೇಡವೋ ಎಂಬ ಮಹತ್ವಪೂರ್ಣ ಚರ್ಚೆ ಆರಂಭವಾಗಿರುವ ಈ ಸಂದರ್ಭದಲ್ಲಿ ಚಿಂತನಶೀಲರು, ಬುದ್ಧಿಜೀವಿಗಳು ಎನಿಸಿ ಕೊಂಡವರ ರಹಸ್ಯ ಮುಖಗಳು ಒಂದೊಂದಾಗಿ ಬಯಲಾಗುತ್ತಿವೆ. ಕೆಲ ಮಾಜಿ ಬಂಡಾಯ ಸಾಹಿತಿಗಳಿಗೆ ಅವರು ಪ್ರತಿಪಾದಿಸುವ ಸಾಮಾಜಿಕ ನ್ಯಾಯದ ತತ್ವಗಳು, ಪರಿಕಲ್ಪನೆಗಳು ನಿಜಜೀವನದಲ್ಲಿ ಜಾರಿಗೆ ಬರದೆ ಅವು ಅಮೂರ್ತವಾಗಿ ಉಳಿದುಕೊಂಡಿದ್ದರೇನೇ ಇಷ್ಟ ಎನ್ನುವುದು ಸಾಮಾಜಿಕ ನ್ಯಾಯದ ಪರವಾಗಿ ಹೋರಾಡುತ್ತಿರುವ ಶೋಷಿತ ಸಮುದಾಯಗಳಿಗೆ ಮನವರಿಕೆಯಾಗಿ ಹೋಗಿದೆ. ಈ ಹಿನ್ನಲೆಯಲ್ಲೇ ಎಲ್ಲೋ ಒಂದು ಕಡೆ ಭಾಷೆಯ ಬಗೆಗಿನ ಎರಡು ಪ್ರತ್ಯೇಕ ಸಿದ್ಧಾಂತಗಳು, ಹೋರಾಟಗಳು ಮತ್ತೊಂದು ಬೂಸಾ ಪ್ರಕರಣದ ತಿರುವು ಕೊಡುವ ಸಾಧ್ಯತೆಗಳಾಗಿ ಪ್ರಗತಿಪರ ಜಾತ್ಯಾತೀತ ಸಮಾನ ಮನಸ್ಕರಲ್ಲಿ ಬಿರುಕು ಮೂಡಿಸುವ ಭೀತಿ ಆವರಿಸ ತೊಡಗಿದೆ.

ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವುದೆಂದರೆ ಅದು ಕನ್ನಡವನ್ನು ಕೊಲ್ಲುವ ಕೆಲಸವಲ್ಲ, ಬದಲಾಗಿ ಸ್ಥಳೀಯ ಭಾಷೆಯಾದ ಕನ್ನಡದೊಂದಿಗೆ ಇಂಗ್ಲಿಷನ್ನೂ ಕಲಿಯುತ್ತಾ ನಮ್ಮ ಚಿಂತನೆ, ಜೀವನ ಕ್ರಮವನ್ನು ಸ್ಥಳೀಯವಾಗೇ ಉಳಿಸಿಕೊಳ್ಳವ ವಿಶ್ವಾಸಾತ್ಮಕತೆಯನ್ನ ಬೆಳಸಿಕೊಳ್ಳುವುದು. ಇಂಗ್ಲಿಷನ್ನು ಕಲಿಯುವುದರಿಂದ ವಿಶ್ವದ ಅಂತರವನ್ನು ಕಡಿಮೆ ಮಾಡಿಕೊಳ್ಳತೊಡಗಿರುವುದು ಕಣ್ಣಿಗೆ ಕಾಣುವ ಹಾಗೂ ಅನುಭವಕ್ಕೆ ಬಂದಿರುವ ಸತ್ಯ.

ಗೋಕಾಕ್ ಮಾದರಿಯಲ್ಲಿ ಮತ್ತೆ ಚಳುವಳಿಯನ್ನು ಪ್ರಾರಂಭಿಸುತ್ತೇವೆಂದು ಹೇಳುವ ಕನ್ನಡದ ಚಳುವಳಿಗಾರರು(?) ಇಂಗ್ಲಿಷನ್ನು ಕಲಿತು, ಪ್ರಸ್ತುತ ಅದರಲ್ಲಿ ಬದುಕಿಕೊಂಡೇ ಇಂಗ್ಲಿಷನ್ನು ವಿರೋಧಿಸುತ್ತಿದ್ದಾರೆ. ಕನ್ನಡದ ಜೊತೆಗೆ ಇಂಗ್ಲಿಷ್ ಶಿಕ್ಷಣವೂ ಕೂಡ ಹಿಂದುಳಿದ ಜನಸಮುದಾಯಗಳಿಗೆ ಒಂದು ದೊಡ್ಡ ಶಕ್ತಿಯನ್ನು ತಂದುಕೊಡಬಲ್ಲ ಸತ್ಯವನ್ನು ಅರಿತು ಇಂಗ್ಲಿಷನ್ನು ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಪ್ರಾರಂಭಿಸಬೇಕು ಎನ್ನುತ್ತಿರುವ ದಲಿತ, ಹಿಂದುಳಿದ ನಾಯಕರನ್ನು ಕನ್ನಡದ್ರೋಹಿಗಳಂತೆ ಬಿಂಬಿಸುವ ಕೆಲಸವನ್ನು ಈ ಚಳುವಳಿಗಾರರು ಮಾಡುತ್ತಿದ್ದಾರೆ. ಪ್ರಸ್ತುತ ಬೆಳೆಯುತ್ತಿರುವ ಔದ್ಯಮೀಕರಣದ ಲಾಭ ಇಂಗ್ಲಿಷ್ ಕಲಿತವರ ಪಾಲಿಗೇ ಹೆಚ್ಚಿಗೆ ಸಿಗುತ್ತಿದ್ದರೂ ಅದರ ಬಗ್ಗೆ ಜಾಣಮೌನ ಹೊಂದಿರುವ ಇವರು ಈ ಅಸಮತೋಲನವನ್ನು ಕೊಂಚವಾದರೂ ತಪ್ಪಿಸಲು ಇಂಗ್ಲಿಷ್ ಕಲಿಕೆ ಅಗತ್ಯವೆಂದು ವಾದಿಸುತ್ತಿರುವವರನ್ನು ಟೀಕಿಸುತ್ತಿರುವುದು ಸಂಪ್ರದಾಯವಾದಿಗಳ ನಡುವಳಿಕೆಯಂತೆ ತೋರುತ್ತಿದೆ. ಇದು ಗ್ರಾಮೀಣ ಭಾಗದ ಹಾಗೂ ಹಿಂದುಳಿದ ಬಡವರ ಅರಿವಿನ ವಿಕಾಸಕ್ಕೆ ಮತ್ತು ಅವರ ಆರ್ಥಿಕ ಸ್ವಮಾನತೆಯ ಹಕ್ಕಿನ ವಿರುದ್ಧ ನೇರವಾಗೇ ನೆಡೆಸುತ್ತಿರುವ ದಾಳಿಯಾಗಿದೆ.

ನೂರಾರು ವರ್ಷಗಳ ಹಿಂದಿನಿಂದಲೂ ಹೇಗೆ ಮೇಲ್ವರ್ಗದ ಜನ ಅಲಕ್ಷಿತ ಜನರ ಅಭಿಪ್ರಾಯಗಳನ್ನು, ಹಕ್ಕುಗಳನ್ನು ಅಮುಖ್ಯ ಎಂದು ಪರಿಗಣಿಸಿ ಅವರ ವಿರುದ್ಧ ದಮನಕಾರಿ ಪ್ರವೃತ್ತಿಯನ್ನು ಅನುಸರಿಸಿದರೋ ಇಂದೂ ಕೂಡ ಆಧುನಿಕತೆಯನ್ನು ಮೊದಲಿಗೇ ಅಪ್ಪಿಕೊಂಡ ಮೇಲ್ವರ್ಗದ ಜನ ಅಲಕ್ಷಿತ ಸಮುದಾಯಗಳ ಬೇಡಿಕೆ, ಹಕ್ಕುಗಳನ್ನು ತುಳಿಯಲು ನೋಡುತ್ತಿದ್ದಾರೆ. ದಮನಿತ ಜನಾಂಗ ಇಂಗ್ಲಿಷ್ ಸಂಪರ್ಕಕ್ಕೆ ಬರಲಿ ಎಂದಾಕ್ಷಣ ನೆಲದ ಸಂವೇದನೆ, ಸಂಸ್ಕೃತಿ ಎಂಬ ವಿಚಾರಗಳು ಹುಟ್ಟಿಕೊಂಡು ಈ ಜನಾಂಗ ತನ್ನದೇ ಭಾಷೆಯ ಚಿಪ್ಪಿನಲ್ಲಿ ಹುದುಗುವಂತೆ ಮಾಡಲಾಗುತ್ತಿದೆಯಲ್ಲದೆ, ಅತಿರೇಕ ಎನಿಸುವ ಭಾಷಾಭಿಮಾನ ಹೆಸರಿನಲ್ಲಿ ಅವರನ್ನು ಆಯಾ ಪರಿಸರದ ಯಥಾಸ್ಥಿತಿಯ ಬದುಕಿಗೇ ಕಟ್ಟಿಹಾಕುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಇದು ದಮನಿತ ಜನಾಂಗಗಳ ವಿರುದ್ಧವಾಗಿ ಕನ್ನಡದ ನಾಯಕರೆನಿಸಿಕೊಳ್ಳುತ್ತಿರುವವರು ಮಾಡುತ್ತಿರುವ ದ್ರೋಹವೇ ವಿನಃ ಮತ್ತೇನಲ್ಲ. ಶೋಷಿತ ಸಮುದಾಯ ಬದಲಾಗುತ್ತಿರುವ ಪ್ರಪಂಚದ ಕಡೆ ಮುಖ ಮಾಡಿ ಮುಖ್ಯ ಪ್ರವಾಹಿನಿಯೊಂದರ ಜೊತೆ ಸಹಭಾಗಿತ್ವ ಪಡೆಯುವ ಅವಕಾಶಕ್ಕೂ ಅದರ ಸರಿತಪ್ಪುಗಳನ್ನು ವಿವೇಚಿಸಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯಕ್ಕೂ ಪ್ರಸ್ತುತ ಕನ್ನಡ ಚಳುವಳಿಗಾರರ ಧೋರಣೆ ಅಡ್ಡಿಯನ್ನುಂಟುಮಾಡುತ್ತಿದೆ.

ಇಂದು ಶೋಷಿತ ಸಮುದಾಯಗಳು ಅಡಕತ್ತರಿಯಲ್ಲಿ ಸಿಲುಕಿಕೊಂಡ ಸ್ಥಿತಿಯಲ್ಲಿದ್ದು, ಇಂಗ್ಲಿಷ್ ಕಲಿಯುವ ಮೂಲಕ ಸ್ಪರ್ಧಾತ್ಮಕ ಜಗತ್ತಿಗೆ ಪ್ರವೇಶಿಸ ಬೇಕೆ? ಅಥವ ಜಗತ್ತಿನ ಆಧುನಿಕತೆ ಕೊಡ ಮಾಡಿರುವ ವಿಜ್ಞಾನ, ನಾಗರಿಕತೆಯ ಬಗ್ಗೆ ಕುಹಕತವಾಡುತ್ತಾ ಕೂಪಮಂಡೂಕಗಳಾಗ ಬೇಕೆ? ಇಲ್ಲವೆ ಸಂಕುಚಿತ ಹಾಗೂ ಪ್ರತ್ಯೇಕ ಭಾವನೆಗಳ ಕುಲುವೆಯಲ್ಲಿ ಹುಟ್ಟು ಓರಾಟಗಾರರ ಕೈಗಳಿಗೆ ಬಳಕೆಯಾಗುವ ಅಸ್ತ್ರಗಳಾಗಿ ರೂಪುಗೊಳ್ಳಬೇಕೆ? ಇತ್ಯಾದಿ ಪ್ರಶ್ನೆಗಳು ಈ ಸಮುದಾಯಗಳ ಮುಂದೆ ಬೃಹದಾಕಾರವಾಗಿ ನಿಂತಿವೆ.

ಇಂಗ್ಲಿಷನ್ನು ಐದನೇ ತರಗತಿಯಿಂದ ಕಲಿಯುವುದರಿಂದ ಮಕ್ಕಳಿಗೆ ಆ ಭಾಷೆಯ ಅಪರಿಚಿತಯಿಂದಾಗಿ ಅದನ್ನು ಕಲಿಯಲು ಕಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಇಂಗ್ಲಿಷ್ ಭಾಷೆಯ ಬಗೆಗಿನ ಭಯದಿಂದ ಅವರು ಇತರೆ ವಿಷಯಗಳಲ್ಲೂ ಹಿಂದುಳಿಯುವುದುಂಟು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆ ಎನ್ನುವುದು ಈಗಲೂ ತಮ್ಮ ಹಿಡಿತಕ್ಕೆ ಸಿಗದ ಹಾಗೂ ತಮ್ಮ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ ಭವಿಷ್ಯವನ್ನು ದುರಂತಮಯವಾಗಿಸುವ ಭಾಷೆ. ಇಂಗ್ಲಿಷ್ ಜ್ಞಾನಾರ್ಜನೆಗೆ ಪೂರಕವಾಗಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಕೆಯನ್ನು ಅಳವಡಿಸಿದ್ದರೆ ಗ್ರಾಮೀಣ ಭಾಗದಲ್ಲಿನ ಎಷ್ಟೋ ಯುವಕರ ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲುತ್ತಿರಲಿಲ್ಲ.

ಇಂಗ್ಲಿಷ್ ವಿರೋಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸರ್ಕಾರಿ ಶಾಲೆಗಳ ಅವ್ಯವಸ್ಥೆಯನ್ನು ಸರಿಪಡಿಸಲಾಗುವುದಿಲ್ಲ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಕರು ಇಲ್ಲವೇ ಇಲ್ಲ ಎನ್ನುವುದು (ಹೀಗೆ ಹೇಳುವವರೂ ಕೂಡ ಸರ್ಕಾರಿ ಶಾಲೆಗಳಲ್ಲಿ ಓದಿಕೊಂಡು ಬಂದವರೆ) ಖಾಸಗಿ ಶಾಲೆ, ಸಂಸ್ಥೆಗಳನ್ನು ಉತ್ತೇಜಿಸಿದಂತೆ. ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಕೆ ಶುರುವಾದರೆ ಇಂಗ್ಲಿಷ್ ವ್ಯಾಮೋಹದ ಪಿಡುಗು ತಾನೇ ತಾನಾಗಿ ತಹಬಂದಿಗೆ ಬರುವುದಲ್ಲದೆ ಖಾಸಗಿ ಶಾಲೆಗಳ ಅನಿಯಮಿತ ಹುಟ್ಟು ಹಾಗೂ ಅವುಗಳ ಧನದಾಹಗಳನ್ನು ಕೂಡ ಕಡಿಮೆ ಮಾಡಬಹುದು. ಇದು ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ

ಸಂಪಾದಕರೊಡನೆ ಸಂವಾದ

ನೂರಾರು ವರ್ಷಗಳ ಹಿಂದಿನಿಂದಲೂ ಹೇಗೆ ಮೇಲ್ವರ್ಗದ ಜನ ಅಲಕ್ಷಿತ ಜನರ ಅಭಿಪ್ರಾಯಗಳನ್ನು, ಹಕ್ಕುಗಳನ್ನು ಅಮುಖ್ಯ ಎಂದು ಪರಿಗಣಿಸಿ ಅವರ ವಿರುದ್ಧ ದಮನಕಾರಿ ಪ್ರವೃತ್ತಿಯನ್ನು ಅನುಸರಿಸಿದರೋ ಇಂದೂ ಕೂಡ ಆಧುನಿಕತೆಯನ್ನು ಮೊದಲಿಗೇ ಅಪ್ಪಿಕೊಂಡ ಮೇಲ್ವರ್ಗದ ಜನ ಅಲಕ್ಷಿತ ಸಮುದಾಯಗಳ ಬೇಡಿಕೆ, ಹಕ್ಕುಗಳನ್ನು ತುಳಿಯಲು ನೋಡುತ್ತಿವೆ. ದಮನಿತ ಜನಾಂಗ ಇಂಗ್ಲೀಷ್ ಸಂಪರ್ಕಕ್ಕೆ ಬರಲಿ ಎಂದಾಕ್ಷಣ ನೆಲದ ಸಂವೇದನೆ, ಸಂಸ್ಕೃತಿ ಎಂಬ ವಿಚಾರಗಳು ಹುಟ್ಟಿಕೊಂಡು ಈ ಜನಾಂಗ ತನ್ನದೇ ಭಾಷೆಯ ಚಿಪ್ಪಿನಲ್ಲಿ ಹುದುಗುವಂತೆ ಮಾಡಲಾಗುತ್ತಿದೆ. ಶೋಷಿತ ಸಮುದಾಯ ಬದಲಾಗುತ್ತಿರುವ ಪ್ರಪಂಚದ ಕಡೆ ಮುಖ ಮಾಡಿ ಮುಖ್ಯ ವಾಹಿನಿ ಜೊತೆ ಸಹ ಭಾಗಿತ್ವ ಪಡೆಯುವ ಅವಕಾಶಕ್ಕೂ ಅಡ್ಡಿಯನ್ನುಂಟು ಮಾಡುತ್ತಿವೆ.

○ ಸಿ. ಹರೀಶ್ ಕುಮಾರ
ಗಂಗನ ಬೀಡು

ಇಂಗ್ಲಿಷ್ ಕಲಿಕೆಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಪೈಪೋಟಿ ನೀಡುವುದಕ್ಕೆ ವಿನಃ ಖಾಸಗಿ ಶಾಲೆಗಳ ಪ್ರಭಾವವನ್ನು ತಗ್ಗಿಲು ಸಹಕಾರಿಯಾಗಲಾರದು. ಎಂಬ ವಾದವನ್ನು ಭವಿಷ್ಯದ ಸುಪರ್ದಿಗೇ ಬಿಟ್ಟು, ಇಂಗ್ಲಿಷ್ ಕಲಿಕೆಯ ಮೂಲಕ ಆಗುವ ಹೊಸ ಸಂಚಲನವನ್ನು ನೋಡಲು ಮುಂದಾಗಬೇಕಿದೆ. ಬದಲಾವಣೆಯನ್ನು ಬರಮಾಡಿಕೊಳ್ಳುವ ಮನೋಭೂಮಿಕೆ ನಮ್ಮಲ್ಲಿ ಇಲ್ಲದೇ ಹೋದರೆ ನಮ್ಮ ವ್ಯಕ್ತಿತ್ವಂತ ನೀರಾಗುತ್ತದೆ.

ತಮ್ಮ ಜನವಿರೋಧಿ ನೀತಿಯಿಂದ ಜನರಿಗೆ ಸರಿಯಾದ ಶಿಕ್ಷಣವನ್ನು ಒದಗಿಸುವಲ್ಲಿ ಸರ್ಕಾರಗಳು ಗ್ರಾಮೀಣ ಭಾಗದ ಜನರಿಗೆ ದ್ರೋಹವೆಸಗುತ್ತಿದ್ದರೆ, ಕನ್ನಡ ಚಳುವಳಿಗಾರರು ಎಂದು ಹೇಳಿಕೊಳ್ಳುವ ಜನರೂ ಕೂಡ, ಲಭ್ಯವಿರುವ ಅವಕಾಶಗಳಲ್ಲೇ ಗ್ರಾಮೀಣ ವಿದ್ಯಾರ್ಥಿಗಳು ಜ್ಞಾನವನ್ನು ಹೀರಿಕೊಳ್ಳುವ ಸಾಧ್ಯತೆಗಳಿಂದಲೇ ವಂಚಿತರಾಗುವಂತಹ ಕೆಲಸವನ್ನು ಇಂಗ್ಲಿಷ್ ವಿರೋಧಿ ನೀತಿಗಳಿಂದ ಮಾಡುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿರುವ ಅವ್ಯವಸ್ಥೆಯನ್ನು ಹೋಗಲಾಡಿಸಲು ಸಾಂಘಿಕ ಶಕ್ತಿಗಳ ಮೂಲಕ ನಿರಂತರವಾಗಿ ಒತ್ತಡ ಹೇರುವುದರಿಂದ ಸರಿಪಡಿಸಬಹುದೇ ವಿನಃ ಇಂಗ್ಲಿಷನ್ನು ಪೆಡಂಭೂತದಂತೆ ಬಿಂಬಿಸುವುದರಿಂದಲ್ಲ. ಇಂಗ್ಲಿಷ್‌ನ ಕಲಿಕೆಯಲ್ಲೂ ಇರುವ ಪ್ರಗತಿಪರತೆ ಹಾಗೂ ಮುನ್ನೋಟವನ್ನು ಮನಗಾಣಿಸುವುದು ಇಂದಿನ ತುರ್ತಾಗಿದೆ.

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಆರಂಭವಾದರೆ ಮಕ್ಕಳಲ್ಲಿ ಕನ್ನಡದ ಗಂಧವೇ ಹಾಳಾಗಿ ಅವರ ಬಾಯಲ್ಲಿ ಇಂಗ್ಲಿಷ್ ಹಾಡುಗಳೇ ಕುಣಿದಾಡುತ್ತವೆ ಎನ್ನುವ ಅರೆಬರೆ ಸಂಗೀತ ವಿದುಷಿಗಳು ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಹತ್ತಾರು ಸಾಂಸ್ಕೃತಿಕ ಕಾರ್ಯ ಕ್ರಮಗಳಲ್ಲಿ ಕನ್ನಡದ ಹಾಡುಗಳನ್ನು ಹಾಡಿ, ನಾಟಕ, ಏಕಪಾತ್ರಾಭಿನಯವನ್ನು ಅಭಿನಯಿಸಿ ವಿದ್ಯಾರ್ಥಿಗಳು ಬಹುಮಾನ ಪಡೆಯುತ್ತಿರುವುದನ್ನು ಗಮನಿಸಬೇಕು. ಮಕ್ಕಳ ಬಾಯಲ್ಲಿ ಈಗಲೂ ಸರಾಗವಾಗಿ ಬರುವುದು ಕನ್ನಡದ ಹಾಡುಗಳೇ ವಿನಃ ಅವರ ಅಭಿರುಚಿಗೆ ಅನ್ಯವಾಗೇ ಉಳಿದ ಎಂ.ಟಿ.ವಿ, ವಿ.ಟಿ.ವಿಗಳು ಭಿತ್ತರಿಸುವ ಇಂಗ್ಲಿಷ್ ಹಾಡುಗಳಲ್ಲ. ಇಂಗ್ಲಿಷನ್ನು ಆಂತರ್ಯದಲ್ಲಿ ಪ್ರತಿಷ್ಠಾಪಿಸಿಕೊಂಡು ಕನ್ನಡದ ಬಗ್ಗೆ ಬರಿದೇ ಮಾತನಾಡುವ ಜನ ಎಳೆಯ ವಯಸ್ಸಿನಲ್ಲೇ ಮಕ್ಕಳಿಗೆ ಎರಡು-ಮೂರು ಭಾಷೆಗಳನ್ನು ಕಲಿಯುವ ಸಾಮರ್ಥ್ಯವಿರುತ್ತದೆ ಎಂಬ ತಜ್ಞರ ಮಾತುಗಳತ್ತ ಕಿವಿಕೊಡಲಿ. ಗ್ರಾಮೀಣ ಭಾಗದ ಜನತೆ ಇಂಗ್ಲಿಷ್ ಕಲಿತು ಆಧುನಿಕ, ನಾಗರಿಕ ಸಮಾಜದ ಸಂಪರ್ಕಕ್ಕೆ ಬಂದರೆ ತಮಗೆ ಪ್ರಬಲ ಪೈಪೋಟಿವೊಡ್ಡಬಲ್ಲರೆಂಬ ಭೀತಿ ನಗರವಾಸಿ ಕನ್ನಡ ಪ್ರೇಮಿಗಳಿಗೆ ಇದೆ. ಆದ್ದರಿಂದಲೇ ಅವರು ಇಲ್ಲ-ಸಲದ ಕಾರಣಗಳನ್ನು ಕೊಟ್ಟು ಇಂಗ್ಲಿಷ್ ಕಲಿಕೆಯನ್ನು ವಿರೋಧಿಸುತ್ತಿದ್ದಾರೆ.

ಇಂಗ್ಲಿಷ್ ಬಡವರ ಭಾಷೆಯಲ್ಲ ಎನ್ನುವವರು ಬಡವರಿಗೂ ಇಂಗ್ಲಿಷ್ ತಲುಪಲಿ ಎನ್ನುವವರ ವಿರುದ್ಧ ತಾವೇಕೆ ಇದ್ದೇವೆಂದು ಯೋಚಿಸಬೇಕಿದೆ. ಇಂಗ್ಲಿಷ್ ಶ್ರೀಮಂತರ ಭಾಷೆ, ಅದು ಶ್ರೀಮಂತರ ಇಲ್ಲವೇ ಮಧ್ಯಮ ವರ್ಗದ ಆರ್ಥಿಕ ಮಟ್ಟವನ್ನು ಉತ್ತಮ ಪಡಿಸುತ್ತದೆ ಎಂದು ಹೇಳುತ್ತಾ ಪರೋಕ್ಷವಾಗಿ ಇಂಗ್ಲಿಷ್ ಆರ್ಥಿಕ ಗಳಿಕೆಯ ಒಂದು ಮಾನದಂಡವಾಗಿರುವುದು ಒಪ್ಪುವ ಇವರು ಇಂಗ್ಲಿಷ್ ಕಲಿಕೆಯ ಮೂಲಕ ಅಂಥ ಉತ್ತಮ ಬದುಕು ಬಡವರಿಗೂ ಯಾಕೆ ದಕ್ಕಬಾರದು ಹಾಗೂ ಇಂಗ್ಲಿಷನ್ನು ಶ್ರೀಮಂತರ ಭಾಷೆಯಂದೇ ಪ್ರತ್ಯೇಕಿಸಿ ಅದು ಬಡವರನ್ನು ತಲುಪದಂತೆ ಮಾಡುವ ಹಠಮಾರಿತನದಿಂದ ಯಾರಿಗೆ ಲಾಭವಾಗುತ್ತದೆ ಎಂಬುದನ್ನು ಚಿಂತಿಸಬೇಕಿದೆ. ಹಾಗೆಯೇ ತಮ್ಮ ಅರಿವನ್ನು ವಿಸ್ತರಿಸಿಕೊಳ್ಳಲು ಇಂಗ್ಲಿಷ್ ಲೇಖಕರ ಪುಸ್ತಕಗಳಿಗೆ ಮೊರೆ ಹೋದದನ್ನೂ ಇವರು ನೆನಪಿಸಿಕೊಳ್ಳ ಬೇಕಿದೆ.

ವಸಾಹತುಶಾಹಿಗಳ ಭಾಷೆಯೆಂದು ಇಂಗ್ಲಿಷನ್ನು ಟೀಕಿಸುವ ಮುನ್ನ ಅದು ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಕೊಡಮಾಡಿದ ಕೊಡುಗೆ ಇರಲಿ ಸ್ವತಃ ತಮ್ಮ ಬದುಕಿನಲ್ಲೇ ಅದು ಕೊಡ ಮಾಡಿದ ಲಾಭವನ್ನು ಮರೆಮಾಚುತ್ತಿದ್ದಾರೆ. ಜ್ಞಾನಾರ್ಜನೆಯ ಹಕ್ಕಿನಿಂದ ನಮ್ಮದೇ



ದೇಶದ ಸಂಸ್ಕೃತ ಭಾಷೆ ದಮನಿತ ವರ್ಗಗಳನ್ನು ತನ್ನಿಂದ ದೂರವೇ ಇಟ್ಟಿದ್ದಾಗ ಅವರಿಗೆ ಇಂಗ್ಲಿಷ್ ಹತ್ತಿರ ಕರೆದು ಇಂಗ್ಲಿಷ್ ಕಲಿಸಿ ಜಗತ್ತಿನ ಪಾಠ ಹೇಳಿಕೊಟ್ಟಿತು. ಈ ವರ್ಗಗಳಲ್ಲಿ ಸಾವಿರಾರು ವರ್ಷಗಳಿಂದ ಆಗದ ಬದಲಾವಣೆಯನ್ನು ಇಂಗ್ಲಿಷ್ ಭಾಷೆ ಒಂದೇ ಯುಗದಲ್ಲಿ ಮಾಡಿತು. ಈ ದೇಶಕ್ಕೆ ಬ್ರಿಟೀಷರು ಬರದಿದ್ದರೆ ನಾನು ಶಾನುಭೋಗರ ಮನೆಯಲ್ಲಿ ಸಗಣಿ ಬಾಚ ಬೇಕಾಗುತ್ತಿತ್ತು ಎಂಬ ಕುವೆಂಪುರವರ ಮಾತು ಇಲ್ಲಿ ಗಮನಾರ್ಹ, ಇಂದು ಒಂದನೇ ತರಗತಿಯಿಂದ ಇಂಗ್ಲಿಷ್ ಬೇಕೆಂಬ ಕೂಗನ್ನು ಕುವೆಂಪುರವರ ಈ ಮಾತಿನ ಹಿನ್ನಲೆಯಲ್ಲೇ ಅವಲೋಕಿಸ ಬೇಕಿದೆ.

ಇಂಗ್ಲಿಷ್ ಸಂವಹನ, ಸಂಪರ್ಕ ಮಾಧ್ಯಮದ ಪ್ರತಿಷ್ಠೆಯ ಭಾಷೆಯಾಗಿ ಬಳಕೆಯಾದರೂ ಕನ್ನಡಕ್ಕೆ ಇಲ್ಲಿ ಭಾವನಾತ್ಮಕತೆಯ ನೆಲೆಗಟ್ಟಿರುವುದರಿಂದ ಅದು ಈ ನೆಲದ ಸಂಸ್ಕೃತಿಯ ವಾಹಕವಾಗೇ ಇದ್ದು ತನ್ನನ್ನು ಆವರಿಸಿಕೊಳ್ಳಲು ಬರುವ ಯಾವುದೇ ಶಕ್ತಿಗೆ ಪ್ರತಿರೋಧವೊಡ್ಡಬಲ್ಲದು. ಇದು ಸಂಸ್ಕೃತಿಗೆ ಇರುವ ನಿಜವಾದ ಶಕ್ತಿ ಕೂಡ. ಇದು ತನ್ನತನವನ್ನು ಉಳಿಸಿಕೊಳ್ಳಲು ಯಾವುದೇ ಒತ್ತಡಕ್ಕೆ ಒಳಗಾಗುವುದಿಲ್ಲ. ಅನ್ಯತೆಯ ಪ್ರಭಾವದೆದುರೇ ಅದರೊಳಗೂ ತನಗೆ ಹೊಂದಬಹುದಾದ, ಜೀರ್ಣಿಸಿಕೊಳ್ಳಬಹುದಾದ ಅಂಶಗಳನ್ನು ಸ್ವೀಕರಿಸಿ ನಿರ್ದಿಷ್ಟವಾಗಿ ಗಟ್ಟಿಯಾಗುತ್ತಾ ಸಾಗುತ್ತದೆ. ಜಗತ್ತಿನ ಬಹುತೇಕ ಭಾಷೆ, ಸಂಸ್ಕೃತಿಗಳು ಇಂದು ಇಂಥವುಗಳ ಮೂಲಕವೇ ಹಾದು ಬಂದು ಜೀವಂತವಾಗಿರುವುದನ್ನೂ ನಾವು ಮರೆಯಬಾರದು.

ಜಾಗತೀಕರಣವನ್ನು ಹಿಮ್ಮೆಟ್ಟಿಸುವ ಸಲುವಾಗಿ ಇಲ್ಲಿನ ಸ್ಥಳೀಯ ಉದ್ಯಮಗಳಿಗೆ (ಕಸುಬು) ಜೀವಕೊಡಬೇಕೆಂಬ ಕೂಗು ಪ್ರಬಲವಾಗಿ ಕೇಳಿಬರುತ್ತಿದೆ. ಆದರೆ ಇಲ್ಲಿನ ಗುಡಿಕೈಗಾರಿಕೆಗಳು ಸ್ವಾವಲಂಬಿತವಾಗಿದ್ದರೂ ಅವು ಜಾತಿಯಾಧಾರಿತವಾಗಿವೆ ಎಂಬುದು ಗಮನಾರ್ಹ, ಈ ದೇಶದಲ್ಲಿ ವೃತ್ತಿನಿರತ ನೈಪುಣ್ಯತೆಗಳು ನೀಚ ವರ್ಣಾಶ್ರಮ ಪದ್ಧತಿಯೊಳಗೆ ನಲುಗಿ ಜಾತಿ ಜಾತಿಗಳ ವಿಭಜೀಕರಣ ಮತ್ತು ಮೇಲು ಕೀಳೆಂಬ ಮನೋರೋಗದಿಂದ ಸಮಾಜವನ್ನು ಛಿದ್ರಗೊಳಿಸುತ್ತಿವೆ. ಅನೇಕ ಸಮುದಾಯಗಳು ಇಂದು ತಮ್ಮ ವೃತ್ತಿಗೆ ಅಂಟಿದ ಶಾಪದಿಂದಾಗಿ ಅವನ್ನೆಲ್ಲಾ ತೊರೆದು ಹೊಸ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿವೆ. ಮತ್ತೆ ಈ ವೃತ್ತಿಗಳಿಗೆ ಒತ್ತುಕೊಡುವುದೆಂದರೆ ವರ್ಣಾಶ್ರಮ ಆಧರಿತ ವೃತ್ತಿಗಳನ್ನು ಪುನರ್‌ಸ್ಥಾಪಿಸಿದಂತೆ, ಜಾತಿಗಳನ್ನು ಗಟ್ಟಿಗೊಳಿಸುವ ಪ್ರಕ್ರಿಯೆಯ ಮೂಲಕ ಜಾಗತಿಕರಣವನ್ನು ವಿರೋಧಿಸಿಬೇಕೆಂಬ ಯೋಚನಾಲಹರಿಗಳು ಅತ್ಯಂತ ಕ್ಷುದ್ರತನದಿಂದ, ಕೂಡಿದ್ದು ಇವು ಮತ್ತೊಮ್ಮೆ ಈ ದೇಶದ ತಳ ಸಮುದಾಯಗಳ ಕುತ್ತಿಗೆಯನ್ನು ಹಿಸುಕಲು ನೋಡುತ್ತಿವೆ.

ಇಂದು ನಾವಾಗಲೀ, ಕನ್ನಡ ಭಾಷೆಯಾಗಲೀ ಆಧುನಿಕತೆಗೆ ಅನ್ಯವಾಗಿ ಉಳಿದುಕೊಂಡಿರಲು ಸಾಧ್ಯವಿಲ್ಲ. ಚೈನಾ, ಫ್ರಾನ್ಸ್‌ನಂತಹ ದೇಶಗಳು ತಮ್ಮ ಜನರಿಗೆ ಇಂಗ್ಲಿಷ್ ಕಲಿಸಲು ಹಣ ವ್ಯಯಿಸುತ್ತಿರುವುದನ್ನು ನಾವು ಗಮನಿಸಬೇಕಿದೆ. ಜಾಗತಿಕ ಮಟ್ಟದಲ್ಲಿ ಇಂಗ್ಲಿಷ್ ಸಂಪರ್ಕ ಮತ್ತು ಸಂವಹನ ಭಾಷೆಯಾಗಿರುವುದರಿಂದ ಸಹಜವಾಗೇ ತಂತ್ರಜ್ಞಾನದ ಭಾಷೆಯೂ ಇಂಗ್ಲಿಷೇ ಆಗಿದೆ. ಜಗತ್ತಿನಲ್ಲಿ ಪ್ರತಿಕ್ಷಣವೂ ಆವಿಷ್ಕಾರಗೊಳ್ಳುತ್ತಿರುವ ತಂತ್ರಜ್ಞಾನವನ್ನು ತಿಳಿಯಲು, ಅಭ್ಯಸಿಸಲು ಇಂಗ್ಲಿಷ್ ಬೇಕಿದೆ. ಈ ಜಗತ್ತನ್ನು ಮಕ್ಕಳು ಸುಲಭವಾಗಿ ಮತ್ತು ವೇಗವಾಗಿ ಗ್ರಹಿಸಲು ಅವರಿಗೆ ಒಂದನೇ ತರಗತಿಯಿಂದಲೇ ಇಂಗ್ಲಿಷನ್ನು ಪರಿಚಯಿಸಬೇಕಿದೆ. ಸಾಮಾಜಿಕ ನ್ಯಾಯದ ವಿಷಯದಲ್ಲಿ ಇಂಗ್ಲಿಷ್ ಭಾಷೆ ಕಲಿಕೆಯೂ ಕೂಡ ಪ್ರಸ್ತುತ ಅಗತ್ಯವಿರುವ ಒಂದು ಪ್ರಮುಖ ಅಂಶ. ಇದರ ಮೂಲಕ ಹೊಸ ಸಂಚಲನೆ, ಚೈತನ್ಯ ಹಾಗೂ ವೇಗಗಳನ್ನು ಹಿಂದುಳಿದ ವರ್ಗಗಳಿಗೆ ಕೂಡಬಹುದಾಗಿದೆ.

(೨೭ನೇ ಪುಟಕ್ಕೆ)

ರಾಜಕೀಯದಿಂದ ಧರ್ಮ ದೂರವಿರಲಿ

ಭಾರತೀಯ ವಿಚಾರವಾದಿ ಸಂಘಗಳ ಒಕ್ಕೂಟ ಕಳೆದ ಏಪ್ರಿಲ್‌ನಲ್ಲಿ ರಾಜಕೀಯದಿಂದ ಧರ್ಮವನ್ನು ಪ್ರತ್ಯೇಕ ಗೊಳಿಸುವ ಬಗ್ಗೆ ದೆಹಲಿಯ ಅಂಬೇಡ್ಕರ್ ಭವನದಲ್ಲಿ ಒಂದು ಸಮಾವೇಶವನ್ನು ಏರ್ಪಡಿಸಿತ್ತು. ರಾಜಕೀಯ ಮತ್ತು ಧರ್ಮಗಳ ಸಂಬಂಧ ಹೇಗಿರಬೇಕೆಂಬುದನ್ನು ಕುರಿತು ಒಂದು ಕರಡು ಮಸೂದೆಯನ್ನು ಒಕ್ಕೂಟದ ಸ್ಥಾಪಕ ಬಿ.ಪ್ರೇಮಾನಂದರು ಮಂಡಿಸಿದರು. ಒಕ್ಕೂಟದ ರಾಷ್ಟ್ರೀಯ ಕಾರ್ಯದರ್ಶಿ ಯು.ಕಲಾನಾಥನ್ ಮಸೂದೆಯ ಪ್ರಸ್ತುತತೆಯನ್ನು ವಿವರಿಸಿದರು. ರಾಜಕೀಯದಲ್ಲಿ ಕೋಮುವಾದ ತಕ್ಕೆ ಹಾಕಿಕೊಂಡಿರುವ ಸಮಕಾಲೀನ ಸಂದರ್ಭದಲ್ಲಿ ಅಂತಹ ಮಸೂದೆ ಸಂವಿಧಾನಾತ್ಮಕ ಪರಿಹಾರಕ್ಕೆ ನಾಂದಿಯಾಗಬೇಕು ಎಂಬುದು ಆ ಸಮಾವೇಶದಲ್ಲಿ ಭಾಗವಹಿಸಿದ ಎಲ್ಲರ ಅಭಿಪ್ರಾಯವಾಗಿತ್ತು.

ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನಸಾಮಾನ್ಯರ ಧರ್ಮಾತೀತ ರಾಜಕೀಯ ಬೆಂಬಲದಿಂದ ಕಾಂಗ್ರೆಸ್ ತನ್ನ ಮಿತ್ರ ಪಕ್ಷಗಳೊಡನೆ ವಿಜಯವನ್ನು ಸಾಧಿಸಿತು. ಇದಕ್ಕೆಲ್ಲಾ ಹಿಂದಿನ ಭಾಜಪ ನಾಯಕತ್ವದ ಕೋಮುವಾದ ತನ್ನ ಪರಾಕಾಷ್ಠತೆಯನ್ನು ತಲುಪಿದ್ದುದೇ ಕಾರಣವಾಗಿತ್ತು. ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳ ವಿಜಯದಿಂದ ಅದಕ್ಕೊಂದು ಬಲವಾದ ಪ್ರತಿರೋಧ ವ್ಯಕ್ತವಾದುದೇನೋ ನಿಜ. ಆದರೆ ಕಾಂಗ್ರೆಸ್ ಮತ್ತು ಎಡಪಕ್ಷಗಳು ಅಲ್ಪ ಸಂಖ್ಯಾತರನ್ನು ತೃಪ್ತಿಪಡಿಸುವ ಹಿನ್ನೆಲೆಯಲ್ಲಿ ಕೋಮುವಾದದ ಇನ್ನೊಂದು ರೂಪ ಆವಿಷ್ಕಾರಗೊಳ್ಳುತ್ತಿರುವುದನ್ನು ನಾವು ಗಮನಿಸಬೇಕಾಗಿದೆ. ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಧರ್ಮಾತೀತ (Secular) ಎಂಬ ಪದದ ಬಳಕೆಯಾಗಿರುವುದೇನೋ ನಿಜ. ಆದರೆ ಅದರ ನಿರ್ವಚನ (Definition) ಸಂವಿಧಾನದಲ್ಲೆಲ್ಲೂ ಸ್ಪಷ್ಟವಾಗಿ ಒಡಮೂಡಿಲ್ಲ

ಭಾರತವು ಬಹುಧರ್ಮಗಳ ರಾಷ್ಟ್ರ. ಧರ್ಮಾತೀತ ರಾಜಕೀಯವನ್ನು ನಾವು ಅಳವಡಿಸಿಕೊಂಡಾಗ ಮಾತ್ರ ನಮ್ಮ ಧರ್ಮಗಳಲ್ಲಿ ಪರಸ್ಪರ ಸಹಕಾರ ಮತ್ತು ಅನ್ಯೋನ್ಯತೆಗಳು ಮೂಡಲು ಸಾಧ್ಯ ಎಂಬುದನ್ನು ನಾವು ಮನಗಾಣಬೇಕಾಗಿದೆ.

ಧಾರ್ಮಿಕ ಮೂಲಭೂತವಾದವು ವಾಸ್ತವ ವಾಗಿ ಎಲ್ಲ ಧರ್ಮಗಳ ನಿಜವಾದ ಶತ್ರು. ಅದು ಆರೋಗ್ಯಕರ ದೇಹದೊಳಗೆ ಬೆಳೆಯುತ್ತಿರುವ ಕ್ಯಾನ್ಸರ್. ದೇಹದ ಇತರ ಅಂಗಾಂಗಗಳಿಗೆ ಅದು ವ್ಯಾಪಿಸದಂತೆ ತಡೆದು ದೇಹವನ್ನು ಸುರಕ್ಷಿತವಾಗಿಟ್ಟುಕೊಳ್ಳ ಬೇಕಾದರೆ ಕ್ಯಾನ್ಸರ್‌ಗೆ ತುತ್ತಾದ ಅಂಗಗಳನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಬೇರ್ಪಡಿಸಬೇಕಾದುದು ಅನಿವಾರ್ಯ. ಆದ್ದರಿಂದ ಪ್ರಜಾಪ್ರಭುತ್ವದ ದೇಹವಾದ ರಾಜಕೀಯ ವ್ಯವಸ್ಥೆಯನ್ನು ಧರ್ಮದ ಪಿಡುಗಿನಿಂದ ಸಂರಕ್ಷಿಸಬೇಕಾದರೆ ಭಾರತೀಯ ರಾಜಕೀಯ-ದೇಹಕ್ಕೆ ಒಂದು ಪ್ರಮುಖ ಶಸ್ತ್ರಚಿಕಿತ್ಸೆ ಆಗಬೇಕಾಗಿದೆ. ಹಾಗಾದಾಗ ಮಾತ್ರ ಭಾರತಾಂಬೆಯನ್ನು ನಾವು ಉಳಿಸಿಕೊಳ್ಳಬಲ್ಲೆವು.

ಭಾರತ ಮಾತೆಯನ್ನು ಕಾಡಿಸುತ್ತಿರುವ ಅರ್ಬುದ (Cancer) ರೋಗದ ಕರಾಳ ರೂಪದ ಒಂದು ಇಣುಕು ನೋಟ ಇಲ್ಲಿದೆ.

ನರಮೇಧ

2000ದ ಫೆಬ್ರವರಿಯಿಂದ ಗುಜರಾತಿನಲ್ಲಿ ನಡೆದ ನರಮೇಧದ ಒಂದು ಇಣುಕು ನೋಟ ಇಲ್ಲಿದೆ ನೋಡಿ. ಅಲ್ಲಿ 2000 ಕ್ಕಿಂತ ಹೆಚ್ಚು ಜನ ಕೊಲೆಯಾದರು, 270 ಮಸೀದಿಗಳು ಧ್ವಂಸವಾದವು, 1,50,000 ಜನರನ್ನು ರಕ್ಷಣಾ ಶಿಬಿರಗಳಲ್ಲಿಡಲಾಯಿತು, 2400ಕ್ಕಿಂತ ಹೆಚ್ಚು ಮನೆಗಳು ನೆಲಸಮವಾದವು, 2100ಕ್ಕಿಂತ ಹೆಚ್ಚು ಅಂಗಡಿ ಮತ್ತು ವ್ಯಾಪಾರಿ ಮಳಿಗೆಗಳನ್ನು ದೋಚಿ ಹಾಳುಗೆಡವಲಾಗಿದೆ. ಅಲ್ಲಿ 10,000 ಕೋಟಿ ರೂಪಾಯಿ ಬೆಲೆಯಷ್ಟು ಆಸ್ತಿ ನಾಶವಾಗಿದೆ ಮತ್ತು ಲಕ್ಷಾಂತರ ಜನ ಇತರ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ.

ಕೋಮುಗಲಭೆಗಳು

ಸ್ವಾತಂತ್ರ್ಯಾನಂತರ ದೇಶದಲ್ಲಿ ಆದ ಒಟ್ಟು ಕೋಮುಗಲಭೆಗಳ ಸಂಖ್ಯೆ 25,230 ಎಂದು ದಾಖಲೆ ಮಾಡಲಾಗಿದೆ. ಅಂದರೆ ಪ್ರತಿವರ್ಷ ಸರಾಸರಿ 460 ಕೋಮು ದಳ್ಳುರಿಗಳು ಭುಗಿಲೆದ್ದಿವೆ ಎಂದಾಯಿತು. ಸಂಘಪರಿವಾರ 1989ರಲ್ಲಿ ರಾಮಶಿಲಾಯಾತ್ರೆಯಲ್ಲಿ ತೊಡಗಿದಾಗ 155 ಗಲಭೆಗಳು ನಡೆದು, 500 ಜನರ ನರಮೇಧವಾಯಿತು. ಪುನಃ ಅದೇ ವರ್ಷ ಅಯೋಧ್ಯೆಯ ಕರಸೇವೆಯಲ್ಲಿ 831 ಗಲಭೆಗಳು ನಡೆದು 890 ಜನ ಹತರಾದರು. ಅದೇ ವರ್ಷ ಮತ್ತೊಮ್ಮೆ ಮಂಡಲ್ ಕಮಿಷನ್ ವರದಿಯನ್ನು ವಿರೋಧಿಸಿ ನಡೆದ ಗಲಭೆಗಳಲ್ಲಿ 520 ಜನ ಕೊಲ್ಲಲ್ಪಟ್ಟರು. ಉಗ್ರಗಾಮಿಗಳ ದಾಳಿಗಳಿಂದ 5743 ಜನ ಮಡಿದರು. 1992ರ ಏಕತಾಯಾತ್ರೆಯಲ್ಲಿ 170 ಗಲಭೆಗಳು ನಡೆದು ಅವುಗಳಲ್ಲಿ 700 ಜನ ಕೊಲೆಗೀಡಾದರು.

ಮುಸ್ಲಿಂ ಉಗ್ರವಾದ

ಕಾನ್ಪುರ ಗಲಭೆಯ ನಂತರ 'ಸಿಮಿ' ಎಂಬ ಇಸ್ಲಾಂ ಉಗ್ರಗಾಮಿ ಸಂಘಟನೆಯನ್ನು ನಿಷೇಧಿಸಲಾಯಿತು. ಆದರೆ ಇಂದಿಗೂ ಗುಪ್ತ ಮುಸ್ಲಿಂ ಉಗ್ರಗಾಮಿ ಗುಂಪುಗಳು ಭಾರತದಲ್ಲಿ ಕ್ರಿಯಾಶೀಲವಾಗಿಯೇ ಮುಂದುವರಿದಿವೆ.

12 ಉಗ್ರಗಾಮಿ ಮುಸ್ಲಿಂ ವಿದ್ಯಾರ್ಥಿ ಗುಂಪುಗಳು ಒಸಾಮ ಬಿನ್ ಲಾಡೆನ್‌ನನ್ನು ಬೆಂಬಲಿಸುತ್ತಿವೆ. ಮುಸ್ಲಿಂ ಮೂಲಭೂತವಾದಿಗಳಿಗೆ ಪ್ರಜಾಪ್ರಭುತ್ವ, ಸಮಾಜವಾದ, ಧರ್ಮಾತೀತಗಳು ಬೇಕಿಲ್ಲ. ಅವರು ಧಾರ್ಮಿಕ ಪ್ರಭುತ್ವವಾದಿಗಳು. ಅವರ ಜೆಹಾದ್ ಎಂಬುದು ಇಸ್ಲಾಂನಲ್ಲಿ ನಂಬಿಕೆ ಇರದವರ ವಿರುದ್ಧದ ಹೋರಾಟವಾಗಿದೆ. ಅವರು ಅಮೆರಿಕದ ಪೆಂಟಗಾನ್ ಮತ್ತು ವಿಶ್ವ ವಾಣಿಜ್ಯ ಕೇಂದ್ರ (World Trade Centre) ವನ್ನು ನಾಶಗೊಳಿಸಿದರು. ಕಾಶ್ಮೀರ ಶಾಸನಸಭೆ, ಭಾರತೀಯ ಸಂಸತ್ಸದನ ಮತ್ತು ಕೋಲ್ಕತ್ತದಲ್ಲಿರುವ ಅಮೆರಿಕ ರಾಯಭಾರಿ ಕಚೇರಿಗಳ ಮೇಲೆ ಆಕ್ರಮಣ ಮಾಡಿದರು. ಇತ್ತೀಚೆಗೆ ಜುಲೈ ಐದರಂದು ಅಯೋಧ್ಯೆಯ ವಿವಾದಿತ ನಿವೇಶನದಲ್ಲಿ ಮಾನವ ಬಾಂಬನ್ನು ಸ್ಫೋಟಿಸಲಾಯಿತು. ಅವರು ಭಾರತೀಯ ಸಂವಿಧಾನವನ್ನು ಒಪ್ಪುವುದಿಲ್ಲ ಮತ್ತು ಸಮಾನ ನಾಗರಿಕ ಸಂಹಿತೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತಾರೆ. ಕೇರಳದಲ್ಲಿ 28 ಉಗ್ರಗಾಮಿ ಗುಂಪುಗಳಿವೆ ಎಂದು ಅಂದಾಜು ಮಾಡಲಾಗಿದ್ದು ಅವುಗಳಲ್ಲಿ 23 ಇಸ್ಲಾಂ ಧರ್ಮಕ್ಕೆ ಸೇರಿದವಾಗಿವೆ. ಅಲ್ಪಸಂಖ್ಯಾತರು ಬಹುಸಂಖ್ಯೆಯ ಉಗ್ರಗಾಮಿ ಗುಂಪುಗಳನ್ನು ಹೊಂದಿದ್ದಾರೆ. ಇನ್ನು ಮುಸ್ಲಿಂ ದೇಶಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯವೆಂಬುದು ಬಹು ಅಪರೂಪದ ವಸ್ತು.

ಧಾರ್ಮಿಕ ದುರಾಕ್ರಮಣಗಳು

ಪಂಜಾಬಿನ ಖಲಿಸ್ತಾನ ಆಂದೋಳನದಲ್ಲಿ ಹತರಾದವರ ಸಂಖ್ಯೆ 21,612 ಎಂದು ವರದಿಯಾಗಿದೆ. ಇಸ್ಲಾಂ ಧರ್ಮೀಯ ಉಗ್ರಗಾಮಿಗಳ ಒಳನುಸುಳುವಿಕೆಯಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಸತ್ತವರ ಸಂಖ್ಯೆ 3500. ಕಳೆದ 15 ವರ್ಷಗಳಲ್ಲಿ ದೇಶದ ರಕ್ಷಣಾ ವೆಚ್ಚ 45000 ಕೋಟಿ ರೂ.ಗಳಾಗಿದೆ. ಅದು ಹಿಂದಿನ ಅಷ್ಟೇ ಅವಧಿಯ

ಆಶಯ

ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನ ಸಾಮಾನ್ಯರ ಧರ್ಮಾತೀತ ರಾಜಕೀಯ ಬೆಂಬಲದಿಂದ ಕಾಂಗ್ರೆಸ್ ತನ್ನ ಮಿತ್ರ ಪಕ್ಷಗಳೊಡನೆ ವಿಜಯವನ್ನು ಸಾಧಿಸಿತು. ಇದಕ್ಕೆಲ್ಲಾ ಹಿಂದಿನ ಭಾಜಪ ನಾಯಕತ್ವದ ಕೋಮುವಾದ ತನ್ನ ಪರಾಕಾಷ್ಠತೆಯನ್ನು ತಲುಪಿದ್ದುದೇ ಕಾರಣ ವಾಗಿತ್ತು. ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ವಿಜಯದಿಂದ ಅದಕ್ಕೊಂದು ಬಲವಾದ ಪ್ರತಿರೋಧ ವ್ಯಕ್ತವಾದು ದೇನೋ ನಿಜ. ಆದರೆ ಕಾಂಗ್ರೆಸ್ ಮತ್ತು ಎಡ ಪಕ್ಷಗಳು ಅಲ್ಪ ಸಂಖ್ಯಾತರನ್ನು ತೃಪ್ತಿಪಡಿಸುವ ಹಿನ್ನೆಲೆಯಲ್ಲಿ ಕೋಮುವಾದದ ಇನ್ನೊಂದು ರೂಪ ಆವಿಷ್ಕಾರಗೊಳ್ಳುತ್ತಿರು ವುದನ್ನು ನಾವು ಗಮನಿಸ ಬೇಕಾಗಿದೆ. ಭಾರತವು ಬಹುಧರ್ಮಗಳ ರಾಷ್ಟ್ರ. ಧರ್ಮಾತೀತ ರಾಜಕೀಯವನ್ನು ಅಳವಡಿಸಿಕೊಂಡಾಗ ಮಾತ್ರ ನಮ್ಮ ಧರ್ಮಗಳಲ್ಲಿ ಪರಸ್ಪರ ಸಹಕಾರ ಮತ್ತು ಅನ್ಯೋನ್ಯ ತೆಗಳು ಮೂಡಲು ಸಾಧ್ಯ.

○ಬಿ.ವಿ.ವೀರಭದ್ರಪ್ಪ

ವೆಚ್ಚದ 26ರಷ್ಟು ಅಧಿಕವಾಗಿದೆ. ಆ ಅವಧಿಯಲ್ಲಿ 48000 ಟನ್ನುಗಳಷ್ಟು ಸ್ಫೋಟ ಸಾಮಾಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಶಿಕ್ಷಣ, ಸ್ತ್ರೀ - ಪುರುಷ ಸಮಾನತೆ, ಅಭಿವೃದ್ಧಿಗಳಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿರುವ ಕೇರಳದಲ್ಲಿ ಕಳೆದ ಮೂರು ಅವಧಿಗಳಲ್ಲಿ ಎಚ್‌ಡಿಎಫ್ (ಮತೀಯ ಗುಂಪು) ಮತ್ತು ಎಲ್‌ಡಿಎಫ್ (ಧರ್ಮಾತೀತ ಗುಂಪು) ಅಧಿಕಾರದಲ್ಲಿದ್ದಾಗ ನಡೆದ ಮತೀಯ ಗಲಭೆಗಳು ಮತ್ತು ಕೊಲೆಗಳ ಅಂಕಿಅಂಶಗಳನ್ನು ಗಮನಿಸೋಣ. 1991-96 ರಲ್ಲಿ ಎಚ್‌ಡಿಎಫ್(ಮತೀಯ ಗುಂಪು) ಅಧಿಕಾರದಲ್ಲಿದ್ದಾಗ 1170 ಗಲಭೆ, ಕೋಲಾಹಲಗಳು ನಡೆದು ಅವುಗಳಲ್ಲಿ 40 ಜನ ಹತರಾದರು. 1996-2000 ರಲ್ಲಿ ಎಲ್‌ಡಿಎಫ್ (ಧರ್ಮಾತೀತ ಗುಂಪು) ಅಧಿಕಾರದಲ್ಲಿದ್ದಾಗ 67 ಗಲಭೆಗಳು ನಡೆದು ವಾದರೂ ಯಾರೊಬ್ಬರೂ ಹತರಾದಂತೆ ವರದಿಯಾಗಿಲ್ಲ. ನಂತರ 2000-2004 ರಲ್ಲಿ ಪುನಃ ಎಚ್‌ಡಿಎಫ್ (ಮತೀಯ ಗುಂಪು) ಅಧಿಕಾರಕ್ಕೆ ಬಂದಾಗ 79 ಗಲಭೆಗಳು ನಡೆದು ಅವುಗಳಲ್ಲಿ 32 ಜನರು ಹತರಾದರು. ಈ ಅಂಕಿ ಅಂಶಗಳಿಂದ ಧಾರ್ಮಿಕ ಜನರಿಗೂ ಧರ್ಮಾತೀತ ಆಡಳಿತವೇ ಸುರಕ್ಷಿತವಾದುದೆಂದು ಮನವರಿಕೆಯಾಗುತ್ತದೆ.

ವಿದೇಶಿ ಹಣ ಮತ್ತು ಧಾರ್ಮಿಕ ಉಗ್ರವಾದ

2001-02 ರಲ್ಲಿ ಸರ್ಕಾರೇತರ ಸೇವಾ ಸಂಸ್ಥೆಗಳು ವಿದೇಶಗಳಿಂದ 4871.9 ಕೋಟಿ ರೂ. ಗಳನ್ನು ಸ್ವೀಕರಿಸಿದ್ದರೆ, ಅದೇ ವರ್ಷ ಧಾರ್ಮಿಕ ಸಂಸ್ಥೆಗಳು ವಿದೇಶೀಯರಿಂದ 1776 ಕೋಟಿ ರೂ. ಗಳನ್ನು ಸ್ವೀಕರಿಸಿವೆ. ಅದು ಹಿಂದಿನ ವರ್ಷ ಸ್ವೀಕರಿಸಿದುದರ ಶೇ 37.67 ರಷ್ಟು ಅಧಿಕ.



ಜಯ ಲಲಿತ - ಶಂಕರಾಚಾರ್ಯ: ಯಾರದು ರಾಜಕೀಯ-ಯಾರದು ಧರ್ಮ

ಸೌದಿ ಅರೇಬಿಯಾವು ಇಸ್ಲಾಮಿಕ್ ಧಾರ್ಮಿಕ ಗುಂಪುಗಳಿಗೆ ಪ್ರತಿವರ್ಷ 48000 ಕೋಟಿ ರೂ.ಗಳನ್ನು ನೀಡುತ್ತಿದೆ. ಪಾಕ್ ಐಎಸ್‌ಐ, ಉಗ್ರಗಾಮಿ ಗುಂಪುಗಳಿಗೆ ಖೋಟಾ ನೋಟುಗಳು, ಸ್ಫೋಟಕಗಳು, ಮತ್ತು ಶಸ್ತ್ರಾಸ್ತ್ರಗಳನ್ನು ವಿತರಿಸುತ್ತಿದೆ.

ಕೇರಳದಲ್ಲಿ 2002-04 ರಲ್ಲಿ ಹವಾಲ ಜಾಲದ ಮೂಲಕ 6000 ಕೋಟಿ ರೂ.ಗಳು ವಿತರಣೆಯಾದುವು. ಅದೇ ಅವಧಿಯಲ್ಲಿ ಉಗ್ರರಿಂದ ಪೋಲಿಸರು 250 ಕೆ.ಜಿ. ಪೊಟಾಸಿಯಂ ಸಯನೈಡ್‌ಅನ್ನು ವಶಪಡಿಸಿಕೊಂಡರು. ಆ ರಾಸಾಯನಿಕ ವಿಷದ ಒಂದು ಕೆ.ಜಿ.ಯಿಂದ 10ಲಕ್ಷ ಜನರನ್ನು ಸಾಯಿಸಬಹುದು. ಆ ವಿಷದ ಪೂರ್ಣ ಬಳಕೆಯಿಂದ 25 ಕೋಟಿ ಜನ ಸಂಖ್ಯೆಯನ್ನು ಮಣ್ಣುಪಾಲು ಮಾಡಬಹುದು. ಕೇರಳ ಜನಸಂಖ್ಯೆ ಇರುವುದೇ 3.25 ಕೋಟಿ.

2002ರಲ್ಲಿ ಭೋಜ ಸನ್ಯಾಸಿ ಅಕ್ಷರ ಪುರುಷೋತ್ತಮ ಸಂಸ್ಥಾನವು 107.5 ಕೋಟಿ ರೂ.ಗಳನ್ನು ಸಂಗ್ರಹಿಸಿತು. ಅದೇ ವರ್ಷ ಏಷ್ಯಾದ ಗಾಸ್ಪೆಲ್ 98.9 ಕೋಟಿ ರೂ.ಗಳನ್ನು, ವರ್ಲ್ಡ್ ವಿಜನ್ ಆಫ್ ಇಂಡಿಯ 88.4 ಕೋಟಿ ರೂ.ಗಳನ್ನು ಮತ್ತು ಸತ್ಯಸಾಯಿ ಟ್ರಸ್ಟ್ 88.2 ಕೋಟಿ ರೂ.ಗಳನ್ನು ಪಡೆದವು. ಸಂಘ ಪರಿವಾರವು ಬ್ರಿಟನ್‌ನಿಂದ ಪುನರ್ವಸತಿಗಾಗಿ ಪಡೆದ ಕೋಟಿಗಟ್ಟಲೆ ಹಣವನ್ನು ಗುಜರಾತಿನ ನರಬಲಿಗೆ ಉಪಯೋಗಿಸಿತು ಎಂದು ಇಂಗ್ಲೆಂಡಿನ ಕಾರ್ಮಿಕ ಸಂಘದ ನಾಯಕ ಬಿ.ಜಿ. ಮಾಥ್ಯೂ ಆರೋಪಿಸಿದ್ದಾರೆ.

ಧಾರ್ಮಿಕ ಮತೀಯವಾದಿ ಹಾಗೂ ಭಯೋತ್ಪಾದಕ ಸಂಘಟನೆಗಳು ವಿದೇಶಿ ನಿಧಿಯನ್ನು ಸಂಗ್ರಹಿಸಿ ಅದನ್ನು ಶಸ್ತ್ರಾಸ್ತ್ರಗಳ ಮತ್ತು ಸ್ಫೋಟ ಸಾಮಾಗ್ರಿಗಳ ಖರೀದಿಗಾಗಿ ಬಳಸುತ್ತಿವೆ. ಅವುಗಳನ್ನು ತಮ್ಮ ಧಾರ್ಮಿಕ ಹಾಗೂ ರಾಜಕೀಯ ವಿರೋಧಿಗಳ ವಿನಾಶಕ್ಕಾಗಿ ಬಳಸುತ್ತಿದ್ದಾರೆ. ಭಾರತದಲ್ಲಿ ಧರ್ಮವೇ ಧರ್ಮದ ಕ್ರೂರ ಶತ್ರುವಾಗಿ ಪರಿಣಮಿಸಿದೆ.

ಆದ್ದರಿಂದ ದೇಶದಲ್ಲಿ ಧಾರ್ಮಿಕ ಮತೀಯವಾದ, ಭಯೋತ್ಪಾದನೆ, ನರಬಲಿ, ಕೋಮು ದೊಂಬಿ ದಳ್ಳುರಿಗಳನ್ನು ತಡೆಗಟ್ಟುವುದು ಅಥವಾ ನಿರ್ಮೂಲ ಮಾಡುವುದು ನಿಜವಾದ ಧರ್ಮದ ಉಳುವಿಗೆ ಕೈಗೊಳ್ಳಬೇಕಾದ ಆದ್ಯ ಕರ್ತವ್ಯವಾಗಿದೆ.

ಭಾರತೀಯ ವಿಚಾರವಾದಿ ಸಂಘಗಳ ಒಕ್ಕೂಟದ 20 ರಾಜ್ಯಗಳ 65 ಅಂಗಸಂಸ್ಥೆಗಳ ಪ್ರತಿನಿಧಿಗಳು ಸಮಕಾಲಿನ ಸಂದರ್ಭದ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಸಾದ್ಯಂತವಾಗಿ ಸಮಾಲೋಚಿಸಿ ಸಂವಿಧಾನ ತಿದ್ದುಪಡಿಗಾಗಿ ಒಂದು ಕರಡು ಮಸೂದೆಯನ್ನು ಸಿದ್ಧಪಡಿಸಿ ಕೇಂದ್ರ ಸಚಿವರಿಗೆ ಸಲ್ಲಿಸಿದ್ದಾರೆ.

ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಗೊಳಿಸುವ ದೃಷ್ಟಿಯಿಂದ ಕರಡು ಮಸೂದೆಯಲ್ಲಿ 4 ಮುಖ್ಯ ಅಂಶಗಳಿಗೆ ಒತ್ತು ಕೊಡಲಾಗಿದೆ. ವಿಭಾಗ 3(e) ಹೇಳುತ್ತದೆ : 'ಸರ್ಕಾರದ ಎಲ್ಲ ಇಲಾಖೆಗಳು, ಮಂಡಳಿಗಳು, ನಿಯೋಗಗಳು ತಮ್ಮ ಆಡಳಿತ ಅಥವಾ ಅಭಿವೃದ್ಧಿ ಕಾರ್ಯಗಳಲ್ಲಿ ಧರ್ಮದೊಡನೆ ಯಾವ ಸಂಬಂಧವನ್ನೂ ಹೊಂದಿರಬಾರದು.

ವಿಭಾಗ 3(h), ಸರ್ಕಾರದ ಹಣವು ಧಾರ್ಮಿಕ ವಿಧಿವಿಧಾನಗಳಿಗೆ ವೆಚ್ಚ ಮಾಡಲಾಗದು ಎಂದು ಒತ್ತಿ ಹೇಳುತ್ತದೆ. ಧರ್ಮವು ಒಂದು ಖಾಸಗಿ ವಿಷಯ. ಸರ್ಕಾರವು ಧರ್ಮಾತೀತ ಸಿದ್ಧಾಂತವನ್ನು ಪಾಲಿಸಬೇಕು. ಧರ್ಮಾತೀತ ಎಂದರೆ ಧರ್ಮವಿರೋಧಿಯಲ್ಲ, ಧರ್ಮದಿಂದ ಪ್ರತ್ಯೇಕವಾಗಿರುವುದು ಎಂಬುದನ್ನು ಅದು ಸ್ಪಷ್ಟಪಡಿಸುತ್ತದೆ. ಆದ್ದರಿಂದ ಧರ್ಮಕ್ಕೆ ಒಂದರಂತೆ ಇರುವ ನಾಗರಿಕ ಸಂಹಿತೆಗಳಿಗೆ ಬದಲಾಗಿ ಎಲ್ಲರಿಗೂ ಸಮಾನವಾಗಿ ಅನ್ವಯಿಸುವ 'ಧರ್ಮಾತೀತ ನಾಗರಿಕ ಸಂಹಿತೆ'ಯನ್ನು ಅಳವಡಿಸಲು ಕರಡು ಮಸೂದೆ ಒತ್ತಾಯಿಸುತ್ತದೆ.

ರಾಜಕೀಯದಿಂದ ಧರ್ಮವನ್ನು ಬೇರ್ಪಡಿಸುವುದು ಎಂದಾಗ ಅಲ್ಲಿ ಧರ್ಮದ ಸೋಂಕು ಇರುವ ಯಾವುದೇ ಪಕ್ಷವು ರಾಜಕೀಯ ಪಕ್ಷವಾಗಲು ಅರ್ಹತೆ ಪಡೆಯುವುದಿಲ್ಲ.

ಮೂರನೆ ವಿಭಾಗದಲ್ಲಿ ಶಿಕ್ಷಣವನ್ನು ಧರ್ಮದಿಂದ ಬೇರ್ಪಡಿಸುವುದನ್ನು ಒತ್ತಿ ಹೇಳಲಾಗಿದೆ. ಭಾಜಪ ಆಡಳಿತದ ಕಳೆದ ಐದು ವರ್ಷಗಳಲ್ಲಿ ಶಿಕ್ಷಣವನ್ನು ಮತೀಯಗೊಳಿಸುವ ಹಲವಾರು ಹುನ್ನಾರಗಳನ್ನು ನಡೆಸಲಾಗಿತ್ತು. ಅವರ ಉದ್ದೇಶ ಮುಗ್ಧ ಹಸುಳೆಗಳ ಮನಸ್ಸನ್ನು ಹಿಂದು ಮತಾಂಧತೆಯ ಬಲೆಯಲ್ಲಿ ಬಂಧಿಸಿಡುವುದಾಗಿತ್ತು. ಶಿಕ್ಷಣವನ್ನು ಧರ್ಮಾತೀತಗೊಳಿಸುವುದು ಭಾರತದಲ್ಲಿ ತುರ್ತಾಗಿ ಆಗಬೇಕಾದ ಕರ್ತವ್ಯವಾಗಿದೆ.

ದೇಶದಲ್ಲಿ ಶಾಂತಿ, ಸುರಕ್ಷೆ, ಸಮೃದ್ಧಿ ಮತ್ತು ಐಕ್ಯತೆಯ ದೃಷ್ಟಿಯಿಂದ ಮಾನವ ಹಕ್ಕುಗಳು ಮತ್ತು ಧಾರ್ಮಿಕ ಹಕ್ಕುಗಳ ರಕ್ಷಣೆ ಧರ್ಮಾತೀತ ಸರ್ಕಾರದ ಒಂದು ಮುಖ್ಯ ಕಾರ್ಯಕ್ರಮವಾಗಬೇಕಾಗಿದೆ.

ಧರ್ಮಾತೀತ ಪರಿಕಲ್ಪನೆಯನ್ನು ಸಂವಿಧಾನದಲ್ಲಿ ಅಳವಡಿಸಲು ಕೋರಿ ಈ ಕರಡು ಮಸೂದೆಯನ್ನು ಕೇಂದ್ರ ಮಂತ್ರಿ ಮಂಡಲದ ಎಲ್ಲಾ ಸಚಿವರಿಗೆ ಸಲ್ಲಿಸಲಾಗಿದೆ. ಅಲ್ಲಿಗೆ ಆ ಕೆಲಸ ಮುಗಿಯಲಿಲ್ಲ, ಜನ ಸಾಮಾನ್ಯರಲ್ಲಿ ಈ ಬಗ್ಗೆ ತಿಳುವಳಿಕೆಯನ್ನು ಮೂಡಿಸುವ ವ್ಯಾಪಕ ಜನಾಂದೋಲನ ಕಾರ್ಯ ನಡೆಯಬೇಕಾಗಿದೆ. ಎಲ್ಲಿಯವರೆಗೆ ಜನಸಾಮಾನ್ಯರು ಇಂತಹ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗಿಗಳಾಗುವುದಿಲ್ಲವೋ ಅಲ್ಲಿಯವರೆಗೆ ಅವು ಬುದ್ಧಿಜೀವಿಗಳ ಹಗಲುಗನಸುಗಳು ಮಾತ್ರವಾಗಿ ಮುಂದುವರಿಯುತ್ತವೆ.

(ಆಧಾರ: Indian Skeptic ಜುಲೈ 05)

□

ವರ್ತಮಾನ

ಅಡ್ವಾಣಿ, ಜಿನ್ನಾ ಮತ್ತು ಸೆಕ್ಯೂಲರಿಸಂ

ಅಡ್ವಾಣಿಯವರ ರಾಜೀನಾಮೆ ಪ್ರಹಸನ ಮುಗಿದು, ಭಾರತೀಯ ಜನತಾ ಪಕ್ಷದೊಳಗಿನ ತಳಮಳ ಒಂದು ತಹಬಂದಿಗೆ ಬಂದ ನಂತರವೂ ಅಡ್ವಾಣಿಯವರ ಪಾಕ್ ಪ್ರವಾಸ ಇಡೀ ದೇಶದಲ್ಲಿ ಚರ್ಚೆಯ ವಿಷಯವಾಗಿದೆ. ಇತ್ತೀಚೆಗೆ ದೆಹಲಿಯಲ್ಲಿ ಜರುಗಿದ ವಿಶ್ವ ಹಿಂದೂ ಪರಿಷತ್ತಿನ ಕೇಂದ್ರ ಸಮಿತಿ ಸಭೆಯು, ಭಿನ್ನಾಭಿಪ್ರಾಯಗಳ ನಡುವೆ ಅಡ್ವಾಣಿಯವರನ್ನು ರಾಜಕೀಯ ನಿವೃತ್ತಿ ಹೊಂದಲು ಅಗ್ರಹಿಸಿದೆ. ಇನ್ನೊಂದೆಡೆ, ಭಾರತೀಯ ಜನತಾ ಪಕ್ಷದ ಸ್ಪಷ್ಟವಾದ ರಾಜಕೀಯ ನಿಲುವು ಮತ್ತು ಅಡ್ವಾಣಿಯವರಿಗೆ ಸೂಚಿಸಿದ ಬೆಂಬಲದಿಂದ ವಿಚಲಿತವಾಗಿರುವ ಆರ್. ಎಸ್. ಎಸ್. ನಾಯಕರು ವಿಭಿನ್ನ ನಿಲುವು ತಾಳಿರುವುದು ಕುತೂಹಲಕಾರಿಯಾಗಿದೆ.

○ನಾ. ದಿವಾಕರ್

ಮಾಜಿ ಗೃಹ ಮಂತ್ರಿ, ಉಪಪ್ರಧಾನಿ, ಭಾರತೀಯ ಜನತಾ ಪಕ್ಷದ ರಾಷ್ಟ್ರಾಧ್ಯಕ್ಷ ಲಾಲ್‌ಕೃಷ್ಣ ಅಡ್ವಾಣಿಯವರ ರಾಜೀನಾಮೆಯ ಪ್ರಹಸನ ಮುಗಿದು, ಭಾರತೀಯ ಜನತಾ ಪಕ್ಷದೊಳಗಿನ ತಳಮಳ ಒಂದು ತಹಬಂದಿಗೆ ಬಂದ ನಂತರವೂ ಅಡ್ವಾಣಿಯವರ ಪಾಕ್ ಪ್ರವಾಸ ಇಡೀ ದೇಶದಲ್ಲಿ ಚರ್ಚೆಯ ವಿಷಯವಾಗಿದೆ. ಇತ್ತೀಚೆಗೆ ದೆಹಲಿಯಲ್ಲಿ ಜರುಗಿದ ವಿಶ್ವ ಹಿಂದೂ ಪರಿಷತ್ತಿನ ಕೇಂದ್ರ ಸಮಿತಿ ಸಭೆಯು, ಭಿನ್ನಾಭಿಪ್ರಾಯಗಳ ನಡುವೆಯಲ್ಲು ಅಡ್ವಾಣಿಯವರನ್ನು ರಾಜಕೀಯ ನಿವೃತ್ತಿ ಹೊಂದಲು ಅಗ್ರಹಿಸಿದೆ. ಇನ್ನೊಂದೆಡೆ, ಭಾರತೀಯ ಜನತಾ ಪಕ್ಷದ ಸ್ಪಷ್ಟವಾದ ರಾಜಕೀಯ ನಿಲುವು ಮತ್ತು ಅಡ್ವಾಣಿಯವರಿಗೆ ಸೂಚಿಸಿದ ಬೆಂಬಲದಿಂದ ವಿಚಲಿತವಾಗಿರುವ ಆರ್. ಎಸ್. ಎಸ್. ನಾಯಕರು ವಿಭಿನ್ನ ನಿಲುವು ತಾಳಿರುವುದು ಕುತೂಹಲಕಾರಿಯಾಗಿದೆ.

ಏನೇ ಆದರೂ ಅಡ್ವಾಣಿಯವರ ಪಾಕಿಸ್ತಾನ ಪ್ರವಾಸ ಹಿಂದುತ್ವದ ಪರಿವಾರದಲ್ಲಿ ಬಿರುಗಾಳಿ ಎಬ್ಬಿಸಿರುವುದಂತೂ ಸತ್ಯ. ಭಾರತೀಯ ಜನತಾ ಪಕ್ಷದಲ್ಲಾಗಲೀ, ಸಂಘ ಪರಿವಾರದಲ್ಲಾಗಲೀ ಎಲ್ಲವೂ ಸುಸೂತ್ರವಾಗಿಲ್ಲ ಎಂಬ ಅಂಶವಂತೂ ರಾಜಕೀಯ ವಲಯಗಳಲ್ಲಿ ಸ್ಪಷ್ಟವಾಗಿದೆ. ವಿ.ಹಿಂ.ಪ, ಆರ್.ಎಸ್.ಎಸ್. ಮತ್ತು ಭಾರತೀಯ ಜನತ ಪಕ್ಷ–ಮೂರು ಸಂಘಟನೆಗಳಲ್ಲಿ ಅಡ್ವಾಣಿಯವರ ಪರ–ವಿರೋಧ ನಿಲುವುಗಳು ಗೋಚರಿಸಿರುವುದು ಅಲ್ಲಿನ ಆಂತರಿಕ ಸಮಸ್ಯೆಗಳನ್ನು ಸೂಚಿಸುತ್ತವೆ.

ರಾಷ್ಟ್ರದಲ್ಲೇ ಅಲ್ಲದೆ ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲೂ ಬಿಸಿಬಿಸಿ ಸುದ್ದಿಯಾಗಿ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ತಲ್ಲಣ ಉಂಟು ಮಾಡಿದ ಅಡ್ವಾಣಿಯವರ ಕೃತ್ಯವಾದರೂ ಏನು? ಭಾರತ–ಪಾಕ್ ಶಾಂತಿ ಯತ್ನಕ್ಕೆ ಪರೋಕ್ಷವಾಗಿ ವಿರೋಧಿಸುತ್ತಿದ್ದ ವ್ಯಕ್ತಿ ಪಾಕಿಸ್ತಾನ ಭೇಟಿ ನೀಡಿದ್ದೇ ಒಂದು ಮಹತ್ತರವಾದ ಬೆಳವಣಿಗೆ. ಆದರೆ ಪ್ರಸ್ತುತದ ವಿವಾದಗಳಿಗೆ ಎಡೆಮಾಡಿಕೊಟ್ಟಿರುವುದು ಅವರು ಪಾಕಿಸ್ತಾನದಲ್ಲಿ ನೀಡಿರುವ ಹೇಳಿಕೆಗಳು. ಮೂಲಭೂತವಾಗಿ ಅಡ್ವಾಣಿಯವರ ಪಾಕ್ ಪ್ರವಾಸದಲ್ಲಿ ಮೂರು ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

ಮೊದಲನೆಯದಾಗಿ, ಅಡ್ವಾಣಿಯವರು ತಮ್ಮ ರಾಜಕೀಯ ನೈಪುಣ್ಯತೆಯನ್ನು ಪ್ರದರ್ಶಿಸಲು ಪ್ರಸ್ತುತ ಭಾರತ–ಪಾಕ್ ಶಾಂತಿ ಪ್ರಕ್ರಿಯೆಯನ್ನು ಅನುಮೋದಿಸಿದರು. ಎರಡನೆಯದಾಗಿ, ತನ್ನ ಪೋಷಕ ಸಂಘಟನೆ ಸಂಘ ಪರಿವಾರಕ್ಕೆ ಪ್ರಿಯವಾದ "ಅಖಂಡ ಭಾರತ"ದ ಕಲ್ಪನೆಗೆ ವಿರುದ್ಧವಾಗಿ ಪಾಕಿಸ್ತಾನದ ಅಸ್ತಿತ್ವದ ವಾಸ್ತವತೆಯನ್ನು ಒಪ್ಪಿಕೊಂಡರು. ಮೂರನೆಯದಾಗಿ, ಪಾಕಿಸ್ತಾನದ ಆಳುವ ವರ್ಗಗಳಿಗೆ ಅಲ್ಪಸಂಖ್ಯಾತರ ರಕ್ಷಣೆಯ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಈ ಮೂರು ಅಂಶಗಳು ಭವಿಷ್ಯದ ದೃಷ್ಟಿಯಿಂದ ಸಕಾರಾತ್ಮಕವೆಂದೇ ಹೇಳಬಹುದು. ಆದರೆ ಪ್ರಸ್ತುತ ವಿವಾದಕ್ಕೆ ಕಾರಣವಾಗಿರುವುದು, ಅವರು ಜೂನ್ ಐದರಂದು ಕರಾಚಿಯಲ್ಲಿ ಮಾಡಿದ ಭಾಷಣದ ಕೆಲವು ತುಣುಕುಗಳು. 1947ರ ಆಗಸ್ಟ್ 11 ರಂದು ಪಾಕಿಸ್ತಾನದ ರಾಜ್ಯ ವ್ಯವಸ್ಥಾ ಸಭೆಯಲ್ಲಿ ಮಹಮದ್ ಅಲಿ ಜಿನ್ನಾರವರು ಮಾಡಿದ ಭಾಷಣದ ಕೆಲವು ಅಂಶಗಳನ್ನು ಪುನರುಚ್ಚರಿಸುವುದರ ಮೂಲಕ "ಜಿನ್ನಾರವರು ಸೆಕ್ಯೂಲರ್ ನಾಯಕರಾಗಿದ್ದರು" ಮತ್ತು "ಅವರು ಸೆಕ್ಯೂಲರ್ ಪಾಕಿಸ್ತಾನವನ್ನು ಸ್ಥಾಪಿಸುವ ಹಂಬಲ ಹೊಂದಿದ್ದರು" ಎಂದು ಹೇಳಿರುವುದೇ ಇಷ್ಟೆಲ್ಲಾ ವಿವಾದಕ್ಕೆ ಕಾರಣವಾಗಿದೆ.

ಇದಕ್ಕೂ ಮುನ್ನ ಮಾನ್ಯ ಅಡ್ವಾಣಿಯವರು ಬಾಬ್ರಿ ಮಸೀದಿಯನ್ನು ಕುರಿತು ಮಾತನಾಡುವಾಗ "ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ದಿನ ನನ್ನ ಜೀವಮಾನದಲ್ಲೆ ಅತ್ಯಂತ ಕರಾಳ ದಿನ" ಎಂದು ಹೇಳಿದ್ದು, ಸಂಘ ಪರಿವಾರದಲ್ಲಿ ಬಿರುಗಾಳಿ ಎಬ್ಬಿಸಿದೆ. ಈ ಪ್ರಕರಣವನ್ನು ವಿಶ್ಲೇಷಿಸುವಾಗ ಅಡ್ವಾಣಿಯವರನ್ನು ಕೇವಲ ಒಬ್ಬ ವ್ಯಕ್ತಿಯಾಗಿ ನೋಡದೆ ಸಾಂಸ್ಥಿಕ ದೃಷ್ಟಿ ಕೋನದಿಂದ ನೋಡಬೇಕಾಗುತ್ತದೆ. ಅಡ್ವಾಣಿ ಮತ್ತು ಸಂಘ ಪರಿವಾರದ ನಡುವಿನ ಸಂಬಂಧ ವೈಮನಸ್ಸುಗಳೇನೇ ಇದ್ದರೂ ಜಿನ್ನಾರವರನ್ನು ಸೆಕ್ಯೂಲರ್ ಎಂದು ಬಣ್ಣಿಸುವುದರ ಹಿಂದೆ ಅಡಗಿರುವ ಮರ್ಮವನ್ನು ಗ್ರಹಿಸಬೇಕಾಗಿದೆ. ಭಾರತೀಯ ಜನತಾ ಪಕ್ಷ ಅಥವಾ ಸಂಘ ಪರಿವಾರದ ಪಾಳೆಯದಲ್ಲಿ ಉಂಟಾಗುವ ತಳಮಳಗಳೇನೇ ಇದ್ದರೂ ಅಡ್ವಾಣಿಯವರ ಈ ಹೇಳಿಕೆಗಳು ಮುಂಬರುವ ರಾಜಕೀಯ ಬೆಳವಣಿಗೆಗಳ ಮುನ್ಸೂಚಿಯಾಗಿದೆ ಎಂದು ಹೇಳಬಹುದು.

ಅಡ್ವಾಣಿಯವರ ಜೂನ್ ಐದು ಭಾಷಣದಲ್ಲಿ ಎರಡು ಮಹತ್ವದ ಅಂಶಗಳನ್ನು ಗುರುತಿಸಬಹುದು. ಮೊದಲನೆಯದೆಂದರೆ, ಸೆಕ್ಯೂಲರಿಸಂನ ಧ್ಯೇಯದ ಬಗ್ಗೆ ಅಡ್ವಾಣಿಯವರು ವಿಶ್ವಾಸ



ವ್ಯಕ್ತಪಡಿಸಿರುವುದು. ಎರಡನೆಯದಾಗಿ, ಕಳೆದ ಎರಡು ದಶಕಗಳಿಂದ ಭಾರತೀಯ ಜನತಾ ಪಕ್ಷ ನಡೆಸುತ್ತಾ ಬಂದಿರುವ ರಾಜಕೀಯ ಮಾರ್ಗದ ಸಮರ್ಥನೆ. ಅಡ್ವಾಣಿಯವರು ಸಮರ್ಥಿಸಿರುವ ಸೆಕ್ಯೂಲರಿಸಂ ಯಾವುದು ಎಂಬ ಪ್ರಶ್ನೆ ಇಲ್ಲಿ ಮೂಲಭೂತವಾಗಿ ಉದ್ಭವಿಸುತ್ತದೆ. ಭಾರತೀಯ ರಾಜಕಾರಣದಲ್ಲಿ ಸೆಕ್ಯೂಲರಿಸಂನ ಬಗ್ಗೆ ದೇಶವ್ಯಾಪಿ ಚರ್ಚೆ ನಡೆಸಿಸಲು ನಾಂದಿ ಹಾಡಿದವರೇ ಅಡ್ವಾಣಿ ಎಂದು ಹೇಳಬೇಕಿಲ್ಲ ಸ್ವಾತಂತ್ರ್ಯ ಬಂದಾಗಿನಿಂದಲೂ ದೇಶದ ಬಹುಪಾಲು ಜನತೆ ತಾತ್ವಿಕವಾಗಿ ಒಪ್ಪಿಕೊಂಡು ಬಂದಿದ್ದ, ಆದರೆ ರಾಜಕೀಯವಾಗಿ ದುರುಪಯೋಗ ಕ್ಕೊಳಗಾಗಿದ್ದ ಸೆಕ್ಯೂಲರಿಸಂನ ವಿರುದ್ಧ ಟೀಕಾ ಪ್ರಚಾರ ಮಾಡಿ ಖೋಟಾ ಸೆಕ್ಯೂಲರಿಸಂ ಎಂಬ ಪದವನ್ನು ಹುಟ್ಟುಹಾಕಿದ್ದೇ

ಅಡ್ವಾಣಿಯವರೆಂದರೆ ತಪ್ಪಾಗಲಾರದು.

ತಮ್ಮ ಪೋಷಕ ಸಂಘಟನೆಯಾದ ಸಂಘ ಪರಿವಾರದ ಧ್ಯೇಯೋದ್ದೇಶಗಳು ಮತ್ತು ಅವರೇ ಅಧ್ಯಕ್ಷರಾಗಿರುವ ಪಕ್ಷದ ನೀತಿಗ ಳಿಗೆ ಮತ್ತು ತಮ್ಮದೇ ಆದ ರಾಜಕೀಯ ವ್ಯಕ್ತಿತ್ವಕ್ಕೆ ವಿರುದ್ಧವಾದ ಅಡ್ವಾಣಿ ಯವರ ಐತಿಹಾಸಿಕ ಪರಿಷ್ಕರಣವಾದವು ಅಸಂಬದ್ಧವೆನಿಸುತ್ತದೆ. ಸಂಘ ಪರಿವಾರದ ಮೂರು ಮೂಲಭೂತ ಸೂತ್ರಗಳಾದ ಇಸ್ಲಾಂ ವಿರೋಧ- ಮುಸ್ಲಿಂ ವಿರೋಧ ಮತ್ತು ಪಾಕ್ ವಿರೋಧಿ ನೀತಿಗಳನ್ನು ಅನೇಕ ರಥಯಾತ್ರೆಗಳ ಮೂಲಕ ದೇಶದಾದ್ಯಂತ ಪ್ರಚಾರ ಮಾಡಿದ ಅಡ್ವಾಣಿಯವರೇ ಈ ರೀತಿ ನಿಲುವು ಬದಲಾಯಿಸಿದಾಗ ಸ್ವಾಭಾವಿಕ ವಾಗಿಯೇ ಸಂಘ ಪರಿವಾರಕ್ಕೆ ಕಸಿವಿಸಿ ಉಂಟಾಗುತ್ತದೆ. ಕಾರ್ಯಕರ್ತರಲ್ಲಿ ಅಕ್ರೋಶ ಮೂಡುತ್ತದೆ.

ಇಂದು ಜಿನ್ನಾರಂಥವರನ್ನು ಸೆಕ್ಯೂಲರ್ ಎಂದು ಬಣ್ಣಿಸುವ ಅಡ್ವಾಣಿಯವರು 15 ವರ್ಷಗಳ ಮುನ್ನ ಸೋಮನಾಥದಿಂದ ಅಯೋಧ್ಯೆಗೆ ರಥಯತ್ರೆ ಕೈಗೊಂಡಾಗ ಯಾವ ರೀತಿಯ ನಿಲುವು ತಾಳಿದ್ದರೆಂಬ ಅಂಶವನ್ನು ಗಮನಿಸುವುದು ಅವಶ್ಯವೆನಿಸುತ್ತದೆ. ಅಯೋಧ್ಯೆ ಚಳುವಳಿ ಪರಾಕಾಷ್ಠೆಯುಲ್ಲಿದ್ದ ಹಂತದಲ್ಲಿ ಸೆಕ್ಯೂಲರ್ ವಾದಿಗಳನ್ನು ದೇಶ ದ್ರೋಹಿಗಳೆಂದೂ ಹಿಂದೂ ವಿರೋಧಿಗಳೆಂದೂ ಪಾಶ್ಚಿಮಾತ್ಯ ಸಂಸ್ಕೃತಿಯ ಗುಲಾಮರೆಂದೂ ಜರಿಯುತ್ತಿದ್ದವರಲ್ಲಿ ಅಡ್ವಾಣಿ ಪ್ರಮುಖರಾಗಿದ್ದರು. ಸೆಕ್ಯೂಲರ್ ಎಂದರೆ ಧರ್ಮ ನಿರಪೇಕ್ಷತೆಯಲ್ಲ, ಸರ್ವ ಧರ್ಮ ಸಮ ಭಾವ ಎಂದು ಅರ್ಥೈಸಿ ಅದು ಪಾಶ್ಚಿಮಾತ್ಯ ದೇಶಗಳಿಂದ ಅಮದು ಮಾಡಿಕೊಂಡ ಸಿದ್ಧಾಂತ ಸೆಕ್ಯೂಲರಿಸಂ ರಾಷ್ಟ್ರೀಯತಾ ಭಾವನೆಗಳಿಗೆ ವಿರುದ್ಧವಾದುದು ಎಂದೆಲ್ಲಾ ಹಳಿಯುತ್ತಿದ್ದ ಅಡ್ವಾಣಿಯವರು ಸೆಕ್ಯೂಲರಿಸಂ ಅನ್ನು ಕಮ್ಯುನಿಸ್ಟರ ವಿರುದ್ಧ ಅಸ್ತ್ರವನ್ನಾಗಿ ಬಳಸಿದ್ದೂ ಉಂಟು.

ಮುಸಲ್ಮಾನರನ್ನು ಅಲ್ಪಸಂಖ್ಯಾತರನ್ನು ಓಲೈಸಲು ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳು ಸೆಕ್ಯೂಲರ್‌ವಾದ ವನ್ನು ಪ್ರತಿಪಾದಿಸುತ್ತವೆ ಎಂದು ಅಡ್ವಾಣಿಯವರು ದೂಷಿಸಿದ್ದುಂಟು. ಸತ್ಯಾಂಶವೆಂದರೆ, ಸ್ವಾತಂತ್ರ್ಯ ಬಂದಾಗಿನಿಂದಲೂ, ಭಾರತೀಯ ಸಮಾಜವು ಬಹುಪಾಲು ಒಪ್ಪಿಕೊಂಡು ಬಂದಿದ್ದ ಸೆಕ್ಯೂಲರ್ ನೀತಿಗಳಿಗೆ ತಿಲಾಂಜಲಿ ನೀಡಿ, ಸೆಕ್ಯೂಲರಿಸಂ ಬಗ್ಗೆ ಗೊಂದಲ ಮೂಡಿಸಿದ್ದೇ ಅಡ್ವಾಣಿ ಮತ್ತವರ ಸಹಚರರೆಂದು ಎಲ್ಲರಿಗೂ ತಿಳಿದಿದೆ. ಇದೇ ಹಿನ್ನೆಲೆಯಲ್ಲಿ ಪ್ರಚಲಿತ ಸೆಕ್ಯುಲರ್ ಸಿದ್ಧಾಂತವನ್ನು ಖೋಟಾ ಸೆಕ್ಯೂಲರಿಸಂ ಎಂದು ಜರೆದು ಭಾರತೀಯ ಜನತಾ ಪಕ್ಷದ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನೇ ನಿಜವಾದ ಸೆಕ್ಯೂಲರಿಸಂ ಎಂದು ಪ್ರತಿಪಾದಿಸಿದ್ದೂ ಅಡ್ವಾಣಿಯವರೇ.

ಈ ಹಿನ್ನೆಲೆಯಲ್ಲೇ ದಶಕಗಳಿಂದ ಬೆಳೆದು ಬಂದ ಅಡ್ವಾಣಿಯವರು ತಮ್ಮ ವ್ಯಕ್ತಿತ್ವಕ್ಕೆ ವಿರುದ್ಧವಾದ ನಿಲುವು ತಾಳಿರುವುದು ಪ್ರಸ್ತುತ ಗೊಂದಲಗಳಿಗೆ ಕಾರಣವಾಗಿದೆ. ತಾವು ರಥಯಾತ್ರೆಗಳ ಮೂಲಕ ಪ್ರಚಾರಪಡಿಸಿದ ಅಲ್ಪಸಂಖ್ಯಾತ ವಿರೋಧಿ ನೀತಿಗಳೇ ನರೇಂದ್ರ ಮೋದಿ ತೊಗಾಡಿಯ ರಂಥವರ ಉದಯಕ್ಕೆ ಕಾರಣವಾಯಿತೆಂಬ ಅಂಶವನ್ನು ಅಡ್ವಾಣಿಯವರು ಮರೆಯಬಾರದು. ಹಾಗೆ ನೋಡಿದರೆ ಮೋದಿ ಅಥವಾ ತೊಗಾಡಿಯರವರೂ ಒಂದು ವಿಶಿಷ್ಟ ಪರಂಪರೆಯಲ್ಲಿ ಬೆಳೆದು ಬಂದವರೇ ಆಗಿದ್ದಾರೆ. ಆ ಪರಂಪರೆಯನ್ನು ಸಂಘ ಪರಿವಾರದ ಉಗಮ ಹಾಗೂ ಬೆಳವಣಿಗೆಯೊಂದಿಗೆ ಗುರುತಿಸಬಹುದು. ಮೇಲೆ ಹೇಳೀರುವ ಮುಸ್ಲಿಂ ವಿರೋಧಿ-ಇಸ್ಲಾಂ ವಿರೋಧಿ, 'ಪಾಕ್'-ವಿರೋಧಿ, ನೀತಿಗಳೇ ಸಂಘ ಪರಿವಾರದ ಅಡಿಪಾಯವೆಂದು ಹೇಳಬಹುದು. ಈ ಬೆಳವಣಿಗೆಯ ಹಂತದಲ್ಲಿ ಸಂಘ ಪರಿವಾರವು ವೀರ ಸಾವರಕರು ರಂತಹವರನ್ನು ಹೀರೋ ಮಾಡಿದ್ದರೆ ಜಿನ್ನಾ ರಂಥವರು ಅಥವಾ ನೆಹರೂ-ಗಾಂಧಿ ಯವರು ಖಳನಾಯಕರಾಗಿಬಿಡುತ್ತಾರೆ.

ನೆಹರೂರವರ ಸಂಯುಕ್ತ ರಾಷ್ಟ್ರೀಯತೆಯ ಪರಿಕಲ್ಪನೆಗೆ ವಿರುದ್ಧವಾಗಿ ತಮ್ಮದೇ ಆದ ರಾಷ್ಟ್ರೀಯತೆಯ ಕಲ್ಪನೆಯನ್ನು ಪ್ರಚಾರ ಪಡಿಸಲು ನಾಥುರಾಂ ಗೋಡ್ಸೆ ಗಾಂಧೀಜಿಯ ಹತ್ಯೆ ಮಾಡಬೇಕಾಯಿತು. ತನ್ನ ಹಿಂಸಾತ್ಮಕ ಪ್ರವೃತ್ತಿಯಿಂದಲೇ, ಹಿಂದೂ ಮಹಾ ಸಭಾವನ್ನು ನೇಪಥ್ಯಕ್ಕೆ ಸರಿಸಿ ಹಿಂದೂ ಸಂರಕ್ಷಕ ಸಂಘಟನೆಯಾಗಿ ಹೊರಹೊಮ್ಮಿದ ಆರ್. ಎಸ್. ಎಸ್. ತನ್ನ ಸಿದ್ಧಾಂತ ವನ್ನು ಆಧರಿಸಿಯೆ ಜನ ಸಂಘ ಮತ್ತು ನಂತರದಲ್ಲಿ ಭಾರತೀಯ ಜನತಾ ಪಕ್ಷವನ್ನು ಹುಟ್ಟು ಹಾಕಿದ್ದು ಇತಿಹಾಸ ದಲ್ಲಿ ನಿರೂಪಿತವಾಗಿದೆ. ಸ್ವಾತಂತ್ರಾನಂತರದಲ್ಲಿ ತನ್ನ ಹಿಂದೂ ರಾಷ್ಟ್ರ ಕಲ್ಪನೆಯನ್ನು ಜನರ ಬಳಿ ಕೊಂಡೊಯ್ಯಲು ಸಂಘ ಪರಿವಾರಕ್ಕೆ ಕಾಂಗ್ರೆಸ್‌ನ ರಾಜಕೀಯವೇ ಅಡ್ಡಿಯಾಗಿತ್ತು. 1971ರ ಪಾಕಿಸ್ತಾನ ಯುದ್ಧದ ನಂತರದಲ್ಲಿ ಇಂದಿರಾಗಾಂಧಿ ಉಂಟುಮಾಡಿದ ರಾಷ್ಟ್ರೀಯತಾ ಭಾವ ಮತ್ತು 1984ರಲ್ಲಿ ರಾಜೀವಗಾಂಧೀ ಸೃಷ್ಟಿಸಿದ ಮೇರಾ ಭಾರತ್ ಮಹಾನ್ ನಂತಹ ಭಾವನಾತ್ಮಕ ಘೋಷಣೆಗಳು ಸಂಘ ಪರಿವಾರಕ್ಕೆ ತೊಡಕಾಗಿದ್ದವು.

ಹಾಗಾಗಿಯೇ 1989ರ ಪಾಲಂಪುರ



ಮಹಮದ್ ಅಲಿ ಜಿನ್ನಾ

> ತನ್ನ ಹಿಂಸಾತ್ಮಕ ಪ್ರವೃತ್ತಿಯಿಂದಲೇ, ಹಿಂದೂ ಮಹಾ ಸಭಾವನ್ನು ನೇಪಥ್ಯಕ್ಕೆ ಸರಿಸಿ ಹಿಂದೂ ಸಂರಕ್ಷಕ ಸಂಘಟನೆಯಾಗಿ ಹೊರಹೊಮ್ಮಿದ ಆರ್. ಎಸ್. ಎಸ್. ತನ್ನ ಸಿದ್ಧಾಂತ ವನ್ನು ಆಧರಿಸಿಯೆ ಜನ ಸಂಘ ಮತ್ತು ನಂತರದಲ್ಲಿ ಭಾರತೀಯ ಜನತಾ ಪಕ್ಷವನ್ನು ಹುಟ್ಟು ಹಾಕಿದ್ದು ಇತಿಹಾಸದಲ್ಲಿ ನಿರೂಪಿತವಾಗಿದೆ.

ಸಮಾವೇಶದಲ್ಲಿ ಭಾರತೀಯ ಜನತಾ ಪಕ್ಷವು ತನ್ನ ಸಾಂಸ್ಕೃತಿಕ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಹುಟ್ಟು ಹಾಕುವುದರಲ್ಲಿ ಯಶಸ್ವಿಯಾಯಿತು. ಈ ಸಮಾವೇಶದಲ್ಲಿ ತಯಾರಿಸಲಾದ ಹಿಂದುತ್ವ ಪ್ರಣಾಳಿಕೆಯಲ್ಲಿ ಹಿಂದೂ ರಾಷ್ಟದ ಪರಿಕಲ್ಪನೆ ಇದೆಯೇ ಹೊರತು ಅಲ್ಪಸಂಖ್ಯಾತರನ್ನು ಒಪ್ಪಿಕೊಳ್ಳುವ ಸಂಯುಕ್ತ ರಾಷ್ಟ್ರೀಯತೆ ಕಂಡು ಬರುವುದಿಲ್ಲ.

ಈ ಐತಿಹಾಸಿಕ ಹಿನ್ನೆಲೆಯಲ್ಲಿ ಇಡೀ ಪ್ರಸಂಗವನ್ನು ವಿಶ್ಲೇಷಿಸುವಾಗ ಸ್ಪಷ್ಟವಾಗಿ ಕಂಡುಬರುವ ಅಂಶವೆಂದರೆ ಭಾರತೀಯ ಜನತಾ ಪಕ್ಷ ಮತ್ತು ಸಂಘ ಪರಿವಾರದ ಪರಿಕಲ್ಪನೆಯಲ್ಲಿ ಸೆಕ್ಯೂಲರಿಸಂ ಎಂದರೆ ಅನ್ಯ ಧರ್ಮಗಳಿಗೆ ಮಾನ್ಯತೆ ನೀಡದ ಏಕಮತಧರ್ಮದ ಆಳ್ವಿಕೆಯೇ ಆಗಿದೆ. ಧರ್ಮಾಧಾರಿತ ರಾಷ್ಟ್ರ ಸ್ಥಾಪನೆಯ ಧ್ಯೇಯದಿಂದಲೇ ಉಗಮಿಸಿದ ಸಂಘ ಪರಿವಾರಕ್ಕೆ ಗೋಳ್ವಾಳ್ಕರ್ ಸಾವರ್‌ಕರ್. ಮುಂತಾದವರು ಮುಖ್ಯ ಸ್ಪೂರ್ತಿಯಾಗಿದ್ದರೂ ಈ ಸಿದ್ಧಾಂತದ ಮೂಲಕವೇ. ಹಾಗಾಗಿಯೇ ಸ್ವಾತಂತ್ರ್ಯ ಪೂರ್ವ ದಲ್ಲಿ ಹಿಂದೂ ಸಂರಕ್ಷಕರಂತಿದ್ದ ಹಿಂದೂ ಮಹಾಸ ಭಾವನ್ನು ಹಿಮ್ಮೆಟ್ಟಿಸಲು ಸಂಘ ಪರಿವಾರಕ್ಕೆ ಸಾಧ್ಯವಾಗಿದ್ದು.

ಸೆಕ್ಯೂಲರಿಸಂ ಅಥವಾ ಧಾರ್ಮಿಕ ಅಧಿಪತ್ಯಾದ ವಿಷಯ ಬಂದಾಗ ಕೆಲವೊಮ್ಮೆ ಜಿನ್ನಾ ಮತ್ತು ವೀರ ಸಾವರ್‌ಕರ್‌ರವರು ಒಂದೇ ನಿಲುವು ತಾಳುತ್ತಾರೆ. ಜಿನ್ನಾ ಎಂದಿಗೂ ಧರ್ಮಾಚರಣೆಯನ್ನು ಒಪ್ಪುತ್ತಿರಲಿಲ್ಲವಾದರರೂ ರಾಷ್ಟ್ರ ನಿರ್ಮಾಣದ ಸಂದರ್ಭದಲ್ಲಿ ಧರ್ಮಾಧಾರಿತ ರಾಷ್ಟವನ್ನೇ ಪ್ರತಿಪಾದಿಸಿದ್ದರು. ಹಾಗೆಯೇ ವೀರ ಸಾವರ್‌ಕರ್ ಸಹ ಸಂಪ್ರ ದಾಯವಾದಿಯಾಗಿರಲಿಲ್ಲ ಆದರೆ ಅವರು ಸಹ ಧರ್ಮಾ ಧಾರಿತ ರಾಷ್ಟವನ್ನೇ ಸಮರ್ಥಿಸಿಕೊಂಡಿದ್ದರು. ಜಿನ್ನಾರವರು ಉದಾರವಾದಿ ಪರಿಸರದಲ್ಲಿ ಬೆಳೆದವರಾಗಿದ್ದು, ಸಾವರ್‌ಕರ್ ರವರು ದೇಶಭಿಮಾನದ ರಾಷ್ಟ್ರೀಯತೆ ಮತ್ತು ಹಿಂದುತ್ವದ ನೆರಳಲ್ಲಿ ಬೆಳೆದವರಾಗಿದ್ದು, ಇಬ್ಬರು ಪಾಶ್ಚಿಮಾತ್ಯ ರಾಜಕೀಯ ಪರಂಪರೆಯ ಪ್ರತಿಪಾದಕರಗಿದ್ದರಿಂದ ಅವರಿಗೆ ಧರ್ಮಾ ಧಾರಿತ ರಾಷ್ಟದ ಇತಿಮಿತಿಗಳ ಅರಿವಿತ್ತು. ಹಾಗಾಗಿ ಇಬ್ಬರು ಸಹ ರಾಷ್ಟದ ಅಡಿಪಾಯವಾಗಿ ಧರ್ಮವೇ ಮುಖ್ಯ ವಾಗಿರಬೇಕೆಂದು, ರಾಷ್ಟ ಸ್ಥಾಪನೆಯಾದ ನಂತರ ಸೆಕ್ಯೂಲ ರಿಸಂ ತಾನಾಗಿ ಹೊರಹೊಮ್ಮುವುದೆಂದೂ ವ್ಯಾಖ್ಯಾನಿಸಿ ದ್ದುಂಟು. ಇದರಲ್ಲೂ ಸಾಂಸ್ಕೃತಿಕವಾಗಿ ಬಹುಸಂಖ್ಯಾತರ ಧಾರ್ಮಿಕ ಅಧಿಪತ್ಯಾವನ್ನು ಈರ್ವರೂ ಎತ್ತಿ ಹಿಡಿಯುತ್ತಾರೆ.

ಇಬ್ಬರು ನಾಯಕರೂ ಪ್ರತಿಪಾದಿಸಿದ ಬಹುಸಂಖ್ಯಾತ, ಅಲ್ಪ ಸಂಖ್ಯಾತ ಪ್ರಶ್ನೆಯು ವಸಾಹತು ಶಾಹಿಯ ಹಿನ್ನೆಲೆ ಹೊಂದಿದ್ದು, ಅಲ್ಪ-ಬಹುಸಂಖ್ಯಾತರ ನಡುವೆ ಅಧಿಕಾರ ಹಂಚಿಕೆಯೇ ಅವರ ಮುಖ್ಯ ಅಲೋಚನೆಯಾಗಿತ್ತು. ಬಹು ಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ತಮ್ಮದೇ ಅದ ಪ್ರತ್ಯೇಕ ರಾಜಕೀಯ ಪಕ್ಷಗಳ ಮೂಲಕ ಪ್ರತಿನಿಧಿಸುವ ರಾಜಕಾರಣವೇ ನಿಜವಾದ ಪ್ರಜಾತಂತ್ರ ಎಂದು ಈ ಇಬ್ಬರು ನಾಯಕರ ಅಭಿಪ್ರಾಯವಾಗಿತ್ತು. ಈ ನಿಟ್ಟಿನಲ್ಲಿ ನೋಡಿದಾಗ ಭಾರತೀಯ ಉಪ ಖಂಡದಲ್ಲಿ ಕೋಮುವಾದದ ಪರಿಕಲ್ಪನೆಗೆ ಜಿನ್ನಾ ಮತ್ತು ಸಾವರ್‌ಕರ್‌ರವರು ಮುಖ್ಯ ಸೈದ್ಧಾಂತಿಕ ತಳಹದಿ ಯೆಂದು ಹೇಳಬಹುದು. ಈ ಅಡಿಪಾಯದ ಮೇಲೆ ಕೋಟೆ ಕಟ್ಟಿದವರು ಅಡ್ವಾಣಿ ಮತ್ತು ಭಾರತೀಯ ಜನತಾ ಪಕ್ಷ ಎಂದರೆ ಅತಿಶಯೋಕ್ತಿಯಾಗಲಾರದು.

ಸ್ವಾತಂತ್ರ್ಯ ಪೂರ್ವದ ಅವಧಿಯಲ್ಲಿ ಜಿನ್ನಾರವರು ರಾಜಕೀಯವಾಗಿ ಅಧರ್ಮಿಯಗಿದ್ದರೆಂದೂ ನಾಸ್ತಿಕರಾಗಿದ್ದ

ರೆಂದೂ ಹೇಳಲಾಗುತ್ತದೆ. ಜಿನ್ನಾರವರು ಖಿಲಾಫತ್ ಚಳುವಳಿಯನ್ನು ವಿರೋಧಿಸಿದ್ದರೆಂಬ ಅಭಿಪ್ರಾಯ ಈ ರೀತಿಯ ನಿಲುವುಗಳಿಗೆ ಪುಷ್ಟಿ ನೀಡುತ್ತದೆ. ಆದರೆ ವಾಸ್ತವ ಅಂಶವೆಂದರೆ ಜಿನ್ನಾರವರು ಖಿಲಾಫತ್ ವಿವಾದವನ್ನು ವಿರೋಧಿಸಿರಲಿಲ್ಲ. ಬದಲಾಗಿ ಮುಸ್ಲಿಂ ಲೀಗ್‌ನ ಪರವಾಗಿ ಬ್ರಿಟೀಷ್ ಅಧಿಕಾರಿಗೆ ಸಲ್ಲಿಸಿದ್ದ ಮನವಿ ಪತ್ರದಲ್ಲಿ ಜಿನ್ನಾರವರು "ಒಂದು ವೇಳೆ ಬ್ರಿಟೀಷ್ ಆಡಳಿತವು ಟರ್ಕಿಯ ಸುಲ್ತಾನ ಮತ್ತು ಮುಸ್ಲಿಂ ಸಮುದಾಯದ ಖಲೀಫಾನನ್ನು ಸಾಧಾರಣ ರಾಜನ ಮಟ್ಟಕ್ಕೆ ಇಳಿಸಿದಲ್ಲಿ ಭಾರತದಲ್ಲಿ ಭಾರೀ ಪರಿಣಾಮಗಳುಂಟಾಗುತ್ತವೆ" ಎಂದು ಎಚ್ಚರಿಸಿದ್ದರು. (ದಿ ಹಿಂದೂ 11-06-05).

1920ರ ಸೆಪ್ಟೆಂಬರ್‌ನಲ್ಲಿ ಮುಸ್ಲಿಂ ಲೀಗ್ ಸಮಾವೇಶದಲ್ಲಿ ಜಿನ್ನಾರವರು "ಖಿಲಫತ್ ವಿವಾದವನ್ನು ಮುಸಲ್ಮಾನರ ದೃಷ್ಟಿಕೋನದಿಂದ ನಾವು ಗ್ರಹಿಸುವುದರಿಂದ ಅದು ನಮಗೆ ಸಾವು ಬದುಕಿನ ಪ್ರಶ್ನೆಯಾಗಿದೆ" ಎಂದು ಹೇಳಿದ್ದನ್ನೂ ಇಲ್ಲಿ ಸ್ಮರಿಸಬಹುದು. ಅದಾಗ್ಯೂ ಈ ಒಂದಂಶದಿಂದ ಜಿನ್ನಾರವರ ಸೆಕ್ಯುಲರ್ ನಿಲುವುಗಳನ್ನು ಪ್ರಶ್ನಿಸಲಾಗುವುದಿಲ್ಲ. ಆದರೆ ಪಾಕಿಸ್ತಾನದ ರಚನೆಯ ಸಮಯದಲ್ಲಿ ಜಿನ್ನಾರವರು ನೀಡಿದ ಮೂರು ಹೇಳಿಕೆಗಳು ಈ ನಿಟ್ಟಿನಲ್ಲಿ ಮುಖ್ಯವಾಗಿವೆ. ಮೊದಲನೆಯದಾಗಿ, 1947ರ ಆಗಸ್ಟ್‌ನಲ್ಲಿ ಪಾಕಿಸ್ತಾನದ ಉದಯದ ಮೂರು ದಿನಗಳ ಮುನ್ನ ಜಿನ್ನಾರವರು ಸರ್ವರಿಗೂ ಸಮಾನ ಹಕ್ಕುಗಳನ್ನು ಪ್ರತಿಪಾದಿಸಿದ್ದರು. ನಂತರ 47ರ ಡಿಸೆಂಬರ್‌ನಲ್ಲಿ ಪಾಕಿಸ್ತಾನವನ್ನು ಇಸ್ಲಾಂ ನೀತಿಗಳನ್ನಾಧರಿಸಿದ ಮುಸ್ಲಿಂ ರಾಷ್ಟ್ರ ಎಂದು ಬಣ್ಣಿಸಿದ್ದರು.

ನಂತರ 1948ರ ಮಾರ್ಚ ಒಂದರಂದು "ಪಾಕಿಸ್ತಾನವು ಮುಸ್ಲಿಂ ರಾಷ್ಟ್ರದ ಐಕ್ಯತೆಯ ಪ್ರತೀಕವಾದ್ದರಿಂದ, ಅದು ಮುಸ್ಲಿಂ ರಾಷ್ಟ್ರವಾಗಿಯೇ ಉಳಿಯುತ್ತದೆ" ಎಂದು ಹೇಳಿದ್ದುಂಟು. ಸೂಕ್ಷ್ಮವಾಗಿ ಗಮನಿಸಿದರೆ ಜಿನ್ನಾರವರ ಈ ನಿಲುವು ಸಾವರ್ ಕರ್ - ಅಡ್ವಾಣಿಯವರ ಹಿಂದುತ್ವ ನೀತಿಗೆ ಹತ್ತಿರವಾಗಿ ಕಂಡು ಬರುತ್ತದೆ. ರಾಷ್ಟ್ರ-ಪ್ರಭುತ್ವ ರಾಜಕೀಯ ವ್ಯವಸ್ಥೆಯು ಧಾರ್ಮಿಕ ಅನನ್ಯತೆಗಳನ್ನು ಮಾನ್ಯ ಮಾಡದಿದ್ದರೂ, ರಾಷ್ಟ್ರವನ್ನು ಹಿಂದೂ ರಾಷ್ಟ್ರವೆಂದು ಪರಿಗಣಿಸಬೇಕು ಎಂಬ ಅಡ್ವಾಣಿ-ಸಾವರ್‌ಕರ್‌ರವರ ನಿಲುವು ಜಿನ್ನಾರವರ ವಾದವನ್ನು ಸಮರ್ಥಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ಅಡ್ವಾಣಿಯವರು ಉಪಪ್ರಧಾನಿಯಾಗಿದ್ದಾಗ ರಾಷ್ಟ್ರಧ್ವಜದಲ್ಲಿ ಬೌದ್ಧ ಧರ್ಮವನ್ನು ಪ್ರತಿನಿಧಿಸುವ ಅಶೋಕ ಚಕ್ರ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು.

ಭಾರತದ ವಿಭಜನೆಯ ವಿವಾದವನ್ನು ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಕಂಡು ಬರುವ ಅಂಶವೆಂದರೆ, ಮುಸ್ಲಿಂ ಲೀಗ್ ವಿಭಜನೆಯನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದು 1940ರ ಮಾರ್ಚ್ ತಿಂಗಳಲ್ಲಿ ಜರುಗಿದ ಲಾಹೋರ್ ಅಧಿವೇಶನದಲ್ಲಿ. ಆದರೆ ಈ ವೇಳೆಗಾಗಲೆ ಸಾವರ್‌ಕರ್‌ರವರು ಹಿಂದೂ ಮಹಾಸಭಾದ ತಮ್ಮ ಭಾಷಣಗಳಲ್ಲಿ ಹಿಂದುಗಳನ್ನು ಒಂದು ರಾಷ್ಟ್ರವೆಂದು ಪ್ರತಿಪಾದಿಸಲಾರಂಭಿಸಿದ್ದರು. ಈ ವೇಳೆಗಾಗಲೇ ಇಬ್ಬರೂ ನಾಯಕರು ಸಮುದಾಯ ಆಧಾರಿತ ಧರ್ಮಾಧಾರಿತ ಚಿಂತನೆ ನಡೆಸಲಾರಂಬಿಸಿದ್ದುದೂ ಅನೇಕ ಸಂದರ್ಭಗಳಲ್ಲಿ ವ್ಯಕ್ತವಾಗುತ್ತದೆ. 1932ರಲ್ಲಿ ಜಿನ್ನಾರವರು ಅಬ್ದುಲ್ ಮಾಟಿನ್‌ರವರಿಗೆ ಬರೆದ ಪತ್ರದಲ್ಲಿ "ಬ್ರಿಟೀಷರಿಗೆ ನಮ್ಮ ಬೆಂಬಲ ಮತ್ತು ಸಹಕಾರ ಬೇಕಾಗಿದ್ದಲ್ಲಿ ಅವರು ನಮ್ಮ ರಕ್ಷಣೆ ಮಾಡಬೇಕು ಮತ್ತು ಕೇಂದ್ರದಲ್ಲಿ ಪ್ರಾತಿನಿಧ್ಯ ನೀಡಬೇಕು.ಅದೇ ರೀತಿ ಹಿಂದೂಗಳಿಗೆ ನಮ್ಮ ಬೆಂಬಲ-ಸಹಕಾರ ಬೇಕಾದಲ್ಲಿ ನಮಗೆ ಸ್ವಯಂ ಆಡಳಿತ ಹಾಗೂ ರಕ್ಷಣೆ ನೀಡಿದರೆ ಮಾತ್ರ ಸಾಧ್ಯ. ಕಾಮನ್‌ವೆಲ್ತ್ ಒಕ್ಕೂಟದಲ್ಲಿ ನಮ್ಮಿಬ್ಬರಲ್ಲಿ ಈ ಷರತ್ತಿನ ಮೇಲೆ ಮಾತ್ರ ಸಹಕಾರ ಸಾಧ್ಯ" ಎಂದು ಹೇಳಿದ್ದರು. ಇದೇ ಜಿನ್ನಾ ರವರು 1947ರ ಆಗಸ್ಟ್ 11ರಂದು ಪಾಕಿಸ್ತಾನದ ಸಂಸತ್ತಿನಲ್ಲಿ "ನೀವು, ಅಂದರೆ ಪಾಕಿಸ್ತಾನದ ಜನತೆ, ನಿಮ್ಮ ನಿಮ್ಮ ದೇವಾಲಯಗಳಿಗೆ ಹೋಗಲು, ಮಸೀದಿ ಚರ್ಚುಗಳಿಗೆ ಹೋಗಲು ಪಾಕಿಸ್ತಾನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಹೊಂದಿದ್ದೀರಿ. ನೀವು ಯಾವುದೇ ಜಾತಿ, ಕುಲ ಮತ್ತು ಮತ ಧರ್ಮಗಳಿಗೆ ಸೇರಿದವರಾಗಿದ್ದರೂ ಪ್ರಭುತ್ವ ಅವರ ಬಗ್ಗೆ ಚಿಂತಿಸುವುದಿಲ್ಲ. ಕಾಲನುಕ್ರಮದಲ್ಲಿ ಹಿಂದೂಗಳು ಹಿಂದೂಗಳಾಗಿ ಉಳಿಯದೆ ಮುಸಲ್ಮಾನರು ಮುಸ್ಲಿಮರಾಗಿ ಉಳಿಯದಂತಹ ಪರಿಸ್ಥಿತಿ ಯನ್ನು ನೀವು ನೋಡಲಿದ್ದೀರಿ. ಅಂದರೆ ಧಾರ್ಮಿಕ ದೃಷ್ಟಿ ಕೋನದಿಂದ ನೀವು ನಿಮ್ಮ ಧರ್ಮಗಳಿಗೆ ಸೇರಿದವರಾಗಿ ದ್ದರೂ, ರಾಜಕೀಯ ದೃಷ್ಟಿಕೋನದಲ್ಲಿ ನೀವು ಕೇವಲ ಪಾಕಿಸ್ತಾ ನದ ನಾಗರಿಕರಾಗಿ ಮಾತ್ರ ಇರುತ್ತೀರಿ" ಎಂದೂ ಹೇಳಿದ್ದರು.

ತನ್ನ ರಾಜಕೀಯ ಜೀವನದ ಪ್ರಾರಂಭದ ಹಂತಗಳಲ್ಲಿ ಜಿನ್ನಾರವರು ಸಂಪ್ರದಾಯವಾದಿ ಮುಸ್ಲಿಮರ

ಜಿನ್ನಾ-ಸಾವರ್‌ಕರ್‌ರವರ ಸೆಕ್ಯುಲರ್ ಕಲ್ಪನೆ "ನಾವು" "ನಮ್ಮ ರಾಷ್ಟ್ರೀಯತೆ"ಗಳ ಪ್ರತೀಕಾರವಾಗಿರುತ್ತದೆ. 1940ರಲ್ಲಿ ಜಿನ್ನಾರವರು ಪಾಕಿಸ್ತಾನದ ಬಗ್ಗೆ ಸೊಲ್ಲೆತ್ತುವ ಮೂರು ವರ್ಷಗಳ ಮುನ್ನವೇ ಸಾವರ್‌ಕರ್‌ರವರು 1937ರಲ್ಲಿ ಹಿಂದೂ-ಮುಸ್ಲಿಮರು ಭಾರತದಲ್ಲಿ ನೆಲೆಸಿರುವ ಎರಡು ಪರಸ್ಪರ ವಿರುದ್ಧವಾದ ರಾಷ್ಟ್ರಗಳು" ಎಂದು ಹೇಳಿದ್ದುರು.

ವಿಶ್ವಾಸಕ್ಕೆ ಪಾತ್ರರಾಗಿರಲಿಲ್ಲ. ಹಾಗಾಗಿ ಮುಸ್ಲಿಂ ಜನತೆಯೂ ಸಹ ಅವರನ್ನು ನಾಯಕರನ್ನಾಗಿ ಒಪ್ಪಿರಲಿಲ್ಲ. ಆದರೆ 1940 ರಿಂದ 1947ರ ಅವಧಿಯಲ್ಲಿ ಉದ್ಭವಿಸಿದ ವಿಭಜನೆಯ ವಿವಾದ ಅವರನ್ನು ಪ್ರತ್ಯೇಕ ಪಾಕಿಸ್ತಾನ ರಾಷ್ಟ್ರದ ಹರಿಕಾರರನ್ನಾಗಿ ಮಾಡಿದ್ದೇ ಅಲ್ಲದೆ ಕಟ್ಟಾ ಕೋಮುವಾದಿ ಯಾಗಿಯೂ ಮಾರ್ಪಡಿಸಿತೆಂದು ಹೇಳಬಹುದು.

ಈ ಅವಧಿಯಲ್ಲಿ ಹಿಂದುತ್ವದ ಅಥವಾ ಹಿಂದೂ ರಾಷ್ಟ್ರ ಪ್ರತಿಪಾದಕರ ನಿಲುವುಗಳೂ ಸಹ ಜಿನ್ನಾರವರ ನಿಲುವುಗಳನ್ನೇ ಹೋಲುತ್ತಿದ್ದುದನ್ನೂ ಗಮನಿಸಬಹುದು. ಮೇಲೆ ಉಲ್ಲೇಖಿ ಸಲಾಗಿರುವ ಜಿನ್ನಾರವರ ಆಗಸ್ಟ್ 11ರ ಭಾಷಣದ ತುಣುಕು ಗಳನ್ನು ವಿಶ್ಲೇಷಿಸುವಾಗ ವೀರ ಸಾವರ್‌ಕರ್‌ರವರ ಈ ಹೇಳಿಕೆಯನ್ನು ಗಮನದಲ್ಲಿಟ್ಟುಕೊಳ್ಳ ಬೇಕಾಗುತ್ತದೆ. ತಮ್ಮ ಹಿಂದುತ್ವ ಕೃತಿಯಲ್ಲಿ ಒಂದೆಡೆ ಸಾವರ್‌ಕರ್‌ರವರು "ಮುಂದೊಂದು ದಿನ ಭವಿಷ್ಯದಲ್ಲಿ ಹಿಂದೂ ಎನ್ನುವ ಪದ ಹಿಂದೂಸ್ತಾನದ ಪ್ರಜೆಗೆ ಮಾತ್ರ ಅನ್ವಯಿಸುವುದೇ ಹೊರತು ಅದಕ್ಕೆ ಬೇರಾವ ಅರ್ಥವೂ ಇರಲಾರದು. ಆದರೆ ಈ ಪ್ರಕ್ರಿಯೆ ಚಾಲನೆ ಯಾಗುವ ಮುನ್ನ ಉಗ್ರವಾದೀ ಪ್ರವೃತ್ತಿಯ ಎಲ್ಲಾ ಸಾಂಸ್ಕೃತಿಕ ಧಾರ್ಮಿಕ ಶಕ್ತಿಗಳೂ ನಿರ್ನಾಮವಾಗಿರಬೇಕಾಗುತ್ತದೆ ಮತ್ತು ಧರ್ಮಗಳು ತಮ್ಮ ಅನನ್ಯತೆಗಳನ್ನು ಕಳೆದುಕೊಳ್ಳುತ್ತವೆ. ಈ ಸಂದರ್ಭದಲ್ಲಿ ಧರ್ಮ ಎನ್ನುವುದು ಸಮಾನ ನೀತಿಗಳ ಪ್ರತೀಕಾರವಾಗಿ ಮಾನವೀಯ ಪ್ರಭುತ್ವದ ಸಮಾನ ತಳಹದಿಯಾಗಿ ಪರಿಣಮಿಸುತ್ತದೆ" ಎಂದು ಹೇಳುತ್ತಾರೆ.

ಈ ಹೇಳಿಕೆಯಲ್ಲಿ ಕಂಡುಬರುವ ಕೆಲವು ಅಂಶಗಳು ಉತ್ತಮವೆನಿಸಿದರೂ ಇದರ ಹಿನ್ನೆಲೆಯಲ್ಲಿ ಸಾವರ್‌ಕರ್‌ರವರು ಹಿಂದೂ ರಾಷ್ಟ್ರ ಸ್ಥಾಪನೆಗಾಗಿ ಪ್ರತಿಪಾದಿಸಿದ್ದುದು ಅವರ ರಾಜಕೀಯ ತೀಕ್ಷ್ಣತೆಯ ಕುರುಹಷ್ಟೆ. ಜಿನ್ನಾರವರಂತೆಯೇ ಸಾವರ್‌ಕರ್ ಸಹ ಹಿಂದುತ್ವ-ಹಿಂದು ಜೀವನ ಶೈಲಿ, ಹಿಂದು ಧರ್ಮ ಮತ್ತು ಹಿಂದೂ ಮತವನ್ನು ವಿಭಿನ್ನವಾಗಿಯೇ ಕಾಣುತ್ತಾರೆ.

ಹಿಂದುಯೇತರ ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ನಡೆದ ಚರ್ಚೆಯಲ್ಲಿ 1939ರ ಹಿಂದೂ ಮಹಾಸಭಾದ ಅಧಿವೇಶನದಲ್ಲಿ ಸಾವರ್‌ಕರ್‌ರವರು "ಭಾರತದ ಅಡಿಪಾಯ ಮತ್ತು ಭವಿಷ್ಯವು ಹಿಂದೂ ಆಗಿರಬೇಕು. ಇದನ್ನು ನಾವು ಸಾಧಿಸಿದರೆ ನಂತರದಲ್ಲಿ ಮುಸ್ಲಿಂ, ಕ್ರೈಸ್ತ, ಪಾರ್ಸಿ ಮತ್ತು ಯಹೂದ್ಯರು ಮೊದಲು ಭಾರತೀಯರೆಂಬ ಭಾವನೆ ಹೊಂದುವುದು ಅವಶ್ಯವಾಗುತ್ತದೆ. ನಂತರವೆ ಅವರ ಧಾರ್ಮಿಕ ಅನನ್ಯತೆ ಪ್ರಧಾನವಾಗುತ್ತದೆ ಎಂದು ಹೇಳಿದ್ದನ್ನೂ ಇಲ್ಲಿ ಸ್ಮರಿಸಬಹುದು.

ಈ ಚಾರಿತ್ರಿಕ ಹಿನ್ನೆಲೆಯಲ್ಲಿ ಇಡೀ ವಿಚಾರವನ್ನು ವಿಶ್ಲೇಷಿಸುವಾಗ ಅಡ್ವಾಣಿಯವರ ಹೇಳಿಕೆಗಳ ಹಿಂದಿನ ಮರ್ಮವನ್ನು ಗ್ರಹಿಸಬಹುದು. ಜಿನ್ನಾ-ಸಾವರ್‌ಕರ್ ಮತ್ತು ಅಡ್ವಾಣಿ-ಭಾರತೀಯ ಜನತಾ ಪಕ್ಷದ ನಡುವಿನ ಸೂಕ್ಷ್ಮವಾದ ಸಂಬಂಧಗಳನ್ನು ಗ್ರಹಿಸದಿದ್ದರೆ ಅಡ್ವಾಣಿಯವರನ್ನು ಪ್ರಜಾತಂತ್ರವಾದಿಯನ್ನಾಗಿಸುವ ಸಾಧ್ಯತೆಗಳಿರುತ್ತವೆ. ಅಡ್ವಾಣಿಯವರು ಜಿನ್ನಾರವರನ್ನು ಸೆಕ್ಯುಲರ್ ಎಂದು ಬಣ್ಣಿಸಿದರೆ ಅದು ಜಿನ್ನಾರವರ ಸೆಕ್ಯುಲರ್ ಕಲ್ಪನೆಯ ಸಮರ್ಥನೆ ಎಂದೇ ಅರ್ಥೈಸಬೇಕಾಗುತ್ತದೆ. ಅಂದರೆ ಅದೇ ನಿಟ್ಟಿನಲ್ಲಿ ಸಾವರ್‌ಕರ್‌ರವರ ಸೆಕ್ಯುಲರ್ ಕಲ್ಪನೆಯನ್ನು ಸಮರ್ಥಿಸಿದಂತಾಗುತ್ತದೆ. ಭಾರತೀಯ ಸೆಕ್ಯುಲರ್ ಕಲ್ಪನೆ ತಾಳ್ಮೆ-ಶಾಂತಿ-ಅಹಿಂಸೆ ಮತ್ತು ಉದಾರವಾದದ ಪ್ರತೀಕಾರವಾಗಿರುತ್ತದೆ.

ಆದರೆ ಜಿನ್ನಾ-ಸಾವರ್‌ಕರ್‌ರವರ ಸೆಕ್ಯುಲರ್ ಕಲ್ಪನೆ "ನಾವು" "ನಮ್ಮ ರಾಷ್ಟ್ರೀಯತೆ"ಗಳ ಪ್ರತೀಕಾರವಾಗಿರುತ್ತದೆ. 1940ರಲ್ಲಿ ಜಿನ್ನಾರ ವರು ಪಾಕಿಸ್ತಾನದ ಬಗ್ಗೆ ಸೊಲ್ಲೆತ್ತುವ ಮೂರು ವರ್ಷಗಳ ಮುನ್ನವೇ ಸಾವರ್‌ಕರ್‌ರವರು 1937ರಲ್ಲಿ ಹಿಂದೂ-ಮುಸ್ಲಿಮರು ಭಾರತದಲ್ಲಿ ನೆಲೆಸಿರುವ ಎರಡು ಪರಸ್ಪರ ವಿರುದ್ಧವಾದ ರಾಷ್ಟ್ರಗಳು" ಎಂದು ಹೇಳಿದ್ದುದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಇಬ್ಬರೂ ನಾಯಕರು ವಿಭಜನೆಯ ಹಂತದಲ್ಲಿ ಹಿಂದೂ ಮುಸ್ಲಿಂ ಜನತೆಯ ವಿನಿಮಯದ ಬಗ್ಗೆ ಉಲ್ಲೇಖಿಸಿರುವುದೂ ಇಲ್ಲಿ ಗಮನಾರ್ಹ ಅಂಶವಾಗುತ್ತದೆ.

ಈ ನಿಟ್ಟಿನಲ್ಲಿ ಅಡ್ವಾಣಿಯವರ ಅಭಿಪ್ರಾಯಗಳು ಜಿನ್ನಾರವರನ್ನು ಹೊಗಳುವುದಕ್ಕಿಂತಲೂ ಹೆಚ್ಚಾಗಿ, ಸಾವರ್‌ಕರ್‌ರವರನ್ನು ಸಮರ್ಥಿಸಿಕೊಳ್ಳುವುದೇ ಆಗಿದೆ. ಅರ್ಥಾತ್ ಇಂದು ಸಂಘ ಪರಿವಾರ, ಭಾರತೀಯ ಜನತಾ ಪಕ್ಷ ಪ್ರತಿಪಾದಿಸುವ ಸಾಂಸ್ಕೃತಿಕ ರಾಷ್ಟ್ರೀಯತೆಯೇ ನಿಜವಾದ ಸೆಕ್ಯುಲರ್ ನೀತಿ ಎಂದು ಅರ್ಥೈಸಬೇಕಾಗುತ್ತದೆ. ಇಲ್ಲಿಯೂ ಸಹ ವಿಭಜನೆಯ ವಿವಾದ ಸೃಷ್ಟಿಯಾದ ನಂತರದಲ್ಲಿ ಜಿನ್ನಾರವರ ನಿಲುವುಗಳನ್ನು ಪರಿಶೀಲಿಸಬೇಕಾಗುತ್ತದೆ. ಎರಡು ರಾಷ್ಟ್ರಗಳ ನೀತಿಯನ್ನು ತೀವ್ರವಾಗಿ ವಿರೋಧಿಸಿದ ಸಿಂಧ್ ನಾಯಕ

ಅಲ್ಲಾಬಕ್ಷ್, ನಂತರ ಅಹರಾರಿ ನಾಯಕ ಶೇರ್ ಗುಲಿಖಾನ್, ರವರ ಕೊಲೆಯಾದಾಗ ಜಿನ್ನಾ ಮೌನವಹಿಸಿದ್ದುಂಟು.

1944ರಲ್ಲಿ ಮಜರಿನ ಇ-ಅಹರಾರ್ ಸಹ ಜಿನ್ನಾರವರ ವರ್ತನೆಯನ್ನು ಖಂಡಿಸಿತ್ತು. ಇದಕ್ಕೂ ಮುನ್ನ 1937ರಲ್ಲಿ ಕಾಂಗ್ರೆಸ್ ನಾಯಕ ನಾಸಿರುದ್ದೀನ್ ಕೊಲೆಯಾದಗಲೂ ಜಿನ್ನಾ ಇದೇ ರೀತಿ ಮೌನ ವಹಿಸಿದ್ದರು ಇದೇ ಹಾದಿಯಲ್ಲಿ ಮುನ್ನಡೆದ ಜಿನ್ನಾ ನಾಯಕತ್ವದ ಮುಸ್ಲಿಂ ಲೀಗ್, 1938ರಲ್ಲಿ ಚಿತ್ತಗಾಂಗ್ ಪ್ರಾಂತ್ಯದಲ್ಲಿ ಸುಭಾಷ್ ಚಂದ್ರ ಭೋಸ್ ಮತ್ತು ಅಶ್ರಮುದ್ದೀನ್‌ರವರ ಮೇಲೆ ತನ್ನ ಕಾರ್ಯಕರ್ತರ ಮೂಲಕ ದಾಳಿ ನಡೆಸಿತ್ತು. 1946ರಲ್ಲಿ ಶಿಮ್ಲಾದಲ್ಲಿ ಶರಾಫತ್ ಅಹಮದ್ ಖಾನ್ ಕೊಲೆಯಲ್ಲೂ ಮುಸ್ಲಿಂ ಲೀಗ್‌ನ ಕೈವಾಡವಿತ್ತೆಂದು ಹೇಳಲಾಗಿದೆ. ಅದೇ ವೇಳೆಯಲ್ಲಿ ಲೀಗ್‌ನ ಸದಸ್ಯರು ಕೃಷಿಕ್ ಪ್ರಜಾ ಪಕ್ಷದ ನಾಯಕ ನಾಷಿರ್ ಆಲಿಯವರ ಮೇಲೂ ಹಲ್ಲೆ ನಡೆಸಿದ್ದುಂಟು. ಜಲಿಯಾನ್ ವಾಲಬಾಗ್ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದ ಸೈಫುದ್ದೀನ್‌ರವರನ್ನು ಪಾಕಿಸ್ತಾನದ ಸಮರ್ಥಕರು 1947ರ ಮಾರ್ಚಿಯಲ್ಲಿ ಬೀದಿಗೆಳಿದುತಂದು ಥಳಿಸಿದ್ದರು. ಈ ಎಲ್ಲಾ ಘಟನೆಗಳಿಗೂ ತಮ್ಮ ವಸುದೇವ ಮೌನದಿಂದಲೇ ಸಮ್ಮತಿ ಸೂಚಿಸಿದ್ದ ಜಿನ್ನಾರವರು ಅಡ್ವಾಣಿಯವರ ದೃಷ್ಟಿಯಲ್ಲಿ ಹಠಾತ್ತನೆ ಸೆಕ್ಯುಲರ್ ಹೇಗಾದರು,?

ಅಂದರೆ ಅಡ್ವಾಣಿಯವರು ತಮ್ಮ ಹಿಂದುತ್ವ ರಾಜಕಾರಣದ ದೃಷ್ಟಿಕೋನದಿಂದ ಹೊರಬರದೆ ತಮ್ಮ ಸಾಂಸ್ಕೃತಿಕ ರಾಷ್ಟ್ರೀಯತೆಯೇ ನಿಜವಾದ ಸೆಕ್ಯುಲರ್ ನೀತಿ ಎಂದು ಪ್ರತಿಪಾದಿಸಲು ಯತ್ನಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಸಾವರ್‌ಕರ್ - ಗೋಳ್ವಾಲ್‌ಕರ್ ರವರ ಸಿದ್ಧಾಂತಗಳನ್ನು ಸಮರ್ಥಿಸುವತ್ತ ಅಡ್ವಾಣಿಯವರು ಸೆಕ್ಯುಲರ್ ಸಿದ್ಧಾಂತವನ್ನು ಬಳಸಿಕೊಂಡಿದ್ದಾರೆಂದು ಹೇಳಬಹುದು. ಜರ್ಮನಿಯಲ್ಲಿ ನಾಜಿ ಸಾಮ್ರಾಜ್ಯದ ಪ್ರಾರಂಭಿಕ ಹಂತದಲ್ಲಿ ಹಿಟ್ಲರ್ ಸಹ ಸಮಾಜವಾದದ ಬಗ್ಗೆ ತೀವ್ರ ಆಸಕ್ತಿ ತೋರುತ್ತಿದ್ದುದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಭಾರತದಲ್ಲಿಯೂ ಸಹ ವಾಜಪೇಯಿಯವರು ಗಾಂಧಿ ಸಮಾಜವಾದದ ಬಗ್ಗೆ ವ್ಯಾಖ್ಯಾನಿಸಿರುವುದು ಇಲ್ಲಿ ಗಮನಾರ್ಹವಾಗುತ್ತದೆ.

2004ರ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದ ಸೋಲು ಹಿಂದುತ್ವ ವಾದಿಗಳನ್ನು ಎಷ್ಟು ಮಟ್ಟಿಗೆ ಕಂಗೆಡಿಸಿದೆ ಎಂದು ಈ ಪ್ರಕರಣಗಳು ನಿರೂಪಿಸುತ್ತವೆ. ರಾಮಮಂದಿರ, ಗೋಹತ್ಯೆ, ಗೋಧ್ರಾ, ಕಾರ್ಗಿಲ್, ಪ್ರಕಾಶಿಸುವ ಭಾರತ, ಲೋಹ ಪುರುಷ-ವಿಕಾಸಪುರುಷ ಹೀಗೆ ಹಿಂದುತ್ವವಾದಿಗಳ ಎಲ್ಲಾ ಯೋಜನೆಗಳೂ 2004ರ ಚುನಾವಣೆಯ ಸೋಲಿನಲ್ಲಿ ಪರ್ಯಾವಸಾನಗೊಂಡಿದ್ದು ಹಿಂದುತ್ವ ರಾಜಕಾರಣದ ಹರಿಕಾರರನ್ನು ಕಂಗೆಡಿಸಿದೆ. ವಾಸ್ತವ ಪರಿಸ್ಥಿತಿಗನುಗುಣವಾಗಿ ತಮ್ಮ ರಾಜಕೀಯ ಸಿದ್ಧಾಂತಗಳನ್ನು, ನಿಲುವುಗಳನ್ನು ಬದಲಿಸದಿದ್ದರೆ, ತಾವು ಇತಿಹಾಸದ ಕಸದ ಬುಟ್ಟಿ ಸೇರುತ್ತೇವೆಂಬ ಅತಂಕ ಬಹುಶಃ ಅಡ್ವಾಣಿಯವರನ್ನು ಆವರಿಸಿರಬೇಕು. ಹಾಗಾಗಿಯೇ ತಮ್ಮ ಮೂಲ ಧ್ಯೇಯೋದ್ದೇಶಗಳಿಗೆ ವಿರುದ್ಧವಾದ ನಿಲುವುಗಳನ್ನು ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತಿದೆ. ನೇರವಾಗಿ ಸ್ವಾತಂತ್ರ್ಯ ಪೂರ್ವದಿಂದಲೂ ಪ್ರಚಲಿತವಿರುವ ಸೆಕ್ಯುಲರ್ ಸಿದ್ಧಾಂತವನ್ನು ಸ್ವೀಕರಿಸುವ ಬದಲು, ಸೆಕ್ಯುಲರ್ ಸಿದ್ಧಾಂತಕ್ಕೆ ಒಂದು ಹೊಸ ವ್ಯಾಖ್ಯಾನ ನೀಡುವಲ್ಲಿ ಅಡ್ವಾಣಿ ಯಶಸ್ವಿಯಾಗಿದ್ದಾರೆ. ತಾವು ಅಲ್ಪಸಂಖ್ಯಾತ-ಮುಸ್ಲಿಂ-ಪಾಕ್ ವಿರೋಧಿ ಅಲ್ಲ ಎಂದು ನಿರೂಪಿಸಿಕೊಳ್ಳಲು ಅಡ್ವಾಣಿಯವರು ಜಿನ್ನಾರವರಿಗೆ ಶರಣಾಗಬೇಕಾಗಿ ಬಂದದ್ದು ವಿಡಂಬನೆ ಎಂದೇ ಹೇಳಬಹುದು.

ಪಾಕ್ ಅಧ್ಯಕ್ಷ ಮುಷ್ರಫ್ ಜೊತೆ ಸಂಘ ಪರಿವಾರದ ನಾಯಕರು

ಸೂಕ್ಷ್ಮವಾಗಿ ನೋಡಿದರೆ ಈ ರೀತಿ ಐತಿಹಾಸಿಕ ವ್ಯಕ್ತಿಗಳನ್ನು ಆಶ್ರಯಿಸಿ ಜನರಿಗೆ ಹತ್ತಿರವಾಗುವ ತಂತ್ರವನ್ನು ಭಾರತೀಯ ಜನತಾ ಪಕ್ಷ ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದೆ. ಗಾಂಧಿ ಅಂಬೇಡ್ಕರ್, ಲೋಹಿಯಾ, ಭಗತ್‌ಸಿಂಗ್, ಪೆರಿಯಾರ್, ಸುಭಾಷ್ ಚಂದ್ರ ಬೋಸ್, ವಿವೇಕಾನಂದ ಹೀಗೆ ಅನೇಕ ಮಹಾಪುರುಷರನ್ನು ತನ್ನ ತೆಕ್ಕೆಯೊಳಗೆ ಸೆಳೆದುಕೊಳ್ಳುವ ಪ್ರಕ್ರಿಯೆ ಭಾರತೀಯ ಜನತಾ ಪಕ್ಷದ ರಾಜಕೀಯ ಬೆಳವಣಿಗೆಯಲ್ಲಿ ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಉತ್ತಮ ನಿದರ್ಶನವೆಂದರೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಬಾಹುಗಳಲ್ಲಿ ಸಿಲುಕಿದ ಜಯಪ್ರಕಾಶ ನಾರಾಯಣ್. ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಹೋರಾಡಿದ ಒಂದೇ ಕಾರಣಕ್ಕಾಗಿ ಪ್ರಜಾ ತಂತ್ರದ ಹರಿಕಾರರಂತೆ ವರ್ತಿಸುವ ಭಾರತೀಯ ಜನತಾ ಪಕ್ಷ-ಸಂಘ ಪರಿವಾರದ ನಾಯಕರು, ಗುಜರಾತ್, ಸೂರತ್, ಮುಂಬೈ, ನರೇಂದ್ರ ಮೋದಿ, ಗ್ರಹಾಂಸ್ಟೈನ್ ಅಯೋಧ್ಯಾ ಮುಂತಾದ ಸಂಗತಿಗಳನ್ನು ಸುಲಭವಾಗಿ ಮರೆಮಾಚುತ್ತಾರೆ.

ತುರ್ತು ಪರಿಸ್ಥಿತಿ ಹೇರಿದ ಇಂದಿರಾಗಾಂಧಿಯವರ 1980ರ ಗೆಲುವಿಗೆ ಆರ್. ಎಸ್. ಎಸ್. ಪ್ರಮುಖ ಕಾರಣ ಎಂಬ ಅಂಶ ಗುಟ್ಟಾಗಿ ಉಳಿದಿಲ್ಲ. ಸಂಘದ ಅಧ್ಯಕ್ಷ ಸುದರ್ಶನ್‌ರವರು ಇಂದಿರಾ ಗಾಂಧಿಯನ್ನು ಹೊಗಳಿರುವುದೇ ಇದಕ್ಕೆ ನಿದರ್ಶನ. 80ರಲ್ಲಿ ಸಂಘ ಪರಿವಾರ ಇಂದಿರಾಗಾಂಧಿರವರನ್ನು ಬೆಂಬಲಿಸಿದ ಮುಖ್ಯ ಕಾರಣವೆಂದರೆ ಸಂಜಯಗಾಂಧಿರವರ ಮುಸ್ಲಿಂ ವಿರೋಧಿ ನಿಲುವು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ತುರ್ತುಪರಿಸ್ಥಿತಿಯ 30ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಜಾತಂತ್ರ ಉಳಿಸಿ ಹೋರಾಟ ನಡೆಸುವ ಅಡ್ವಾಣಿ ಮತ್ತು ಸಂಗಡಿಗರು, ಗುಜರಾತ್ ಗಲಭೆಯ ಸಮಯದಲ್ಲಿ ವೈಶಂಪಾಯನದಲ್ಲಿ ಅಡಗಿ ಕುಳಿತಿದ್ದರೇ? ಪ್ರಜಾತಂತ್ರ ಉಳಿಸುವ ನೆಪದಲ್ಲಿ, ಕಾಂಗ್ರೆಸನ್ನು ನಿರ್ನಾಮ ಮಾಡುವ ನೆಪದಲ್ಲಿ ಭಾರತೀಯ ಜನತಾ ಪಕ್ಷ ಎಂಬ ಪೆಡಂಭೂತವನ್ನು ಸೃಷ್ಟಿಸಿದ ಜೆ.ಪಿ.ರವರು ಇಂದು ಬದುಕಿದ್ದಿದ್ದರೆ ಬಹುಶಃ ಪಶ್ಚಾತ್ತಾಪದ ಬೇಗೆಯಲ್ಲೇ ಸಾಯುತ್ತಿದ್ದರೇನೋ. ಇಂದಿರಾರವರು ತುರ್ತುಪರಿಸ್ಥಿತಿಯ ಅವಧಿಯಲ್ಲಿ ಸರ್ವಾಧಿಕಾರವಿದ್ದಾಗಲೂ ಮಾಡದಷ್ಟು ಜನ ವಿರೋಧಿ ಕೃತ್ಯಗಳನ್ನು, ಚುನಾಯಿತ ಎನ್.ಡಿ.ಎ ಸರ್ಕಾರ ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ ಮಾಡಿದೆ.

ಆದರೂ ಇಂದು ಅಡ್ವಾಣಿಯವರು ಪ್ರಜಾತಂತ್ರ ಸಂರಕ್ಷಕರಂತೆ ವರ್ತಿಸುತ್ತಿದ್ದಾರೆ. ಏಕೆಂದರೆ ವೈಯಕ್ತಿಕವಾಗಿ, ಪಕ್ಷದ ಹಿತದೃಷ್ಟಿಯಿಂದ ಅವರಿಗೆ ಈ ಮುಖವಾಡ ಅವಶ್ಯವಾಗಿದೆ. ಕೇವಲ ಲೋಹಪುರುಷದಿಂದ ಸಾಮಾನ್ಯ ಜನತೆಯ ಉದ್ಧಾರ ಸಾಧ್ಯವಿಲ್ಲವೆಂಬ ಅಂಶ ಅರಿವಾಗಿರಬಹುದು. ಅಥವಾ ತಮ್ಮ, ತಮ್ಮ ಪಕ್ಷ ಹಾಗೂ ಸಂಘಟನೆಯ ಜನ ವಿರೋಧಿ, ಮಾನವತಾ ವಿರೋಧಿ ನೀತಿಗಳು ದ್ವೇಷಾಸೂಯೆ, ಮೌಲ್ಯವು ಹಿಂಸಾನೀತಿಗಳು, ಭಾರತೀಯ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡುಬಿಡುತ್ತವೆ ಎಂಬ ಸತ್ಯಾಂಶ ಅಡ್ವಾಣಿಯವರಿಗೆ ಮನದಟ್ಟಾಗಿರಬೇಕು.

ಹಾಗಾಗಿಯೇ "ಮಂದಿರ್ ವಹಿ ಬನಾಯೆಂಗ್" ಎಂಬ ಘೋಷಣೆ ಯಿಂದ "ಮಂದಿರ್ ನಹೀ ಬನಾಯೆಂಗ್" ಎಂಬ ಘೋಷಣೆಗೆ ಮರಳಿರುವಂತಿದೆ. ಭಾರತೀಯ ಇತಿಹಾಸದ ಕಪ್ಪುಚುಕ್ಕೆ ಯಾಗಿದ್ದ ಬಾಬ್ರಿ ಮಸೀದಿಯ ಧ್ವಂಸ ಇಂದು ಅಡ್ವಾಣಿ ಯವರಿಗೆ ಕರಾಳತೆಯ ಪ್ರತೀಕವಾಗಿದೆ. ದೇಶದ ವಿಭಜನೆಗೆ ನಾಂದಿ ಹಾಡಿದ ಹಿಂದು ಮೂಲಭೂತವಾದಿಗಳಿಗೆ ಪುಷ್ಟಿ ನೀಡಿ ಪ್ರತ್ಯೇಕ ರಾಷ್ಟ್ರ ನಿರ್ಮಿಸಿದ ಜಿನ್ನಾ ಸೆಕ್ಯುಲರ್ ಆಗುತ್ತಾರೆ. ಪಕ್ಷದ ಅಧ್ಯಕ್ಷ ಸ್ಥಾನದಿಂದ ರಾಜೀನಾಮೆ ನೀಡಿ ಪುನಃ ಅದೇ ಪೀಠವನ್ನು ಅಲಂಕರಿಸುವ ಬದಲು ಅಡ್ವಾಣಿಯವರು ನಿಜವಾಗಿಯೂ ಸೆಕ್ಯಲರ್ ಸಿದ್ಧಾಂತವನ್ನು ಒಪ್ಪುವಮಾದರೆ, ಜಿನ್ನಾರವರನ್ನು ಈ ದೃಷ್ಟಿಕೋನದಿಂದ ಸೆಕ್ಯುಲರ್ ಎಂದು ಒಪ್ಪುವುದಾದರೆ ಅವರು ಸಂಘ ಪರಿವಾರದ ಸಖ್ಯ ತೊರೆಯಬೇಕಾಗುತ್ತದೆ.

ಆದರೆ, ವಿಪರ್ಯಾಸವೆಂದರೆ ಸಂಘ ಪರಿವಾರಕ್ಕೆ ಅಡ್ವಾಣಿ-ವಾಜಪೇಯಿಯವರಂತಹ ನಾಯಕರುಗಳ ಅವಶ್ಯಕತೆ ಇದೆ, ಸುನಾಮಿಗೆ ಮುನ್ನ ಬರುವ ತಂಗಾಳಿಯಂತೆ. □

ಜಡತೆ ಮತ್ತು ಚಲನಶೀಲತೆ

ಚಿಂತನೆ

ಮನಸ್ಸು ಮತ್ತು ಭಾವನೆಗಳನ್ನು ತಿರಸ್ಕರಿಸದೆ ಇಂದ್ರಿಯ ಜಗತ್ತನ್ನು ಒಪ್ಪುವುದು ವಿಚಾರವಾದವೆನಿಸಿಕೊಳ್ಳುತ್ತದೆ. ಮೂಢ ನಂಬಿಕೆ, ಕಂದಾಚಾರ ದೇವರ ಆರಾಧನೆಯನ್ನು ತಿರಸ್ಕರಿಸುತ್ತ ವಿಚಾರವಾದಿಯು ನಿಜದ ಹುಡುಕಾಟದಲ್ಲಿ ತೊಡಗಿರುತ್ತಾನೆ. ನಿಜವಾದ ವಿಚಾರವಾದಿಯು ತರ್ಕಬದ್ಧವಾಗಿ ಚಿಂತಿಸುವನಾದರೂ, ತನ್ನ ತರ್ಕಕ್ಕೆ ವಿರೋಧಿಯಾದವರನ್ನೆಂದೂ ದಮನಿಸಲು ಹೋಗುವುದಿಲ್ಲ. ಮತ್ತೊಬ್ಬರ ಬದುಕಿನ ಹಕ್ಕನ್ನು ಕಸಿದುಕೊಳ್ಳಲು ಬಯಸುವುದಿಲ್ಲ. ಇದೇ ವಿಚಾರವಾದದ ತಿರುಳು. ಇದನ್ನು ಪಾಲಿಸುವವನೇ ವಿಚಾರವಾದಿ. ಹಾಗೆ ನೋಡಿದರೆ ತರ್ಕಶಕ್ತಿ ಎಲ್ಲರಲ್ಲಿಯೂ ಇರುತ್ತದೆ. ಈ ತರ್ಕಶಕ್ತಿ ಪ್ರತಿಯೊಬ್ಬರಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಪ್ರಕಟವಾಗುತ್ತಿರುತ್ತದೆ.

ಡಾ॥ ಸಣ್ಣ ರಾಮ

ಮಾನವನ ಉಗಮದ ಕಾಲದಿಂದಲೇ ದೈವದ ಕಲ್ಪನೆ, ಆರಾಧನೆಗಳು ಹುಟ್ಟಿ ಬೆಳೆದು ಸಿದ್ಧಾಂತದ ವ್ಯಾಪ್ತಿಯನ್ನು ಪಡೆದುಕೊಂಡಿವೆ. ಈ ಬಗೆಯ ಧಾರ್ಮಿಕ ನೆಲೆಯನ್ನು ಆಧರಿಸಿ ರೂಪಿತಗೊಂಡ ವಾದವನ್ನು 'ಧಾರ್ಮಿಕವಾದ'ವೆಂದು ಗುರುತಿಸಲಾಗಿದೆ. ಮನುಷ್ಯ ಬುದ್ಧಿಜೀವಿ. ಇತರೆಲ್ಲಾ ಪ್ರಾಣಿಗಳಿಗಿಂತ ಅವನು ಭಿನ್ನನಾಗಿರುವುದು ಅವನ ಚಿಂತನಾಗುಣದಿಂದ. ಸರಿ ತಪ್ಪುಗಳನ್ನು ತರ್ಕಿಸುವ ತರ್ಕಗುಣದಿಂದ. ಒಂದೆಡೆ ದೈವದ ಕಲ್ಪನೆ ಆರಾಧನೆಯು ಬೆಳೆದಂತೆ ಮತ್ತೊಂದೆಡೆ ಅಷ್ಟೇ ಪ್ರಾಚೀನ ಕಾಲದಿಂದ ದೈವದ ಆರಾಧನೆ ಮತ್ತು ಕಲ್ಪನೆಯ ಸತ್ಯಾಸತ್ಯತೆಯನ್ನು ಪ್ರಶ್ನಿಸುವ ವಿಚಾರಧಾರೆಯು ಬೆಳೆದುಬಂದಿದೆ. ಅದು 'ವಿಚಾರವಾದ' ಎನಿಸಿಕೊಂಡಿದೆ. ದೈವದ ಅಸ್ತಿತ್ವವನ್ನು ಒಪ್ಪಿ ಆರಾಧಿಸುವವರು ಆಸ್ತಿಕರಾದರೆ. ದೈವದ ಅಸ್ತಿತ್ವವನ್ನು ವಾಸ್ತವದ ನೆಲೆಗಟ್ಟಿನಲ್ಲಿ ನಿಂತು ಪ್ರಶ್ನಿಸುವವರನ್ನು ನಾಸ್ತಿಕರೆಂದು ಕರೆಯಲಾಗುತ್ತಿದೆ. ನಾಸ್ತಿಕರು ಆಧರಿಸಿರುವ ವಾದವನ್ನು ವಿಚಾರವಾದವೆಂದು ಕರೆಯುತ್ತಾರೆ.

'ವಿಚಾರವಾದ'ವೆಂದರೆ ಅತ್ಯಂತ ಗಹನವಾದುದು, ಅದು ಸಾಮಾನ್ಯರ ಕೈಗೆ ನಿಲುಕದ ತತ್ವವೆಂದೇನೂ ಅಲ್ಲ. ಸರಳವಾಗಿ ಹೇಳುವುದಾದರೆ, ವಿಚಾರವಾದವೆಂದರೆ ಪ್ರಾಕೃತಿಕವಾಗಿ ಆಲೋಚಿಸುವುದು. ಸಮಾಜದ ಪ್ರಗತಿಗೆ ಪೂರಕವಾದ ವಿಚಾರವನ್ನು ಪ್ರತಿಪಾದಿಸುವುದು. ವಾಸ್ತವ ಸತ್ಯವನ್ನು, ಇಂದ್ರಿಯ ಗೋಚರವನ್ನು ನಂಬುವುದು ಅಷ್ಟೇ. ವಿಚಾರವಾದಿ ಕಾಲ್ಪನಿಕ ಜಗತ್ತನ್ನೆಂದೂ ಒಪ್ಪುವುದಿಲ್ಲ. ಮನಸ್ಸು ಮತ್ತು ಭಾವನೆಗಳನ್ನು ತಿರಸ್ಕರಿಸದೆ ಇಂದ್ರಿಯ ಜಗತ್ತನ್ನು ಒಪ್ಪುವುದು ವಿಚಾರವಾದವೆನಿಸಿಕೊಳ್ಳುತ್ತದೆ. ಮೂಢನಂಬಿಕೆ, ಕಂದಾಚಾರ ದೇವರ ಆರಾಧನೆಯನ್ನು ತಿರಸ್ಕರಿಸುತ್ತ ವಿಚಾರವಾದಿಯು ನಿಜದ ಹುಡುಕಾಟದಲ್ಲಿ ತೊಡಗಿರುತ್ತಾನೆ. ನಿಜವಾದ ವಿಚಾರವಾದಿಯು ತರ್ಕಬದ್ಧವಾಗಿ ಚಿಂತಿಸುವನಾದರೂ, ತನ್ನ ತರ್ಕಕ್ಕೆ ವಿರೋಧಿಯಾದವರನ್ನೆಂದೂ ದಮನಿಸಲು ಹೋಗುವುದಿಲ್ಲ. ಮತ್ತೊಬ್ಬರ ಬದುಕಿನ ಹಕ್ಕನ್ನು ಕಸಿದುಕೊಳ್ಳಲು ಬಯಸುವುದಿಲ್ಲ. ಇದೇ ವಿಚಾರವಾದದ ತಿರುಳು. ಇದನ್ನು ಪಾಲಿಸುವವನೇ ವಿಚಾರವಾದಿ. ಹಾಗೆ ನೋಡಿದರೆ ತರ್ಕಶಕ್ತಿ ಎಲ್ಲರಲ್ಲಿಯೂ ಇರುತ್ತದೆ. ಈ ತರ್ಕಶಕ್ತಿ ಪ್ರತಿಯೊಬ್ಬರಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ಪ್ರಕಟವಾಗುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ವಿಚಾರವಾದಿಗಳೇ. ಬಹುಶಃ ವಿಚಾರವಾದ ಆದಿಯಿಂದಲೂ ಅನೇಕ ಸಂಕಷ್ಟಗಳ ನಡುವೆ ಪ್ರತಿವಾದಿಗಳ ಪ್ರಹಾರಕ್ಕೆ ಜಗ್ಗದೆ ಜೀವಂತವಾಗಿರಲು ಇದೇ ಮುಖ್ಯಕಾರಣವಿರಬೇಕು.

ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ವಿಚಾರವಾದಕ್ಕೆ ಸುದೀರ್ಘವಾದ ಇತಿಹಾಸವಿದೆ. ಅನೇಕ ಜನ ವಿಚಾರವಾದಿಗಳು ಆಗಿ ಹೋಗಿದ್ದಾರೆ. ಈ ಪರಂಪರೆಯಲ್ಲಿ ಉದ್ದಾಲಕನು ಮೊಟ್ಟ ಮೊದಲ ವಿಚಾರವಾದಿ ಎಂದು ಗುರುತಿಸಲಾಗಿದೆ. ಈತ ಪ್ರಕೃತಿವಾದದ ಪ್ರತಿಪಾದಕನಾಗಿದ್ದ. ಈತನ ಕಾಲ ಕ್ರಿ.ಪೂ. ೬೪೦ ಅಥವಾ ೬೧೦ ಇದ್ದಿರಬಹುದೆಂದು ಇತಿಹಾಸತಜ್ಞರು ಅಭಿಪ್ರಾಯಪಡುತ್ತಾರೆ. ಭಾರತದಲ್ಲಿ ಹುಟ್ಟಿದ ಮೊಟ್ಟಮೊದಲ ವಿಚಾರವಾದವೆಂದರೆ ಪ್ರಕೃತಿವಾದ. ಪ್ರಕೃತಿವಾದದ ಪ್ರತಿಪಾದಕನಾದ ಉದ್ದಾಲಕನು ಆ ವೇಳೆಗಾಗಲೆ ಪ್ರಶ್ನಾತೀತವೆಂದು ಪ್ರಸಿದ್ಧವಾಗಿದ್ದ ವೇದಗಳ ಪ್ರಾಮಾಣ್ಯವನ್ನು ಪ್ರಶ್ನಿಸಿದ್ದಾನೆ. ವೇದಗಳಲ್ಲಿ ಪ್ರತಿಪಾದಿತವಾಗಿದ್ದ ವಿಶ್ವರೂಪ ಮತ್ತು ಅವತಾರಗಳನ್ನು ಖಂಡಿಸಿದ್ದಾನೆ. 'ಸಾವಿರಾರು ವೇದಗಳನ್ನು ತಿಳಿದೂ ಮನುಷ್ಯ ದುಃಖದಿಂದ ಪಾರಾಗಲು ಸಾಧ್ಯವಿಲ್ಲದಿದ್ದರೆ, ಸೂಕ್ಷ್ಮಮಾರ್ಗವನ್ನು ಅರಿಯಲು ಸಾಧ್ಯವಾಗದಿದ್ದರೆ ನನ್ನ ಅಭಿಪ್ರಾಯದಲ್ಲಿ ವೇದಗಳು ನಿರುಪಯೋಗಿ' (ಉದ್ಧೃತ : ಭಾರತದ ಬೌದ್ಧಿಕ ದಾರಿದ್ರ್ಯ ಮೂಲ: ಆರ್.ವಿ.ನಾರ್ಲಾ: ಅನು: ಗಂಗಾಧರಮೂರ್ತಿ: ಪು-2) ಎಂದಿದ್ದಾರೆ. ವೇದಗಳನ್ನು ಯಾರೂ ಪ್ರಶ್ನಿಸಬಾರದು, ಪ್ರಶ್ನಿಸಿದವರಿಗೆ ಕೇಡು ತಪ್ಪಿದ್ದಲ್ಲ ಎಂಬ ನಂಬಿಕೆ ದಟ್ಟವಾಗಿದ್ದ ಕಾಲದಲ್ಲಿ ಉದ್ದಾಲಕನು ತನ್ನ ನಿಶಿತ ಮತಿಯಿಂದ ತರ್ಕಿಸುವ ದಿಟ್ಟತನವನ್ನು ತೋರಿರುವುದು ಆಶ್ಚರ್ಯಕರ ಸಂಗತಿಯಾಗಿದೆ.

ಭಾರತೀಯ ವಿಚಾರವಾದದ ಪರಂಪರೆಯಲ್ಲಿ ಚಾರ್ವಾಕ ದರ್ಶನಕ್ಕೆ ಪ್ರಥಮ ಆದ್ಯತೆ ಇದೆ. ಹಿಂದೂ ಧರ್ಮವು ಪ್ರಧಾನವಾಗಿ ವೇದವನ್ನು ಪ್ರಶ್ನಾತೀತವೆಂದು ಸಾರುತ್ತದೆ. ಅಲ್ಲದೆ ಆತ್ಮದ ಇರುವಿಕೆ, ಜನ್ಮಾಂತರ, ವರ್ಣ ವ್ಯವಸ್ಥೆ ಇವೇ ಮೊದಲಾದವನ್ನು ಪ್ರತಿಪಾದಿಸುತ್ತಾ ಬಂದಿದೆ. ಹಿಂದೂ ಧರ್ಮದ ಈ ತತ್ವಗಳನ್ನು ಒಪ್ಪದೆ ನಿರಂತರವಾಗಿ ಪ್ರತಿಭಟಿಸುತ್ತಾ ಒಂದು ದರ್ಶನವಾಗಿ ಬೆಳೆದು ಬಂದ ವಿಚಾರಧಾರೆಯನ್ನು 'ಚಾರ್ವಾಕ ದರ್ಶನ'ವೆಂದು ಕರೆಯಲಾಗಿದೆ. ಆದಿಯಿಂದಲೂ ಹಿಂದೂ ಧರ್ಮದ ಕಂದಾಚಾರವನ್ನು ಚಾರ್ವಾಕರು ಖಂಡಿಸುತ್ತಲೇ ಬಂದಿದ್ದಾರೆ. ಹಿಂದೂ ಧರ್ಮಕ್ಕೆ ಪ್ರತಿಯಾಗಿ ಚಾರ್ವಾಕ ಸಿದ್ಧಾಂತವು ಅನೇಕ ಮಹತ್ವಪೂರ್ಣ ವಿಚಾರಗಳನ್ನು ಪ್ರತಿಪದಿಸುತ್ತದೆ. 'ಶರೀರವು ಒಂದು ಬಾರಿ ನಾಶ ಹೊಂದಿದರೆ ಮತ್ತೆ ಬರುವುದಿಲ್ಲ. ಜೀವಿತಾವಧಿಯಲ್ಲಿ ಸುಖವಾಗಿರಬೇಕು. ಸುಖವನ್ನು ತ್ಯಜಿಸಿ ದುಃಖಿಸುತ್ತಾ ಬಾಳುವುದು ಉಚಿತವಾದುದಲ್ಲ. ಯಜ್ಞಯಾಗಾದಿಗಳು ಕೆಲವರು ಹೊಟ್ಟೆಹೊರೆಯಲು ಮಾಡಿಕೊಂಡ ಸಾಧನಗಳಾಗಿವೆ. ಮೋಕ್ಷ, ಪರಲೋಕ, ಆತ್ಮ ಇವೆಲ್ಲವೂ ಕಪೋಲಕಲ್ಪಿತ; ವಾಸ್ತವವಲ್ಲ. ಅದೃಷ್ಟ ಎಂಬುದು ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಲ್ಲದವರು ಕಲ್ಪಿಸಿಕೊಂಡ ಕಲ್ಪನೆಯಾಗಿದೆ. ಜಗತ್ತಿನಲ್ಲಿ ನಡೆಯುವ ಕೆಲವು ವೈಚಿತ್ರ್ಯಗಳು ಕೇವಲ ಆಕಸ್ಮಿಕವಾದವುಗಳೇ ಹೊರತು ವಾಸ್ತವದ ತಳಹದಿಯ ಮೇಲೆ ಆದವಲ್ಲ'. ಹೀಗೆ ಹಿಂದೂ ಧರ್ಮದ ವಾಸ್ತವವಲ್ಲದ ಅನೇಕ ತತ್ವಗಳನ್ನು ಚಾರ್ವಾಕ ದರ್ಶನವು ತರ್ಕಿಸುತ್ತದೆ. ಚಾರ್ವಾಕರು ಬದುಕಿಗೆ ವಾಸ್ತವದ ನೆಲೆಕಟ್ಟಿನ ಮೇಲೆ ರೂಪಿಸಲು ಅನುವಾಗುವ ಅನೇಕ ವಿಚಾರಗಳನ್ನು ಕೊಟ್ಟಿದ್ದಾರೆ. ಚಾರ್ವಾಕ ದರ್ಶನವು ಇಂದಿನ ಆಧುನಿಕ ಯುಗದ ವೈಜ್ಞಾನಿಕ ಮತ್ತು ವೈಚಾರಿಕ ತತ್ವಗಳಿಗೆ ಪೂರಕವಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಬೌದ್ಧಧರ್ಮದ ಉಗಮದೊಂದಿಗೆ ಚಾರ್ವಾಕ ದರ್ಶನವು ಭಾರತದಲ್ಲಿ ಮಸುಕಾಯಿತು. ಬೌದ್ಧಧರ್ಮವು ಚಾರ್ವಾಕ ದರ್ಶನದ ಅನೇಕ ತತ್ವಗಳನ್ನು ಅತ್ಯಂತ ಸರಳವಾಗಿ ಜನರ ಮುಂದೆ ಪ್ರಸ್ತುತಪಡಿಸಿದ್ದೇ ಇದಕ್ಕೆ ಮುಖ್ಯಕಾರಣವಿರಬೇಕು.

ಭಾರತದಾದ್ಯಂತ ವೈಚಾರಿಕತೆಯನ್ನು ಧರ್ಮವನ್ನು ಒಟ್ಟೊಟ್ಟಿಗೆ ಬಿತ್ತರಿಸಿದ್ದು ಬೌದ್ಧಧರ್ಮ. ವರ್ಣ, ಜಾತಿ, ಮೂಢನಂಬಿಕೆ, ಕಂದಾಚಾರಗಳು ತುಂಬಿದ್ದ ಭಾರತಕ್ಕೆ ಹೊಸ ದಿಕ್ಕುದೆಸೆಯನ್ನು ತೋರಿದ್ದು ಬೌದ್ಧಧರ್ಮ. ಗೌತಮಬುದ್ಧ ಧರ್ಮ ಸಂಸ್ಥಾಪಕ ಮಾತ್ರವಲ್ಲ ಅವನೊಬ್ಬ ತತ್ವಜ್ಞಾನಿಯೂ ಆಗಿದ್ದ. ಅವನ ಕಾಲದಲ್ಲಿ ಪ್ರಚಲಿತದಲ್ಲಿದ್ದ ಅರವತ್ತೆರಡು ದಾರ್ಶನಿಕ ಸಂಪ್ರದಾಯಗಳನ್ನು ತಿರಸ್ಕರಿಸುತ್ತಾನೆ. ಕಶ್ಯಪನು ಪ್ರತಿಪಾದಿಸಿದ್ದ 'ಅಕ್ರಿವಾದ', ಮಖಾಲಿ ಘೋಶಾಲನು ಪ್ರತಿಪಾದಿಸಿದ್ದ 'ನಿಯತಿವಾದ', ಅಜಿತಕೇಶಕಂಬಳನ 'ಉಚ್ಛೇದವಾದ', ಪಕುಧ್ಧಕಚಯಾನನ 'ಅನೂನ್ಯವಾದ', ಚೇಲಪುತ್ತನ 'ವಿಕ್ಷೇಪವಾದ'ಗಳು ಆ ಕಾಲದಲ್ಲಿ ತುಂಬಾ ಪ್ರಸಿದ್ಧವಾಗಿದ್ದವು. ಈ ವಾದಗಳನ್ನು ಒಪ್ಪದೆ ತನ್ನ

ಅನುಭವಜನ್ಯ ವಿಚಾರಗಳನ್ನು ಜನರ ಮುಂದೆ ಪ್ರಚುರಪಡಿಸಿದ. ಯಾವುದೇ ಧರ್ಮದ ಯಾವುದೇ ಗ್ರಂಥ ಪ್ರಶ್ನಾತೀತವಾಗಲು ಸಾಧ್ಯವಿಲ್ಲ ಎಂಬುದಾಗಿ ಬುದ್ಧನು ಸಾರಿದ. 'ಕೇವಲ ನೀವು ಕೇಳಿರುವುದನ್ನು ನಂಬಬೇಡಿ, ಒಬ್ಬರಿಂದ ಇನ್ನೊಬ್ಬರಿಗೆ ಹಸ್ತಾಂತರವಾಗಿರುವುದನ್ನೇ ನೋಡಿ ನಂಬಬೇಡಿ, ವಿಚಾರಗಳು ಸೂಕ್ಷ್ಮವಾದವುಗಳೆಂದು ತಿಳಿದು ಅಂತೆಯೇ ನಡೆಯಬೇಡಿ, ತರ್ಕಶಾಸ್ತ್ರದ ಸೂಕ್ಷ್ಮತೆಗಳಂತೆ ನಡೆಯಬೇಡಿ ತೋರಿಕೆಯ ಆಧಾರಿತ ವಿಚಾರಗಳಂತೆ ನಡೆಯಬೇಡಿ, ನಿಜವಾಗಿ ನಮ್ಮ ಅನುಭವಕ್ಕೆ ಬಂದಾಗ ಅದು ಸರಿ ಎನಿಸಿದಾಗ ಅಂತೆಯೇ ನಡೆಯಿರಿ' ಎಂದಿದ್ದಾನೆ. ಗೌತಮ ಬುದ್ಧನ ಈ ವಿಚಾರಸರಣಿಗಿಂತಲು ಮಿಗಿಲಾದ ವೈಚಾರಿಕತೆ, ವಿಚಾರಪರತೆ ಮತ್ತೊಂದಿಲ್ಲ.

ಗೌತಮ ಬುದ್ಧ ತನ್ನನ್ನು ಪವಾಡ ಪುರುಷನೆಂದಾ ಗಲೀ, ಪ್ರವಾದಿ ಎಂದಾಗಲೀ ಕರೆದುಕೊಳ್ಳುವುದಿಲ್ಲ. ತಾನು ನಿರ್ವಾಣಕ್ಕೆ ಮಾರ್ಗ ತೋರಿದಾತ ಮಾತ್ರವೆಂದು ಹೇಳುತ್ತಾನೆ. ಪ್ರತಿಯೊಬ್ಬರೂ ತಮ್ಮ ಸ್ವಪ್ರಯತ್ನದಿಂದಲೇ ನಿರ್ವಾಣವನ್ನು ಸಾಧಿಸಬೇಕು ಎನ್ನುತ್ತಾನೆ. ಯಾವುದನ್ನೂ ಪರೀಕ್ಷಿಸದೇ ಒಪ್ಪಬೇಡಿ. ನನ್ನ ಉಪದೇಶವನ್ನು ಪರೀಕ್ಷಿಸಿ ಒಪ್ಪಿತವಾದಲ್ಲಿ ಮಾತ್ರ ಸ್ವೀಕರಿಸಿ ಎಂದಿದ್ದಾನೆ. ಇಂತಹ ವೈಚಾರಿಕತೆ ಪ್ರಧಾನವಾದ ಧರ್ಮ ಭಾರತದಲ್ಲಿ ಹುಟ್ಟಿದರೂ ಇಲ್ಲಿಂದ ಅದು ಕಾಲ್ತೆಗೆಯಿತು. ಅದಕ್ಕೆ ಕಾರಣ ಹಿಂದೂ ಧರ್ಮದ ವಕ್ತಾರರೆನಿಸಿಕೊಂಡಿರುವ ಶಂಕರಾಚಾರ್ಯರ ಗೂಂಡಾಗಿರಿ. 'ಶಂಕರಾಚಾರ್ಯ ಶೂದ್ರರಿಗೆ ಜ್ಞಾನವನ್ನು ನಿರಾಕರಿಸಿದ್ದಷ್ಟೇ ಅಲ್ಲ. ಅವನು ಮಾಡಿದ ಮಹಾಪರಾಧ ತನ್ನ ಸಿದ್ಧಾಂತಕ್ಕೆ ಬೃಹತ್ ಪ್ರಮಾಣದಲ್ಲಿ ಎದುರಾದ, ಬಲವಾಗಿ ಬೇರೂರಿದ್ದ ಬೌದ್ಧ ಧರ್ಮವನ್ನು ನಾಶ ಮಾಡಲು ತುಂಬಾ ಅನಾಗರಿಕ, ಅಸಂಸ್ಕೃತ, ಬರ್ಬರ, ಹೇಯ ವಿಧಾನಗಳನ್ನು ಅನುಸರಿಸಿದ'. (ಶಂಕರಾಚಾರ್ಯ ಮತ್ತು ಪ್ರತಿಗಾಮಿತನ: ಭಗವಾನ್. ಕೆ. ಎಸ್. ಪು. 32). ಶಂಕರಾಚಾರ್ಯರ ಈ ಗೂಂಡಾಗಿರಿಯಿಂದ ಬೌದ್ಧ ಧರ್ಮ ಭಾರತದಲ್ಲಿ ತನ್ನ ಪ್ರಭಾವವನ್ನು ಕಳೆದುಕೊಂಡಿತು.

ಬ್ರಿಟಿಷರು ತಂದ ಆಧುನಿಕತೆಯೊಂದಿಗೆ ಭಾರತದಲ್ಲಿ ವಿಚಾರವಾದ ಹೊಸ ಆವಿಷ್ಕಾರವನ್ನು ಪಡೆಯಿತು. ಬ್ರಿಟಿಷರು ಶೂದ್ರರು ವಿದ್ಯೆಕಲಿಯಲು ಇದ್ದ ಅಡ್ಡಿ ಆತಂಕಗಳನ್ನು ಕಳೆದು, ಸಾಮೂಹಿಕ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತಂದರು. ಇದರಿಂದ ಬಹುಸಮುದಾಯಗಳು ಎಂದೂ ಕಂಡರಿಯದ ಜ್ಞಾನದ ಕ್ಷೇತ್ರಕ್ಕೆ ಪ್ರವೇಶಿಸುವಂತಾಯಿತು. ಅದೇ ವೇಳೆಗೆ ಜಗತ್ತಿನಲ್ಲಿ ಮಾನವನ ಹುಟ್ಟಿನ ಪರಿಕಲ್ಪನೆಯನ್ನೇ ಬದಲಾಯಿಸಿದ ಡಾರ್ವಿನ್ನನ ವಿಕಾಸವಾದ, ಮನುಷ್ಯನ ವರ್ತನೆಗಳಿಗೆ ಕಾರಣವನ್ನು ಮನೋವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಿಸಿದ ಸಿಗ್ಮಂಡ್ ಫ್ರಾಯ್ಡನವಾದ, ಶ್ರಮಿಕ ವರ್ಗಕ್ಕೆ ಮಾನ್ಯತೆಯನ್ನು ತಂದುಕೊಟ್ಟ ಮಾರ್ಕ್ಸ್‌ವಾದಗಳು ಜಗತ್ತಿನ ವಿಚಾರಧಾರೆಯನ್ನೇ ಬದಲಾಯಿಸಿದ್ದವು. ಈ ಮಹತ್ವದ ಚಿಂತನೆಗಳು ಆಧುನಿಕ ವಿದ್ಯಾಭ್ಯಾಸದಿಂದ ಭಾರತೀಯರಿಗೆ ಲಭಿಸಿದವು. ವಿದ್ಯಾಭ್ಯಾಸದ ಮುಖೇನ ಆಧುನಿಕ ತತ್ವಜ್ಞಾನ ಬಹುಸಮುದಾಯಗಳಿಗೆ ಪ್ರಾಪ್ತವಾದಾಗ ಹಿಂದೂ ಧರ್ಮದಲ್ಲಿ ಬೇರು ಬಿಟ್ಟದ್ದ ಕಂದಾಚಾರ ಮೂಢನಂಬಿಕೆಗಳ ಅರಿವು ಜನತೆಗಾಯಿತು. ಶತಶತಮಾನಗಳಿಂದ ಬಹುಸಮುದಾಯಗಳ ಮೇಲಾದ ಶೋಷಣೆಯ ಮುಖಗಳ ಅನಾವರಣವಾಯಿತು. ಡಾ.ಬಾಬಾಸಾಹೇಬ್ ಅಂಬೇಡ್ಕರ್, ರಾಮ ಮನೋಹರ ಲೋಹಿಯಾ, ಜ್ಯೋತಿಬಾ ಫುಲೆ ಮೊದಲಾದ ವಿಚಾರವಂತರು ಹಿಂದೂ ಧರ್ಮದ ಆಂತರ್ಯದಲ್ಲಿ ತುಂಬಿದ್ದ ಕ್ರೂರತೆಯನ್ನು ವಿರೋಧಿಸಿದರು. ಹೊಸ ಚಿಂತನೆ ಹೊಸ ಜ್ಞಾನದ ಫಲವಾಗಿ ನಾಡಿನಾದ್ಯಂತ ಹೊಸತನದ ವಿದ್ಯುತ್ ಸಂಚಲನವಾಯಿತು. ಕರ್ನಾಟಕದಲ್ಲಿಯೂ ವಿಚಾರವಂತಿಕೆ ತಲೆ ಎತ್ತಿತು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ, ಕರ್ನಾಟಕದಲ್ಲಿ ಅನೇಕ ವಾದಗಳು ಪ್ರಚಲಿತವಿದ್ದು, ವಿಚಾರವಾದಿಗಳು ಯಾವುದೇ ಒಂದು ತತ್ವದ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳಲಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ವರ್ಣ ವ್ಯವಸ್ಥೆಯನ್ನು ಕಾಯ್ದುಕೊಂಡು ಸಮಾನತೆಯನ್ನು ತರಬಹುದೆಂಬ ಗಾಂಧೀವಾದ, ಬಂಡವಾಳಶಾಹಿಗಳ ದೌರ್ಜನ್ಯವನ್ನು ವಿರೋಧಿಸುವ ಮಾರ್ಕ್ಸ್ ವಾದ, ಬಂಡವಾಳವನ್ನು ಸಮನಾಗಿ ಹಂಚಿಕೊಂಡು ಸಹೃದಯತೆಯನ್ನು ಮೆರೆಯುವ ವಿನೋಬಾ ಭಾವೆಯ ವಾದ, ಜಾತಿ ಪದ್ಧತಿಯನ್ನು ತೀವ್ರವಾಗಿ ಪರಿಗಣಿಸುವ ರಾಮ ಮನೋಹರ ಲೋಹಿಯಾ ವಾದ, ದಲಿತ ಹಿತರಕ್ಷಣೆಯನ್ನು ಗಮನದಲ್ಲಿರಿಸಿಕೊಂಡಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ವಾದ ಹೀಗೆ ಹತ್ತು ಹಲವು ವಾದಗಳು ಕರ್ನಾಟಕದಲ್ಲಿ ಚೆದುರಿ ಚೆಲ್ಲಾಪಿಲ್ಲಿಯಾಗಿದ್ದವು. ಅಂತಿಮವಾಗಿ 1970 ವೇಳೆಗೆ ಲೋಹಿಯಾವಾದವನ್ನು ಸಮರ್ಥಿಸಿ 'ಜಾತಿ ವಿನಾಶ ವೇದಿಕೆ' ಹುಟ್ಟಿಕೊಂಡಿತು. ಭರತ ಖಂಡದ ಅವನತಿಗೆ ಜಾತಿಯೇ ಮುಖ್ಯ ಕಾರಣವೆಂಬುದು ಜಾತಿ ವಿನಾಶ ವೇದಿಕೆಯ ಚಿಂತನೆಯ ನೆಲೆಗಟ್ಟಾಯಿತು. ಜಾತಿ ವಿನಾಶ ವೇದಿಕೆಯ ಹಿಂದಿನ ಪ್ರೇರಣೆ ರಾಮಮನೋಹರ ಲೋಹಿಯಾ ಅವರ ವಿಚಾರ.

ಯಜ್ಞಯಾಗಾದಿಗಳು ಕೆಲವರು ಹೊಟ್ಟೆಹೊರೆಯಲು ಮಾಡಿಕೊಂಡ ಸಾಧನಗಳಾಗಿವೆ. ಮೋಕ್ಷ, ಪರಲೋಕ, ಆತ್ಮ ಇವೆಲ್ಲವೂ ಕಪೋಲಕಲ್ಪಿತ; ವಾಸ್ತವವಲ್ಲ. ಅದೃಷ್ಟ ಎಂಬುದು ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಲ್ಲದವರು ಕಲ್ಪಿಸಿಕೊಂಡ ಕಲ್ಪನೆಯಾಗಿದೆ. ಜಗತ್ತಿನಲ್ಲಿ ನಡೆಯುವ ಕೆಲವು ವೈಚಿತ್ರ್ಯಗಳು ಕೇವಲ ಆಕಸ್ಮಿಕವಾದವುಗಳೇ ಹೊರತು ವಾಸ್ತವದ ತಳಹದಿಯ ಮೇಲೆ ಆದವಲ್ಲ'. ಹೀಗೆ ಹಿಂದೂ ಧರ್ಮದ ವಾಸ್ತವವಲ್ಲದ ಅನೇಕ ತತ್ವಗಳನ್ನು ಚಾರ್ವಾಕ ದರ್ಶನವು ತರ್ಕಿಸುತ್ತದೆ. ಚಾರ್ವಾಕರು ಬದುಕಿಗೆ ವಾಸ್ತವದ ನೆಲೆಕಟ್ಟಿನ ಅನೇಕ ವಿಚಾರಗಳನ್ನು ಕೊಟ್ಟಿದ್ದಾರೆ.

ಲೋಹಿಯಾ ಭಾರತ ಕಂಡ ಅಪರೂಪದ ಚಿಂತನಶೀಲ ವ್ಯಕ್ತಿ. ಆಧುನಿಕ ಭಾರತದಲ್ಲಿ ಜಾತಿ ವ್ಯವಸ್ಥೆಯನ್ನು ತೀವ್ರವಾಗಿ ವಿರೋಧಿಸಿದ ಸಮಾಜವಾದಿ, ವಿಚಾರವಾದಿ. ಜಾತಿ ಭಾರತದ ಪ್ರಗತಿಗೆ ಅಂಟಿರುವ ಬಹುದೊಡ್ಡ ಕಳಂಕವೆಂದು ಅವರು ಸಾರಿದ್ದಾರೆ. 'ಜಾತಿಪದ್ಧತಿ ಇರುವ ದೇಶದಲ್ಲಿ ಅವಕಾಶಗಳು ಮತ್ತು ಯೋಗ್ಯತೆಗಳು ನಿರಂತರವಾಗಿ ಕುಗ್ಗಿ ಹೋಗುತ್ತವೆ. ಯೋಗ್ಯರು ಕಡಿಮೆಯಾಗುತ್ತಾ ಹೋಗುತ್ತಾರೆ. ಇದರ ಪರಿಣಾಮವೆಂದರೆ ರಾಷ್ಟ್ರ ಅಯೋಗ್ಯವಾಗುತ್ತದೆ.' (ಉತ್ತರ ದಕ್ಷಿಣ: ರಾಮ ಮನೋಹರ ಲೋಹಿಯಾ ಬರಹಗಳು : ಸಂ–2: ಪು–145) ಎಂಬ ಅವರ ಮಾತು ಜಾತಿಯ ದುಷ್ಪರಿಣಾಮವನ್ನು ತೆರೆದಿಡುತ್ತದೆ. ಲೋಹಿಯಾ ಅವರ ಜಾತಿ ವಿರೋಧಿ ನಿಲುವುಗಳು ಅಂದಿನ ಯುವ ಪೀಳಿಗೆಗೆ ದಾರಿ ದೀವಿಗೆಯಾಯಿತು. ಜಾತಿ ವಿನಾಶ ವೇದಿಕೆಯ ಅಡಿಯಲ್ಲಿ ಹೋರಾಟವನ್ನೂ ರೂಪಿಸಲು ಅವಕಾಶ ಕಲ್ಪಿಸಿತು.

ಕರ್ನಾಟಕದಲ್ಲಿ ಜಾತಿ ವಿನಾಶ ವೇದಿಕೆಯು ಜಾತಿ ವ್ಯವಸ್ಥೆಯನ್ನು ತೀವ್ರವಾಗಿ ವಿರೋಧಿಸಿತು. ವರ್ಣ ವ್ಯವಸ್ಥೆಯನ್ನು ಧಿಕ್ಕರಿಸಿತು. ಆ ನಿಟ್ಟಿನಲ್ಲಿ ಹೋರಾಟವನ್ನು ಹಮ್ಮಿಕೊಂಡಿತು. ಸಹಪಂಕ್ತಿ ಭೋಜನ, ಅಂತರ ಜಾತಿ

ಮದುವೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ನೀಡಿತು. ಅದರೊಂದಿಗೆ ವೈದಿಕ ಧರ್ಮದಲ್ಲಿ ಬೇರು ಬಿಟ್ಟಿದ್ದ ಮೂಢ ನಂಬಿಕೆ, ಕಂದಾಚಾರಗಳ ವಿರುದ್ಧವೂ ಹೋರಾಟವನ್ನು ಹಮ್ಮಿಕೊಂಡಿತು. ಅದರೆ ದುರದೃಷ್ಟವಶಾತ್ ಜಾತಿ ವಿನಾಶ ವೇದಿಕೆ ಹುಟ್ಟಿದ ಒಂದೆರಡು ವರ್ಷಗಳಲ್ಲಿಯೇ ಅದು ತನ್ನ ನೆಲೆಯನ್ನು ಕಳೆದುಕೊಂಡಿತು. ಯಾವ ವೇದಿಕೆ ಜಾತಿ ವ್ಯವಸ್ಥೆಯನ್ನು ತೊಡೆದು ಹಾಕಲು ಹುಟ್ಟಿತೋ ಅದಕ್ಕೆ ಜಾತಿಯ ಶಾಪವು ತಗುಲಿತು. ಜಾತಿ ವಿನಾಶ ವೇದಿಕೆಯ ಅವನತಿ ಹಾದಿ ಹಿಡಿದ ಕಾಲದಲ್ಲಿ, 1974ರಲ್ಲಿ, ದಲಿತ ಸಂಘರ್ಷ ಸಮಿತಿಯೂ, ಆನಂತರ ರೈತ ಸಂಘವೂ ಹುಟ್ಟಿದವು.

ಕಾಲದ ಅನಿವಾರ್ಯತೆ ಮತ್ತು ತುರ್ತಿನಿಂದ ಹುಟ್ಟಿದ ಸಂಘಟನೆ ದಲಿತ ಸಂಘರ್ಷ ಸಮಿತಿ. ಅದರ ಸಂಸ್ಥಾಪಕರು ಪ್ರೊ.ಬಿ. ಕೃಷ್ಣಪ್ಪ. ಕರ್ನಾಟಕ ಕಂಡ ಅತ್ಯಂತ ಎತ್ತರದ ಚಿಂತಕ. ಜಾತಿ ವಿನಾಶ ವೇದಿಕೆ ಅಪೂರ್ಣ ಮಾಡಿಬಿಟ್ಟಿದ್ದ ಕಾರ್ಯವನ್ನು ಕೈಗೆತ್ತಿಕೊಂಡಿದ್ದಲ್ಲದೆ, ಅಸ್ಪೃಶ್ಯತೆ, ದೌರ್ಜನ್ಯ, ಶೋಷಣೆಯ ವಿರುದ್ಧವೂ ತನ್ನ ಹೋರಾಟವನ್ನು ವಿಸ್ತರಿಸಿತು. ಪ್ರೊ.ಬಿ. ಕೃಷ್ಣಪ್ಪ ದಲಿತ ಸಂಘರ್ಷ ಸಮಿತಿಯ ಹೋರಾಟದಲ್ಲಿ ಬಹುಸಮುದಾಯಗಳು ಪಾಲ್ಗೊಳ್ಳುವಂತಾಗಬೇಕೆಂಬ ದೃಷ್ಟಿಯಿಂದ 'ದಲಿತ' ಎಂಬ ಪದದ ಅರ್ಥ ವ್ಯಾಪ್ತಿಯನ್ನು ಹಿಗ್ಗಲಿಸಿದರು. ಮೊದಮೊದಲು 'ದಲಿತ' ಪದಕ್ಕೆ 'ಅಸ್ಪೃಶ್ಯ'ನೆಂಬ ಅರ್ಥವಿತ್ತು. ಪ್ರೊ.ಬಿ.ಕೃಷ್ಣಪ್ಪ 'ದಲಿತ ಎಂದರೆ ಎಲ್ಲ ಮತ ಧರ್ಮದಲ್ಲಿರುವ ಬಡವರು ಎಂದರ್ಥ' (ಪ್ರೊ.ಬಿ.ಕೃಷ್ಣಪ್ಪ ಬದುಕು ಬರಹ:ಸಂ–2: ಪು–3) ಎಂದಿದ್ದಾರೆ. ಅದೇ ಪುಸ್ತಕದ 11ನೇ ಪುಟದಲ್ಲಿ 'ಆರ್ಥಿಕವಾಗಿ ಮತ್ತು ಜಾತಿಯಿಂದ–ಈ ಎರಡೂ ತುಳಿತಕ್ಕೆ ಒಳಗಾದವರನ್ನು ಮಾತ್ರ ಪೂರ್ಣ ಸ್ವರೂಪದಲ್ಲಿ ದಲಿತರೆಂದು ಪರಿಗಣಿಸಲಾಗಿದೆ' ಎಂದಿದ್ದಾರೆ.

ಅವರ ಈ ಧೋರಣೆಯಿಂದ ದಲಿತ ಸಂಘರ್ಷ ಸಮಿತಿಯಲ್ಲಿ ಜಾತಿಯಿಂದ ನೋವಿ ಗೊಳಪಟ್ಟ ಸಮಸ್ತರು ಸೇರಿ ಹೋರಾಟವನ್ನು ಮಾಡುವಂತಾಯಿತು. ಪ್ರೊ.ಬಿ.ಕೃಷ್ಣಪ್ಪ 'ಭಾರತೀಯ ಸಮಾಜ ಕೆಸರು ತುಂಬಿದ ಕೊಳದಂತೆ. ಇದನ್ನು ನಿರಂತರವಾಗಿ ಕದಡುತ್ತಿರಬೇಕು. ಹಾಗೆ ಮಾಡಿದಾಗ ಅದರ ತಳದಲ್ಲಿದ್ದ ರಾಡಿ ಮೇಲೆ ಬಂದು ಕೊಳವು ತಿಳಿಯಾಗುತ್ತದೆ' ಎನ್ನುತ್ತಿದ್ದರು. ಮೊದಮೊದಲು ಲೋಹಿಯಾ, ಮಾರ್ಕ್ಸ್‌ವಾದವನ್ನು ಆಧರಿಸಿಕೊಂಡಿದ್ದ ದಲಿತ ಸಂಘರ್ಷ ಸಮಿತಿಯು ಕಾಲಕ್ರಮೇಣ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ವಾದವನ್ನು ಗಟ್ಟಿಯಾಗಿ ಅವಲಂಬಿಸಿಕೊಂಡಿತು. ಕರ್ನಾಟಕದ ಮೂಲೆ ಮೂಲೆಗೂ ಅಂಬೇಡ್ಕರ್‌ವಾದವನ್ನು ತಲುಪಿಸಿದ ಕೀರ್ತಿ ಪ್ರೊ.ಬಿ.ಕೆ. ಅವರಿಗೆ ಸಲ್ಲಬೇಕು. ಪ್ರೊ.ಬಿ.ಕೃಷ್ಣಪ್ಪ ಅವರ ನೇತೃತ್ವದಲ್ಲಿ ಬಗರ್ ಹುಕುಂ ಭೂಮಿಯ ಚಳುವಳಿ ಅತ್ಯಂತ ವ್ಯಾಪಕವಾಗಿ ನಡೆಯಿತು. ಚಂದ್ರಗುತ್ತಿಯ ಬೆತ್ತಲೆ ಸೇವೆಯ ಹೋರಾಟವಂತೂ ಅವಸ್ಮರಣೀಯವಾದುದು. ಶತಶತಮಾನಗಳಿಂದ ದೇವರ ಹೆಸರಲ್ಲಿ ನಡೆಯುತ್ತಿದ್ದ ಮಹಿಳೆಯರ ಬೆತ್ತಲೆ ಪ್ರದರ್ಶನವು ದಲಿತ ಸಂಘರ್ಷ ಸಮಿತಿಯ ಹೋರಾಟದ ಫಲವಾಗಿ ನಿಂತಿತು.

ಪ್ರೊ.ಬಿ.ಕೆ. ಮೇಲು ವರ್ಗದ ಜನರನ್ನು ಎಂದೂ ದ್ವೇಷಿಸುತ್ತಿರಲಿಲ್ಲ. ಅವರು ಕಿಡಿಕಾರುತ್ತಿದ್ದದ್ದು ಬ್ರಾಹ್ಮಣ್ಯದ ವಿರುದ್ಧ. ಈ ಬ್ರಾಹ್ಮಣ್ಯ ಕೇವಲ ಮೇಲುವರ್ಗದ ಜನರಲ್ಲಿ ಮಾತ್ರವಲ್ಲ, ದಲಿತ ಶೂದ್ರ ವರ್ಗದಲ್ಲಿಯೂ ಇದೆ. ತಿರುಪತಿ, ಧರ್ಮಸ್ಥಳಗಳಿಗೆ ಹೋಗಿ ತಲೆಬೋಳಿಸಿಕೊಂಡು

ಪಶ್ಚಿಮ ಘಟ್ಟದಲ್ಲಿ ಕೈಗಾರಿಕೆಯ ಸ್ಥಾಪನೆಯ ವಿರುದ್ಧ, ತುಂಗಾ ಮೂಲ ಉಳಿಸಿ, ಬಾಬಾಬುಡನ್ ಗಿರಿಯಲ್ಲಿ ಕೋಮುವಾದದ ನೆಲೆಯ ವಿರುದ್ಧದ ಹೋರಾಟಗಳಲ್ಲಿ ಕರ್ನಾಟಕದ ವಿಚಾರವಾದಿಗಳು ಕೈಜೋಡಿಸಿದ ಇತಿಹಾಸ ಎಲ್ಲರೂ ಬಲ್ಲರು. ಇದಾದ ಕೆಲವೇದಿನಗಳಲ್ಲಿ ಪಶ್ಚಿಮ ಘಟ್ಟದಲ್ಲಿ ಬಂದೂಕುಗಳು ಗರ್ಜಿಸಿದಾಗ, ವಿಚಾರವಾದಿಗಳೂ ಸೇರಿದಂತೆ ಇಡೀ ಕರ್ನಾಟಕವೇ ತಲ್ಲಣಿಸಿತು. ಬುದ್ಧಿಜೀವಿಗಳ ತಾಣವಾಗಿದ್ದ ಕರ್ನಾಟಕದಲ್ಲಿ ಬಂದೂಕಿನ ಹೊಗೆಯಾಡಲಾರಂಭಿಸಿತು. ಪೋಲೀಸರು ಮತ್ತು ನಕ್ಸಲೀಯರ ಮುಖಾಮುಖಿಯಲ್ಲಿ ಅನೇಕ ಸಾವು ನೋವುಗಳುಂಟಾದಾಗ ಕರ್ನಾಟಕದ ವಿಚಾರವಾದಿಗಳಿಗೆ ತಾವಿಟ್ಟ ಹೆಜ್ಜೆಯ ಅರಿವಾಗತೊಡಗಿತು.

ಬರುವವರು, ಪುರೋಹಿತರ ನೇತೃತ್ವದಲ್ಲಿ ಮದುವೆ, ಗೃಹ ಪ್ರವೇಶ ಮಾಡುವವರು ದಲಿತ, ಶೂದ್ರವರ್ಗದಲ್ಲಿಯೂ ಇದ್ದಾರೆ. ಒಂದು ಕಡೆ ಬ್ರಾಹ್ಮಣರನ್ನು ತೆಗಳುತ್ತಾ ಮತ್ತೊಂದು ಕಡೆ ಬ್ರಾಹ್ಮಣ್ಯವನ್ನು ಆರಾಧನೆ ಮಾಡುವವರನ್ನು ಪ್ರೊ.ಬಿ.ಕೆ. ತೀವ್ರವಾಗಿ ಖಂಡಿಸುತ್ತಿದ್ದರು. ದ್ವಿವಿಧನೀತಿ ಸರ್ವತಾ ಸಮ್ಮತವಲ್ಲ. ಬ್ರಾಹ್ಮಣ್ಯವನ್ನು ಪಾಲಿಸುವವರಿಗೆ ಬ್ರಾಹ್ಮಣರ ವಿರುದ್ಧ ಮಾತನಾಡುವ ಯಾವ ನೈತಿಕತೆಯ ಇಲ್ಲವೆಂದೂ ಆದ್ದರಿಂದ ಮೊದಲು ನಾವು ಬ್ರಾಹ್ಮಣ್ಯದಿಂದ ದೂರವಿರಬೇಕೆಂದೂ ಪ್ರೊ.ಬಿ.ಕೃಷ್ಣಪ್ಪ ಕರೆಕೊಡುತ್ತಿದ್ದರು.

ಕರ್ನಾಟಕದಲ್ಲಿ ಇಂದು ವಿಚಾರವಾದ ಮತ್ತು ವಿಚಾರವಾದಿಗಳು ಕವಲುದಾರಿಯಲ್ಲಿದ್ದಾರೆ. 1995 ರಿಂದ ಈಚೆಗೆ ಜಾತೀಯತೆ, ಅಸ್ಪೃಶ್ಯತೆ, ದೌರ್ಜನ್ಯ, ರೈತರ – ಕೂಲಿ ಕಾರ್ಮಿಕರ ಶೋಷಣೆಯ ವಿರುದ್ಧ ಪ್ರಬಲ ದನಿಯಾಗಿದ್ದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘಗಳು ಹೋರಾಟದ ತೀಕ್ಷ್ಣತೆಯನ್ನು ಕಳೆದುಕೊಂಡಿವೆ. ಸಹಜವಾಗಿಯೇ ಕೋಮುವಾದಿಗಳು ಪ್ರಬಲರಾಗಿದ್ದಾರು. ಹುಬ್ಬಳ್ಳಿಯ ಈದ್ಗಾ ಮೈದಾನ, ಬಾಬಾ ಬುಡನ್‌ಗಿರಿಯಂತಹ ಸಮಸ್ಯೆಗಳನ್ನು ಹುಟ್ಟು ಹಾಕಿದ್ದಾರೆ. ಆರ್.ಎಸ್.ಎಸ್ಸಿಗಳು ಕುಣಿದಾಡಿದಾಗ, ಈ ಬೆಳವಣಿಗೆಯಿಂದ ತಲ್ಲಣಗೊಂಡ ವಿಚಾರವಾದಿಗಳು ಕೋಮುವಾದಿಗಳ ವಿರುದ್ಧ ದನಿಯಾಗಿದ್ದ ನಕ್ಸಲ್‌ವಾದದ ಮುಖವಾಣಿ ಸಂಘಟನೆಗಳೊಂದಿಗೆ ಕೈಜೋಡಿಸುವ ಆತುರದ ನಿರ್ಧಾರವನ್ನು ಕೈಗೊಂಡರು.

ಪಶ್ಚಿಮ ಘಟ್ಟದಲ್ಲಿ ಕೈಗಾರಿಕೆಯ ಸ್ಥಾಪನೆಯ ವಿರುದ್ಧ, ತುಂಗಾ ಮೂಲ ಉಳಿಸಿ, ಬಾಬಾಬುಡನ್ ಗಿರಿಯಲ್ಲಿ ಕೋಮುವಾದದ ನೆಲೆಯ ವಿರುದ್ಧದ ಹೋರಾಟಗಳಲ್ಲಿ ಕರ್ನಾಟಕದ ವಿಚಾರವಾದಿಗಳು ಕೈಜೋಡಿಸಿದ ಇತಿಹಾಸ ಎಲ್ಲರೂ ಬಲ್ಲರು. ಇದಾದ ಕೆಲವೇದಿನಗಳಲ್ಲಿ ಪಶ್ಚಿಮ ಘಟ್ಟದಲ್ಲಿ ಬಂದೂಕುಗಳು ಗರ್ಜಿಸಿದಾಗ, ವಿಚಾರವಾದಿಗಳೂ ಸೇರಿದಂತೆ ಇಡೀ ಕರ್ನಾಟಕವೇ ತಲ್ಲಣಿಸಿತು. ಬುದ್ಧಿಜೀವಿಗಳ ತಾಣವಾಗಿದ್ದ ಕರ್ನಾಟಕದಲ್ಲಿ ಬಂದೂಕಿನ ಹೊಗೆಯಾಡಲಾರಂಭಿಸಿತು. ಪೋಲೀಸರು ಮತ್ತು ನಕ್ಸಲೀಯರ ಮುಖಾಮುಖಿಯಲ್ಲಿ ಅನೇಕ ಸಾವು ನೋವುಗಳುಂಟಾದಾಗ ಕರ್ನಾಟಕದ ವಿಚಾರವಾದಿಗಳಿಗೆ ತಾವಿಟ್ಟ ಹೆಜ್ಜೆಯ ಅರಿವಾಗತೊಡಗಿತು.

ಒಂದು ಕಡೆ ಕೋಮುವಾದಿಗಳ ಪ್ರಹಾರ ಮತ್ತೊಂದು ಕಡೆ ಸರ್ಕಾರದ ಒತ್ತಡವನ್ನು ತಡೆಯಲಾರದೆ ಇಂದು ವಿಚಾರವಾದಿಗಳು ತತ್ತರಿಸಿ, ತಟಸ್ಥನಿಲುವನ್ನು ತಳೆದಿದ್ದಾರೆ. ವಿಚಾರವಾದಿಗಳ ಈ ತಟಸ್ಥಧೋರಣೆ ತುಂಬಾ ಅಪಾಯಕಾರಿ. ಆಧುನಿಕ ವಿಚಾರಧಾರೆ ಎಂಬ ಕವೆಕೋಲಿನಿಂದ ಕೋಮುವಾದವೆಂಬ ಹಸಿದ ಹುಲಿಯ ಕುತ್ತಿಗೆಯನ್ನು ಅದುಮಿ ಹಿಡಿದಿರುವ ವಿಚಾರವಾದದ ಶಕ್ತಿಗುಂದಿದರೆ ಹುಲಿ ಇಮ್ಮಡಿ ಶಕ್ತಿಯಿಂದ ಕವೆ ಕೋಲನ್ನು ಕಿತ್ತೆಸೆದು ಸಮಾಜವನ್ನು ನುಂಗಿ ನೊಣೆದು ಬಿಡುತ್ತದೆ. ಅಷ್ಟೇ ಅಲ್ಲದೆ ಇತಿಹಾಸ ಪೂರ್ವಕಾಲದಿಂದಲೂ ಬೆಳೆದು ಬಂದ ಪ್ರಗತಿಪರ ಆಲೋಚನಾಕ್ರಮವು ಇಲ್ಲದಂತಾಗಿ ಮುಂದಿನ ತಲೆಮಾರುಗಳು ಬಲಹೀನವಾಗುತ್ತವೆ.

ಕೋಮುವಾದ ಈ ನಾಡಿಗಂಟಿದ ಬಹುದೊಡ್ಡ ಪಿಡುಗು. ಸಮಾಜದ ಪ್ರಗತಿಗೆ ಬಹುದೊಡ್ಡ ಕಂಟಕ ಎಂಬುದು ನಿಜ. ಇಂತಹ ಕೋಮುವಾದವನ್ನು ದಮನಮಾಡಲು ಆರಿಸಿಕೊಳ್ಳುವ ಮಾರ್ಗವು ಪ್ರಜಾಸತ್ತಾತ್ಮಕವಾಗಿರಬೇಕೆಂಬುದು ಅಷ್ಟೇ ಸತ್ಯ. 1982ರಲ್ಲಿ ಶಿವಮೊಗ್ಗದ ಪ್ರತಿಷ್ಠಿತ ಡಿ.ವಿ.ಎಸ್. ಕಾಲೇಜಿನಲ್ಲಿ ಯಜ್ಞವನ್ನು ಮಾಡಿದಾಗ ತಡೆಯಲು ಹೋದ ವಿಚಾರವಾದಿಗಳ ಮೇಲೆ ಕೋಮುವಾದಿಗಳು ಹಲ್ಲೆ ಮಾಡಿದರು. ಈ ಹಲ್ಲೆಯನ್ನು ಖಂಡಿಸಿ ಪ್ರೊ.ಬಿ.ಕೃಷ್ಣಪ್ಪ ದಲಿತ ಸಂಘರ್ಷ ಸಮಿತಿಯ ಪಡೆಯನ್ನು ಕಟ್ಟಿಕೊಂಡು ಶಿವಮೊಗ್ಗ ನಗರದ ಬೀದಿ ಬೀದಿಗಳಲ್ಲಿ ಕೋಮುವಾದಿಗಳ ವಿರುದ್ಧ ಘೋಷಣೆಯನ್ನು ಕೂಗುತ್ತ ಮೆರಣವಣಿಗೆಯನ್ನು ಮಾಡಿದರು. ಕೋಮುವಾದಿಗಳನ್ನು ಎಗ್ಗಿಲ್ಲದೆ ಖಂಡಿಸಿದರು. ಕೋಮುವಾದಿಗಳ ದನಿ ಅಡಗಿತ್ತು. ಮನೆಯಿಂದ ಹೊರಬಂದು ದಲಿತ ಪಡೆ ಯನ್ನು ತಡೆಯುವ ಧೈರ್ಯ ಯಾರಿಗೂ ಇರಲಿಲ್ಲ.

ವಿಚಾರವಾದ ಅತ್ಯಂತ ವ್ಯಾಪಕವಾದುದು. ಕೋಮುವಾದದ ವಿರುದ್ಧ ಹೋರಾಡುವುದು ಅದರ ಒಂದು ದೃಷ್ಟಿ ಅಷ್ಟೇ. ಸಮಾಜದ ಪ್ರಗತಿಗೆ ಮಾರಕವಾದ ಅನೇಕ ವಿಚಾರಗಳ ವಿರುದ್ಧವಾಗಿಯೂ ಅದು ದನಿಯನ್ನು ಎತ್ತುತ್ತದೆ. ವಿಚಾರವಾದದ ಇತಿಹಾಸದಲ್ಲಿ ಅನೇಕ ಉದಾಹರಣೆಗಳು ಲಭ್ಯವಾಗುತ್ತವೆ. 'ಮಹಾಭಾರತದ ಯುದ್ಧ ಮುಗಿದನಂತರ ಧರ್ಮರಾಯನು ಸಿಂಹಾಸನಾರೂಢನಾಗುತ್ತಾನೆ. ಆ ಸಂದರ್ಭದಲ್ಲಿ ಚಾರ್ವಾಕನ ಅನುಯಾಯಿ ಒಬ್ಬನು ರಾಜ್ಯ ಸಭೆಯಲ್ಲಿ ಪಂಡಿತರು, ವಿದ್ವಾಂಸರು ಎದುರಿಗಿರುವಾಗಲೇ ರಾಜನಿಂದನೆಯನ್ನು ಮಾಡುತ್ತಾನೆ. ರಾಜ್ಯಭೋಗದ ಲಾಲಸೆಯಿಂದ, ಸ್ವರ್ಗ ಲಭಿಸುವುದೆಂಬ ಆಮಿಷದಿಂದ ಯುದ್ಧದಲ್ಲಿ ತಮ್ಮಂದಿರನ್ನು ಎತ್ತಿಕಟ್ಟಿ ಸೋದರರನ್ನು, ಲಕ್ಷಾಂತರ ಸೈನಿಕರನ್ನು ಕೊಲ್ಲಿಸಿದ ಪಾಪಿಷ್ಟನೆಂದು ಧರ್ಮರಾಯನನ್ನು ದೂಷಿಸುತ್ತಾನೆ.

ಇದರಿಂದ ಅಪಾರ ಖಿನ್ನನಾದ ಧರ್ಮರಾಯನು ನಿರುತ್ತರನಾಗುತ್ತಾನೆ. ಆಗ ರಾಜನು ವ್ಯಸನಿಯಾದುದನ್ನು ಕಂಡು ಕೆರಳಿದ ಬ್ರಾಹ್ಮಣ ಪಂಡಿತರು ತಮ್ಮ ತಪೋಮಹಿಮೆಯಿಂದ ಸತ್ಯ ಹೇಳಿದ ಆ ವ್ಯಕ್ತಿಯನ್ನು ಸುಟ್ಟು ಹಾಕಿದರು'. (ಲೋಕಚಾರುವಾಕ: ಡಾ. ಎಚ್. ಎಸ್. ಮಂಜುರಾಜ್: ಪು – 15). ಈ ಪ್ರಸಂಗದಿಂದ ಚಾರ್ವಾಕರು

ಸಮಾಜದ ಪ್ರಗತಿಗೆ ಮಾರಕವಾದ ರಾಜಕಾರಣ, ಸಾಮಾಜಿಕ ಅಸ್ಥಿರತೆಯ ವಿರುದ್ಧವೂ ಹೋರಾಡುತ್ತಿದ್ದರೆಂದು ತಿಳಿದು ಬರುತ್ತದೆ. ವಿಚಾರವಾದಿಗಳು ಕೇವಲ ಕೋಮುವಾದವನ್ನು ಗುರಿಯಾಗಿಟ್ಟುಕೊಂಡು ಹೋರಾಡದೆ ಸಮಾಜದಲ್ಲಿ ಬೇರು ಬಿಟ್ಟ ಭ್ರಷ್ಟಾಚಾರ, ಬಂಡವಾಳಶಾಹಿ. ಅಸ್ಪೃಶ್ಯತೆ, ಜಾತೀಯತೆಯ ವಿರುದ್ಧವೂ ಹೋರಾಡಬೇಕಾಗುತ್ತದೆ. ಹಾಗಾದಾಗ ಬಹುಸಮುದಾಯಗಳ ಸಹಕಾರ ವಿಚಾರವಾದಿಗಳಿಗೆ ಸಿಗುತ್ತದೆ. ಹೋರಾಟ ಯಶಸ್ವಿಯಾಗುತ್ತದೆ.

ವಿಚಾರವಾದವನ್ನು ಸರಿದಾರಿಯಲ್ಲಿ ಕೊಂಡೊಯ್ಯಲು ಇಂದು ನಮ್ಮ ಮುಂದೆ ಅನೇಕ ಮಾದರಿಗಳಿವೆ. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಮಹತ್ವದ ಸಂವಿಧಾನ ನಮ್ಮ ಕಣ್ಣ ಮುಂದಿದೆ. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವದ ಪರಿಕಲ್ಪನೆಯ ಅಡಿಯಲ್ಲಿ ಹೊಸ ಸಮಾಜದ ಕನಸುಕಂಡವರು ಅಂಬೇಡ್ಕರ್. ಅವರಂತೆ ಕೋಮುವಾದ, ಜಾತೀಯತೆ, ವೇದ ಉಪನಿಷತ್ತುಗಳನ್ನು ಖಂಡಿಸಿದವರು ಮತ್ತೊಬ್ಬರಿಲ್ಲ. ಉಗ್ರವಾದ ಪ್ರತಿಭಟನೆಯ ಸ್ವರೂಪಿಯಾದ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಹೋರಾಟಕ್ಕೆ ಆಯ್ದುಕೊಂಡ ಹಾದಿ ಅತ್ಯಂತ ಪ್ರಜಾಸತ್ತಾತ್ಮಕವಾಗಿತ್ತು. ಚೌಡಯ್ಯನ ಕೆರೆ ಪ್ರವೇಶದ ಹೋರಾಟದಲ್ಲಿ ಅವರು ಅನುಸರಿಸಿದ ಮಾರ್ಗ ಅನುಕರಣೀಯ. ಸುಮಾರು ಹತ್ತು ಸಾವಿರ ಕಾರ್ಯಕರ್ತರೊಂದಿಗೆ ಚೌಡಯ್ಯನ ಕೆರೆಯನ್ನು ಪ್ರವೇಶಿಸಿ ಬೊಗಸೆಯಲ್ಲಿ ನೀರು ತುಂಬಿ ಕುಡಿದು ವಿಶ್ರಾಂತಿ ಪಡೆಯುತ್ತಿದ್ದ ಸಂದರ್ಭದಲ್ಲಿ ಮೇಲುವರ್ಗದವರು ಆ ಜನರ ಮೇಲೆ ಪ್ರಹಾರ ನಡೆಸುತ್ತಾರೆ. ಹೆಂಗಸರು ಮಕ್ಕಳನ್ನು ಹಿಂಸಿಸುತ್ತಾರೆ. ಸೈನ್ಯದಲ್ಲಿ ಕಾರ್ಯನಿರತರಾಗಿದ್ದ ಅನೇಕ ಯೋಧರು ಅಂಬೇಡ್ಕರ್ ಜೊತೆಯಲ್ಲಿರುತ್ತಾರೆ. ಅವರು ಮೇಲುವರ್ಗದವರೊಂದಿಗೆ ಹೋರಾಡಲು ಅನುಮತಿ ಕೇಳುತ್ತಾರೆ. ಆದರೆ ಅಂಬೇಡ್ಕರ್ ಅದನ್ನು ಒಪ್ಪದೆ ಶಾಂತರೀತಿಯಿಂದ ವರ್ತಿಸುವಂತೆ ಮನವಿ ಮಾಡಿಕೊಳ್ಳುತ್ತಾರೆ. ಅವರ ಈ ಮನವಿಯಲ್ಲಿ ನಮಗೆ ಇಂದು ಬೇಕಾದ ಹೋರಾಟದ ಸ್ವರೂಪ ಅಡಗಿದೆ.

ಕನ್ನಡಕ್ಕೆ ವೈಚಾರಿಕತೆಯ ಸಂಸ್ಪರ್ಶನೀಡಿದ ಕುವೆಂಪು ಅವರ ಅಪಾರ ವಿಚಾರಗಳು ಇಂದಿನ ಕೋಮುವಾದದ ವಿರುದ್ಧದ ಹೋರಾಟಕ್ಕೆ ದಾರಿಯನ್ನು ತೋರಬಲ್ಲವು. ಕೋಮುವಾದ, ಪುರೋಹಿತಶಾಹಿ, ಜಾತಿ, ವರ್ಣವನ್ನು ಕುವೆಂಪು ಎಗ್ಗಿಲ್ಲದೆ ಖಂಡಿಸುತ್ತಾರೆ. ಅದೇ ಸಂದರ್ಭದಲ್ಲಿ ಪುರೋಹಿತ ಶಾಹಿಯ ವಿರುದ್ಧ ಹೋರಾಡುವ ಮಾರ್ಗವನ್ನು ತೋರುತ್ತಾರೆ. 'ಈ ಪುರೋಹಿತಶಾಹಿ ಹುಲಿಯಂತೆ. ಇದಕ್ಕೆ ಸಣ್ಣಮಟ್ಟ ಕಲ್ಲನ್ನು ಜೇಬಿನಲ್ಲಿಟ್ಟುಕೊಂಡು ಹೋಗಿ ಹೊಡೆಯುತ್ತೇನೆಂದರೆ ಹುಡುಗಾಟದ ಕೆಲಸವಲ್ಲ. ಅದನ್ನು ಹೊಡೆಯಬೇಕಾದರೆ ನಾವು ಮದ್ದುಗುಂಡುಗಳನ್ನೇ ತಯಾರುಮಾಡಬೇಕು. ನಾವು ಹೇಳುವಂತಹ ಮದ್ದುಗುಂಡು ರೂಪಕವಾದದ್ದು ಅಂತ ಇಟ್ಟುಕೊಳ್ಳೋಣ. ವಾಚ್ಯವಾಗಿಯೆ ಗುಂಡಿನಲ್ಲಿ ಹೊಡೆಯ ಬೇಕು ಅಂತ ಅಲ್ಲ.

ಆದರೆ ಈ ವಿಚಿತ್ರ ಬೇಟೆಯಲ್ಲಿ (ಈ ಸಂದರ್ಭದಲ್ಲಿ) ಮೊದಲ ಗುಂಡು ತಗುಲಬೇಕಾದದ್ದು ಹುಲಿಯ ತಲೆಗಲ್ಲ, ನಿಮ್ಮ ತಲೆಗೆ! ತಲೆ....ತಲೆ....ತಲೆ, [illegible] ತಲೆಯಲ್ಲಿರುವ ಮೆದುಳನ್ನು ಕ್ಲೀನ್ ಮಾಡಬೇಕು. ಅವರಿಗಲ್ಲ, ಆ ಪುರೋಹಿತ ವರ್ಗದವರಿಗಲ್ಲ. ನಿಮಗೆ! ನೀವು'. (ವಿಚಾರಕ್ರಾಂತಿಗೆ ಆಹ್ವಾನ: ಕುವೆಂಪು: ಲೇಖನ, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ: ಪು-61). ಕರ್ನಾಟಕದ ಬರಹಗಾರರು, ವಿಚಾರವಾದಿಗಳನ್ನು ಕುರಿತು ಕುವೆಂಪು ಅವರು ಹೇಳಿರುವ ಈ ಮಾತು ಮಹತ್ವ ಪೂರ್ಣವಾದುದು. ವಿಚಾರವಾದಿಗಳು ಕೋಮುವಾದವನ್ನು ವಿರೋಧಿಸುತ್ತಾ ಬ್ರಾಹ್ಮಣ್ಯವನ್ನು ಪಾಲಿಸುತ್ತಿದ್ದರೆ, ಕೋಮು ವಾದದ ಮತ್ತೊಂದು ರೂಪವೇ ಆದ ಸರ್ಕಾರವನ್ನು ಓಲೈಸುತ್ತಾ ಒಂದು ಅಕಾಡೆಮಿಯ ಅಧ್ಯಕ್ಷ ಪದವಿ, ಒಂದು ಎಂ.ಎಲ್ಸಿ ಪದವಿ, ಒಂದು ಬಿ.ಡಿ.ಎ. ಸೈಟು, ಮನೆಗಾಗಿ ಜೊಲ್ಲುಸುರಿಸುತ್ತಾ ಕೈಚಾಚಿದರೆ ಜನಸಮುದಾಯ ನಂಬುವುದಿಲ್ಲ. ಹೋರಾಟ ಕೇವಲ ಅಕ್ಷರ ಕಲಿತವರು ಒಂದುಕಡೆ ಸೇರುವ ಗುಂಪಾಗುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಸಮಾಜದ ಎಲ್ಲಾ ಸ್ತರಗಳ ಜನರು ಪಾಲ್ಗೊಳ್ಳುವಂತಿರಬೇಕು. ಆಗಲೇ ಅದು ಹೋರಾಟ ವೆನಿಸಿಕೊಳ್ಳುತ್ತದೆ. ಹಾಗಾಗಬೇಕಾದರೆ ವಿಚಾರವಾದಿಗಳು ತಾವು ಮೊದಲು ಶುದ್ಧರಾಗಿರಬೇಕು. ಕುವೆಂಪು, ಪ್ರೊ. ಬಿ. ಕೃಷ್ಣಪ್ಪ ಸಾರಿಸಾರಿ ಹೇಳಿದ್ದು ಇದನ್ನೇ.

ಕುವೆಂಪು ಅವರು ದಾರ್ಶನಿಕ ಕವಿ. ಸಾಹಿತ್ಯ, ಸಮಾಜ ಜಗತ್ತನ್ನು ಕುರಿತು ಭೂತಭವಿಷತ್ತನ್ನು ಕಟ್ಟಿಕೊಟ್ಟ ಸಮರ್ಥ ಕವಿ. ಅವರು 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ ಲೇಖನದಲ್ಲಿ 'ಕಲೆಯಲ್ಲಿ ಕ್ರಾಂತಿಯುಂಟಾದರೆ ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ನೀವು ಬರೀ ಗುಂಡು ಹೊಡೆಯುವುದು, ಕೊಲ್ಲುವುದು ಅದೆಲ್ಲ ಪ್ರಯೋಜನವಿಲ್ಲ. ಹಿಂದೆ ಅದನ್ನೆಲ್ಲ ಮಾಡಿ ಸೋತಿದ್ದಾರೆ. ತಲೆ...ತಲೆ... ತಲೆಯನ್ನು ಕ್ಲೀನ್ ಮಾಡಬೇಕು' ಎಂದಿರುವುದು ಈ ನಾಡಿನ ಭವಿಷತ್ತಿನ ಹೋರಾಟಕ್ಕೆ ದಾರಿದೀವಿಗೆಯಾಗಿದೆ. ಜನರಲ್ಲಿ ತುಂಬಿರುವ ಮೌಢ್ಯ, ಕಂದಾಚಾರಗಳನ್ನು ಕಿತ್ತು ಹಾಕುವಂತಹ ಹೋರಾಟ ನಮಗಿಂದು ಬೇಕಾಗಿದೆ. ಭ್ರಷ್ಟಾಚಾರವನ್ನು ಬಯಲಿಗೆಳೆಯುವ ಹೋರಾಟ ಇಂದು ಬೇಕಾಗಿದೆ. ಜೊತೆ ಜೊತೆಗೆ ಕೋಮುವಾದವನ್ನು ಕಿತ್ತೊಗೆಯುವ ಹೋರಾಟ ಇಂದು ನಮಗೆ ಬೇಕಾಗಿದೆ. ಗುರಿ ಸಾಧಿಸಲು ಅನುಸರಿಸುವ ಮಾರ್ಗ ಮುಖ್ಯವಾಗಿ ಪ್ರಜಾಸತ್ತಾತ್ಮಕವಾಗಿರಬೇಕು.

ಕುವೆಂಪು ಸಾಹಿತ್ಯ, ಸಮಾಜ ಜಗತ್ತನ್ನು ಕುರಿತು ಭೂತಭವಿಷತ್ತನ್ನು ಕಟ್ಟಿಕೊಟ್ಟ ಸಮರ್ಥ ಕವಿ. ಅವರು 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ ಲೇಖನದಲ್ಲಿ 'ಕಲೆಯಲ್ಲಿ ಕ್ರಾಂತಿಯುಂಟಾದರೆ ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ನೀವು ಬರೀ ಗುಂಡು ಹೊಡೆಯುವುದು, ಕೊಲ್ಲುವುದು ಅದೆಲ್ಲ ಪ್ರಯೋಜನವಿಲ್ಲ. ಹಿಂದೆ ಅದನ್ನೆಲ್ಲ ಮಾಡಿ ಸೋತಿದ್ದಾರೆ. ತಲೆ...ತಲೆ... ತಲೆಯನ್ನು ಕ್ಲೀನ್ ಮಾಡಬೇಕು' ಎಂದಿರುವುದು ಈ ನಾಡಿನ ಭವಿಷತ್ತಿನ ಹೋರಾಟಕ್ಕೆ ದಾರಿದೀವಿಗೆಯಾಗಿದೆ. ಜನರಲ್ಲಿ ತುಂಬಿರುವ ಮೌಢ್ಯ, ಕಂದಾಚಾರಗಳನ್ನು ಕಿತ್ತು ಹಾಕುವಂತಹ ಹೋರಾಟ ನಮಗಿಂದು ಬೇಕಾಗಿದೆ. ಭ್ರಷ್ಟಾಚಾರವನ್ನು ಬಯಲಿಗೆಳೆಯುವ ಹೋರಾಟ ಇಂದು ಬೇಕಾಗಿದೆ. ಜೊತೆ ಜೊತೆಗೆ ಕೋಮುವಾದವನ್ನು ಕಿತ್ತೊಗೆಯುವ ಹೋರಾಟ ಇಂದು ನಮಗೆ ಬೇಕಾಗಿದೆ.

ಭಾರತೀಯ ವಿಚಾರವಾದವು ಚಾರ್ವಾಕ ದರ್ಶನದ ಬುನಾದಿಯ ಮೇಲೆ ಬೆಳೆದು ಬಂದಿದೆ. ಆದಿಯಲ್ಲಿ ಚಾರ್ವಾಕರು ಮೂಲಭೂತವಾದವನ್ನು ತಾಳ್ಮೆ, ವಾಕ್ ಚತುರತೆ, ವೈಜ್ಞಾನಿಕ ದೃಷ್ಟಿಕೋನದಿಂದ ಎದುರಿಸಿದ್ದಾರೆ. ಆ ಮಾರ್ಗದಲ್ಲಿಯೆ ಬುದ್ಧ, ಬಸವಣ್ಣ, ಅಂಬೇಡ್ಕರ್, ಕೃಷ್ಣಪ್ಪ, ಕುವೆಂಪು ಮೊದಲಾದವರು ಮುಂದೆ ಸಾಗಿ ಪುರೋಹಿತ ಶಾಹಿಯನ್ನು ಎದುರಿಸಿದ್ದಾರೆ. ಈ ಪರಂಪರೆಯ ಅರಿವು ನಮಗೆ ಇಂದು ತುಂಬಾ ಅಗತ್ಯವಿದೆ. ನಮ್ಮ ನೆಲದಲ್ಲಿ ಬೆಳೆದು ಬಂದ ಪರಂಪರೆಯಿಂದ ನಮ್ಮ ರಾಷ್ಟ್ರ ರಾಜ್ಯದಲ್ಲಿ ಕೋಮು 'ಸಾಮರಸ್ಯ, ವರ್ಗ ಸಾಮರಸ್ಯವನ್ನು ಸಾಧಿಸ ಬೇಕಾಗಿದೆ. ಅನ್ಯ ಸಿದ್ಧಾಂತ ಆದರ್ಶಗಳು ಭಾರತೀಯ ವಿಚಾರವಾದಿಗಳನ್ನು ಸರಿದಾರಿಗೆ ಕೊಂಡೊಯ್ಯುವ ಬದಲು ದಿಕ್ಕು ತಪ್ಪಿಸುವುದೇ ಹೆಚ್ಚು

ಆಧುನಿಕ ಕಾಲದಲ್ಲಿ ಕೋಮುವಾದ ಎಂಬುದು ಅತ್ಯಂತ ಸೂಕ್ಷ್ಮವಾಗಿದೆ. ಇದೇ ಕೋಮುವಾದ ಇದು ಅಲ್ಲವೆಂದು ಥಟ್ಟನೆ ನಿರ್ಧರಿಸುವುದು ಕಷ್ಟವಾಗುತ್ತದೆ. ಭಾರತದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಬೌದ್ಧ, ಜೈನ, ಪಾರ್ಸಿ ಇವೇ ಮೊದಲಾದ ಧರ್ಮೀಯರಲ್ಲದೆ ಧರ್ಮದ ಚೌಕಟ್ಟಿನಿಂದ ಹೊರಗಿದ್ದು ತಮ್ಮದೇ ಆದ ಸಂಸ್ಕೃತಿಯ ಅಡಿಯಲ್ಲಿ ಜೀವಿಸುತ್ತಿರುವ ನೂರಾರು ಬುಡಕಟ್ಟುಗಳ ಜನರೂ ಇದ್ದಾರೆ. ಅವರವರ ಧರ್ಮ, ಅವರವರ ಸಂಸ್ಕೃತಿ ಅವರವರಿಗೆ ಶ್ರೇಷ್ಠ. ತಮ್ಮ ಧರ್ಮದ ಆಚರಣೆಗಳು ಮಾತ್ರ ಶ್ರೇಷ್ಠವೆಂದು ಭಾವಿಸುವುದು, ಇತರ ಧರ್ಮದ ಆಚರಣೆಗಳನ್ನು ದ್ವೇಷಿಸುವುದು ಮೂಲಭೂತವಾದ ಎನಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಎಲ್ಲಾ ಧರ್ಮಗಳಲ್ಲಿಯೂ ಮೂಲಭೂತವಾದಿಗಳಿದ್ದಾರೆ. ವಿಚಾರವಾದಿ ಎಲ್ಲಾ ಧರ್ಮದ ಮೂಲಭೂತವಾದವನ್ನು ಖಂಡಿಸಬೇಕಾಗುತ್ತದೆ. ಏಕೆಂದರೆ, ಮೂಲಭೂತವಾದ ಯಾವುದೇ ಧರ್ಮದಲ್ಲಿರಲಿ ಅದು ಪ್ರಗತಿಗೆ ಮಾರಕವಾಗಿರುತ್ತದೆ.

ಇಂದು ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಸುಳಿಯ ಕೇಂದ್ರದಲ್ಲಿ ಜನ ಸಮುದಾಯಗಳು ಸಿಲುಕಿವೆ. ಈ ಸ್ಥಿತಿಯನ್ನು ಎದುರಿಸಲು ಬೇಕಾಗುವ ಇಚ್ಛಾಶಕ್ತಿಯಾಗಲೀ, ಪ್ರಾಮಾಣಿಕತೆ, ದಕ್ಷತೆಯಾಗಲೀ ಭಾರತೀಯ ಅಧಿಕಾರಶಾಹಿ ಮತ್ತು ರಾಜಕೀಯ ಧುರೀಣರುಗಳಲ್ಲಿ ಇಲ್ಲ. ಇಂತಹ ಸಂದಿಗ್ಧ ಕಾಲದಲ್ಲಿ ವಿಚಾರವಾದಿಗಳು ಜನಸಮುದಾಯಗಳಿಗೆ ಜಾಗತೀಕರಣದ ತೀವ್ರತೆಯನ್ನು ತಿಳಿಹೇಳಿ ಪ್ರಜ್ಞಾವಂತರಾನ್ನಾಗಿ ಮಾಡುವ ನಿಟ್ಟಿನಲ್ಲಿ ಸಕ್ರಿಯರಾಗಬೇಕು. ಅದಕ್ಕಾಗಿ ಆಯ್ದುಕೊಳ್ಳುವ ಮಾರ್ಗವು ಅತ್ಯಂತ ಜವಾಬ್ದಾರಿಯುತವಾಗಿರಬೇಕು. ಸರ್ವ ಸಮ್ಮತವು, ಜನಹಿತ ಕಾರಿಯು, ಅಪ್ಪಟ ಶುದ್ಧವೂ ಅಹಿಂಸಾತ್ಮಕವೂ ಆಗಿರಬೇಕು. ಅಂತಹ ಮಾರ್ಗವನ್ನು ಅನುಸರಿಸುವುದರ ಮೂಲಕ ವಿಚಾರವಾದದ ಪರಂಪರೆಯನ್ನು ಉಳಿಸಿ ಬೆಳೆಸಿ ಜನಸಮುದಾಯದ ಹಿತರಕ್ಷಣೆ ಮಾಡಬೇಕಾಗಿದೆ. ಜನಹಿತದಲ್ಲಿ ಸರ್ವರ ಹಿತವೂ ಇದೆ. ಇದೇ ಕುವೆಂಪು ಹೇಳುವ ಸರ್ವೋದಯ, ಸಮನ್ವಯ ತತ್ವದ ಸಾರ.

□



ಮುಸ್ಲಿಂ ನಿಖಾನಾಮಾಕ್ಕೆ ನೂತನ ಭಾಷ್ಯ ಬರೆದ ಮಹಿಳೆಯರು

ಮಹಿಳೆ

ಭಾರತದಲ್ಲಿ ಮುಸ್ಲಿಂ ಪರ್ಸನಲ್ ಲಾ ಬಹಳ ಹಿಂದಿನಿಂದಲೇ ಜಾರಿಯಿದೆ. ಮೊಗಲರ ಕಾಲದಲ್ಲಿದ್ದ 'ಲಾ ಆಫ್ ದಿ ಲ್ಯಾಂಡ್' ಇಸ್ಲಾಮೀ ನಿಯಮವೇ ಆಗಿತ್ತು. ಸಿವಿಲ್, ಕ್ರಿಮಿನಲ್ ಲಾ ಕೂಡ ಇಸ್ಲಾಮೀ ಕಾನೂನೇ ಆಗಿತ್ತು. ಅವರ ವರ ಧರ್ಮ, ಧಾರ್ಮಿಕ ಕಾನೂನು ಆಚರಿಸುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ೧೭೬೫ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಭಾರತದ ನ್ಯಾಯಾಂಗವನ್ನು ಪುನರ್ ರೂಪಿಸಿತು. ನಂತರ ಕ್ರಮೇಣ ಬ್ರಿಟಿಷ್ ಕಾನೂನುಗಳು ಜಾರಿ ಮಾಡುತ್ತ ಇಸ್ಲಾಮಿನ ಕಾನೂನುಗಳನ್ನು ತೆಗೆದು ಹಾಕಲಾಯಿತು. ೧೮೬೨ರಲ್ಲಿ ಇಸ್ಲಾಮೀ ದಂಡ ಸಂಹಿತೆಗೆ ಪರ್ಯಾಯವಾಗಿ 'ಇಂಡಿಯನ್ ಪೀನಲ್ ಕೋಡ್'ನ್ನು ಜಾರಿಗೊಳಿಸಲಾಯಿತು.

○ ಕೆ. ಷರೀಫಾ

ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು ಪರಿಷ್ಕರಿಸಿರುವ ಮದುವೆಯ ಒಪ್ಪಂದದ ಉಯಿಲ (ನಿಖಾನಾಮಾ)ನ್ನು ತಿರಸ್ಕರಿಸಿ, ತಮ್ಮದೇ ಸ್ವಯಂ ರಚನೆಯ ಉಯಿಲಿನ ಮೂಲಕ ಮಹಿಳಾ ಹಕ್ಕುಗಳ ಒಕ್ಕೂಟಹುಕೂಕ್–ಎ–ನಿಸ್ವಾನ್ ನಿಖಾದ (ಮದುವೆಯ) ಒಪ್ಪಂದಗಳನ್ನು ನವೀಕರಿಸಿಕೊಂಡಿದೆ. ಈ ಹುಕೂಕ್–ಎ–ನಿಸ್ವಾನ್ ಮಹಿಳಾ ಹಕ್ಕುಗಳ ಒಕ್ಕೂಟವು ಸುಮಾರು 20 ಮಹಿಳಾ ಸಂಘಟನೆಗಳ ಗುಂಪುಗಳನ್ನೊಳಗೊಂಡು ಸುದೀರ್ಘ ಚರ್ಚೆ, ವಿಮರ್ಶೆಯ ನಂತರ ಈ 'ನೂತನ ನಿಖಾನಾಮಾ'ವನ್ನು ರಚಿಸಿದೆ. ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು (ಅಭಾಮುವೈಕಾಮಂ) ಪರಿಷ್ಕರಿಸಿ ಆಚರಣೆಗೆ ತರಲು ನಿರ್ಧರಿಸಿದ್ದ 'ನಿಖಾ ನಾಮಾ'ದಲ್ಲಿ ವಿಭಾಗ 5 ರ(vii)ರಲ್ಲಿ ಅದು ವರನಿಗೆ ಹೇಳುತ್ತದೆ: 'ಜಹಾಂ ತಕ್ ಮುಮ್‌ಕಿನ್ ಹೊ ಏಕ ವಖ್ತ ಮೇ ತೀನ್ ತಲ್ಲಾಖ್ ದೇನೆ ಸೇ ಬಚಾನಾ'. ಅಂದರೆ ಒಂದೇ ಉಸುರಿಗೆ ಮೂರು ಬಾರಿ ತಲ್ಲಾಖ್ ಹೇಳುವದನ್ನು 'ಸಾಧ್ಯವಾದಷ್ಟು' ತಡೆಯಬೇಕು ಎಂದು ಹೇಳುತ್ತದೆ. ಈ 'ಸಾಧ್ಯವಾದಷ್ಟು' ಎಂದು ಹೇಳುವಲ್ಲಿ ಸ್ತ್ರೀವಿರೋಧಿಯಾಗುತ್ತದೆ, ಕುರಾನಿನಲ್ಲಿ ಹೇಳಿರುವುದಕ್ಕೆ ವಿರುದ್ಧವಾಗುತ್ತದೆ. ಗಂಡಸಿಗೆ ಪ್ರಶ್ನಾತೀತ ಹಕ್ಕುಗಳನ್ನು ನೀಡಿ ಸ್ತ್ರೀಯರ ಹಕ್ಕುಗಳನ್ನು ಕಿತ್ತುಕೊಂಡು, ಸಮಾನತೆ ಮತ್ತು ನ್ಯಾಯಕ್ಕೆ ವಿರುದ್ಧವಾಗುತ್ತದೆ.

ಭಾರತದಲ್ಲಿ ಮುಸ್ಲಿಂ ಪರ್ಸನಲ್ ಲಾ ಬಹಳ ಹಿಂದಿನಿಂದಲೇ ಜಾರಿಯಿದೆ. ಮೊಗಲರ ಕಾಲದಲ್ಲಿದ್ದ 'ಲಾ ಆಫ್ ದಿ ಲ್ಯಾಂಡ್" ಇಸ್ಲಾಮೀ ನಿಯಮವೇ ಆಗಿತ್ತು. ಸಿವಿಲ್, ಕ್ರಿಮಿನಲ್ ಲಾ ಕೂಡ ಇಸ್ಲಾಮೀ ಕಾನೂನೇ ಆಗಿತ್ತು. ಅವರವರ ಧರ್ಮ, ಧಾರ್ಮಿಕ ಕಾನೂನು ಆಚರಿಸುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. 1765ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಭಾರತದ ನ್ಯಾಯಾಂಗವನ್ನು ಪುನರ್ ರೂಪಿಸಿತು. ನಂತರ ಕ್ರಮೇಣ ಬ್ರಿಟಿಷ್ ಕಾನೂನುಗಳು ಜಾರಿ ಮಾಡುತ್ತ ಇಸ್ಲಾಮಿನ ಕಾನೂನುಗಳನ್ನು ತೆಗೆದು ಹಾಕಲಾಯಿತು. 1862ರಲ್ಲಿ ಇಸ್ಲಾಮೀ ದಂಡ ಸಂಹಿತೆಗೆ ಪರ್ಯಾಯವಾಗಿ 'ಇಂಡಿಯನ್ ಪೀನಲ್ ಕೋಡ್'ನ್ನು ಜಾರಿಗೊಳಿಸಲಾಯಿತು.

ಇಂಡಿಯನ್ ಪೀನಲ್ ಕೋಡ್ ಜಾರಿಯಾದರೂ ಸಹ ನಿಖಾಹ್, ತಲ್ಲಾಖ್, ಖುಲಾ, ಪ್ರಿತ್ರಾರ್ಜಿತ ಆಸ್ತಿ ಹಂಚಿಕೆ ಇತ್ಯಾದಿ ಕೌಟುಂಬಿಕ ಹಾಗೂ ವೈಯಕ್ತಿಕ ವಿಷಯಗಳಲ್ಲಿ ಇಸ್ಲಾಮೀ ನಿಯಮಗಳನ್ನೇ ಮುಂದುವರಿಸಲಾಯಿತು. ಮುಸ್ಲಿಂ ವಿದ್ವಾಂಸರು ಮತ್ತು ಜನಸಾಮಾನ್ಯರ ಒತ್ತಾಯದ ಮೇರೆಗೆ ಬ್ರಿಟಿಷರು 1937ರಲ್ಲಿ 'ಮುಸ್ಲಿಂ ವ್ಯಕ್ತಿ ನಿಯಮ'ವನ್ನು ಜಾರಿಗೊಳಿಸಿದರು. ಇದನ್ನು ಷರೀಯತ್ ಆಕ್ಟ್ ಎಂದೂ ಕರೆಯುತ್ತಾರೆ. ಇದು ಮುಸ್ಲಿಮರಿಗೆ ಸಂಬಂಧಿಸಿದ ವಿವಾಹ, ಮೇಹರ್, ಜೀವನಾಂಶ, ತಲಾಖ್, ಖುಲಾ, ವಿಲಾಯತ್(ಪೋಷಕ ಹಕ್ಕು) ವಿರಾಸತ್ (ಪಿತ್ರಾರ್ಜಿತ ಆಸ್ತಿ ವಿವರಣೆ) ಹಿಬ (ಉಂಬಳಿ) ಮತ್ತು ದತ್ತಿಸೊತ್ತು (ವಕ್ಫ್) ಇತ್ಯಾದಿ ಕುರಿತು ಕಾನೂನನ್ನು ಮುಸ್ಲಿಂ ವೈಯಕ್ತಿಕ ಕಾನೂನು (ಷರೀಯತ್) ಒಳಗೊಂಡಿದೆ. ಆದರೆ ಟರ್ಕಿ ಮತ್ತು ಅಲ್ಬೇನಿಯಾಗಳಲ್ಲಿ ಮುಸ್ಲಿಮರು ಜ್ಯಾತ್ಯತೀತ ಸ್ವರೂಪದ ಪೌರ ನಿಯಮಗಳನ್ನು ಜಾರಿಗೊಳಿಸುವ ಸಾಹಸ ತೋರಿದ್ದಾರೆ. ಟರ್ಕಿಯಲ್ಲಿ 1927ರಿಂದ ಜ್ಯಾತ್ಯತೀತ ಪೌರ ನಿಯಮಗಳನ್ನು ಜಾರಿಗೆ ತರಲಾಗಿದೆ. ಭಾರತದಲ್ಲಿ ಬ್ರಿಟಿಷರೇ 1937ರಲ್ಲಿ ಜಾರಿಗೊಳಿಸಿದ 'ಮುಸ್ಲಿಂ ಪರ್ಸನಲ್ ಲಾ' ಜಾರಿಯಲ್ಲಿದೆ.

ಭಾರತದ ಸಂವಿಧಾನ, ಬ್ರಿಟಿಷರ ಕಾನೂನು ಏನೇ ಹೇಳಲಿ – ಒಬ್ಬ ನಿಜವಾದ ಮುಸ್ಲಿಂ ತಲ್ಲಾಖ್ ಅನ್ನು ವಿರೋಧಿಸುತ್ತಾನೆ. ಏಕೆಂದರೆ ತಲ್ಲಾಖ್ ಅಲ್ಲಾಹ್‌ನಿಗೆ ಪ್ರೀಯವಾದುದಲ್ಲವೆಂದು ಪೈಗಂಬರರು ಹೇಳುತ್ತಾರೆ. ಅನೇಕ ತಲ್ಲಾಖ್‌ನ ಪ್ರಕರಣಗಳನ್ನು ನಾವು ಇಂದು ನೋಡುತ್ತಿದ್ದೇವೆ. ಆದರೆ ಅವು ಯಾವುವೂ ಇಸ್ಲಾಂನ ಪ್ರಕಾರ ಜಾರಿಗೆ ಬರುವುದಿಲ್ಲ. ಇಸ್ಲಾಂ ಯಾವತ್ತೂ ಮಹಿಳೆಯರ, ಮಕ್ಕಳ, ಬಡವರ ಮತ್ತು ಅನಾಥರ ಪರವಾಗಿದೆ – ಅವರ ಹಿತಗಳನ್ನು ಯಾವತ್ತು ಕಾಪಾಡುತ್ತದೆ. ಕುರಾನ್ ಮಹಿಳೆಯರ ಸ್ವಾತಂತ್ರ್ಯ ಮತ್ತು ಆಸ್ತಿಯಲ್ಲಿ ಹಕ್ಕುನೀಡಿದ ವಿಶ್ವದ ಮೊದಲ ಧರ್ಮ ಗ್ರಂಥವಾಗಿದೆ. ಧರ್ಮದ, ಪವಿತ್ರ ಗ್ರಂಥದ ವ್ಯಾಖ್ಯಾನಗಳನ್ನು ತಮ್ಮ ಸ್ವಾರ್ಥಕ್ಕೆ ತಕ್ಕಂತೆ ಅರ್ಥೈಸುವ ಸ್ವಾರ್ಥಿಗಳಿಂದಾಗಿ ಇಂದು ಮುಸ್ಲಿಂ ಮಹಿಳೆ ತನ್ನವರಿಂದಲೇ ಸಂಕಷ್ಟಕ್ಕೀಡಾಗಿದ್ದಾಳೆ.

ಇಂದು ಮುಸ್ಲಿಂ ಮಹಿಳೆ ಇದನ್ನೆಲ್ಲ ಅರಿತು – ತನ್ನ ಕಾನೂನನ್ನು ತಾನೇ ರಚಿಸಿಕೊಳ್ಳುತ್ತಿರುವುದು ಅವಳಲ್ಲಿ ಅರಿವು ಮೂಡುತ್ತಿರುವದರ ಪ್ರತೀಕವಾಗಿದೆ. ಫೋನ್ ಮೂಲಕ ತಲ್ಲಾಖ್ ನೀಡುವದನ್ನು, ಇಂಟರ್‌ನೆಟ್ ಮೂಲಕ, ಪತ್ರಿಕಾ ಹೇಳಿಕೆ ನೀಡುವುದರ ಮೂಲಕ, ಪತ್ರ ಬರೆದು ತಿಳಿಸುವುದರ ಮೂಲಕ ತಲ್ಲಾಖ್ ನೀಡುತ್ತಿರುವುದನ್ನು ಹಾಗೂ ರಾತ್ರಿ ಕುಡಿದು ಅಮಲಿನಲ್ಲಿ ಮೂರು ಬಾರಿ ತಲ್ಲಾಖ್ ಹೇಳುವದನ್ನು ಧರ್ಮಸಮ್ಮತ ಎಂದು ಹೇಳುತ್ತಿರುವ ಸ್ವಾರ್ಥಿಗಳನ್ನು ಇಂದು ಪ್ರಶ್ನಿಸುತ್ತಿದ್ದಾಳೆ.

ಭಾರತದ ಮುಸ್ಲಿಂ ಪಟ್ಟಭದ್ರರನ್ನು ಓಲೈಸಲು 1986ರಲ್ಲಿ ರಾಜೀವ್‌ಗಾಂಧಿ ನೇತೃತ್ವದ ಸರ್ಕಾರ – ಮುಸ್ಲಿಂ ಮಹಿಳೆಯರ ವಿವಾಹ ವಿಚ್ಛೇದನ ಹಕ್ಕು ರಕ್ಷಣೆಗಾಗಿ ಕಾಯ್ದೆಯೊಂದನ್ನು ಜಾರಿಗೊಳಿಸಿತು. ಈ ಕಾಯ್ದೆ ಮಹಿಳೆಯರ ಆತ್ಮಗೌರವವನ್ನು ಹಿಸುಕಿ – ಬೀದಿ ಭಿಕ್ಷುಕಿಯನ್ನಾಗಿಸಿತು. ಆದರು ಇಂದು ಹುಕೂಕ್–ಎನಿಸ್ವಾನ್ ಮಹಿಳೆಯರು ಇದನ್ನೆಲ್ಲ ಧಿಕ್ಕರಿಸಿ ಮಾನವೀಯವಾದ ಇಸ್ಲಾಂ ಧರ್ಮವನ್ನು ಎತ್ತಿ ಹಿಡಿಯಲು ಮುಂದಾಗಿದ್ದಾರೆ. ಇಸ್ಲಾಂನ ಪ್ರವರ್ತಕರಾದ ಪೈಗಂಬರರು ಸ್ಥಾಪಿಸಿದ ಇಸ್ಲಾಂ ಧರ್ಮದ ಮೊದಲ ಅನುಯಾಯಿ ಕೂಡ ಒಬ್ಬ ಮಹಿಳೆಯೇ ಆಗಿದ್ದರು. ಅವರು–ಬೀವಿ ಖತೀಜಾ ಎಂಬುದನ್ನು ಧರ್ಮವನ್ನು ಸ್ವಾರ್ಥಕ್ಕೆ ತಕ್ಕಂತೆ ತಿರುಚಿಕೊಳ್ಳುವ ಧರ್ಮ–ಪಂಡಿತರುಗಳು ಮನವರಿಕೆ ಮಾಡಿಕೊಳ್ಳಬೇಕಿದೆ.

ನಿರಕ್ಷರಿ ಮತ್ತು ೭೨ ವರ್ಷದ, ಸೊಸೆ, ಮೊಮ್ಮಕ್ಕಳನ್ನು ಹೊಂದಿರುವ ಷಾಬಾನು ತಲ್ಲಾಖ್ ಬಯಸಿದ್ದಳೆ? ಗಂಡಸಿನ ಸ್ವಾರ್ಥಕ್ಕೆ ಅವಳು ಬಲಿಯಾಗಲಿಲ್ಲವೆ? ನೀಚ ಜಾತಿ ರಾಜಕಾರಣಕ್ಕೆ ಅವಳು ಬಲಿಯಾಗಲಿಲ್ಲವೆ? ಪೈಗಂಬರರು ಮುಸ್ಲಿಂ ಮಹಿಳೆಯರ ಗೌರವ–ಘನತೆಗಳಿಗಾಗಿ ನಡೆಸಿದ ಪ್ರಯತ್ನ ಅಗಾಧವಾಗಿದೆ. ಅವಳಿಗೆ ಗೌರವದ ಮತ್ತು ಭದ್ರ ಬದುಕನ್ನು ನೀಡಲು ಕುರಾನ್ ಚಿಂತಿಸಿದೆ. ಪೈಗಂಬರರ ಪ್ರಯತ್ನಗಳು, ಕುರಾನಿನ ಉಕ್ತಿಗಳು ಮಹಿಳೆಯರಿಗೇ ತಿರುಗುಬಾಣವಾಗಿ ಮಾಡುತ್ತಿರುವ ಕುತಂತ್ರಗಳು ಐತಿಹಾಸಿಕ ದುರಂತವಾಗಿದೆ. ದಾರಿ ತಪ್ಪಿಸುವ ಧರ್ಮಲಂಪಟರೇ ಧರ್ಮದ ಮುಖವಾಡದ ಮರೆಯಲ್ಲಿ ಮುಂದೆ ನಿಂತಿದ್ದಾರೆ. ಮಹಿಳೆಯರಿಗೆ ರಕ್ಷಣೆ ನೀಡುವ ಬದಲು ಅವಳಿಗೆ ಅನ್ಯಾಯ ಮಾಡುತ್ತಿದ್ದಾರೆ.

ಒಬ್ಬ ನಿಜವಾದ ಮುಸ್ಲಿಂ ತನ್ನ ಹೆಂಡತಿಗೆ ತಲ್ಲಾಖ್ ನೀಡಲು ಸಾಧ್ಯವಾಗುವುದೇ ಇಲ್ಲ. ಏಕೆಂದರೆ 'ಅಲ್ಲಾಹ ಅನುಮತಿ ನೀಡಿದ ಎಲ್ಲವುಗಳಲ್ಲಿ ಆತ ಅತೀವವಾಗಿ ತಿರಸ್ಕರಿಸುವದೆಂದರೆ ತಲ್ಲಾಖ್'ನ್ನು ಮಾತ್ರ ಎಂದು ಪೈಗಂಬರರು ಹೇಳುತ್ತಾರೆ – ಅಂದ ಮೇಲೆ ಒಬ್ಬ ನಿಜವಾದ ಮುಸ್ಲಿಂ ತನ್ನ ಹೆಂಡತಿಗೆ ತಲ್ಲಾಖ್ ನೀಡಲು ಸಾಧ್ಯವಾಗುವುದಿಲ್ಲ. ಇಸ್ಲಾಂನ 'ಹದೀಸ್'ನಲ್ಲಿ ಹೇಳಲಾಗಿದೆ: 'ಯಾರು ತಮ್ಮ ಹೆಂಡಂದಿರ ಮೇಲೆ ಅತೀವ ಕರುಣೆಯುಳ್ಳವರಾಗಿರುತ್ತಾರೋ ಅವರೇ ನಮ್ಮೊಳಗಿನ ಶ್ರೇಷ್ಠರು'. ನಿಷ್ಕರುಣಿಗಳಂತೆ ತಲ್ಲಾಖ್ ಅನ್ನು ಬೆಂಬಲಿಸುವ ಗಂಡಸರನ್ನು ಏನೆನ್ನಬೇಕು? ಪೈಗಂಬರರ ಸಂದೇಶಗಳನ್ನೊಳಗೊಂಡ ಹದೀಸನ್ನು ತಿರುಚಿ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವ ಪಾತಕಿಗಳನ್ನು ಇಸ್ಲಾಂ ಕ್ಷಮಿಸುವುದಿಲ್ಲ.

ಆಗಿನ ಇಸ್ಲಾಂ ಪೂರ್ವದ ದಿನಗಳಲ್ಲಿ ಹೆಣ್ಣು ಮಕ್ಕಳನ್ನು ಕಠೋರವಾಗಿ ನಡೆಸಿಕೊಳ್ಳುವುದು, ಹೆಂಡಂದಿರನ್ನು ಹೊರಹಾಕುವದು, ಸೂಳೆಗಾರಿಕೆ ಮಾಡುವುದು ಅರಬರ ಸಂಸ್ಕೃತಿಯಾಗಿತ್ತು. ಅದಕ್ಕೆ ಪೈಗಂಬರರು ಕುರಾನಿನ 4ನೇ ಅಧ್ಯಾಯದ 1ನೇ ಸೂಕ್ತಿಯಲ್ಲಿ ಹೇಳುತ್ತಾರೆ: 'ಅವರೊಂದಿಗೆ ಕರುಣೆಯಿಂದ ಬದುಕಿರಿ. ನೀವು ಅವರನ್ನು (ನಿಮ್ಮ ಹೆಂಡಂದಿರನ್ನು) ತಿರಸ್ಕರಿಸಿದರೆ ದೇವರು ಕೊಟ್ಟ ಒಳ್ಳೆಯದನ್ನೇ ನೀವು ತಿರಸ್ಕರಿಸುತ್ತಿರಬಹುದು'. ಮನ ಬಂದಂತೆ ಹೆಂಡಂದಿರನ್ನು ಕಟ್ಟಿಕೊಳ್ಳುವದನ್ನು ಮತ್ತು ಬಿಟ್ಟು ಬಿಡುವುದಕ್ಕೆ ಇಸ್ಲಾಮ್‌ನ ಕುರಾನಿನಲ್ಲಿ ಅವಕಾಶ ವಿರುವುದಿಲ್ಲ.

ಇಸ್ಲಾಂ ಪೂರ್ವದ ದಿನಗಳಲ್ಲಿ ಹೆಣ್ಣು ಮಕ್ಕಳನ್ನು ಕಠೋರವಾಗಿ ನಡೆಸಿಕೊಳ್ಳುವುದು, ಹೆಂಡಂದಿ ರನ್ನು ಹೊರಹಾಕುವದು, ಸೂಳೆಗಾರಿಕೆ ಮಾಡುವುದು ಅರ ಬರ ಸಂಸ್ಕೃತಿಯಾಗಿತ್ತು. ಅದಕ್ಕೆ ಪೈಗಂಬರರು ಕುರಾನಿನ 4ನೇ ಅಧ್ಯಾಯದ 1ನೇ ಸೂಕ್ತಿಯಲ್ಲಿ ಹೇಳುತ್ತಾರೆ: 'ಅವರೊಂದಿಗೆ ಕರುಣೆಯಿಂದ ಬದುಕಿರಿ. ನೀವು ಅವರನ್ನು (ನಿಮ್ಮ ಹೆಂಡಂದಿರನ್ನು) ತಿರಸ್ಕರಿಸಿದರೆ ದೇವರು ಕೊಟ್ಟ ಒಳ್ಳೆಯದನ್ನೇ ನೀವು ತಿರಸ್ಕರಿಸುತ್ತಿರಬಹುದು'. ಮನ ಬಂದಂತೆ ಹೆಂಡಂದಿರನ್ನು ಕಟ್ಟಿಕೊಳ್ಳುವದನ್ನು ಮತ್ತು ಬಿಟ್ಟು ಬಿಡುವುದಕ್ಕೆ ಇಸ್ಲಾಮ್‌ನ ಕುರಾನಿನಲ್ಲಿ ಅವಕಾಶ ವಿರುವುದಿಲ್ಲ.

ಪುರುಷರು ಬಹಳ ಸುಲಭವಾಗಿ ಒಂದು ಹೆಣ್ಣಿಗೆ ನಡತೆಗೆಟ್ಟವಳೆಂಬ ಪಟ್ಟಗಟ್ಟಿ ತಲ್ಲಾಖ್ ನೀಡುವ ಕಾರ್ಯವೂ ನಡೆಯುತ್ತಿರುತ್ತದೆ. ಅದಕ್ಕೆ ಕುರಾನಿನಲ್ಲಿ ಗಂಡನಾದವನು ತಲ್ಲಾಖ್ ನೀಡುವದಕ್ಕಾಗಿಯೇ ಹೆಂಡತಿಯ ಮೇಲೆ ಸುಳ್ಳು ಆರೋಪ ಹೊರಿಸುವವನನ್ನು, ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಲು ತಿಳಿಸುತ್ತದೆ. ಕುರಾನಿನ 24ನೇ ಅಧ್ಯಾಯದ 4ನೇ ಸೂರಃನಲ್ಲಿ. 'ಪತಿವ್ರತೆಯರಾದ ಸ್ತ್ರೀಯರ ಮೇಲೆ ಯಾರು ಆರೋಪ ಹೊರಿಸುತ್ತಾರೋ ಮತ್ತು ನಾಲ್ಕು ಮಂದಿ ಸಾಕ್ಷಿದಾರರನ್ನು ಅವರು ತರುವುದಿಲ್ಲವೋ ಅವರಿಗೆ ೮೦ ಬಾರೇಟುಗಳನ್ನು ಹೊಡೆಯಿರಿ. ಅವರ ಸಾಕ್ಷಿಗಳನ್ನು ಸ್ವೀಕರಿಸಬೇಡಿರಿ. ಅವರೇ ಧರ್ಮಭ್ರಷ್ಟರು' ಎಂದು ಹೇಳುತ್ತದೆ.

ಇಂತಹ ಸ್ತ್ರೀ ಪರವಾದ ಕುರಾನ್ ಎಂದಿಗೂ ಸ್ತ್ರೀ ವಿರೋಧಿಯಲ್ಲ. ಆದ್ದರಿಂದ ಮಹಿಳಾ ಸಂಘಟನೆಗಳು ಸೇರಿ ರೂಪಿಸಿದ 'ನಿಖಾನಾಮಾ' ಒಂದೇ ಉಸುರಿಗೆ ಮೂರು ತಲ್ಲಾಖ್ ಹೇಳುವದನ್ನು ವಿರೋಧಿಸಿದೆ. ಅದಕ್ಕೆ ಪರ್ಯಾಯವಾಗಿ ಅದು ತನ್ನದೇ ಆದ ಮದುವೆ ಒಪ್ಪಂದವನ್ನು ಸಿದ್ಧಪಡಿಸಿದೆ. ಈಗಾಗಲೇ ಈ ಒಪ್ಪಂದವನ್ನು ಒಪ್ಪಿದ 10 ಜೋಡಿಗಳು ತಮ್ಮ ನಿಖಾವನ್ನು ನವೀಕರಿಸಿಕೊಂಡಿವೆ. ಇದರಲ್ಲಿ ಒಬ್ಬರಾದ ಫಾತಿಮಾ ಖುರೇಶಿ 'ಮುಸ್ಲಿಂ ಮಹಿಳೆಯರಿಗೆ ಅವರದೇ ಆದ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ಇದು ನೀಡುತ್ತದೆ. ಹಾಗಾಗಿ ನಾನ್ನು ಈ ನಿಖಾನಾಮಾದತ್ತ ಆಕರ್ಷಿತಳಾಗಿದ್ದೇನೆ' ಎನ್ನುತ್ತಾರೆ. 48 ವರ್ಷ ವಯಸ್ಸಿನ ಶೇಖ್‌ರವರು 'ತಾವು 17 ವರ್ಷದ ವಯಸ್ಸಿನಲ್ಲಿ ಮದುವೆಯಾದಾಗ ಕೇವಲ ರೂ.125/– ಗಳ ವಧುದಕ್ಷಿಣೆ(ಮೆಹರ್) ಪಡೆದಿದ್ದೆ. ಆದರೆ ಈ ಹೊಸ ಸ್ವಯಂರಚಿತ ಉಯಿಲಿನ ಪ್ರಕಾರ ರೂ.25,000/– ವಧುದಾಕ್ಷಣೆ ಪಡೆದಿದ್ದೇನೆ' ಎನ್ನುತ್ತಾರೆ.

ಹೊಸ ನಿಖಾನಾಮಾಕ್ಕೆ ಭಾಷ್ಯ ಬರೆಯಲು ಮುಂದಾದ ಮುಸ್ಕಾನ್ ತೊರೆ ಮುಂಬೈಯಲ್ಲಿ ತುಂಬಿದ ಪತ್ರಿಕಾಗೋಷ್ಠಿಯಲ್ಲಿ ಹೇಳುತ್ತಾರೆ, 'ನಾವು ಮಹಿಳೆಯರು ನಮ್ಮ ಹಕ್ಕುಗಳಿಗಾಗಿ ಹೋರಾಡುತ್ತೇವೆ'. ಇವರು 2005ರ ಮೇ

ಒಂದನೇ ದಿನಾಂಕದಂದು ಭೋಪಾಲ್‌ನಲ್ಲಿ ನಡೆದ ಸಮಾವೇಶದಲ್ಲಿ ಈ ಹೊಸ ನಿಖಾನಾಮಾವನ್ನು ಬಿಡುಗಡೆ ಗೊಳಿಸಿದರು. ಇದರ ಪ್ರಕಾರ ವಧುವರರಿಬ್ಬರೂ ತಲಾಖ್ ಅಥವಾ ಖುಲಾ ನೀಡಬೇಕಾದರೆ ಸಾಕಷ್ಟು ಸಾಕ್ಷಿಗಳನ್ನು ನೀಡ ಬೇಕಾಗುತ್ತದೆ.

ಕುರಾನ್ ಸ್ತ್ರೀ-ಪುರುಷರಿಬ್ಬರನ್ನು ಸಮಾನವಾಗಿ ನೋಡುತ್ತದೆ. ಅವರಿಬ್ಬರೂ ಒಬ್ಬರನ್ನೊಬ್ಬರು ಗೌರವಿಸ ಬೇಕೆಂದು ಹೇಳುತ್ತದೆ. ಆದರೆ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಲಿಯು, ಒಬ್ಬ ಹೆಣ್ಣಿಗೆ ನಿಂತ ಕಾಲ ಮೇಲೆಯೇ ಮೂರು ಬಾರಿ ತಲ್ಲಾಖ್ ಹೇಳಿ ಕಟ್ಟಿಕೊಂಡ ಹೆಂಡತಿಯನ್ನು, ಮಕ್ಕಳನ್ನು ಅಸಹಾಯಕ ಸ್ಥಿತಿಯಲ್ಲಿ ಬೀದಿಗಟ್ಟುವ ಪಾತಕ ವನ್ನು ತಪ್ಪು ಎಂದು ಖಡಾಖಂಡಿತವಾಗಿ ಹೇಳುವ ಧೈರ್ಯ ತೋರದಿರುವುದೇ ಈ ಮಹಿಳೆಯರ ಕೋಪಕ್ಕೆ ಕಾರಣ.

ಮುಸ್ಲಿಂ ಮಹಿಳೆಯರು ರಚಿಸಿಕೊಂಡಿರುವ ಈ ನಿಖಾನಾಮಾದ ಪ್ರಕಾರ ವಧುವಿಗೆ ನೀಡಲಾಗುವ ಮೆಹರನ್ನು ವಾಪಸ್ಸು ಪಡೆಯಲಾಗುವದಿಲ್ಲ. ಮೆಹರ್‌ನ ಹಣದ ಮೇಲೆ ವಧುವಿನದೇ ಅಧಿಕಾರವಿರುತ್ತದೆ. ಮದುವೆ ದಲ್ಲಾಲಿಗಳ ಮತ್ತು ಮಧ್ಯವರ್ತಿಗಳ ಕಾಟವೇ ಇರುವದಿಲ್ಲ. ಹೆಣ್ಣು ಗಂಡು ಇಬ್ಬರ ಕಡೆಯವರು ಸಮ್ಮತಿಸುವವರೆಗೂ ವಿಚ್ಛೇದನ ಕನಸಿನ ಮಾತಾಗುತ್ತದೆ.

ಹುಕೂಕ - ಎ - ನಿಸ್ವಾನ್ ಸಂಘಟನೆಯು ತಲ್ಲಾಖಿನ ಸರಳೀಕರಣವನ್ನು ಬಿಗಿಗೊಳಿಸಲು ಕೇಳುತ್ತದೆ. ಸರಳೀಕೃತ ತಲ್ಲಾಖನ್ನು ಕುರಾನ್ ಅನುಮತಿಸುವದಿಲ್ಲ. ಶಿಯಾ ಮುಸ್ಲಿಮರೂ ಮತ್ತು ಅನೇಕ ಇಸ್ಲಾಮಿಕ್ ರಾಷ್ಟ್ರಗಳೂ ನಿಂತ ನಿಲುವಿನಲ್ಲೇ ಮೂರು ಬಾರಿ ತಲ್ಲಾಖ್ ಹೇಳುವುದನ್ನು ವಿರೋಧಿಸುತ್ತವೆ. ಪಾಕಿಸ್ತಾನ, ಬಾಂಗ್ಲಾದೇಶ, ಇಂಡೋ ನೇಶಿಯಾ, ಇರಾನ್, ಇರಾಕ್, ಮತ್ತು ಟ್ಯುನಿಷಿಯಾ ರಾಷ್ಟ್ರಗಳೂ ಸಹ ಇದನ್ನು ವಿರೋಧಿಸುತ್ತವೆ.

ಮುಸ್ಲಿಂ ಸಮುದಾಯದ ಒಂದು ಸಾಮಾನ್ಯ ಮದುವೆಯ ಸಂಹಿತೆಯೇ ಹೊಸ ನಿಖಾನಾಮಾ. ಇದು ತಲ್ಲಾಖ್ ಖುಲಾವನ್ನು ಬಿಗಿಗೊಳಿಸುತ್ತದೆ. ಈ ಸಂಹಿತೆಯಲ್ಲಿ ಬಹುಪತ್ನಿತ್ವ ಮತ್ತು ಮಹಿಳೆಯ ಕನಿಷ್ಠ ಮದುವೆಯ ವಯಸ್ಸಿನ ಬಗ್ಗೆ ಮೌನತಾಳಲಾಗಿದೆ. 30 ವರ್ಷದ ಶಮೀಮ್ ಹೇಳುತ್ತಾರೆ, 'ನಾನು ನನ್ನ ಪತಿಗೆ 4 ವರ್ಷಗಳಿಂದ ವಿಚ್ಛೇದನಕ್ಕಾಗಿ ಕೇಳುತ್ತಿದ್ದೇನೆ. ಆದರೆ ಅವನು ಇಲ್ಲಿಯ ವರೆಗೂ ನನಗೆ ಬಿಡುಗಡೆ ನೀಡುತ್ತಿಲ್ಲ. ನನಗೆ ಮದುವೆಯಾಗಿ 12 ವರ್ಷಗಳಾಗಿದೆ, ೨ ಮಕ್ಕಳಿದ್ದಾರೆ. ನನ್ನ ಗಂಡ ಕೆಲಸ ಮಾಡುವುದಿಲ್ಲ ಮತ್ತು ನನಗೂ ಕೆಲಸ ಮಾಡಲು ಅನುಮತಿಸುವದಿಲ್ಲ. ತಂದೆ ತಾಯಿಗಳಿಂದ ಬೇರೆಯವರಿಂದ ಸಾಲ, ಕೈಗಡ ಪಡೆದು ಮಕ್ಕಳಿಗೆ ಊಟ ಹಾಕುತ್ತಿದ್ದೇನೆ, ಸ್ಕೂಲಿಗೆ ಸೇರಿಸಿದ್ದೇನೆ ಹಿಂದಿನ 4 ವರ್ಷಗಳಿಂದ ನನ್ನ ಗಂಡನಿಗೆ, ನನಗೆ ತಲ್ಲಾಖ್ ನೀಡಲು ಕೇಳುತ್ತಿದ್ದರೂ ಅವನು ನೀಡುತ್ತಿಲ್ಲ ಈಗ ನಾನೇನು ಮಾಡಲಿ ಹೇಳಿ? 'ಎಂದು ಖಿನ್ನಳಾಗುತ್ತಾಳೆ ಶಮೀಮ್.

ವೈಯಕ್ತಿಕ ಕಾನೂನು ಮಂಡಲಿಯಲ್ಲಿರುವ ಗಂಡಸರಿಗೆ 'ಮನೆ ಏನೆಂದು ಗೊತ್ತಿಲ್ಲ. ಮಹಿಳೆಯರ ಸಮಸ್ಯೆಗಳೇನೆಂದು ಗೊತ್ತಿಲ್ಲ. ಅವರು ಹೇಗೆ ನಮ್ಮ ಬಗ್ಗೆ ಕಾನೂನು ಮಾಡುತ್ತಾರೆ? ನಾವು ನಮ್ಮದೇ ಆದ ಕಾನೂನು ಮಾಡಿಕೊಳ್ಳುತ್ತೇವೆ. ನಮ್ಮ ಹಕ್ಕುಗಳಿಗೆ ಹೋರಾಡುತ್ತೇವೆ'. ಎಂಬುದು ಭೋಪಾಲ್‌ನಲ್ಲಿ ಸಮಾವೇಶ ಸೇರಿದ ಬಹುತೇಕ ಮಹಿಳೆಯರ ಅಂಬೋಣವಾದರೆ. ವಕೀಲಿ ವೃತ್ತಿಯಲ್ಲಿರುವ ವೀಣಾಗೌಡರ್‌ರವರು ಕುಟುಂಬ ಕೋರ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು 'ಪ್ರಗತಿಪರ ನಿಖಾನಾಮಾ ಮಹಿಳೆಯರಿಗೆ ಕೆಲವು ಹಕ್ಕುಗಳನ್ನು ನೀಡುವಲ್ಲಿ ಪೂರಕವಾಗಿದೆ' ಎನುತ್ತಾರೆ. ಮುಂದುವರೆದು ಮುಸ್ಲಿಂ ಪರ್ಸನಲ್ ಲಾ ಬೋರ್ಡ್‌ನವರು ಕೊನೆಯಪಕ್ಷ ಮುಸ್ಲಿಂ ಸಮುದಾಯಕ್ಕೆ ಒಂದೇ ಬಾರಿಗೆ ಮೂರು ಬಾರಿ ತಲ್ಲಾಖ್ ಹೇಳುವದು ತಪ್ಪು ಎಂಬುದಾದರೂ ಮನವರಿಕೆ ಮಾಡಿಕೊಡಬೇಕು, ಬದಲಾಗಿ ಅದಕ್ಕೆ ಪ್ರೋತ್ಸಾಹಿಸುವುದನ್ನು ನಿಲ್ಲಿಸಬೇಕು' ಎನ್ನುತ್ತಾರೆ.

ಈ ಮಹಿಳೆಯರು ರಚಿಸಿರುವ ನಿಖಾನಾಮಾದ ಉಯಿಲು ಎಲ್ಲರೂ ಇಷ್ಟಪಡುವಂತಿದೆ ಮತ್ತು ಕುರಾನ್ ಸಮ್ಮತವಾಗಿದೆ. 'ಇದು ಆರ್ಥಿಕ ಭಧ್ರತೆ ಮತ್ತು ವಿಚ್ಛೇದನದ ಸಂದರ್ಭದಲ್ಲಿಯೂ ಸಮಾನ ಹಕ್ಕುಗಳನ್ನು ಸ್ತ್ರೀಯರಿಗೆ ನೀಡಿ ಗೌರವಿಸುತ್ತದೆ.' ಎಂಬುದು ಹೊಸ ಮೆಹರ್ ಪದ್ಧತಿ ಯಿಂದಾಗಿ ಆರ್ಥಿಕ ಭಧ್ರತೆ ಪಡೆದಿರುವ ಶೀಕ್‌ರವರ ಅಭಿ ಪ್ರಾಯ. 'ನಾನು ಹಲವಾರು ವಿಚ್ಛೇದನಗಳನ್ನು ಕಂಡಿದ್ದೇನೆ ಅದರ ಭಾವಗಳನ್ನು ಅರ್ಥಮಾಡಿಕೊಂಡಿದ್ದೇನೆ' ಎಂದು ಕೂಡ ಅವರು ಹೇಳುತ್ತಾರೆ.

ಮುಸ್ಲಿಂ ಮಹಿಳೆಯರು ರಚಿಸಿಕೊಂಡಿರುವ ಈ ನಿಖಾನಾಮಾದ ಪ್ರಕಾರ ವಧುವಿಗೆ ನೀಡಲಾಗುವ ಮೆಹರನ್ನು ವಾಪಸ್ಸು ಪಡೆಯಲಾಗುವದಿಲ್ಲ. ಮೆಹರ್‌ನ ಹಣದ ಮೇಲೆ ವಧುವಿನದೇ ಅಧಿಕಾರವಿರುತ್ತದೆ. ಮದುವೆ ದಲ್ಲಾಲಿಗಳ ಮತ್ತು ಮಧ್ಯವರ್ತಿಗಳ ಕಾಟವೇ ಇರುವದಿಲ್ಲ. ಹೆಣ್ಣು ಗಂಡು ಇಬ್ಬರ ಕಡೆಯವರು ಸಮ್ಮತಿಸುವವರೆಗೂ ವಿಚ್ಛೇದನ ಕನಸಿನ ಮಾತಾಗುತ್ತದೆ. ತೊಟ್ಟ ಶರ್ಟನ್ನು ಬಿಚ್ಚಿ ಎಸೆಯುವಂತೆ ಕಟ್ಟಿಕೊಂಡ ಹೆಂಡತಿಯನ್ನೇ ಬಿಸಾಡುವ ಇಸ್ಲಾಂ ವಿರೋಧಿ ಪುರುಷರಿಗೆ ಇದರಿಂದ ಬಿಗಿಯಾದ ಮೂಗುದಾರ ಹಾಕಿದಂತಾಗಿದೆ. ಅದು ಪುರುಷರಿಗೆ ಅವರ ಜವಾಬ್ದಾರಿಗಳ ಬಗ್ಗೆಯೂ ಮನವರಿಕೆ ಮಾಡಿಕೊಡುತ್ತದೆ. ವಿಚ್ಛೇದನಗಳ ಸರಳೀಕರಣವನ್ನು ನಿಯಂತ್ರಿಸುವ ಈ ಮಹಿಳಾ ಸಂಘಟ ನೆಗಳ ನಿಖಾನಾಮಾವು ಧಾರ್ಮಿಕವಾಗಿಯೂ ಇಂದು ಸಮುದಾಯದ ಸಾಮಾನ್ಯ ಸಂಹಿತೆಯಾಗಿದೆ.

ಈ ನಿಖಾನಾಮಾವು ಮುಸ್ಲಿಂ ಮಹಿಳೆಯರ ಎಲ್ಲಾ ಬಗೆಯ ಸಮಸ್ಯಗಳಿಗೆ ಪರಿಹಾರ ನೀಡುವದಿಲ್ಲ. ಮದುವೆ, ತಲ್ಲಾಖ್, ಖುಲಾ ಇತ್ಯಾದಿಗಳನ್ನೊಳಗೊಂಡ ಇದರಲ್ಲಿ ಬಹುಪತ್ನಿತ್ವ ಮತ್ತು ಮದುವೆಯ ವಯಸ್ಸನ್ನು ಸೂಚಿಸದಿರುವದು ಒಂದು ಕೊರತೆಯಾಗಿದೆ. ನಿಖಾ ನಾಮಾದ ಉಯಿಲು ಅವಳ ಎಲ್ಲ ಸಮಸ್ಯೆಗಳನ್ನು ಒಳಗೊ ಳ್ಳುವುದಿಲ್ಲ. ಆದರೂ ಈ ಸಮುದಾಯದ ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸಲು, ಮಹಮ್ಮದರ ಪ್ರೀತಿ ಪಾತ್ರ ರೆಲ್ಲರೂ ಸೇರಿ - ತಮ್ಮ ಎಲ್ಲ ನಿರ್ಬಂಧ, ಎಲ್ಲ ರಾಜಕೀಯ ಹಿತಾಸಕ್ತಿಗಳನ್ನು ಬದಿಗೊತ್ತಿ ನಿಲ್ಲಬೇಕಾಗಿದೆ. ರಾಷ್ಟ್ರದ ಮುಖ್ಯ ವಾಹಿನಿಯಲ್ಲಿ ಅವಳೂ ಬೆರೆಯುವಂತೆ ಮಾಡಬೇಕಿದೆ. ತಲ್ಲಾಖ್ ಅನ್ನು ಪೈಗಂಬರರು ಬಹಳಷ್ಟು ದ್ವೇಷಿಸುತ್ತಿದ್ದರೆಂಬು ದನ್ನು ಮನವರಿಕೆ ಮಾಡಿಕೊಡಬೇಕಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, ' ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೪೪೩ / ೯೪೪೪೮೦೪೮೫೦೬



ಪರೀಕ್ಷೆ

○ ಲಲಿತಾ ಸಿದ್ದಬಸವಯ್ಯ

ಉಳ್ಳವರು,
ನೀವು ತೋಳಲ್ಲಿ ಬಲವುಳ್ಳ ತ್ರಿಮೂರ್ತಿವರ್ಯರು
ಅತ್ರಿಯ ಹಾಗೆ ಯಾಗದೊಲೆ ಅರಳಿಪುಳ್ಳೆಗಳಲ್ಲ
ಬಂದಿರಿ, ನಿಂದಿರಿ, ಕುಶಾಲಿನಲಿ ಬೆಸಗೊಂಡಿರಿ
ಕಬ್ಬಿಣದ ಕಡಲೆಯ ಬೇಯಿಸು
ನಿಂತ ನಿರುವಾಣದಲೆ ಬಡಿಸು
ಇಲ್ಲವಾದರೆ.....
ಇಲ್ಲವೆಂದುದಕ್ಕೇ ಆದದ್ದು ಮೂರುತಲೆ ಒಂದೇ ದೇಹ
ವಿಚಿತ್ರ ಶಿಶುಜನನ.

- ೨-

ಪತಿವ್ರತೆಯರೇನು ಆಕಾಶದಿಂದುದುರುತ್ತಾರೇನ್ರೀ
ಇಲ್ಲೇ ಈ ಗಂಧವತಿ ಪೃಥುವಿಯಲಿ ತಳೆದು
ಭಿನ್ನಮತ ಕೆರಳಸಿದಂಗಾಂಗ, ಮಲೆತ ಚಿತ್ತಭೃಂಗಗಳನ್ನಿರಿದು
ಆ ಗಾಯಕ್ಕೆ ಅದೇ ಲಸಿಕೆ; ಹೃದಯ ಉಬ್ಬೆಗೆ
ಹಗೇವಲ್ಲಿ ಕರಣಂಗಳು ಮಗ್ಗಿ, ಮಗ್ಗಿ
ಮಾಗಿದಂತೆಲ್ಲ
ಕುದ್ದ ಕಬ್ಬಿನಹಾಲು ಬೆಲ್ಲಗೊಂಡು
ಉಸೋ, ಉಸೋ...... ಏಳುಕೊಳ್ಳದ ಯಲ್ಲವ್ವ
ಅದೆಲ್ಲಿದೆಯೋ ಆ ನಿನ್ನ ಪಾದಕ್ಕೆ ಸೇರಿಸಿಕೊಳ್ಳವ್ವ ಎನುವ ಹೊತ್ತಿಗೆ
ಉಂಡು ಮಲಗೆದ್ದ ನೀವು ನಾಲಿಗೆ ಸವರಿಕೊಂಡು ಬಂದಿಳಿಯುತ್ತೀರಿ
ಕೈಯಲ್ಲಿ ಡಿಟೋ ಮೇಲೆ ಹೇಳಿದ ಹಾಗೆ
ಅದೇ ಕುಶಾಲು ಅದೇ ಸವಾಲು
ತಡವರಿಸುತ್ತ ತಪ್ಪಿದೆಯೋ ....
ಅರ್ಥಕೋಶಕ್ಕೆಹೊಸ ಪದ ಪ್ರವೇಶ
ಉಳ್ಳವರ ಸಾಮೂಹಿಕ ಅತ್ಯಾಚಾರ = ಪಾತಿವ್ರತ್ಯ ಪರೀಕ್ಷೆ
(ಆವರಣದ ಸೂಚನೆ : ಸ್ತ್ರೀಲಿಂಗ, ಕ್ರಿಯಾಪದ, ಗುಣವಾಚಕವೂ,
ಅವ 'ನು', ಅವ 'ನಿಂದ' ಅವನಿ 'ಗೆ', ಇತ್ಯಾದಿ ವಿಭಕ್ತಿ ಪ್ರತ್ಯಯ ನಿಷಿದ್ದವು)

- ೩-

ದಯವಿಟ್ಟು
ಆ ತ್ರಿಶೂಲ, ಆ ಸುದರ್ಶನ ಸುಡುಗಾಡುಗಳ ಅಲ್ಲಿ ಮಡಗಿ
.... ಮುಚ್ಚಿಕೊಂಡು ಹೋಗಿಬಿಡಿ
ಮೊಲೆ ಮೂಡಿ ಬಂದರೆ ಹೆಣ್ಣು
ಗಡ್ಡ ಮೀಸೆ ಬಂದರೆ ಗಂಡು
ಈಗಿಷ್ಟೆ
ಸಾಮಾನ್ಯ ಪ್ರವೇಶ ಪರೀಕ್ಷೆ

ಸಂಶೋಧನೆ

ಗೊಲ್ಲ ಜಾತಿ ಜನಾಂಗ ಬುಡಕಟ್ಟುಗಳ ಮೂಲ ಸ್ಥಳದ ಬಗ್ಗೆ ಒಂದು ಇತಿಹಾಸವಿದ್ದಂತೆ ಗೊಲ್ಲ ಜನಾಂಗದ ಮೂಲ ಸ್ಥಳದ ಬಗ್ಗೆ ಒಂದು ಇತಿಹಾಸ ಪುರಾವೆ ಇದೆ. ಗೊಲ್ಲರ ಮೂಲ ದೆಹಲಿಯ ಸುತ್ತ-ಮುತ್ತ ಪಟ್ಟಣ, ಗ್ರಾಮ ಗಳಲ್ಲಿ ಇದ್ದವರು ಎಂದಾದರೆ, ಮೊಗಲರ ಕಾಲದಲ್ಲಿ ಹಿಂಸೆ ತಾಳ ಲಾರದೆ ದಕ್ಷಿಣಕ್ಕೆ ವಲಸೆ ಬಂದು ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ವಾಸಿ ಸಲು ಪ್ರಾರಂಭಿಸಿದರು. ನೂರಾರು ವರ್ಷಗಳ ಹಿಂದೆಯೇ ಬೇರೆ ಬೇರೆ ಜಾತಿ-ಉಪಜಾತಿಗಳಿಂದ ಬೇರ್ಪಟ್ಟ ಕಾಡುಗೊಲ್ಲರು ಕಾಡುಗಳಲ್ಲಿ ವಾಸ ಮಾಡಲು ಪ್ರಾರಂಭಿಸಿದ್ದ ರಿಂದ ಅವರು ಸಹಜವಾ ಗಿಯೇ ಬುಡಕಟ್ಟಿನ ಸ್ವರೂಪವನ್ನು ಪಡೆದು ಕೊಂಡಿದ್ದಾರೆ.

❍ಡಾ.ವಾಸುದೇವ ಸೇಡಂ
❍ಎಚ್.ವಿಠೋಬ ಭೀಮಣ್ಣ

ಗೊಲ್ಲ ಜನಾಂಗದ ಆರ್ಥಿಕತೆ

ಭಾರತವು ಅನೇಕ ಜಾತಿ-ಉಪಜಾತಿಗಳಿಂದ ಕೂಡಿದ ಒಂದು ಸಂಕೀರ್ಣ ರಾಷ್ಟ್ರವಾಗಿದೆ. ಭಾಷೆ, ಧರ್ಮ, ಜಾತಿ, ಜನಾಂಗ, ಪ್ರದೇಶ ಮತ್ತು ಬುಡಕಟ್ಟುಗಳಲ್ಲಿ ವಿವಿಧತೆಯ ಆರ್ಥಿಕ ಅಂಶಗಳನ್ನು ಬೇರೆ ಬೇರೆ ದೃಷ್ಟಿಕೋನಗಳಲ್ಲಿ ನೋಡಬಹುದು. ಭಾರತೀಯ ಸಮಾಜವು ಸಂಕೀರ್ಣ ಸಾಮಾಜಿಕ ವ್ಯವಸ್ಥೆಯನ್ನು ಒಳಗೊಂಡಿದ್ದು, ಮೇಲಸ್ತರ ಮತ್ತು ಕೆಳಸ್ತರಗಳೆಂಬ ಕಂದರಗಳಿಂದ ಕೂಡಿದೆ. ಅಲ್ಲದೇ ಆರ್ಥಿಕವಾಗಿ ಶ್ರೀಮಂತ ಬಡವನೆಂಬ ಭಾವನೆಗಳಿಂದ ವಿಸ್ತಾರ ಗೊಂಡಿದೆ. ಭಾರತದಲ್ಲಿ ಹಿಂದೂ ಧರ್ಮವು ಇಡೀ ಜನಸಮುದಾಯವನ್ನು ಅಸಮಾನವಾಗಿ ವಿಂಗಡಿಸಿ ಸಮಾಜದ ಶಾಪವಾಗಿದೆ. ಪ್ರಾರಂಭದಲ್ಲಿ ವೃತ್ತಿಗನುಗುಣವಾಗಿ ಬೇರ್ಪಡಿಸಲ್ಪಟ್ಟ ವರ್ಣವ್ಯವಸ್ಥೆ ಕ್ರಮೇಣ ಆರ್ಥಿಕ ಮತ್ತು ಸಾಮಾಜಿಕ ಶೋಷಣೆಯ ಸಾಧನವಾಗಿ ಪರಿಣಮಿಸಿತು. ಶೋಷಣೆಯಿಂದ ಪಾರಾಗಲು ಹಲವಾರು ಜಾತಿ ಮತ್ತು ಉಪಜಾತಿಗಳ ಜನರು ಪ್ರತ್ಯೇಕ ಆರ್ಥಿಕ ಅಭಿವೃದ್ಧಿಯ ಹಲವಾರು ವಿಷಯಗಳನ್ನು ಚರ್ಚೆಗೆ ಒಳಪಡಿಸಿ ಹೋರಾಟ ನಡೆಸುತ್ತಿರುವುದನ್ನು ಹಿಂದಿನ ಇತಿಹಾಸವು ತಿಳಿಸುತ್ತದೆ. (ಎಂ.ಗುರುಲಿಂಗಯ್ಯ, 2002)

ಗೊಲ್ಲರು ಎಂಬ ಪದದ ಮೂಲ

ಗೊಲ್ಲ ಎಂಬ ಪದವೂ ವೃತ್ತಿಯನ್ನು ಸೂಚಿಸುವುದಾಗಿದೆ. ಯಾರು ಗೋವುಗಳನ್ನು ಕಾಯುತ್ತಾರೆಯೋ ಅವರಿಗೆ ಗೊಲ್ಲರು ಎಂದು ಕರೆಯುವ ವಾಡಿಕೆಯಿತ್ತು. ಇವರಿಗೆ ಇನ್ನೊಂದು ಹೆಸರು ಗೋಪಾಲಕ, ಅಂದರೆ ಗೋವುಗಳನ್ನು ಕಾಯುವವನು.

ಎಲ್ಲಾ ಜಾತಿ ಜನಾಂಗ ಬುಡಕಟ್ಟುಗಳ ಮೂಲ ಸ್ಥಳದ ಬಗ್ಗೆ ಒಂದು ಇತಿಹಾಸವಿದ್ದಂತೆ ಗೊಲ್ಲ ಜನಾಂಗದ ಮೂಲ ಸ್ಥಳದ ಬಗ್ಗೆ ಒಂದು ಇತಿಹಾಸ ಪುರಾವೆ ಇದೆ. ಗೊಲ್ಲರ ಮೂಲ ದೆಹಲಿಯ ಸುತ್ತ-

ಕೋಷ್ಟಕ-1

ಅಧ್ಯಯನ ಪ್ರದೇಶದಲ್ಲಿ ಗೊಲ್ಲ ಜನಾಂಗದ ಪ್ರಮಾಣ

ಕ್ರ.ಸಂ	ಜನಾಂಗಗಳ ಹೆಸರು	ಪ್ರತಿಶತ ಪ್ರಮಾಣ
1.	ಲಿಂಗಾಯತರು	03.97
2.	ರೆಡ್ಡಿಗಳು	02.65
3.	ನಾಯಕರು (ಬೇಡ)	03.31
4.	ಕುರುಬ	11.92
5.	ಉಪ್ಪಾರ	19.87
6.	ಗೊಲ್ಲ	39.74
7.	ಮುಸ್ಲಿಂ	05.29
8.	ಹರಿಜನ	13.25

ಮೂಲ: ಗ್ರಾಮ ಪಂಚಾಯತ ದಾಖಲಾತಿ ವರದಿ-2001

ಮುತ್ತ ಪಟ್ಟಣ, ಗ್ರಾಮಗಳಲ್ಲಿ ಇದ್ದವರು ಎಂದಾದರೆ, ಮೊಗಲರ ಕಾಲದಲ್ಲಿ ಹಿಂಸೆ ತಾಳಲಾರದೆ ದಕ್ಷಿಣಕ್ಕೆ ವಲಸೆ ಬಂದು ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ (ಚಿತ್ರದುರ್ಗ, ಬಳ್ಳಾರಿ ಮತ್ತು ತುಮಕೂರು) ವಾಸಿಸಲು ಪ್ರಾರಂಭಿಸಿದರು. (ಬಿ.ವಿ.ನಾಗರಾಜು 1988). ನೂರಾರು ವರ್ಷಗಳ ಹಿಂದೆಯೇ ಬೇರೆ ಬೇರೆ ಜಾತಿ-ಉಪಜಾತಿಗಳಿಂದ ಬೇರ್ಪಟ್ಟ ಕಾಡುಗೊಲ್ಲರು ಕಾಡುಗಳಲ್ಲಿ ವಾಸ ಮಾಡಲು ಪ್ರಾರಂಭಿಸಿದ್ದರಿಂದ ಅವರು ಸಹಜವಾಗಿಯೇ ಬುಡಕಟ್ಟಿನ ಸ್ವರೂಪವನ್ನು ಪಡೆದು ಕೊಂಡಿದ್ದಾರೆ (ತಿ.ನಂ. ಶಂಕರನಾರಾಯಣ 1982:22-23.) ಸುಮಾರು ಎರಡು ನೂರು ವರ್ಷಗಳ ಹಿಂದೆ ಉತ್ತರ ಪ್ರದೇಶದ ಕೆಲವೊಂದು ಕಡೆಗಳಲ್ಲಿ ಬೀಕರ ಬರಗಾಲ ಎದುರಿಸುವ ಪ್ರಸಂಗವೊಂದು ಬಂದಿತ್ತು. ಆ ಸಮಯದಲ್ಲಿ ಚದುರಿದ ಹಲವಾರು ಬುಡಕಟ್ಟುಗಳ ಜನರು ಆಂಧ್ರಪ್ರದೇಶಕ್ಕೆ ವಲಸೆ ಬಂದರು. ಅಲ್ಲಿ ಕೆಲವು ವರ್ಷಗಳವರೆಗೆ ವಾಸ ಮಾಡಿ ನಂತರ ಗೊಲ್ಲರಟ್ಟಿ ಸೇರಿಕೊಂಡು ಪಕ್ಕದ ಬಳ್ಳಾರಿ ಜಿಲ್ಲೆಗೆ ವಲಸೆ ಬಂದು ಕರ್ನಾಟಕದ ತುಂಬೆಲ್ಲಾ ಚದುರಿ ಹೋಗಿದ್ದಾರೆ.

ಕೋಷ್ಟಕ-2

ಔದ್ಯೋಗಿಕ ರಚನೆ

ಕ್ರ.ಸಂ	ವಿವರಣೆ	ಪ್ರತಿಶತ ಪ್ರಮಾಣ
1.	ಕೃಷಿ ಮತ್ತು ಕೃಷಿಕಾರ್ಮಿಕರು	80.00
2.	ಕುರಿ ಸಾಕಾಣಿಕೆ	30.00
3.	ಕೈಗಾರಿಕೆ	02.00
4.	ಇತರೆ	18.00

ಮೂಲ: ಗ್ರಾಮ ಪಂಚಾಯತ ದಾಖಲಾತಿ ವರದಿ-2001

ಇಲ್ಲಿಯವರೆಗೆ ಯಾವುದೇ ಜನಗಣತಿಯ ವರದಿಗಳಲ್ಲಿ ಗೊಲ್ಲ ಜನಸಂಖ್ಯೆಯ ಪ್ರಮಾಣ ಗುರುತಿಸಿಲ್ಲ. ಎಲ್ಲಾ ಬಗೆಯ ಗೊಲ್ಲ ಜನಸಮುದಾಯ (ಕಾಡು ಗೊಲ್ಲರು, ಕೃಷ್ಣ ಗೊಲ್ಲರು, ಹಂದಿ ಗೊಲ್ಲರು, ಕೆಂಪು ಗೊಲ್ಲರು ಇತ್ಯಾದಿ)ಗಳನ್ನು ಒಟ್ಟಿಗೆ ಸೇರಿಸಿ ಜನಸಂಖ್ಯೆಯ ವಿವರವನ್ನು ಪಡೆಯಲಾಗಿದೆ. ಆದರೆ ಕರ್ನಾಟಕ ಸರಕಾರ ನೇಮಕ ಮಾಡಿಗ ಹಿಂದುಳಿದ ವರ್ಗಗಳ ಎರಡನೇಯ ಆಯೋಗ 1986 ರಲ್ಲಿ ನಡೆಸಿದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವರದಿಯ ಪ್ರಕಾರ ರಾಜ್ಯದಲ್ಲಿ 5.85.314 ರಷ್ಟು ಗೊಲ್ಲ ಜನಸಂಖ್ಯೆ ಇದೆ ಎಂದು ವರದಿ ಮಾಡಲಾಗಿದೆ. ಅಂದರೆ ಇದು ರಾಜ್ಯದ ಪ್ರತಿಶತ 1.5 ರಷ್ಟಿದೆ ಎಂಬುದು ತಿಳಿಸುತ್ತದೆ. ಆದರೆ 35 ಲಕ್ಷಕ್ಕಿಂತ ಹೆಚ್ಚಿನ ಗೊಲ್ಲ ಜನಸಂಖ್ಯೆ ಕರ್ನಾಟಕದಲ್ಲಿದ್ದಾರೆ ಎಂದು ಇತ್ತೀಚಿನ ಮಾಹಿತಿ ಪ್ರಕಾರ ವರದಿ ಮಾಡಲಾಗಿದೆ. ಇದು ಕೂಡಾ ರಾಜ್ಯದ ಇತರೆ ಜಾತಿಗಳ ಪ್ರಮಾಣಕ್ಕೆ ಹೋಲಿಕೆ ಮಾಡಿದಾಗ ಅತ್ಯಂತ ಕಡಿಮೆಯೆನಿಸುತ್ತದೆ.

ಸಂಶೋಧನಾ ಅಧ್ಯಯನ ವಿನ್ಯಾಸ

ಈ ಕಿರು ಸಂಶೋಧನಾ ಅಧ್ಯಯನಕ್ಕಾಗಿ ಗುಲಬರ್ಗಾ ಜಿಲ್ಲೆಯ ಸುರಪೂರ ತಾಲೂಕಿನ ಪೇಠ ಅಮ್ಮಾಪೂರ ಗ್ರಾಮವನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಏಕೆಂದರೆ ತಾಲೂಕಿನಲ್ಲಿಯೇ ಅತ್ಯಂತ ಹೆಚ್ಚಿನ ಗೊಲ್ಲ ಜನಸಮುದಾಯ ಈ ಗ್ರಾಮದಲ್ಲಿ ವಾಸಮಾಡಿ ಕೊಂಡಿದೆ. ಸಂಶೋಧನಕ್ಕಾಗಿ 200 ಗೊಲ್ಲ ಜನಸಮುದಾಯದ ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಪ್ರಾಥಮಿಕ ಅಂಕಿ-ಅಂಶಗಳನ್ನು ರಚಿಸಲಾಗಿದೆ. ದ್ವಿತೀಯ ಅಂಕಿ-ಅಂಶಗಳನ್ನು ವಿವಿಧ ಪುಸ್ತಕ, ಪತ್ರಿಕೆ, ಸರಕಾರಿ ದಾಖಲಾತಿ ಪುಸ್ತಕ ಮತ್ತು ಜನಗಣತಿ ದಾಖಲೆಗಳ ಸಹಾಯದಿಂದ ತೆಗೆದುಕೊಂಡು ಅಂಕಿ-ಅಂಶಗಳನ್ನು ರಚಿಸಲಾಗಿದೆ.

ಅಧ್ಯಯನ ಪ್ರದೇಶದಲ್ಲಿ ಗೊಲ್ಲ ಜನಸಂಖ್ಯೆ

ಸಗರನಾಡಿನಲ್ಲಿ ಶೂರರ ಊರೆಂದರೆ ಸುರಪೂರ ಎಂದು ಕರೆಯಿಸಿಕೊಳ್ಳುವ ಈ ತಾಲೂಕಿನಲ್ಲಿ ಕುರುಬರು ಮತ್ತು ಬೇಡ ಜನಾಂಗದ ಜನಸಂಖ್ಯೆ ಹೆಚ್ಚು ಇದೆ. ತಾಲೂಕಿನ ಒಟ್ಟು ಗೊಲ್ಲ ಜನಸಂಖ್ಯೆಯ ಪ್ರತಿಶತ 30ರಷ್ಟು ಜನಸಂಖ್ಯೆ ಸಂಶೋಧನಾ ಅಧ್ಯಯನ ಗ್ರಾಮದಲ್ಲಿದೆ. ಆದರೆ ಅದೇ ಗ್ರಾಮದಲ್ಲಿ ಗೊಲ್ಲ ಜನಸಂಖ್ಯೆ ಪ್ರತಿಶತ 39.74 ರಷ್ಟಿರುವುದನ್ನು ಒಂದನೇ ಕೋಷ್ಟಕದ ಸಹಾಯದಿಂದ ತಿಳಿದುಕೊಳ್ಳಬಹುದು.

ಔದ್ಯೋಗಿಕ ರಚನೆ

ಮೂಲತಃ ಗೊಲ್ಲರು ಪಶುಪಾಲಕರು, ಆದರೆ ಇಂದಿಗೂ ಕೂಡ ಪಶುಪಾಲನೆ ಮರೆತಿಲ್ಲಾ. ಕ್ರಮೇಣವಾಗಿ ಗೊಲ್ಲರು ಆರ್ಥಿಕವಾಗಿ ಲಾಭಗಳಿಕೆಯಲ್ಲಿರುವ ಕುರಿ ಸಾಕಾಣಿಕೆಯನ್ನು ರೂಢಿಸಿಕೊಂಡಿದ್ದಾರೆ. ಆದರೆ ಅಧ್ಯಯನ ಕ್ಷೇತ್ರದಲ್ಲಿ ಹಲವಾರು ಗೊಲ್ಲ ಸಮುದಾಯದ ಕುಟುಂಬಗಳು ಕೃಷಿಯನ್ನೇ ತಮ್ಮ ಮೂಲ ಕಸುಬನ್ನಾಗಿಸಿಕೊಂಡಿವೆ. ಈ ಎರಡನೇ ಕೋಷ್ಟಕದ ಸಹಾಯದಿಂದ ಗೊಲ್ಲ ಜನಾಂಗದ ಔದ್ಯೋಗಿಕ ರಚನೆ ಯನ್ನು ತಿಳಿದುಕೊಳ್ಳಬಹುದು.

ಎರಡನೇ ಕೋಷ್ಟಕವನ್ನು ವೀಕ್ಷಿಸಿದಾಗ ಹೆಚ್ಚಿನ ಜನರು ಕೃಷಿ ಮತ್ತು ಕೃಷಿ ಕಾರ್ಮಿಕರಾಗಿರುವುದು ಕಂಡುಬರುತ್ತದೆ. ರಾಷ್ಟ್ರಮಟ್ಟದ ಗ್ರಾಮೀಣ ಪ್ರದೇಶದಲ್ಲಿಯೂ ಕೂಡಾ ಕೃಷಿ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಅಧ್ಯಯನ ಪ್ರದೇಶದಲ್ಲಿ ಶೇ. 80 ರಷ್ಟು ಗೊಲ್ಲ ಜನಸಂಖ್ಯೆ ಕೃಷಿ ಮತ್ತು

ಕೋಷ್ಟಕ–3
ಕೂಲಿಯ ದರ (ರೂಪಾಯಿಯಲ್ಲಿ)

ಕ್ರ.ಸಂ.	ಪ್ರದೇಶ	ದಿನಗೂಲಿ ಕಾರ್ಮಿಕರು		ಗುತ್ತಿಗೆ ಆಧಾರಿತ ಕಾರ್ಮಿಕರು	
		ಪುರುಷ	ಮಹಿಳೆ	ಪುರುಷ	ಮಹಿಳೆ
1.	ನೀರಾವರಿ ಪ್ರದೇಶ	50	25	600	550
2.	ನೀರಾವರಿಯೇತರ ಪ್ರದೇಶ	60	30	–	–

ಮೂಲ: ಕ್ಷೇತ್ರಾಧ್ಯಯನ,

ಕೃಷಿ ಕಾರ್ಮಿಕರಾಗಿದ್ದಾರೆ. ಇದು ರಾಷ್ಟ್ರಮಟ್ಟಕ್ಕೆ ಹೋಲಿಸಿದರೆ ಶೇ. 15 ರಷ್ಟು ಹೆಚ್ಚಾಗುತ್ತದೆ. ಶೇ. 30 ರಷ್ಟು ಕುರಿ ಸಾಕಾಣಿಕೆಯಲ್ಲಿ, ಶೇ. 2. ರಷ್ಟು ಕೈಗಾರಿಕೆಯಲ್ಲಿ ಮತ್ತು ಶೇ. 18. ರಷ್ಟು ಇತರ ಕ್ಷೇತ್ರದಲ್ಲಿ ಪಾಲ್ಗೊಂಡಿದ್ದಾರೆ.

ಕೃಷಿ ಕಾರ್ಮಿಕರು

ಪ್ರತಿಶತ 70 ರಷ್ಟು ಗೊಲ್ಲ ಸಮುದಾಯದ ಜನಸಂಖ್ಯೆ ಕೃಷಿ ಕಾರ್ಮಿಕರಾಗಿದ್ದಾರೆ. ಇದರಲ್ಲಿ ಎರಡು ವಿಧದ ಕಾರ್ಮಿಕರಿದ್ದಾರೆ 1)ದಿನಗೂಲಿ ಕಾರ್ಮಿಕರು 2)ಗುತ್ತಿಗೆ ಆಧಾರಿತ ಕಾರ್ಮಿಕರು ದಿನಗೂಲಿ ಕಾರ್ಮಿಕರಿಗೆ ಕೂಲಿಯು ಒಂದು ದಿನಕ್ಕೆ ಮಾತ್ರ ನಿಗದಿ ಯಾಗಿರುತ್ತದೆ. ಕೂಲಿ ನಿಗದಿ ಮಾಡುವ ಅಧಿ ಕಾರ ರೈತರಿಗೆ ಮಾತ್ರ ಇರುತ್ತದೆ. ಗುತ್ತಿಗೆ ಆಧಾರಿತ ಕಾರ್ಮಿಕರೆಂದರೆ, ಅವರದೇ ಆದ 8–10 ಜನರ ಗುಂಪು ಇರುತ್ತದೆ. ಒಂದು ಕೆಲಸವನ್ನು ಒಟ್ಟಿಗೆ ಕೂಲಿ ದರದಲ್ಲಿ ಮುಗಿಸಿಕೊಂಡು ಕೆಲಸ ಮಾಡುತ್ತಾರೆ. ಇಲ್ಲಿ ಕೂಲಿ ನಿಗದಿಯ ಅಧಿಕಾರ ಇಬ್ಬರಿಗೂ ಇರುತ್ತದೆ. ಕೂಲಿಯು ಬೆಳೆಯ ಸ್ವರೂಪ ಮತ್ತು ಭೂಮಿಯು ಮನೆಯಿಂದ ಇರುವ ದೂರದ ಮೇಲೆ ಆಧಾರವಾಗಿರುತ್ತದೆ. ಇಲ್ಲಿ ಕೆಲಸದ ವೇಳೆಯ ನಿರ್ಬಂದ ಇರುವುದಿಲ್ಲ. ಯಾವಾಗ ಬೇಕಾದರೂ ಹಿಡಿದ ಕೆಲಸ ಮುಗಿಸಬಹುದು. ಕೂಲಿಯ ದರವನ್ನು ಕೋಷ್ಟಕ–3ರ ಸಹಾಯದಿಂದ ತಿಳಿಯಬಹುದು.

> **ಮೂಲತಃ ಗೊಲ್ಲರು ಪಶುಪಾಲಕರು, ಆದರೆ ಇಂದಿಗೂ ಕೂಡ ಪಶುಪಾಲನೆ ಮರೆತಿಲ್ಲಾ. ಕ್ರಮೇಣವಾಗಿ ಗೊಲ್ಲರು ಆರ್ಥಿಕವಾಗಿ ಲಾಭಗಳಿಕೆಯಲ್ಲಿರುವ ಕುರಿ ಸಾಕಾಣಿಕೆಯನ್ನು ರೂಢಿಸಿಕೊಂಡಿದ್ದಾರೆ. ಹಲವಾರು ಗೊಲ್ಲ ಸಮುದಾಯದ ಕುಟುಂಬಗಳು ಕೃಷಿಯನ್ನೇ ತಮ್ಮ ಮೂಲ ಕಸುಬನ್ನಾಗಿಸಿಕೊಂಡಿವೆ.**

ಕೋಷ್ಟಕ –5
ವಾರ್ಷಿಕ ಆದಾಯ ಮತ್ತು ವೆಚ್ಚ
(ಪ್ರತಿಶತದಲ್ಲಿ)

ಕ್ರ.ಸಂ.	ಆದಾಯ	ಆದಾಯ	ವೆಚ್ಚ
1.	ರೂ.10,000 ಕ್ಕಿಂತ ಕಡಿಮೆ	47.77	31.11
2.	ರೂ.10,000 ದಿಂದ 15,000	55.55	53.33
3.	ರೂ.15,001 ದಿಂದ 20,000	07.78	15.56
4.	ರೂ.20,001 ಕ್ಕಿಂತ ಹೆಚ್ಚು	04.45	–

ಮೂಲ: ಕ್ಷೇತ್ರಾಧ್ಯಯನ,

ಮಹಿಳೆ ಮತ್ತು ಪುರುಷರ ನಡುವೆ ಕೂಲಿಯಲ್ಲಿ ವ್ಯತ್ಯಾಸವಿರುವುದನ್ನು ಕೋಷ್ಟಕ ಮೂರನೇ ದಿಂದ ತಿಳಿದುಬರುತ್ತದೆ. ನೀರಾವರಿ ಪ್ರದೇಶದಲ್ಲಿ ವರ್ಷವಿಡಿ ಕೆಲಸವಿರುವುದರಿಂದ ಕೂಲಿಯು ನೀರಾವರಿ ಯೇತರ ಪ್ರದೇಶಕ್ಕಿಂತ ಕಡಿಮೆಯಿರುತ್ತದೆ. ಗುತ್ತಿಗೆ ಆಧಾರಿತ ಕಾರ್ಮಿಕರ ಕೂಲಿಯಲ್ಲಿಯೂ ವ್ಯತ್ಯಾಸ ಕಂಡುಬರುತ್ತದೆ. ಪುರುಷರು ದೈಹಿಕ ಸಾಮರ್ಥ್ಯವು ಮಹಿಳೆಯರಿಗಿಂತ ಹೆಚ್ಚಿರುವುದರಿಂದ ಕೂಲಿಯು ಮಹಿಳೆಯರಿಗಿಂತ ಪುರುಷರಿಗೆ ಹೆಚ್ಚಿದೆ ಪುರುಷರಿಗೆ ಒಂದು ಎಕರಗೆ ರೂ.600 ಇದ್ದರೆ ಮಹಿಳೆಯರಿಗೆ ರೂ.550 ಇರುವುದು ಅಧ್ಯಯನದಿಂದ ತಿಳಿದು ಬಂದಿದೆ.

ಕೆಲಸದ ದಿನಗಳು ಮತ್ತು ಅವಧಿ

ಸಾಮಾನ್ಯವಾಗಿ ಕೆಲಸದ ದಿನಗಳು ನೀರಾವರಿ ಪ್ರದೇಶದಲ್ಲಿ ಹೆಚ್ಚಿರುತ್ತವೆ ಮತ್ತು ಮಹಿಳಾ ಕಾರ್ಮಿಕರು ಮಾಡುವಂತಹ ಕೆಲಸಗಳು ಹೆಚ್ಚಿರುವುದರಿಂದ ಪುರುಷ

ಕಾರ್ಮಿಕರಿಗಿಂತ ಹೆಚ್ಚಿನ ದಿನ ಕೆಲಸದಲ್ಲಿ ತೊಡಗಿರುತ್ತಾರೆ. ಅಧ್ಯಯನ ಕ್ಷೇತ್ರದ ನೀರಾವರಿ ಪ್ರದೇಶದಲ್ಲಿ ಪುರುಷರು 300 ಮತ್ತು ಮಹಿಳೆಯರು 340 ದಿನ ಕೆಲಸದಲ್ಲಿ ತೊಡಗಿರುತ್ತಾರೆ. ನೀರಾವರಿಯೇತರ ಪ್ರದೇಶದಲ್ಲಿ ಪುರುಷರು 230 ಮತ್ತು ಮಹಿಳೆಯರು 265 ದಿನ ಕೃಷಿ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ.

ನೀರಾವರಿ ಪ್ರದೇಶದಲ್ಲಿ ಕೆಲಸದ ಅವಧಿಯೂ ಎರಡು ರೀತಿಯಲ್ಲಿರುತ್ತದೆ ಮುಂಜಾನೆ 6 ಗಂಟೆಯಿಂದ 2 ಗಂಟೆಯವರೆಗೆ Full time ಮತ್ತು 2.30 ಗಂಟೆಯಿಂದ 6.30 ಗಂಟೆಯವರೆಗೆ Part time ಗುತ್ತಿಗೆ ಆಧಾರಿತ ಕಾರ್ಮಿಕರ ಕೆಲಸದ ಅವಧಿಯು ಅವರ ಮೇಲೆ ಆಧಾರವಾಗಿರುತ್ತದೆ. ಕೆಲಸದ ಅವಧಿಯುಕಡ್ಡಾಯವಾಗಿರುವುದಿಲ್ಲ.

ಕೋಷ್ಟಕ –4
ವಾರ್ಷಿಕ ಆದಾಯದ ಮೂಲಗಳು

ಕ್ರ.ಸಂ.	ಮೂಲಗಳು	ಪ್ರತಿಶತ ಪ್ರಮಾಣ
1.	ಕೃಷಿ	47.77
2.	ದಿನಗೂಲಿ ಕಾರ್ಮಿಕರು	100.00
3.	ಕುರಿ ಸಾಕಾಣಿಕೆ	24.44
4.	ಭೂ ಗೇಣಿ	22.22
5	ಹೈನುಗಾರಿಕೆ	12.22
6.	ಇತರೆ	11.11

ಮೂಲ: ಕ್ಷೇತ್ರಾಧ್ಯಯನ,

ಅವರು ಇಷ್ಟ ಬಂದಾಗ ಕೆಲಸ ಮಾಡಬಹುದು, ದಣಿವಾದಾಗ ಕೆಲಸ ಬಿಡಬಹುದು. ಒಟ್ಟಾರೆಯಾಗಿ ಕೆಲಸ ತೀವ್ರಗತಿಯಲ್ಲಿ ಮುಗಿಸುವುದೇ ಅವರ ಗುರಿಯಾಗಿರುತ್ತದೆ.

ವಾರ್ಷಿಕ ಆದಾಯ ಮತ್ತು ವೆಚ್ಚ

ಅಧ್ಯಯನ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಗೊಲ್ಲ ಜನಸಮುದಾಯವು ಬಡತನ ಮತ್ತು ಮಧ್ಯಮ ಕುಟುಂಬದವರಾಗಿರುವುದರಿಂದ ಕಡಿಮೆ ಕೂಲಿ ಮತ್ತು ವಾರ್ಷಿಕ ಆದಾಯವು ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ನಾಲ್ಕನೇಯ ಕೋಷ್ಟಕದ ಸಹಾಯದಿಂದ ಆದಾಯದ ಮೂಲಗಳನ್ನು ತಿಳಿದುಕೊಳ್ಳಬಹುದು.

ಗೊಲ್ಲ ಜನಾಂಗದ ವಾರ್ಷಿಕ ಕೌಟುಂಬಿಕ ಆದಾಯವು ಪ್ರತಿಶತ 100 ರಷ್ಟು ದಿನಗೂಲಿ ಕಾರ್ಮಿಕರಿಂದ ಬರುತ್ತದೆ. ಇದು ಜನಸಮುದಾಯದ ಎಲ್ಲಾ ಕುಟುಂಬಗಳಲ್ಲಿ ಕಾರ್ಮಿಕರ ಸಂಖ್ಯೆ ಪ್ರಬಲವಾಗಿರುವುದು ತೋರಿಸುತ್ತದೆ. ಪ್ರತಿಶತ 47.77 ರಷ್ಟು ಕೃಷಿಯಿಂದ, ಪ್ರತಿಶತ 24.44 ರಷ್ಟು ಕುರಿ ಸಾಕಾಣಿಕೆಯಿಂದ, ಪ್ರತಿಶತ 22.22 ರಷ್ಟು ಭೂ–ಗೇಣಿಯಿಂದ, ಪ್ರತಿಶತ 12.22 ರಷ್ಟು ಹೈನುಗಾರಿಕೆಯಿಂದ ಮತ್ತು ಪ್ರತಿಶತ 11.11 ರಷ್ಟು ಇತರೆ ಮೂಲಗಳಿಂದ ಬರುತ್ತದೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

ಐದನೇಯ ಕೋಷ್ಟಕನ್ನು ವೀಕ್ಷಿಸಿದಾಗ, ಅಧ್ಯಯನ ಕ್ಷೇತ್ರದಲ್ಲಿ ಗೊಲ್ಲ ಜನಸಮುದಾಯದವರು ಆರ್ಥಿಕವಾಗಿ ಸುಧಾರಣೆ ಆಗದಿರುವುದು ಕಂಡುಬರುತ್ತದೆ. ಅಂದರೆ ಅವರ ಆದಾಯ ಮತ್ತು ವೆಚ್ಚಕ್ಕೆ ತುಲನೆ ಮಾಡಿ ನೋಡಿದಾಗ ಎರಡು ಸಮನಾಂತರವಾಗಿರುವುದು ಕಂಡು ಬರುತ್ತದೆ. ಆಗ ಅವರು ಸಾಲಕ್ಕೆ ಮೊರೆ ಹೋಗಬೇಕಾಗುತ್ತದೆ. ಅವರ ಸಾಲದ ವಿವಿಧ ಮೂಲಗಳನ್ನು ಆರನೇಯ ಕೋಷ್ಟಕದಿಂದ ತಿಳಿದುಬರುತ್ತದೆ.

ಭಾರತದಾದ್ಯಂತ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ ಗೊಲ್ಲರನ್ನು ಬಿಹಾರ, ಉತ್ತರ ಪ್ರದೇಶ, ಪಂಜಾಬ್‌ಗಳಲ್ಲಿ ಅಹಿರ್, ಜಾತ್,ಸಿಂಗ್,ಯಾದವ ಎಂಬ ಹೆಸರುಗಳಿಂದ ಕರೆದರೆ, ಕೇರಳದಲ್ಲಿ ಗೊಲ್ಲರು ಮಣಿಯಾಣಿಗಳೆಂದೂ, ತಮಿಳುನಾಡಿನಲ್ಲಿ ಇಂಡಿಯಾನ್ ಮತ್ತು ಕೆನಾಡ್‌ಗಳೆಂದು ಗುರುತಿಸಿಕೊಂಡಿದ್ದಾರೆ. ಆಂಧ್ರ ಮತ್ತು ಕರ್ನಾಟಕದಲ್ಲಿ ಗೊಲ್ಲ, ಗೊಲ್ಲರ್, ರೆಡ್ಡಿ ಹೆಸರುಗಳಿಂದ ಕರೆಯುವ ರೂಢಿಯಿದೆ. ಆಯಾ ರಾಜ್ಯಗಳ ಪ್ರಾದೇಶಿಕ ಭಾಷೆಗಳ ಹೆಸರಿನ ಜೊತೆಗೆ, ಭಾರತದಾದ್ಯಂತ 'ಯಾದವ್' ಎಂಬ ಹೆಸರಿನೊಂದಿಗೆ ಗುರುತಿಸಲ್ಪಡುತ್ತಾರೆ.

ಇಂದಿಗೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಜಮೀನುದಾರರು ಸಾಲ ಕೊಟ್ಟು ಬಡ್ಡಿಯಲ್ಲಿ ಜೀತಕ್ಕಿಟ್ಟು ಕೊಳ್ಳುವುದು ಕಾಣಬಹುದು. ಅಧ್ಯಯನ ಕ್ಷೇತ್ರದಲ್ಲಿ ಪ್ರತಿಶತ 75.86 ರಷ್ಟು ಗೊಲ್ಲ ಜನಸಮುದಾಯದವರು ಸಾಲಕ್ಕಾಗಿ ಜಮೀನುದಾರರನ್ನೇ ಅವಲಂಬಿಸಿದ್ದರೆ, ಬಡ್ಡಿ ವ್ಯವಹಾರ ಮಾಡುವವರೂ ಕೂಡಾ ಕಡಿಮೆಯೇನಿಲ್ಲ. ಅವರು 5 ರಿಂದ 8 ರೂ. ರಷ್ಟು ಬಡ್ಡಿ ವಿಧಿಸುತ್ತಾರೆ, ಯಾವ ಯಾವ ಉದ್ದೇಶಕ್ಕಾಗಿ ಸಾಲ ಪಡೆದುಕೊಳ್ಳುತ್ತಾರೆ ಎಂಬುದು ಮುಖ್ಯ ಅದನ್ನು ಏಳನೇಯ ಕೋಷ್ಟಕದಿಂದ ತಿಳಿಯಬಹುದು.

ಪ್ರತಿಶತ 93.10 ಮತ್ತು 82.76 ರಷ್ಟು ಜನರು ಅನುಭೋಗ ಮತ್ತು ಧಾರ್ಮಿಕ ಹಬ್ಬಗಳ ಆಚರಣೆಗಾಗಿ ವಿವಿಧ ಮೂಲಗಳಿಂದ ಸಾಲ ಪಡೆದುಕೊಳ್ಳುತ್ತಾರೆ ಎಂಬುದು ಅಧ್ಯಯನ ಕ್ಷೇತ್ರದಿಂದ ತಿಳಿದುಬಂದಿದೆ.

ವಿವಿಧ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ

ಅಧ್ಯಯನ ಕ್ಷೇತ್ರದಲ್ಲಿ ಗೊಲ್ಲ ಜನಸಮುದಾಯದವರು ಅಲ್ಪಸ್ವಲ್ಪ ವಿದ್ಯಾವಂತರಾಗಿದ್ದರಿಂದ, ಸರ್ಕಾರದಿಂದ ಜರುಗುವ ಹಲವಾರು ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆಯಿದೆ. ಆದರೆ ಅವುಗಳಿಂದ ಲಾಭ ಪಡೆಯುವದು ಹೇಗೆ ಎಂಬುದು ತಿಳಿದಿಲ್ಲಾ ಎಂಬುದನ್ನು ಎಂಟನೇಯ ಕೋಷ್ಟಕದಿಂದ ತಿಳಿದುಕೊಳ್ಳಬಹುದು.

ಕೋಷ್ಟಕ –7
ಸಾಲದ ಉದ್ದೇಶಗಳು

ಕ್ರ.ಸಂ	ಉದ್ದೇಶಗಳು	ಪ್ರತಿಶತ ಪ್ರಮಾಣ
1.	ಅನುಭೋಗ	93.10
2.	ಮದುವೆ	6.90
3.	ಆಸ್ತಿ ಖರೀದಿಗಾಗಿ	3.45
4.	ಧಾರ್ಮಿಕ ಹಬ್ಬಗಳ ಆಚರಣೆ	4.50
5.	ಇತರೆ	13.80

ಮೂಲ: ಕ್ಷೇತ್ರಾಧ್ಯಯನ,

ಇಂದಿಗೂ ಕೂಡಾ ಗ್ರಾಮೀಣ ಪ್ರದೇಶದಲ್ಲಿ, ಸರ್ಕಾರದಿಂದ ದೊರೆಯುವ ಪ್ರಯೋಜನಗಳಿಂದ ಜನರು ದೂರ ಇದ್ದಾರೆ. ಏಕೆಂದರೆ ಅನಕ್ಷರತೆ ಹೆಚ್ಚಿದ್ದು ರಾಜಕೀಯ ಪ್ರಭಾವದಿಂದಾಗಿ ಹಲವಾರು ಕಾರ್ಯಕ್ರಮಗಳ ಪ್ರಯೋಜನದಿಂದ ವಂಚಿತರಾಗಿದ್ದಾರೆ. ಅಧ್ಯಯನ ಕ್ಷೇತ್ರದಲ್ಲಿಯು ಕೂಡಾ ಗೊಲ್ಲ ಜನಸಮುದಾಯವು ರಾಜಕೀಯ ಪ್ರಭಾವ ಮತ್ತು ಅನಕ್ಷರತೆಯ ಕಾರಣದಿಂದ ಯೋಜನೆಗಳ ಲಾಭದಿಂದ ವಂಚಿತರಾಗಿದ್ದಾರೆ.

ಸಮಸ್ಯೆಗಳು

ಭಾರತದಾದ್ಯಂತ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ ಗೊಲ್ಲರನ್ನು ಬಿಹಾರ, ಉತ್ತರ ಪ್ರದೇಶ, ಪಂಜಾಬ್‌ಗಳಲ್ಲಿ ಅಹಿರ್, ಜಾತ್,ಸಿಂಗ್,ಯಾದವ ಎಂಬ ಹೆಸರುಗಳಿಂದ ಕರೆದರೆ, ಕೇರಳದಲ್ಲಿ ಗೊಲ್ಲರು ಮಣಿಯಾಣಿಗಳೆಂದೂ, ತಮಿಳುನಾಡಿನಲ್ಲಿ ಇಂಡಿಯಾನ್ ಮತ್ತು ಕೆನಾಡ್‌ಗಳೆಂದು ಗುರುತಿಸಿಕೊಂಡಿದ್ದಾರೆ. ಆಂಧ್ರ ಮತ್ತು ಕರ್ನಾಟಕದಲ್ಲಿ ಗೊಲ್ಲ, ಗೊಲ್ಲರ್, ರೆಡ್ಡಿ ಹೆಸರುಗಳಿಂದ ಕರೆಯುವ ರೂಢಿಯದೆ. ಆಯಾ ರಾಜ್ಯಗಳ ಪ್ರಾದೇಶಿಕ ಭಾಷೆಗಳ ಹೆಸರಿನ ಜೊತೆಗೆ, ಭಾರತದಾದ್ಯಂತ 'ಯಾದವ್' ಎಂಬ ಹೆಸರಿನೊಂದಿಗೆ ಗುರುತಿಸಲ್ಪಡುತ್ತಾರೆ. (ಎಂ.ಗುರುಲಿಂಗಯ್ಯಾ : 2001) ಭಾರತದಾದ್ಯಂತ ಗೊಲ್ಲ ಸಮುದಾಯ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಕೆಲವೊಂದು ಧಾರ್ಮಿಕ ಹಬ್ಬ–ಹರಿದಿನಗಳಲ್ಲಿ ಭಾಗವಹಿಸುವಂತಿಲ್ಲಾ. ಇದೆ ರೀತಿಯಾಗಿ ಅಧ್ಯಯನ ಪ್ರದೇಶ ದಲ್ಲಿಯೂ ಗೊಲ್ಲ ಜನಸಮುದಾಯವು ಹಲವಾರು ಸಮಸ್ಯೆಗ ಳನ್ನು ಎದುರಿಸುತ್ತಿದೆ.

ಕೋಷ್ಟಕ –6
ಸಾಲದ ಮೂಲಗಳು

ಕ್ರ.ಸಂ	ಮೂಲಗಳು	ಪ್ರತಿಶತ ಪ್ರಮಾಣದಲ್ಲಿ
1.	ಬ್ಯಾಂಕುಗಳು	10.34
2.	ಜಮೀನುದಾರರು	75.86
3.	ಬಡ್ಡಿ ವ್ಯವಹಾರಸ್ಥರು	27.59
4.	ಸಂಬಂಧಿಕರು	4.50

ಮೂಲ: ಕ್ಷೇತ್ರಾಧ್ಯಯನ,

ಅವುಗಳೆಂದರೆ

1.ಅನಕ್ಷರತೆ
2.ಬಡತನ
3.ಸಾಲಗಾರಿಕೆ
4.ರಾಜಕೀಯ ಪ್ರಭಾವದಿಂದಾಗಿ ಹಲವಾರು ಸರ್ಕಾರಿ ಯೋಜನೆಗಳಿಂದ ವಂಚನೆ
5.ಮೇಲ್ವರ್ಗದ ಜನಾಂಗದಿಂದ ಮಾನಸಿಕ ಹಿಂಸೆ
6.ಕೆಲವೊಂದು ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪ್ರವೇಶವಿಲ್ಲ.

ಇಂತಹ ಹಲವಾರು ಸಮಸ್ಯೆಗಳು ಜನಾಂಗದವರನ್ನು ಕೀಳು ಮಟ್ಟಕ್ಕಿಳಿಸಿವೆ. ಈ ಸಮಸ್ಯೆಗಳಿಂದ ಹೊರ ಬರಬೇಕಾದರೆ ಇಂತಹ 2–3 ತಲೆಮಾರುಗಳು ಬದಲಾಗಬೇಕು ಎಂಬುದು ಅಧ್ಯಯನ ಕ್ಷೇತ್ರದಿಂದ ತಿಳಿದುಬಂದಿದೆ.

ಸಲಹೆಗಳು

ಗೊಲ್ಲ ಜನಸಮುದಾಯವು ಕೂಡಾ ಪ್ರಸ್ತುತ ಸಮಾಜದಲ್ಲಿನ ಹಲವಾರು ಜನಸಮುದಾಯದವರ ಜೊತೆಗೆ

ಉಪಸಂಹಾರ

ಭಾರತೀಯ ಸಮಾಜದ ಜಾತಿಪದ್ಧತಿಯ ಶ್ರೇಣೀಕೃತ ವ್ಯವಸ್ಥೆಯಲ್ಲಿ ಗೊಲ್ಲರ ಸ್ಥಾನಮಾನ ಅತ್ಯಂತ ಕೆಳಮಟ್ಟದ್ದಾಗಿದೆ. ಕರ್ನಾಟಕದ ಕೆಲವು ಭಾಗಗಳಲ್ಲಂತೂ ನಾಗರಿಕ ಸಮಾಜದಿಂದ ಹೊರಗಿದ್ದ ಜನಾಂಗದಂತಿದ್ದಾರೆ. ರಾಜ್ಯದಲ್ಲಿ ಕೇವಲ 6 ರಿಂದ 7 ಪ್ರತಿಶತದಷ್ಟಿದ್ದ ಜನಾಂಗ ಹಲವಾರು ಅವಕಾಶಗಳಿಂದ ವಂಚಿತವಾಗಿದೆ. ಜನಾಂಗದ ಅಂಕಿ-ಅಂಶಗಳನ್ನು ತೆಗೆದುಕೊಂಡಾಗ ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಂಬುದಾಗಿ, ವ್ಯಾಪಾರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ, ಸಾರ್ವಜನಿಕ ಸಂಸ್ಥೆಗಳಲ್ಲಿ ಇವರ ಪಾಲ್ಗೊಳ್ಳುವಿಕೆ ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತದೆ. ಬಹುತೇಕ ಗೊಲ್ಲರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ದನ ಮತ್ತು ಕುರಿಗಳನ್ನು ಪಾಲನೆ ಮಾಡಲು ಮತ್ತು ಬೇರೆಯವರ ಜಮೀನುಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯಲು ಕಳುಹಿಸುತ್ತಾರೆ. ಇಂತಹ ಸ್ಥಿತಿಯಲ್ಲಿರುವ ಗೊಲ್ಲರ ಸರ್ವತೋಮುಖ ಅಭಿವೃದ್ಧಿಗೆ ಸರಕಾರವಾಗಲಿ, ರಾಜ್ಯ ಸರಕಾರವಾಗಲಿ ಅಥವಾ ಸರಕಾರೇತರ ಸಂಸ್ಥೆಗಳಾಗಲಿ ಗಮನ ಹರಿಸಿಲ್ಲ. ಇತರ ಜನಾಂಗದಂತೆಯೇ ಸಮಾಜದಲ್ಲಿ ಇವರಿಗೂ ಒಂದು ಸ್ಥಾನ ದೊರಕಬೇಕು ಎಂದರೆ, ಸರಕಾರದ ಗಮನ ಹರಿಸುವುದು ಪ್ರಮುಖವಾದುದಾಗಿದೆ.

ಸ್ಪರ್ಧೆಗಿಳಿಯಬೇಕಾದರೆ ಈ ಕೆಳಗಿನ ಕೆಲವು ಸಲಹೆಗಳನ್ನು ಅಳವಡಿಸಿಕೊಂಡರೆ ಸ್ವಲ್ಪ ಮಟ್ಟಿಗಾದರೂ ಪರಿಣಾಮ ಬೀರ ಬಹುದು.

1. ಅನಕ್ಷರತೆಯನ್ನು ಹೋಗಲಾಡಿಸಬೇಕು. ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂದು ಒತ್ತಾಯಿಸಬೇಕು
2. ಕೃಷಿಕರಿಗೆ ಕಡ್ಡಾಯವಾಗಿ ಸಬ್ಸಿಡಿ ನೀಡಬೇಕು. ಅವರ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಸಮರ್ಪಕ ಬೆಲೆ ನೀಡಬೇಕು
3. ಕೃಷಿ ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿ ಕಡಿಮೆ ಗೊಳಿಸಬೇಕು.
4. ಕಡ್ಡಾಯವಾಗಿ ಬ್ಯಾಂಕಿನ ಸಾಲ ಮನ್ನಾ ಮಾಡಬೇಕು
5. ಯೋಜನೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ರಾಜಕೀಯ ಪ್ರವೇಶ ರದ್ದುಪಡಿಸಬೇಕು
6. ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪ್ರವೇಶ ಕಲ್ಪಿಸಿಕೊಡಬೇಕು

ಕೋಷ್ಟಕ -8
ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ

ಪ್ರತಿಶತ ಪ್ರಮಾಣದಲ್ಲಿ

ಕ್ರ.ಸಂ	ಕಾರ್ಯಕ್ರಮಗಳು	ತಿಳುವಳಿಕೆ	ಲಾಭ ಪಡೆದಕೊಂಡವರು
1.	ಕನಿಷ್ಠ ಕೂಲಿ ಕಾಯ್ದೆ	–	–
2.	ಮತದಾನದಲ್ಲಿ ಬಾಗಿಯಾಗುವಿಕೆ	9.11	–
3.	ಗ್ರಾಮ ಸಭಾ ಮಿಟಿಂಗ್‌ಗೆ ಹಾಜರಾಗುವುದು	11.67	1.4
4.	NREP, RLEGP,IRDP, JRY & DWACRA	35.0	2.00
5.	ಆಶ್ರಯ ಯೋಜನೆ ಭಾಗ್ಯಜ್ಯೋತಿ ಮತ್ತು ಕೂಲಿಗಾಗಿ ಕಾಳು ಯೋಜನ	100.00	38.40

ಮೂಲ: ಕ್ಷೇತ್ರಾಧ್ಯಯನ,

ಗೊಲ್ಲರ ಸರ್ವತೋಮುಖ ಅಭಿವೃದ್ಧಿಗೆ ಸರಕಾರವಾಗಲಿ, ಅಥವಾ ಸರಕಾರೇತರ ಸಂಸ್ಥೆಗಳಾಗಲಿ ಗಮನ ಹರಿಸಿಲ್ಲ.

ಆಧಾರ ಗ್ರಂಥಗಳು

1. ಶಂಕರ ನಾರಾಯಣ ತೀ.ನಂ. (1962) "ಕಾಡು ಗೊಲ್ಲರ ಸಂಪ್ರದಾಗಳು ಮತ್ತು ನಂಬಿಕೆಗಳು" ಮೈಸೂರು ಪ್ರಸಾರಾಂಗ, ಮೈಸೂರ ವಿಶ್ವವಿದ್ಯಾಲಯ.
2. ಬೈರಪ್ಪ ಕೆ. (1996) "ಗ್ರಾಮೀಣ ಸಮಾಜ", ಕೇಂಬ್ರಿಡ್ಜ್ ಪಬ್ಲಿಸಿಂಗ್ ಕಂಪನಿ, ಬೆಂಗಳೂರು.
3. ನಾಗರಾಜು ಬಿ.ವಿ. (1986)"ಗೊಲ್ಲರಹಟ್ಟಿ", ಆಪ್ತ ಪ್ರಕಾಶನ ಬೆಂಗಳೂರು.
4. ಮೈಲಾರಪ್ಪ ಬಿ.ಸಿ. (1998) "ಗ್ರಾಮೀಣ ಬದುಕು ಮತ್ತು ಸಾಮಾಜಿಕ ಚಳುವಳಿ", ಪ್ರಸಾರಾಂಗ, ವಿಶ್ವವಿದ್ಯಾಲಯ. ಬೆಂಗಳೂರು.
5. ಗುರುಲಿಂಗಯ್ಯ ಎಂ. (2001) "ಸೋಷಿಯಲ್ ಮುಬಿಲಿಟಿ ಆಂಡ್ ಸೋಷಿಯಲ್ ಚೆಂಜ್ ಅಮಾಂಗ್ ಕಾಡುಗೊಲ್ಲಾಸ್" ಮಂಗಳ ಗಂಗೋತ್ರಿ ಮಂಗಳೂರು ವಿಶ್ವವಿದ್ಯಾಲಯ.
6. ಪ್ರಜಾವಾಣಿ, ದಿನಾಂಕ 4, ಸೆಪ್ಟೆಂಬರ್, 1989, ಬೆಂಗಳೂರು.
7. ಸಂಜೆವಾಣಿ, ದಿನಾಂಕ 10, ಜೂನ್, 1994, ಬೆಂಗಳೂರು.
8. ಪ್ರಜಾವಾಣಿ, ದಿನಾಂಕ 19,ಜುಲೈ 1994 ಬೆಂಗಳೂರು.
9. ಗ್ರಾಮ ಪಂಚಾಯಿತಿ ದಾಖಲಾತಿಗಳು– 2000–2001.



'ಸಂವಾದ' ದೊರೆಯುವ ಸ್ಥಳ

☞ ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ

❖ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-೫೬೦ ೦೦೧, ☎ : ೨೨೨೦೩೫೮೦

❖ ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೧೩೬೮೨ ❖ ಸ್ಟೇಷನ್ ರಸ್ತೆ, ಗುಲ್ಬರ್ಗ-೨, ☎ : ೪೨೪೩೦೨

❖ ಕೆ.ಎಸ್.ರಾವ್ ರಸ್ತೆ ಮಂಗಳೂರು-೧, ☎ : ೨೪೪೧೦೦೬ ❖ ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೯೮೪

☞ ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦ ೦೨೦

☞ ಕೆಎಸ್‌ಆರ್‌ಟಿಸಿ ಬುಕ್ ಸ್ಟಾಲ್, ಫ್ಲಾಟ್ ಫಾರ್ಮ್ ನಂ. ೧, ಸ್ಟಾಲ್ ನಂ. ೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು





ಸ್ತ್ರೀ- ಭಿನ್ನ ಮುಖಗಳು

ಲೇ: ಶ್ರೀಮತಿ ಬಿ. ಎಂ. ರೋಹಿಣಿ
ಬೆಲೆ: ರೂ. ೬೦/-

ಕಳೆದ ಸುಮಾರು ೨೫ ವರ್ಷಗಳಿಂದ ವಿವಿಧ ಪತ್ರಿಕೆಗಳಿಗೆ ಬರೆದ ಲೇಖನಗಳ ಸಂಗ್ರಹವೇ ಈ ಕೃತಿ. ಮೂಲತಃ ಶಿಕ್ಷಕಿಯಾದ ಲೇಖಕಿ, ನಂತರ ವಿವಿಧ ಸಂಘ ಸಂಸ್ಥೆಗಳಲ್ಲಿ ದುಡಿದ ಅನುಭವದ ಫಲವಾಗಿ ಇಲ್ಲಿನ ಲೇಖನಗಳು ಮೂಡಿಬಂದಿವೆ. ಬಹುತೇಕ ಲೇಖನಗಳು ಆಯಾ ಕಾಲ ಮಾನದ ಸ್ಥಿತಿಗತಿಗಳ ಪ್ರತಿಕ್ರಿಯೆಯಾಗಿ ಮೂಡಿಬಂದಿದ್ದರೂ ಅಲ್ಲಿನ ವಿಚಾರಗಳು ಸಾರ್ವ ಕಾಲಿಕ ಅಂಶಗಳನ್ನು ಒಳಗೊಂಡಿರುವದು ಗಮನಾರ್ಹವಾದುದು. ಮಹಿಳೆಯ ಬದುಕಿನ ವಿವಿಧ ಮುಖಗಳು ಇಲ್ಲಿನ ಲೇಖನಗಳಲ್ಲಿ ಸ್ಪಷ್ಟವಾಗಿ ಮೂಡಿಬಂದಿರುವುದನ್ನು ಇಲ್ಲಿ ಕಾಣಬಹುದು.

ಪ್ರಕಾಶಕರು: ಕರಾವಳಿ ಲೇಖಕಿಯರ-ವಾಚಕಿಯರ ಸಂಘ (ರಿ), ಉರ್ವಸ್ಟೋರ್, ಮಂಗಳೂರು-೫೭೫೦೦೬



ಕೋಮುವಾದದ ಕರಾಳ ಮುಖಗಳು

ಲೇ: ಎಸ್. ಆರ್. ಭಟ್, ಜಿ. ರಾಜಶೇಖರ್, ಕೆ. ಫಣಿರಾಜ್ ಬೆಲೆ: ರೂ. ೭೫/-

ಕೋಮುವಾದ ನಾಡಿನ ಜನ ಜೀವನವನ್ನೇ ಅರಾಜಕತೆಯತ್ತ ಕೊಂಡೊಯ್ಯುತ್ತಿರುವ ಈ ಕಾಲ ಘಟ್ಟದಲ್ಲಿ ಬಂದಿರುವ ಅಮೂಲ್ಯ ಪುಸ್ತಕ ಇದು. ಕೋಮುವಾದವೇ ಕೆಲವು ಸಂಘಟನೆ ಹಾಗೂ ಪಕ್ಷಗಳ ಕಾರ್ಯಕ್ರಮವಾದಾಗ, ಅದೇ ಒಂದು ರಾಜಕೀಯ ಸಿದ್ಧಾಂತವಾದಾಗ ಇಡೀ ಸಮಾಜ ಹೇಗೆ ಕ್ಷೋಭೆಗೆ ಒಳಗಾಗುತ್ತದೆ ಎನ್ನುವುದರ ಸ್ಪಷ್ಟ ಚಿತ್ರಣ ಇಲ್ಲಿದೆ. ಕೋಮುವಾದದ ಕರಾಳ ಮುಖಗಳನ್ನು ಚಿತ್ರಿಸುವುದರೊಂದಿಗೆ, ಅದರ ವಿರುದ್ಧ ಮಾನವೀಯ ಹೋರಾಟದ ನೆಲೆಗಳನ್ನು ಒದಗಿಸುವ ಮಹತ್ವ ಕೃತಿ ಇದಾಗಿದೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಬೆಂಗಳೂರು-೧

ಜೋಳದ ರಾಶಿ ದೊಡ್ಡನಗೌಡರು

ಲೇ: ಡಾ॥ ಬಸವರಾಜ ಮಲಶೆಟ್ಟಿ
ಬೆಲೆ: ರೂ. ೨೫/-

ಕವಿ-ಗಮಕಿ-ನಟ-ಪ್ರವಚನ ಕಾರ ಡಾ॥ ಜೋಳದರಾಶಿ ದೊಡ್ಡನಗೌಡರು ಕನ್ನಡ ನಾಡು ಕಂಡ ಅಪರೂಪದ ಕಲಾವಿದರು. 'ಶೂನ್ಯ ಸಂಪಾದನೆ' ಯಂಥ ಪ್ರೌಢ ಕೃತಿಯನ್ನು ಮೂರು ದಶಕಗಳ ಕಾಲ ಗಮಕ ಪ್ರವಚನದ ಮೂಲಕ ಜನಸಾಮಾನ್ಯರಿಗೆ ಮುಟ್ಟಿಸಿದ ಶ್ರೇಯಸ್ಸು ಅವರದು. ಬಸವತತ್ವ ಹಾಗೂ ವೀರಶೈವ ಕಾವ್ಯ ಕೃತಿಗಳ ಪ್ರಚಾರ ಕಾರ್ಯದಲ್ಲಿ ಜೀವಮಾನವಿಡೀ ತೊಡಗಿಸಿಕೊಂಡ ದೊಡ್ಡನ ಗೌಡರನ್ನು ಕುರಿತ ಜೀವನ ಚರಿತ್ರೆ ಈ ಕೃತಿ.

ಪ್ರಕಾಶಕರು: ಲಿಂಗಾಯಿತ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

ಭಾರತೀಯ ಬಹುಮುಖೀ ಸಂಸ್ಕೃತಿ

ಲೇ: ಭಗವತ್ ಶರಣ ಉಪಾಧ್ಯಾಯ
ಬೆಲೆ: ರೂ. ೫೦/-

ಹಲವು ಶತಮಾನಗಳಿಂದ ಸಂಯುಕ್ತ ಭಾರತವು ಸಮಗ್ರವಾಗಿ ಗಳಿಸಿರುವ ಹಲವು ವಿಚಾರಗಳ ಚಿತ್ರಣ ಈ ಕೃತಿಯಲ್ಲಿದೆ. ೧೯೭೧-೭೨ರ ಅವಧಿಯಲ್ಲಿ 'ನ್ಯೂ ಏಜ್' ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನಗಳ ಸಂಗ್ರಹ ಇದಾಗಿದೆ. ಭಾರತೀಯರ ಭಾರತೀಯತೆಯ ಬಗ್ಗೆ ಮಾತನಾಡುತ್ತಲೇ ದೇಶ ಪ್ರೇಮದ ನೆಪದಲ್ಲಿ ದುರಭಿಮಾನವನ್ನು ಕೋಮುಭಾವನೆಯನ್ನ ಬೆಳೆಸುವ ಚಿತ್ರದ ಒಂದು ಮುಖವನ್ನು ಕಂಡಿರುವ ನಮಗೆ, ಅದರ ಇನ್ನೊಂದು ಮುಖವನ್ನು ಈ ಕೃತಿ ಪರಿಚಯಿಸುತ್ತದೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಬೆಂಗಳೂರು-೧



ಕಿತ್ತೂರು ಸಂಸ್ಥಾನ ಸಾಹಿತ್ಯ ಭಾಗ-೨

ಲೇ: ಡಾ॥ ಎಂ. ಎಂ. ಕಲಬುರ್ಗಿ, ಡಾ॥ ಚೆನ್ನಕ್ಕ ಪಾವಟೆ, ಡಾ॥ ಅನ್ನಪೂರ್ಣ ಹತ್ತಿ ಮತ್ತೂರ ಬೆಲೆ: ರೂ. ೧೦೦/-

ಕರ್ನಾಟಕದ ಇತಿಹಾಸದಲ್ಲಿ ಸದಾ ನೆನಪಿನಲ್ಲಿ ಉಳಿದಿರುವ ರಾಜಮನೆತನಗಳಲ್ಲಿ ಕಿತ್ತೂರು ಅರಸು ಮನೆತನವೂ ಒಂದು. ಇಂಥ ರಾಜಮನೆತನದ ಆಶ್ರಯದಲ್ಲಿ ಹುಟ್ಟಿದ ಸಾಹಿತ್ಯ ರಚನೆಗಳನ್ನು ಒಳಗೊಂಡ ಕೃತಿ ಇದು. ಕವಿ ಸಾಹಿತ್ಯ ಹಾಗೂ ಜಾನಪದ ಸಾಹಿತ್ಯದ ರಚನೆಗಳನ್ನು ಭಾಗ ೧ ರಲ್ಲಿ ಪ್ರಕಟಿಸಲಾಗಿದ್ದು, ಈಗ ಭಾಗ ೨ ರಲ್ಲಿ ಚಾರಿತ್ರಿಕ ಸಂಗತಿಗಳನ್ನು ಪ್ರಕಟಿಸಲಾಗಿದೆ.

ಪ್ರಕಾಶಕರು: ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.



ಇದೆಲ್ಲಾ ನಮಗ್ಯಾಕೆ....?

ಲೇ: ಎಸ್. ಬಾಬು ಕೌದೇನಹಳ್ಳಿ
ಬೆಲೆ: ರೂ. ೩೦/-

ಸಾಹಿತ್ಯದ ಯಾವ ಪ್ರಾಕಾರಕ್ಕೆ ಸೇರಿಸಬೇಕೆಂಬ ಜಿಜ್ಞಾಸೆ ಹುಟ್ಟಿಸುವ ಈ ಕೃತಿ, ಅಷ್ಟೇ ಆಕರ್ಷಕವಾದುದು ಕೂಡ. ವರ್ತಮಾನದ ಬದುಕಿನ ಹತ್ತು ಹಲವು ಮುಖಗಳನ್ನು ತಮ್ಮದೇ ಧಾಟಿಯಲ್ಲಿ ಹಿಡಿದಿಡುವ ಲೇಖಕರು ಮುಸ್ಲಿಂ ತಳ ಸಮುದಾಯಗಳ ಅಸಂಘಟಿತ ಸಮಾಜವೊಂದರ ದುರಂತ ಮುಖವನ್ನು ಓದುಗರಿಗೆ ಪರಿಚಯಿಸುತ್ತಾರೆ. ಅತಂತ್ರ ಬದುಕುಗಳ ಅಲೆಮಾರಿ ಚಿತ್ರಣಗಳಂತೆ ಕಾಣುವ ಇಲ್ಲಿನ ಬರಹಗಳು ಅತ್ಯಂತ ಕುತೂಹಲಕಾರಿಯಾಗಿವೆ. ದುಡಿಮೆಯ ಬೆವರಿನಿಂದ ಬದುಕುವ ಘನತೆ ಇಲ್ಲಿನ ವ್ಯಕ್ತಿ ಚಿತ್ರಗಳಲ್ಲಿ ಎದ್ದು ಕಾಣುತ್ತದೆ. ಮೊದಲ ಪ್ರಯತ್ನದಲ್ಲೇ ಲೇಖಕರು ಗಮನ ಸೆಳೆಯುತ್ತಾರೆ.

ಪ್ರಕಾಶಕರು: ಬಹುರೂಪಿ, ತಿಮ್ಮಯ್ಯ ರಸ್ತೆ ಜೀವನಹಳ್ಳಿ, ಬೆಂಗಳೂರು-೫



ಸಹ ಭಾಗಿತ್ವದ ಅವಕಾಶಕ್ಕೆ ಅಡ್ಡಿ

(೭ನೇ ಪುಟದಿಂದ)

ಇದನ್ನು ಇಂಗ್ಲಿಷ್ ವಿರೋಧಿ ಹೋರಾಟಗಾರರು ತಿಳಿಯದೇ ಹೋದರೆ ಇವರ ಚಳುವಳಿಯ ಕಾವಿನಲ್ಲಿ ಗ್ರಾಮೀಣ ಭಾಗದ ದಲಿತ ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳ ಸಾಮಾಜಿಕ, ಆರ್ಥಿಕ, ಬೌದ್ಧಿಕ ವಲಯಗಳ ಹಕ್ಕುಗಳು ನಾಶವಾಗಿ ಹೋಗುವುದನ್ನು ಅಲ್ಲಗೆಳೆಯಲಾಗುವುದಿಲ್ಲ. ಅಷ್ಟೇ ಅಲ್ಲದೆ ಈ ಸಮುದಾಯಗಳ ಹಿತಾಸಕ್ತಿಗಳನ್ನು ಒಳಗೊಳ್ಳದ ಇವರ ಚಳುವಳಿಗೆ ಯಾವುದೇ ಮಾನವೀಯ, ನೈತಿಕ ನೆಲೆಗಟ್ಟು ಇಲ್ಲದೆ ಅದು ಅಲ್ಪಾಯುಷಿಯಾಗಿ ಅವಸಾನ ಹೊಂದುತ್ತದೆ. ಇಂಗ್ಲಿಷನ್ನು ಕಲಿಯವುದೆಂದರೆ ಜಾಗತೀಕರಣ ವನ್ನು ಒಪ್ಪಿಕೊಂಡು ಅದನ್ನು ಕೊಬ್ಬಿಸುವುದು ಎಂಬ ವಾದ ಬಾಲಿಶ ವಾದುದು. ಜಾಗತೀಕರಣದ ಹುನ್ನಾರಗಳನ್ನು ತಿಳಿಯಲು ಮತ್ತು ಅದಕ್ಕೆ ಪ್ರಬಲ ಪೈಪೋಟಿವೊಡ್ಡಲು ಇಲ್ಲಿನ ಸ್ಥಳೀಯ ಪರಿಕರಗಳ ಜೊತೆಗೆ ಇಂಗ್ಲಿಷ್ ಜ್ಞಾನದ ಅಗತ್ಯವೂ ಇದೆ.

ಜಾಗತೀಕರಣದಿಂದಾಗಿ ಇಲ್ಲಿನ ಕೋಟಿ ಉದ್ಯೋಗಗಳು ನಶಿಸುತ್ತಿರುವಾಗಲೇ ಅದು ಸೃಷ್ಟಿಸಿರುವ ಲಕ್ಷ, ಲಕ್ಷ ಉದ್ಯೋಗಳತ್ತ ತಳಸಮುದಾಯಗಳು ಚಲಿಸಬೇಕಿದೆ. ಇಂಥ ಚಲನೆ ಆ ಸಮುದಾಯಗಳ ಪಾಲಿಗೆ ವಿಮೋಚನೆಯಾಗುತ್ತದೆ. ಹೊಸ ಪ್ರಪಂಚದೊಳಕ್ಕೆ ಅದೇ ಪ್ರವೇಶವನ್ನು ಪಡೆದ ಅವರೊಳಗೆ ಹುಟ್ಟುವ ಆತ್ಮ ಸ್ಥೈರ್ಯ ಅವರ ಹಿಂದಿರುವ ಪೀಳಿಗೆಗೆ ಸ್ಫೂರ್ತಿಯಾಗಿ ಹಾಗೂ ಮಾರ್ಗದರ್ಶಿಯೂ ಆಗುತ್ತದೆ. ಈ ವಸ್ತುನಿಷ್ಠ ಸತ್ಯದ ಪ್ರತಿಪಾದಕರನ್ನೂ MNCಗಳ ಏಜೆಂಟರೆಂದು ಕರೆಯುವ ಮೊದಲು ಐದಂಕಿ ಸಂಬಳಕ್ಕಾಗಿ MNCಗಳಲ್ಲಿ ಬೌದ್ಧಿಕ ಗುಲಾಮಗಾರಿಕೆ ಮಾಡುತ್ತಾ ಆ ಮೂಲಕ ಇಲ್ಲಿ ವಸಾಹತುಶಾಹಿಯ ವಿಸ್ತರಣೆಗೂ ಪರೋಕ್ಷವಾಗಿ ಕಾರಣರಾಗಿರುವ ಇವರ ಬಂಧುಗಳನ್ನು, ಮಕ್ಕಳನ್ನು, ಆ ಗುಲಾಮಗಿರಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಕನ್ನಡದ ಕೈಂಕರ್ಯಕ್ಕೆ ಮುಂದಾಗಿ ಎಂದು ಕರೆಕೊಡ ಬಲ್ಲರೆ?

ನಮ್ಮ ಸ್ವಾಯತ್ತೆಗಾಗಿ ಭಾಷಾಹೋರಾಟವನ್ನು ರೂಪಿಸುವುದರ ಜೊತೆಗೇ ನಮ್ಮ ಹೊಟ್ಟೆ ಪಾಡನ್ನು ನೀಗಿಸುವ ವಿಷಯಗಳ ಕಡೆಗೂ ಗಮನ ಕೊಡಬೇಕಿದೆ. ಬದುಕಲು ಪೂರಕವಾಗದ ಯಾವುದೇ ಅಂಶಗಳು ನಮಗೆ ದೊಡ್ಡದಾಗಿ ಕಾಣಬಾರದು, ಕಾಣಲಾರವೂ ಕೂಡ. ಈ ನಾಡಿನ ಬಡಹಳ್ಳಿಗೆ ಆಡಳಿತಾಂಗದ ವಿವಿಧ ಮುಖಗಳ ಜೊತೆ ಮುಖಾಮುಖಿಯಾಗಲು ಕನ್ನಡ ಭಾಷೆ ಹೇಗೆ ಆಡಳಿತ ಭಾಷೆಯಾಗಬೇಕೋ, ಹಾಗೆಯೇ ಬದಲಾದ ಸನ್ನಿವೇಶದಲ್ಲಿ ಅವನಿಗೆ ಚಲಿಸುವ ಭಾಷೆಯಾಗಿರುವ ಇಂಗ್ಲಿಷ್‌ನ ಜೊತೆ ಮಾತುಕತೆ ನಡೆಸಲು ಅದರಿಂದ ತನ್ನ ಅಗತ್ಯವನ್ನು ಪೂರೈಸಿಕೊಳ್ಳಲು ಇಂಗ್ಲಿಷ್ ಕಲಿಕೆ ಅಗತ್ಯವಿದೆ.

ಈ ಎಲ್ಲದರ ನಡುವೆ ಮಾತೃಭಾಷಾ ಹೋರಾಟವಾಗಲೀ, ಇಂಗ್ಲಿಷ್ ಕಲಿಕೆಯ ಹೋರಾಟವಾಗಲೀ ನಮ್ಮಗಳ ನಡುವೆ ಕಲ್ಲುಗೋಡೆ ನಿರ್ಮಿಸುವ ಕೃತ್ಯವಾಗ ದಂತೆ ನಾವೆಲ್ಲರೂ ಎಚ್ಚರ ವಹಿಸಬೇಕಿದೆ. ಸಾಮುದಾಯಿಕ ಒಳಿತಿಗಾಗಿ ನಮ್ಮೆಲ್ಲರ ಪ್ರಯತ್ನ, ಶ್ರಮ ವ್ಯಯವಾ ಗಬೇಕೆಂಬ ಅರಿವು ನಮಗಿಲ್ಲದೇ ಹೋದರೆ ಇದರ ಲಾಭಕ್ಕೆ ಮುಗಿಬೀಳಲು ಸಿದ್ಧವಾಗಿರುವ ದುಷ್ಟ ಶಕ್ತಿಗಳು ಮುಂದೆ ಪ್ರಗತಿಪರ ಶಕ್ತಿಗಳನ್ನು ನಿರ್ನಾಮ ಮಾಡಬಹುದಾಗಿದೆ. □

ಬೈದೇ ಬಾಳುವವರು

(೪ನೇ ಪುಟದಿಂದ)

ಭಾಷೆಯ ಬೆಲೆತೆತ್ತು ಒಂದರಿಂದ ಇಂಗ್ಲಿಷ್ ಕಲಿಸಲು ಬರುವುದಿಲ್ಲ, ಬೇಕಾದರೆ ನಾಲ್ಕರಿಂದ ಕಲಿಸಬಹುದು' ಎನ್ನಲಾಗಿದೆ. ಹೀಗಿರುವಾಗ ಸೂಕ್ತ ಸಾಂವಿಧಾನಿಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸದೆ ರಾಜ್ಯ ಸರಕಾರ ಆದೇಶ ಹೊರಡಿಸಿದರೆ ಆ ಆದೇಶವನ್ನು ನ್ಯಾಯಾಂಗದ ಸಮ್ಮುಖದಲ್ಲಿ ಚಾಲೆಂಜ್ ಮಾಡುವುದು ಅನಿವಾರ್ಯವಾಗುತ್ತದೆ. ನಾ.ದಿವಾಕರ್ ಪ್ರಕಾರ ಸುಪ್ರೀಂ ಕೋರ್ಟ್, ಕೇಂದ್ರ ಸರಕಾರ, ರಾಷ್ಟ್ರೀಯ ಶಿಕ್ಷಣ ನೀತಿಯ ತಯಾರಕರೆಲ್ಲರೂ ಯಥಾಸ್ಥಿತಿವಾದಿಗಳು ಎಂದಾದರೆ ದಿವಾಕರ್ ಅವರನ್ನಾದರೂ ಹೇಗೆ ನಂಬಲು ಸಾಧ್ಯ? ಬಹುಶಃ ಕಿ.ರಂ. ನಾಗರಾಜ್‌ಗೆ ಇರುವಷ್ಟು ತಿಳಿವಳಿಕೆ ಸುಪ್ರೀಂಕೋರ್ಟ್‌ಗೂ ಇರಬಹುದೆಂದು ನನ್ನ ಊಹೆ. ಇಲ್ಲ, ಸುಪ್ರೀಂ ಕೋರ್ಟ್‌ಗಿಂತಲೂ ನಾಗರಾಜರೇ ಬುದ್ಧಿ ವಂತರೆಂದು ಹೇಳುವುದಾದರೆ ಅದಕ್ಕೆ ಏನಾದರೂ ಪುರಾವೆಗಳು ಬೇಕಾಗುತ್ತವೆ.

ನಾ.ದಿವಾಕರ್ ಈಗಾಗಲೇ ಮೂರು ವರ್ಗಗಳನ್ನು ವಿಭಜಿಸಿದ್ದಾರೆ. ಅದಕ್ಕೆ ನಾನು ಇನ್ನೊಂದು ವರ್ಗವನ್ನು ಸೇರಿಸಲು ಇಚ್ಛಿಸುತ್ತೇನೆ. ಅದೆಂದರೆ, ಸದಾಕಾಲವೂ ಇನ್ನೊಬ್ಬರಿಗೆ ಬೈದೇ ಹೆಸರು ಮಾಡುವವರು. ಬೈಯುವುದನ್ನೇ ಬಂಡವಾಳವಾಗಿ ಮಾಡಿಕೊಂಡವರು. ಈ ಗುಂಪಿನ ಮೊದಲಿಗರು ಸ್ವತಃ ಲೇಖಕರೇ ಆಗಬಹುದೇ?

ಇಷ್ಟೆಲ್ಲ ಹೇಳಿದ್ದು ಒಂದನೆ ತರಗತಿಯಿಂದ ಇಂಗ್ಲಿಷ್ ಕಲಿಸಬೇಕು ಎಂಬ ದಿವಾಕರ್ ಅವರ ಪ್ರತಿಪಾದನೆಗಲ್ಲ, ಆ ಅಭಿಪ್ರಾಯ ಅವರದಾದರೆ ಅದನ್ನವರು ಹೇಳಬೇಕು. ನಿಜವಾಗಿಯೂ ಅವರ ವಿಚಾರಗಳು ಚೆನ್ನಾಗಿವೆ. ಅದಕ್ಕೆ ಅವರದೆ ಆದ ಸಮರ್ಥನೆಯೂ ಇದೆ. ಅವರ ವಿಚಾರವನ್ನು ಒಪ್ಪದಿದ್ದರೂ ಆ ಅಭಿಪ್ರಾಯವನ್ನು ಗೌರವಿಸುತ್ತೇನೆ. ಹಾಗಂತ ತನ್ನ ವಿಚಾರವನ್ನು ಹೇಳಬೇಕಾದರೆ ತನ್ನ ವಿರುದ್ಧ ಅಭಿಪ್ರಾಯವಿರುವವರೆಲ್ಲ ಯಥಾಸ್ಥಿತಿವಾದಿಗಳು, ಅಪ್ರಾ ಮಾಣಿಕರು, ಹುಂಬರು, ದುರ್ಬಲರ ವಿರೋಧಿಗಳು ಎಂಬಂತಹ ಧೋರಣೆ ಇದೆಯಲ್ಲ, ಇದು ಖಂಡನಾರ್ಹ. ಇಂಗ್ಲಿಷ್ ಬೇಕು ಎನ್ನಲು ಅವರಿಗಿರುವಷ್ಟೇ ಹಕ್ಕು ಕನ್ನಡ ಬೇಕು ಎನ್ನಲು ನಮಗೂ ಇದೆ. ಅಷ್ಟಕ್ಕೂ ಇಂಗ್ಲಿಷ್ ಬೇಡ ಅಂತ ಯಾರೂ ಹೇಳುತ್ತಿಲ್ಲ, ಒಂದುರಿಂದ ನಾಲ್ಕುರ ವರೆಗೆ ಬೇಕೋ ಬೇಡವೋ ಎಂಬುದಷ್ಟೇ ಪ್ರಶ್ನೆ. ಐದರಿಂದ ಒಳ್ಳೆಯ ಇಂಗ್ಲಿಷ್ ಕಲಿಸಲು ಇಂಗ್ಲಿಷ್ ಮೇಜರ್ ಬಿ.ಎ.ಬಿಎಡ್ ಹ್ಯಾಂಡ ಕೊಡಲಿ. ಯಾರದೂ ತಕರಾರು ಇಲ್ಲ, ಇನ್ನೊಂದು ಸಂಗತಿ ಎಂದರೆ, ಸರಕಾರಿ ಶಾಲೆಗೆ ದಲಿತರು ಮತ್ತು ಹಿಂದುಳಿದವರ ಮಕ್ಕಳು ಮಾತ್ರ ಹೋಗುವುದಿಲ್ಲ, ಬಡಬ್ರಾಹ್ಮಣರ ಮಕ್ಕಳೂ ಬಡ ಲಿಂಗಾಯಿತರ ಮಕ್ಕಳೂ ಸರಕಾರಿ ಶಾಲೆಗೇ ಹೋಗುತ್ತಾರೆ. ಹಾಗೆಯೇ ಶ್ರೀಮಂತ ದಲಿತ ಹಾಗೂ ಹಿಂದುಳಿದವರ ಮಕ್ಕಳೂ ಕಾನ್ವೆಂಟಿಗೇ ಹೋಗುತ್ತಾರೆ. □

ಸಂವಾದ





ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣ ವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ, ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಭೀಮಸೇನಾನಿ: ಬಿ. ಶ್ಯಾಮಸುಂದರ

ನೆನಪು

ಚಿಂತಕ ಲೋಕ ಶ್ಯಾಮಸುಂದರ ಅವರನ್ನು 'ದಲಿತ ಚಳುವಳಿಯ ಪಿತಾಮಹಾ'ನೆಂದೂ ಅಂಬೇಡ್ಕರೋತ್ತರ ದಲಿತ ಚಳುವಳಿಯ ಏಕೈಕ ಮಹಾ ನಾಯಕರೆಂದೂ ಪರಿಗಣಿಸುತ್ತ ಬಂದಿದೆ. ಶ್ಯಾಮಸುಂದರರ ಸಾಧನೆಗಳನ್ನು ನೋಡಿದಾಗ ಈ ಮಾತುಗಳು ಸ್ತುತಿಯಲ್ಲವೆಂದು ಮನವರಿಕೆಯಾಗುತ್ತದೆ. ದಲಿತ ಲೋಕದ ಉದ್ಧಾರಕ್ಕಾಗಿ ತಮ್ಮ ಬದುಕನ್ನೆ ಮುಡುಪಾಗಿಟ್ಟ ಅವರ ಸಾಧನೆ ಬಹುಮುಖ್ಯವಾಗಿದೆ. ಕೆಳವರ್ಗದವರನ್ನು ಮೇಲೆತ್ತಲು ಶ್ಯಾಮಸುಂದರ ಅವರು ಅವಿರತವಾಗಿ ದುಡಿದ್ದಾರೆ. ಜನ ಸಂಘಟನೆ, ಹೋರಾಟ, ಸಾಹಿತ್ಯ ರಚನೆ, ಕಾನೂನು ಸಮರ ಇತ್ಯಾದಿಗಳ ಮೂಲಕ ದಲಿತ ಪ್ರಪಂಚವನ್ನು ಉದ್ಧರಿಸಲು ಅವರು ಹೆಣಗಿದರು.

○ ಡಾ.ಎಚ್.ಟಿ.ಪೋತೆ
○ ಡಾ.ಜಗನ್ನಾಥ ಸಿಂಧೆ

'ನಾವು ಮಾತನಾಡುತ್ತೇವೆ, ನಮ್ಮನ್ನು ಎಲ್ಲರೂ ಕೇಳಿಸಿಕೊಳ್ಳಲಿ
ಇದರಿಂದ ಪ್ರಪಂಚದ ವ್ಯವಸ್ಥೆ ಬಿರುಕು ಬಿಟ್ಟರೂ ಬಿಡಲಿ
ನಾವು ಒಂದು ಶಬ್ದವನ್ನೂ ಬಚ್ಚಿಡುವುದಿಲ್ಲ
ಆಡಿದ ಒಂದು ಅಕ್ಷರವನ್ನೂ ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ.
ಅಂಜುಬುರುಕರು ಅಂಜುತ್ತಿರಲಿ, ಹೇಡಿಗಳು ಹಿಂಜರಿಯಲಿ
ಸಂಪ್ರದಾಯವಾದಿಗಳು ಎದುರಾಗಿ ನಿಲ್ಲಲಿ
ನಾವು ಯಾವುದನ್ನು ಧೈರ್ಯದಿಂದ ವಿಚಾರಿಸಿದ್ದೇವೆಯೋ
ಅದನ್ನು ಹೇಳುವ ಧೈರ್ಯವು ನಮಗಿದೆ'

-ಜೆ.ಆರ್.ಲಾವೆಲ್

ಮೇಲುಕೀಳಿನ ಸಮಸ್ಯೆ ಇಡೀ ಪ್ರಪಂಚಕ್ಕೆ ಅಂಟಿಕೊಂಡಿರುವ ಸಾಮಾಜಿಕ ಪಿಡುಗಾಗಿದೆ. ಬಡವರು, ಶ್ರೀಮಂತರು, ಕಪ್ಪು ಬಣ್ಣದವರು, ಕೆಂಪು ಬಣ್ಣದವರು, ಹೆಣ್ಣು-ಗಂಡು ಈ ಬಗೆಯ ತಾರತಮ್ಯಗಳು ಮನುಷ್ಯ ಸಂಸ್ಕೃತಿಯೊಂದಿಗೇ ಹುಟ್ಟಿಕೊಂಡು ಬಂದಿವೆ. ಇದರೊಂದಿಗೆ ಜಾತಿ ವ್ಯವಸ್ಥೆ ಕೈಗೂಡಿಸಿದ ಕಾರಣ ಭಾರತದಂತಹ ದೇಶದಲ್ಲಿ ಈ ಪಿಡುಗು ಇನ್ನಷ್ಟು ಭಯಾನಕವಾಗಿ ಕಾಡುತ್ತಾ ಬಂದಿದೆ. ನೈಸರ್ಗಿಕವಾದ ಹುಟ್ಟಿಗೆ ಅನೈಸರ್ಗಿಕವಾದ ಜಾತಿಯ ಹಣೆಪಟ್ಟಿಯನ್ನು ಕಟ್ಟುತ್ತ ಬಂದಿರುವುದು ಭಾರತದ ಬೌದ್ಧಿಕತೆಯ ಒಂದು ದುರಂತ ಮುಖವಾಗಿದೆ. ಮನುಷ್ಯನ ಬುದ್ಧಿ ಬೆಳೆದಂತೆಲ್ಲ ಈ ಬಗೆಯ ಕಂದರಗಳು ಕಡಿಮೆಯಾಗಬೇಕಿತ್ತು. ಆದರೆ ವಿಪರ್ಯಾಸವೆಂದರೆ, ಇಪ್ಪತ್ತೊಂದನೆಯ ಶತಮಾನದಲ್ಲೂ ಕೂಡ ಇಂತಹ ತಳಬುಡವಿಲ್ಲದ ತಿಳುವಳಿಕೆಗಳು ಅತ್ಯಂತ ಪ್ರಭಾವಶಾಲಿಯಾಗಿ ಪ್ರಚಲಿತದಲ್ಲಿವೆ.



ಪ್ರಾಚೀನ ಭಾರತೀಯ ಸಮಾಜದಲ್ಲಿಯೂ ಇಂತಹ ಅರೆಕೋರೆಗಳಿದ್ದವು. ಬಲಶಾಲಿಗಳಾದವರು ಬಲಹೀನರನ್ನು ಅನೇಕ ನೆಲೆಗಳಲ್ಲಿ ತುಳಿಯುತ್ತಲೆ ಬಂದಿದ್ದಾರೆ. ಪ್ರಖರ ವಿಚಾರವಾದಿಗಳಾಗಿದ್ದ ಪ್ರಾಚೀನ ಭಾರತದ ಸಂತ ಪರಂಪರೆ ಇದನ್ನು ಖಂಡಿಸುತ್ತಲೇ ಬಂದಿದೆ. ಜನ್ಮಕ್ಕೆ ಆರೋಪಿತವಾದ ಜಾತಿ ಮತ್ತು ಜಾತಿಗೆ ಆರೋಪಿತವಾದ ಪೌರೋಹಿತ್ಯವನ್ನು ಮರೆಯುತ್ತ ಕೀಳು ಜಾತಿಯವರನ್ನು ತುಳಿಯುತ್ತ ಬಂದ ಪುರಾತನ ಸಮಾಜ ವ್ಯವಸ್ಥೆಯನ್ನು ಬುದ್ಧ, ಮಹಾವೀರ, ಮಕ್ಖಲಿಗೋಸಾಲ, ಅಜಿತ ಕೇಸಿ ಕಂಬಲಿ ಮುಂತಾದ ವಿಚಾರವಾದಿಗಳು ಪ್ರಬಲವಾಗಿ ವಿರೋಧಿಸುತ್ತಾ ಬಂದಿದ್ದಾರೆ. ಅವರ ಒಟ್ಟು ವಿಚಾರಗಳು ಸಂಪೂರ್ಣ ಜೀವಪರವಾಗಿದ್ದವು. ಅಲ್ಲಿ ವರ್ಗ, ವರ್ಣ, ಲಿಂಗ, ಜಾತಿ, ಪ್ರದೇಶ, ಬಣ್ಣ ಹಣಕಾಸಿನ ಅಂತಸ್ತು ಇದಾವುದಕ್ಕೂ ಗಣನೆ ಇರಲಿಲ್ಲ. ಸರ್ವ ಜೀವ ಸಮಾನತೆಯೊಂದೇ ಅವರ ಗುರಿಯಾಗಿದ್ದಿತು. ಇವರೆಲ್ಲ ಲೋಕ ಸಂಚಾರ ಮಾಡಿ ನೊಂದವರನ್ನು ಸಂತೈಸಿದರು. ಬೆಂದವರ ಬೇಗುದಿಗೆ ಕಿವಿಗೊಟ್ಟರು. ಜೀವವಿರೋಧಿಯಾದ ಮತ್ತು ಜೀವಪರವಾದ ತುಮುಲದ ಒಂದು ದೊಡ್ಡ ಚರಿತ್ರೆಯನ್ನು ಕಟ್ಟಿಕೊಡುವುದು ಸಾಧ್ಯವಿದೆ.

ಇಪ್ಪತ್ತನೆಯ ಶತಮಾನದ ಭಾರತದಲ್ಲಿ ಜೀವಪರ ಹೋರಾಟ ನಡೆಸಿದ ಪ್ರಮುಖರಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರು ಒಬ್ಬರು. ನೊಂದವರ, ದೀನದಲಿತರ ಚರಿತ್ರೆಯಲ್ಲಿ ಡಾ.ಅಂಬೇಡ್ಕರ್ ಅವರು ಬೆಳ್ಳಿಚುಕ್ಕೆಯ ಹಾಗೆ ಬೆಳಗಿದರೆ ತುಳಿತಕ್ಕೆ ಒಳಗಾದವರಿಗೆ ಸಾಂತ್ವನ ನೀಡಿ ಧೈರ್ಯತುಂಬಿ, ಜಾಗೃತಿಯನ್ನುಂಟುಮಾಡಿ, ಸ್ವಾಭಿಮಾನ ಚಳುವಳಿಗೆ ನಾಂದಿ ಹಾಡಿದ್ದಾರೆ. ಭಾರತದ ಸಂವಿಧಾನದಲ್ಲಿ ಜೀವಪರವಾದ ಅನೇಕ ಕಾನೂನುಗಳನ್ನು ರಚಿಸಿ ಜಾರಿಗೆಗೊಳಿಸಿದ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ.

ಈ ಮಾಲಿಕೆಯಲ್ಲಿ ಭಾರತದ ಮಟ್ಟದಲ್ಲಿ ಪ್ರಭಾವ ಬೀರಿದ ಮಹಾತ್ಮ ಜ್ಯೋತಿಬಾ ಫುಲೆ ಛತ್ರಪತಿ ಶಾಹುಮಹಾರಾಜ್, ನಾರಾಯಣ ಗುರು, ಪೆರಿಯಾರ್, ಲೋಹಿಯಾ ಇವರು ಕೂಡಾ ಜೀವಪರ ಚಳುವಳಿಯ ಪ್ರಮುಖ ನೇತಾರರಾಗಿದ್ದಾರೆ. ಅವರು ಹೊತ್ತಿಸಿದ ಜಾಗೃತಿಯ ದೀಪವನ್ನು ಬಿ.ಶ್ಯಾಮಸುಂದರರವರು ಮುಂದಿನ ತಲೆಮಾರಿಗೆ ಅಧಿಕೃತವಾಗಿ ಹಸ್ತಾಂತರಿಸಿದ್ದಾರೆ. ಈ ಕಾರಣಕ್ಕಾಗಿಯೇ ಚಿಂತಕ ಲೋಕ ಶ್ಯಾಮಸುಂದರ ಅವರನ್ನು 'ದಲಿತ ಚಳುವಳಿಯ ಪಿತಾಮಹಾ'ನೆಂದೂ ಅಂಬೇಡ್ಕರೋತ್ತರ ದಲಿತ ಚಳುವಳಿಯ ಏಕೈಕ ಮಹಾ ನಾಯಕರೆಂದೂ ಪರಿಗಣಿಸುತ್ತ ಬಂದಿದೆ. ಶ್ಯಾಮಸುಂದರರ ಸಾಧನೆಗಳನ್ನು ನೋಡಿದಾಗ ಈ ಮಾತುಗಳು ಸ್ತುತಿಯಲ್ಲವೆಂದು ಮನವರಿಕೆಯಾಗುತ್ತದೆ.

ದಲಿತ ಲೋಕದ ಉದ್ಧಾರಕ್ಕಾಗಿ ತಮ್ಮ ಬದುಕನ್ನೆ ಮುಡುಪಾಗಿಟ್ಟ ಶ್ಯಾಮಸುಂದರ (21.12.1908–19.05.1975) ಅವರ ಸಾಧನೆ ಬಹುಮುಖ್ಯವಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂವಿಧಾನಿಕವಾಗಿ ಕೆಳವರ್ಗದವರನ್ನು ಮೇಲೆತ್ತಲು ಶ್ಯಾಮಸುಂದರ ಅವರು ಅವಿರತವಾಗಿ ದುಡಿದ್ದಾರೆ. ಜನ ಸಂಘಟನೆ, ಹೋರಾಟ, ಸಾಹಿತ್ಯ ರಚನೆ, ಕಾನೂನು ಸಮರ ಇತ್ಯಾದಿಗಳ ಮೂಲಕ ಭಾರತದ ದಲಿತ ಪ್ರಪಂಚವನ್ನು ಉದ್ಧರಿಸಲು ಅವರು ಹೆಣಗಿದರು. ಭಾರತದ ಜನನಾಯಕರ ಚರಿತ್ರೆಯಲ್ಲಿ ಶ್ಯಾಮಸುಂದರ ಅವರಿಗೆ ಖಂಡಿತವಾಗಿ ದೊಡ್ಡ ಸ್ಥಾನ ಸಿಗಬೇಕು. ಆದರೆ ಯಾವುದೋ ಕಾಣದ ಕೈ ಅದು ಸಾಧ್ಯವಾಗದಂತೆ ನೋಡಿಕೊಂಡಿದೆ. ಬೆಂಕಿಯನ್ನು ಬಚ್ಚಿಡುವುದು ಸಾಧ್ಯವಿಲ್ಲ. ಸಂವಿಧಾನಬದ್ಧವಾಗಿ, ಸರ್ವಸಮಾನತೆಗಾಗಿ ಎಲ್ಲರೂ ಮನಸ್ಸುಗಳನ್ನು ಸಿದ್ಧಪಡಿಸಿಕೊಳ್ಳುವುದು ಈಗ ಅನಿವಾರ್ಯವಾಗಿದೆ. ಆ ದಿಸೆಯಲ್ಲಿ ಕತ್ತಲೆಯಲ್ಲಿ ಮುಚ್ಚಿಹೋಗುತ್ತಿದ್ದ ದಿ. ಬಿ. ಶ್ಯಾಮಸುಂದರ ಅವರ ಬದುಕು ಬರಹಗಳನ್ನು ಕೃತಿ ರೂಪದಲ್ಲಿ ಓದುಗರಿಗೆ ತಲುಪಿಸುವ ಜವಾಬ್ದಾರಿ ಲೇಖಕರ, ವಿಚಾರವಾದಿಗಳ ಮುಂದಿರುವ ದೊಡ್ಡ ಕರ್ತವ್ಯವಾಗಿದೆ.

ಬಿ. ಶ್ಯಾಮಸುಂದರ ಅವರು ಹುಟ್ಟಿದ್ದು ಡಿಸೆಂಬರ್ 21, 1908ರಲ್ಲಿ. ಅವರ ತಂದೆ ಬದುಲಾ ಮಾಣಿಕ್ಯಂ, ತಾಯಿ ಸುಧಾಬಾಯಿ ಮಧ್ಯಮ ವರ್ಗದವರಾಗಿದ್ದು, ಅಸ್ಪೃಶ್ಯರೆನಿಸಿದ 'ಮಾಲಾ' ಜಾತಿಗೆ ಸೇರಿದವರಾಗಿದ್ದರು.

ಬಿ. ಶ್ಯಾಮಸುಂದರ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕ್ರೈಸ್ತ ಮಿಷನರಿಯ ಸೆವೆನ್ ಪ್ಲವರ್ಸ್ ಶಾಲೆಯಲ್ಲಿ, ಮಾಧ್ಯಮಿಕ ಶಿಕ್ಷಣವನ್ನು ಮುಸ್ಲಿಂ ಶಾಲೆಗಳಲ್ಲಿ ಹೀಗೆ 1913 ರಿಂದ 1917ರ ಮಧ್ಯದಲ್ಲಿ ಪೂರ್ಣಗೊಳಿಸಿದರು. ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಒಳ್ಳೆಯ ಅಧ್ಯಾಪಕನಾಗಬೇಕೆಂಬ ಹಂಬಲ ಅವರದಾಗಿತ್ತು. ಆ ಮೂಲಕ ಆತ್ಮಗೌರವವನ್ನು ಸಂಪಾದಿಸಿಕೊಳ್ಳಬೇಕೆಂಬ ಹೆಬ್ಬಯಕೆ ಯಿಂದ ಹೆಚ್ಚು ಶಿಕ್ಷಣಶೀಲರಾಗಲು ಚಿಕ್ಕಂದಿನಿಂದಲೇ ಪ್ರಯತ್ನ ಮಾಡಿದರು. ಅವರ ಎಳೆವಯಸ್ಸಿನಲ್ಲಿ ಅಂಕುರಿಸಿದ ಈ ಭಾವನೆಗೆ ನೀರೆರೆದವರು, ಕ್ರೈಸ್ತ ಮಿಷನರಿ ಹಾಗೂ ಮುಸ್ಲಿಂ ಶಾಲೆಗಳು. ಹಿಂದೂ ಶಿಕ್ಷಣ ಸಂಸ್ಥೆಗಳಾವುವೂ ಇವರಿಗೆ ಪ್ರವೇಶ ನೀಡಲಿಲ್ಲ. ಅವರ ತಂದೆ ಕೇಂದ್ರ ಸರಕಾರದ ಸೇವೆಯಲ್ಲಿದ್ದ ಕಾರಣ ಔರಂಗಾಬಾದಿನಿಂದ ಹೈದ್ರಾಬಾದಿಗೆ ವರ್ಗಾವಣೆಗೊಂಡರು. ತಂದೆಯೊಂದಿಗೆ ಹೈದ್ರಾಬಾದಿಗೆ ಬಂದು ತಮ್ಮ ಉನ್ನತ ವ್ಯಾಸಂಗವನ್ನು ಮುಂದುವರೆಸಿದರು. ಬಿ. ಶ್ಯಾಮಸುಂದರ ಅವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು ಬಿ.ಎ. ಮತ್ತು ಎಲ್.ಎಲ್.ಬಿ.ಯಂತಹ ಉನ್ನತ ಪದವಿಗಳನ್ನು, ಹೈದ್ರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದ ಮೂಲಕ ಅರ್ಥಶಾಸ್ತ್ರ ವಿಷಯದಲ್ಲಿ ಬಿ.ಎ. ಪದವಿಯನ್ನು ರ್‍ಯಾಂಕ್ ಸಮೇತ ಪಡೆದುಕೊಂಡರು. 1924ರಲ್ಲಿ ಖುಸ್ರು-ಎ-ಧಕ್ಕನ್ ಎಂಬ ಬಿರುದು ಮತ್ತು ಬಂಗಾರದ ಪದಕಗಳನ್ನು ನೀಡಲಾಯಿತು. ತರುವಾಯ ಅವರು ಕಾನೂನು ಪದವಿಯನ್ನು ಪೂರೈಸಿಕೊಂಡರು.

ಶ್ಯಾಮಸುಂದರರು ತಮ್ಮ ಪ್ರೌಢಾವಸ್ಥೆಯಲ್ಲಿಯೇ ನಾಯಕತ್ವದ ಎಲ್ಲ ಲಕ್ಷಣಗಳನ್ನು ಹೊಂದಿದ್ದರು. ೧೯೩೯ರಲ್ಲಿ ಸರೋಜಿನಿ ನಾಯ್ಡು ಅವರು ಹೈದ್ರಾಬಾದಿನಲ್ಲಿ ಜರುಗಿದ ಪದವೀಧರರ ಸಮಾವೇಶದ ಕಾರ್ಯದರ್ಶಿಗಳಾಗಿ ಭಾಗವಹಿಸಿದರು. ಜೊತೆಗೆ ಅವರು ಉಸ್ಮಾನಿಯ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿಯೂ ಬಹುಕಾಲ ಸೇವೆ ಸಲ್ಲಿಸಿದ್ದಾರೆ. ಜನಪರ ಧೋರಣೆಗಳಿಂದ ಕೂಡಿದ ಅವರನ್ನು ಹಲವು ಜವಾಬ್ದಾರಿಗಳು ಹುಡುಕಿಕೊಂಡು ಬಂದವು. ನಿಜಾಂ ರಾಜ್ಯ ರೈಲ್ವೆ ನೌಕರರ ಸಂಘದ ಅಧ್ಯಕ್ಷತೆಯು ಅವುಗಳಲ್ಲಿ ಒಂದು. ಅಲ್ಲದೆ ಹೈದ್ರಾಬಾದಿನ ನಿಜಾಮನು ಸ್ಥಾಪಿಸಿದ ಶಿಕ್ಷಣ ಕ್ಷೇತ್ರದ ಶಾಸಕಾಧಿಕಾರಿಗಳ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಆ ಸಂದರ್ಭದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಅವರು ಯುವಕರ ಸಮಾವೇಶಗಳನ್ನು ನಡೆಸಿ ದಾಸ್ಯದ ಶೃಂಖಲೆಯನ್ನು ಕಿತ್ತೊಗೆಯಲು ಪ್ರೇರೆಪಿಸಿದರು.

ಅಮೆರಿಕಾ ಯೂರೋಪ ಮೊದಲಾದ ದೇಶಗಳನ್ನು ಸುತ್ತುವ ಮತ್ತು ಅಲ್ಲಿಯ ಜನತೆಯ ಜೀವನ ಪದ್ಧತಿ ಮತ್ತು ಸಂಸ್ಕೃತಿಯನ್ನು ಸಮೀಪದಿಂದ ತಿಳಿದುಕೊಳ್ಳುವ ಅವಕಾಶವನ್ನು ಶ್ಯಾಮಸುಂದರ ಅವರು ಸದ್ವಿನಿಯೋಗ ಮಾಡಿಕೊಂಡರು. ಅಲ್ಲಿಯ ರಾಜಕೀಯ ತತ್ವಗಳನ್ನು ಅಭ್ಯಸಿಸಿದ್ದಲ್ಲದೆ ಅಂತರರಾಷ್ಟ್ರೀಯ ಮಟ್ಟದ ರಾಜಕೀಯ ಗಣ್ಯರಾದ ಚೌ.ಎನ್.ಲಾಯ್ ಮತ್ತು ಹೊ.ಚಿ.ಮಿನ್. ವಿನ್‌ಸ್ಟನ್ ಚರ್ಚಿಲ್, ಹೆರಾಲ್ಡ್ ಲಾಸ್ಕಿ ಮುಂತಾದ ರಾಜಕೀಯ ಗಣ್ಯರ ನಿಕಟ ಸಂಪರ್ಕ ಹೊಂದಿದ್ದರು. ತಮ್ಮ ವ್ಯಕ್ತಿತ್ವವನ್ನು ದೊಡ್ಡದಾಗಿಸಿಕೊಳ್ಳುವಲ್ಲಿ ಇವೆಲ್ಲ ಪ್ರಸಂಗಗಳು ಶ್ಯಾಮಸುಂದರ ಅವರಿಗೆ ತುಂಬ ನೆರವಾದವು.

೧೯೪೭ ರಲ್ಲಿ ಭಾಲ್ಕಿ ಕ್ಷೇತ್ರದಿಂದ ಆಯ್ಕೆಗೊಂಡು ಕರ್ನಾಟಕ(ಮೈಸೂರು) ವಿಧಾನ ಸಭೆಯನ್ನು ಪ್ರವೇಶಿಸಿದರು. ತಮ್ಮ ಅಪಾರ ಅನುಭವ, ಅಧ್ಯಯನ, ವಿದ್ವತ್ತು, ಭಾಷಣ ಕಲೆ ರಾಜಕೀಯ ಪ್ರೌಢಿಮೆಗಳಿಂದಾಗಿ ಅವರು ಸದನದಲ್ಲಿ ಎತ್ತರದ ಸ್ಥಾನವನ್ನು ಪಡೆದುಕೊಂಡರು. ಆ ಮೂಲಕ ಅನೇಕ ನೆಲೆಗಳಲ್ಲಿ ಸಾಮಾಜಿಕ ಹಿತಕ್ಕಾಗಿ ಹೋರಾಡಿದರು. ೧೯೬೮ ರಲ್ಲಿ ದಲಿತ ಪರವಾದ 'ಭಾರತೀಯ ಭೀಮಸೇನೆ' ಯನ್ನು ಸ್ಥಾಪಿಸಿ ತಾವೇ ಅದರ ಸಂಸ್ಥಾಪಕ ಅಧ್ಯಕ್ಷರಾದರು. ಆ ಮೂಲಕ ಅವರು ಉಂಟುಮಾಡಿದ ಜನಜಾಗೃತಿ ಅನನ್ಯವಾದುದು. ಭಾರತದ ಜಾತಿ ವ್ಯವಸ್ಥೆ ಮತ್ತು ರಾಜಕೀಯ ವ್ಯವಸ್ಥೆಯ ದೋಷಗಳನ್ನು ಅವರು ನಿರ್ಭೀತಿಯಿಂದ ಖಂಡಿಸಿದರು. ಬ್ರಹ್ಮಚಾರಿಗಳಾಗಿದ್ದು, ಆಸ್ತಿ - ಅಂತಸ್ತಿನ ಹಂಗುಗಳನ್ನು ಹರಿದೊಗೆದು ಜನಸೇವೆಗಾಗಿ ದುಡಿದ ಈ ಹಿರಿಜೀವ ೧೯.೦೫.೧೯೭೫ ರಲ್ಲಿ ಈ ಲೋಕವನ್ನು ಅಗಲಿತು. ಲೌಕಿಕದ ದೃಷ್ಟಿಯಿಂದ ಸರ್ವಸಾಮಾನ್ಯರ ಹಾಗೆ ಬದುಕಿದ್ದ ಬಿ. ಶ್ಯಾಮಸುಂದರ ಅವರು ತಮ್ಮ ವೈಚಾರಿಕ ಮತ್ತು ಸಾಹಿತ್ಯಿಕ ಸಾಧನೆಗಳಿಂದ ಭಾರತೀಯ ಚರಿತ್ರೆಯಲ್ಲಿ ಸ್ಥಾನ ಪಡೆದುಕೊಳ್ಳುವ ಯೋಗ್ಯತೆಯನ್ನು ಹೊಂದಿದ್ದಾರೆ.

ಬಿ.ಶ್ಯಾಮಸುಂದರ ಅವರು ಬಾಲ್ಯದಿಂದಲೇ ಕೆಳವರ್ಗದವರ ಗುಲಾಮಗಿರಿಯ ಸ್ಥಿತಿಯನ್ನು ವಿರೋಧಿಸುತ್ತಾ ಬಂದಿದ್ದಾರೆ. ವ್ಯಕ್ತಿಯು ಜಾತಿಯ ಹಂಗುದೊರೆದು ಸ್ವಾಭಿಮಾನದಿಂದ ಎದೆಯೆತ್ತಿ ನಡೆಯಬೇಕೆಂಬುದು ಅವರ ನಿಲುವಾಗಿತ್ತು. ಯಾರನ್ನು ಸಂಪ್ರದಾಯವಾದಿಗಳು ಶೂದ್ರರು, ಮ್ಲೇಚ್ಚರು, ದಾಸರು, ದಸ್ಯುಗಳು, ರಾಕ್ಷಸರು ಎಂದೆಲ್ಲ ಕರೆಯುತ್ತಿದ್ದರೋ ಅವರೇ ಭಾರತದ ಮೂಲನಿವಾಸಿಗಳು. ಅವರೆಲ್ಲ ಸೇರಿ ಹಿಂದುಯೇತರ ಚಳುವಳಿಯೊಂದನ್ನು ಹುಟ್ಟು ಹಾಕಬೇಕಾಗಿದೆ ಎಂದು ಬಯಸಿದ್ದರು. ಮತೀಯವಾದಿ ಬಹುಮತ ಹೊಂದಿದವರಿಗೆ ರಾಜಕೀಯ ರಂಗದಲ್ಲಿ ಸಿಗುತ್ತಿದ್ದ ಹೆಚ್ಚಿನ ಪ್ರಮಾಣದ ಪ್ರಾತಿನಿಧ್ಯವನ್ನು ಶ್ಯಾಮಸುಂದರ ಅವರು ನೇರವಾಗಿ ಖಂಡಿಸಿದರು. ಬಹುಮತ ಹೊಂದಿದವರ ಮುಂದೆ ಅಲ್ಪಸಂಖ್ಯಾತರು ಕೀಳರಿಮೆಯನ್ನು ಅನುಭವಿಸುವಂತಾಗಬಾರದು. ತಾವು ರಾಷ್ಟ್ರದ ದ್ವಿತೀಯ ದರ್ಜೆಯ ಪ್ರಜೆಗಳೆಂಬ ಕೀಳು ಭಾವನೆ ಅವರಲ್ಲಿ ಇರಬಾರದು ಎಂಬುದನ್ನು ಶ್ಯಾಮಸುಂದರ ಅವರು ತಮ್ಮ ಧ್ಯೇಯವಾಕ್ಯವನ್ನಾಗಿಸಿಕೊಂಡಿದ್ದರು. ಸಾಮಾಜಿಕ ಅಂತಸ್ತಿನ ಮತ್ತು ವ್ಯಕ್ತಿಗೌರವದ ಸಮಾನತೆಗಾಗಿ ಅವರು ಹೋರಾಡಿದರು. ತಮ್ಮ ಅನುಭವ, ಅಧ್ಯಯನ ಮತ್ತು ರಾಜಕೀಯ ಅಧಿಕಾರಗಳನ್ನು ಬಳಸಿಕೊಂಡು ತುಳಿತಕ್ಕೊಳಗಾದವರನ್ನು ಮೇಲೆತ್ತಲು ಅವರು ಬದುಕಿನುದ್ದಕ್ಕೂ ಪ್ರಯತ್ನಿಸಿದರು. ಅಸ್ಪೃಶ್ಯರು ಮತ್ತು ಇತರ ಅಲ್ಪಸಂಖ್ಯಾತರು ಅಭದ್ರತೆಯನ್ನು ಅನುಭವಸುವಂತಿರಬಾರದು ಎಂಬುದು ಅವರ ಮುಖ್ಯ ಗುರಿಯಾಗಿದ್ದಿತು. ಭಾರತದ ಆಡಳಿತವನ್ನು ರಾಷ್ಟ್ರೀಕರಣಗೊಳಿಸಬೇಕೆಂಬುದು, ಅಲ್ಪಸಂಖ್ಯಾತರಿಗೆ ಅದರಲ್ಲಿ ವಿಶೇಷವಾದ ಸ್ಥಾನಮಾನಗಳಿರಬೇಕೆಂಬುದು ಅವರ ಇನ್ನೊಂದು ವಿಚಾರವಾಗಿದ್ದಿತು. ನಮಗೆ ಬರಬೇಕಾದುದನ್ನು ಹಕ್ಕಿನಿಂದ ಪಡೆಯಬೇಕೇ ಹೊರತು ದೈನ್ಯದಿಂದಲ್ಲ ಎಂಬುದು ಅವರು ಧೋರಣೆ.

ಬಿ.ಶ್ಯಾಮಸುಂದರ ಅವರು ಬಾಲ್ಯದಿಂದಲೇ ಕೆಳವರ್ಗದವರ ಗುಲಾಮಗಿರಿಯ ಸ್ಥಿತಿಯನ್ನು ವಿರೋಧಿ, ಸುತ್ತಾ ಬಂದಿದ್ದಾರೆ. ವ್ಯಕ್ತಿಯು ಜಾತಿಯ ಹಂಗುದೊರೆದು ಸ್ವಾಭಿಮಾನದಿಂದ ಎದೆಯೆತ್ತಿ ನಡೆಯಬೇಕೆಂಬುದು ಅವರ ನಿಲುವಾಗಿತ್ತು. ಯಾರನ್ನು ಸಂಪ್ರದಾಯವಾದಿಗಳು ಶೂದ್ರರು, ಮ್ಲೇಚ್ಚರು, ದಾಸರು, ದಸ್ಯುಗಳು, ರಾಕ್ಷಸರು ಎಂದೆಲ್ಲ ಕರೆಯುತ್ತಿದ್ದರೋ ಅವರೇ ಭಾರತದ ಮೂಲನಿವಾಸಿಗಳು. ಅವರೆಲ್ಲ ಸೇರಿ ಹಿಂದುಯೇತರ ಚಳುವಳಿಯೊಂದನ್ನು ಹುಟ್ಟು ಹಾಕಬೇಕಾಗಿದೆ ಎಂದು ಬಯಸಿದ್ದರು. ಮತೀಯವಾದಿ ಬಹುಮತ ಹೊಂದಿದವರಿಗೆ ರಾಜಕೀಯ ರಂಗದಲ್ಲಿ ಸಿಗುತ್ತಿದ್ದ ಹೆಚ್ಚಿನ ಪ್ರಮಾಣದ ಪ್ರಾತಿನಿಧ್ಯವನ್ನು ಶ್ಯಾಮಸುಂದರ ಅವರು ನೇರವಾಗಿ ಖಂಡಿಸಿದರು.

ಒಟ್ಟಾರೆ ಜಾತಿಯ ಮಾನದಂಡವನಿಟ್ಟುಕೊಂಡು ಕೋಟಿಗಟ್ಟಲೆ ಅಮಾಯಕ ಭಾರತೀಯ ಮೂಲನಿವಾಸಿಗಳನ್ನು ಹತ್ತಿಕ್ಕುತ್ತ ಬಂದಿರುವ ಕರಾಳ ಹಸ್ತದ ಕೈಚಳಕವನ್ನು ಕೊನೆಗೊಳಿಸುವುದು ಶ್ಯಾಮಸುಂದರ ಅವರ ಜೀವನದ ಮುಖ್ಯ ಗುರಿಯಾಗಿತ್ತು. ಇದನ್ನು ಅವರು ಸಾಹಿತ್ಯ ರಚನೆ, ಜನಸಂಘಟನೆಯ ಮೂಲಕ ಸಾಧಿಸಿ ತೋರಿಸಿದರು.

ಸಾಹಿತ್ಯ ರಚನೆ

ಬಿ.ಶ್ಯಾಮಸುಂದರ ಅವರು ಮೂಲತಃ ವಿಚಾರವಾದಿಗಳು, ಚಿಂತನಶೀಲತೆ ಮತ್ತು ದೋಷಪೂರಿತ ವ್ಯವಸ್ಥೆಯನ್ನು ಪ್ರಶ್ನಿಸುವ ಬುದ್ಧಿ ಇವು ಅವರ ವ್ಯಕ್ತಿತ್ವದ ಪ್ರಮುಖ ಲಕ್ಷಣಗಳು. ಅವರ ಅಧ್ಯಯನದ ಹಂಬಲ ತುಂಬಾ ವಿಶಿಷ್ಟವಾದದ್ದು. ಪ್ರಾಚೀನ ಭಾರತದ ಹಳೆಯ ಧರ್ಮಗ್ರಂಥಗಳಿಂದ ಹಿಡಿದು ಆಧುನಿಕ ಭಾರತದ ಚಿಂತಕರ ಎಲ್ಲ ಕೃತಿಗಳನ್ನು ಅವರು ಓದಿಕೊಂಡಿದ್ದರು. ತಮ್ಮ ಬೇರೆ ಬೇರೆ ಕೃತಿಗಳಲ್ಲಿ ಉಲ್ಲೇಖಗಳೊಂದಿಗೆ ಅವರು ಮಾಡಿರುವ ಚರ್ಚೆಗಳನ್ನು ನೋಡಿದಾಗ, ಅವರ ಅಧ್ಯಯನದ ವ್ಯಾಪಕತೆಯ ಅರಿವು ನಮಗಾಗುತ್ತವೆ.

ಈ ಹಿನ್ನೆಲೆಯಲ್ಲಿ ಅವರು ಅನೇಕ ಭಾಷೆಗಳಲ್ಲಿ, ಕೃತಿಗಳನ್ನು ರಚಿಸಿದ್ದಾರೆ. ಅವರು ಹಿಂದಿ, ಮರಾಠಿ, ಉರ್ದು, ಕನ್ನಡ, ಇಂಗ್ಲಿಷ್ ಭಾಷೆಗಳನ್ನಲ್ಲದೆ ಫ್ರೆಂಚ್, ಪರ್ಶಿಯನ್ ಭಾಷೆಗಳನ್ನು ತಿಳಿದುಕೊಂಡಿದ್ದರು. ಹೀಗೆ ಬಹು ಭಾಷೆಗಳಲ್ಲಿ ಪರಿಣತರಾಗಿದ್ದ ಅವರು ಒಟ್ಟು ಸುಮಾರು ೧೭ ಕೃತಿಗಳನ್ನು ರಚಿಸಿದ್ದಾರೆ. ಈ ಎಲ್ಲ ಕೃತಿಗಳ ಉದ್ದೇಶ ಒಂದೆ, ದೀನ ದಲಿತರು ತಲೆ ಎತ್ತಿ ನಿಲ್ಲಬೇಕು. ಸ್ವಾಭಿಮಾನದಿಂದ ಬದುಕುವುದರೊಂದಿಗೆ ತಾವು ಇತರರಿಗೆ ಕಡಿಮೆಯಲ್ಲ ಎಂಬುದನ್ನು ಸಾಧಿಸಿ ತೋರಿಸಬೇಕು. ಅದಕ್ಕಾಗಿ ತಮ್ಮ ತನುಮನಧನಗಳನ್ನು ಪಣಕ್ಕೊಡ್ಡಬೇಕು ಎನ್ನುವ ವಿಚಾರಗಳನ್ನು ಶ್ಯಾಮಸುಂದರ ಅವರು ತಮ್ಮ ಕೃತಿಗಳ ಮೂಲಕ ಕೇವಲ ಇತರರಿಗೆ ಬೋಧಿಸಲಿಲ್ಲ, ಸ್ವತಃ ತಾವೇ ಇದರ ಪ್ರಕಾರ ಬದುಕಿ ತೋರಿಸಿದ್ದಾರೆ. ಅವರ ಇಂಗ್ಲಿಷ್ ಭಾಷೆಯ ಪ್ರೌಢಿಮೆ ಎಂತಹವರಿಗೂ ವಿಸ್ಮಯವನ್ನುಂಟುಮಾಡುತ್ತದೆ. 'ಭೀಮ ಸೇನಾ' ಮತ್ತು 'ದೇ ಬರ್ನ' ಎಂಬ ಕೃತಿಗಳಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಬಹುದು. ಅವರ ಶಬ್ದಕ್ಕೆ ಕೇವಲ ಭಾಷಿಕ ಪರಿಭಾಷೆ ಇಲ್ಲ. ಕೇವಲ ವ್ಯಾಕರಣ ಒಪ್ಪ ಓರಣಗಳಿಲ್ಲ, ಸರ್ವಸಮಾನತೆಯ ಬದುಕು ಅವರ ಭಾಷೆ ಮತ್ತು ಬರವ

ಣಿಗೆಗಳ ಜೀವದ್ರವ್ಯ. ಅವರ ಶಬ್ದಗಳು ಕ್ರಾಂತಿಯ ಕಿಡಿಗಳು. ಅವರ ಭಾಷಣಗಳು ಮತ್ತು ಲೇಖನಗಳು, ಸಂಘಟನೆಯ ಸಂದೇಶಗಳು. 'ಭಾರತೀಯ ದಲಿತ ಲೋಕದ ಸಮಸ್ಯೆಗಳು ವಿಶ್ವಕ್ಕೆ ಗೊತ್ತಾಗಬೇಕು ಇದರ ಗುಣದೋಷಗಳ ವಿಮರ್ಶೆ ವಿದೇಶಿಯರಿಂದಲೂ ನಡೆಯಬೇಕು' ಇದು ಶ್ಯಾಮ ಸುಂದರರ ಆಂಗ್ಲ ಕೃತಿಗಳ ಉದ್ದೇಶವಾಗಿದ್ದಿತು.

ಸಂಯುಕ್ತ ರಾಷ್ಟ್ರ ಸಂಘದಂತಹ ಅಂತರ ರಾಷ್ಟ್ರೀಯ ವೇದಿಕೆಯ ಮುಂದೆ ಭಾರತದ ದಲಿತ ಸಮಾಜದ ಸಮಸ್ಯೆಗಳನ್ನು ಮಂಡಿಸಿದ ಅವರ ಸಾಹಸದ ಬೆಳಕಿನಲ್ಲಿ ಅವರ ಕೃತಿಗಳನ್ನು ಆಧುನಿಕ ಇತಿಹಾಸಕಾರರು ಗಂಭೀರವಾಗಿ ಅಭ್ಯಸಿಸಬೇಕಾಗಿದೆ. ಅವು ಕಲಾಕುಸುಮಗಳಲ್ಲ, ಬದುಕಿನ ನಗ್ನಸತ್ಯಗಳು. ಅವು ಸಾಮಾಜಿಕ ಹಿತಕ್ಕೆ ಎಷ್ಟರ ಮಟ್ಟಿಗೆ ಅನ್ವಯವಾಗಬಲ್ಲವು ಎಂಬ ದೃಷ್ಟಿಕೋನದಿಂದ ಶ್ಯಾಮ ಸುಂದರರ ಕೃತಿಗಳನ್ನು ಪ್ರಕಟಿಸುವುದು ಮತ್ತು ಅಭ್ಯಸಿಸುವುದು ತುಂಬಾ ಅಗತ್ಯವಾಗಿದೆ. ಹೊರನೋಟಕ್ಕೆ ಪ್ರಸ್ತುತ ಕೃತಿಗಳು ದಲಿತಪರವೆಂದು ಭಾಸವಾದರೂ ಕೂಡ ಆಳದಲ್ಲಿ ಅವು ಸಂಪೂರ್ಣ ಜನಪರವಾಗಿವೆ. ತಮ್ಮ ಕೃತಿಗಳ ಮೂಲಕ ಅವರು ಮಾಡಿದ ವಿಶ್ಲೇಷಣೆಗಳು ಸ್ವಾಭಿಮಾನಿ ಭಾರತೀ ಯತ್ವವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ. ಮೇಲು – ಕೀಳಿನ ಕಂದರವನ್ನು ಪರಿಹರಿಸಲು ದಾರಿ ಮಾಡಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಸಾಂಸ್ಕೃತಿಕ ದೃಷ್ಟಿಯಿಂದ ಶ್ಯಾಮಸುಂದರರ ಕೃತಿಗಳಿಗೆ ಅವುಗಳದೇ ಆದ ಮಹತ್ವವಿದೆ.

ಮಹಾರಾಷ್ಟ್ರ ಕರ್ನಾಟಕ ಮತ್ತು ಹೈದ್ರಾಬಾದ ಪ್ರಾಂತಗಳಲ್ಲಿ ಸೇವೆ ಸಲ್ಲಿಸಿದ ಶ್ಯಾಮಸುಂದರ ಅವರು ತಮ್ಮ ವಿಚಾರಗಳ ಪ್ರತಿಪಾದನೆಗಾಗಿ, 'ಭಾರತೀಯ ಭೀಮಸೇನಾ' ಎಂಬ ದಲಿತ ಯುವಕರ ದಳವೊಂದನ್ನು ೧೯೬೮ ರಲ್ಲಿ ಗುಲಬರ್ಗಾದಲ್ಲಿ ಸ್ಥಾಪಿಸಿದರು. ತಮಗೆ ಸ್ಫೂರ್ತಿಯ ಸೆಲೆಯಾಗಿದ್ದ ಡಾ. ಅಂಬೇಡ್ಕರ್ ಅವರ ಹೆಸರಿನಲ್ಲಿ ತಮ್ಮ ಸಂಘಟನೆಯನ್ನು 'ಭಾರತೀಯ ಭೀಮಸೇನೆ' ಎಂದು ಹೆಸರಿಸಿದ್ದು ಗಮನಾರ್ಹ ಸಂಗತಿಯಾಗಿದೆ. ಇಲ್ಲಿಯ ಭೀಮ **ಮಹಾಭಾರತದ ಭೀಮನಲ್ಲ, ಅಧುನಿಕ ಭಾರತದ ದಲಿತ ಸೂರ್ಯನೆನಿಸಿದ ಅಂಬೇಡ್ಕರ್ ಭೀಮ! ಈ ಸೇನೆಯಲ್ಲಿ ಭಾರತ ವ್ಯಾಪಿಯಾಗಿ ಸುಮಾರು ಹತ್ತು ಲಕ್ಷ ಜನ ಯುವಕರು ಸೇರಿಕೊಂಡಿದ್ದರೆಂಬುದನ್ನು ನೋಡಿದಾಗ** ಶ್ಯಾಮಸುಂದರ ಅವರ ಜನಜಾಗ್ರತೆಯ ಸಂಘಟನಾ ಚಾತುರ್ಯ ನಮ್ಮ ಗಮನಕ್ಕೆ ಬರುತ್ತದೆ. ಚಳವಳಿ ಇತರ ಜನಾಂಗಗಳ ವಿಚ್ಛೇದನಕ್ಕಾಗಿ ಅಲ್ಲ ಈ ಸಂಘಟನೆಯಲ್ಲಿ ನಮಗೆ ಬರಬೇಕಾದ ಹಕ್ಕನ್ನು ನ್ಯಾಯಯುತವಾಗಿ ಪಡೆದು ಕೊಳ್ಳುವುದಕ್ಕಾಗಿ ಎಂಬುದು ಅವರ ವಿಚಾರವಾಗಿದ್ದಿತು. ಸೇನೆಯ ಯುವಕರಿಗೆ ಸಮವಸ್ತ್ರವೊಂದನ್ನು ನಿಗದಿ ಪಡಿಸಿದ್ದರು. ಕೈಯಲ್ಲೊಂದು ಲಾಠಿ, ಕಾಲಲ್ಲಿ ದಪ್ಪ ಚಪ್ಪಲಿ, ಮುಖದ ಮೇಲೆ ಪೌರುಷದ ಸಂಕೇತವಾದ ಮೀಸೆ ಇವು ಸಮವಸ್ತ್ರದ ಮುಖ್ಯ ಲಕ್ಷಣಗಳು. ಕೆಲವೊಮ್ಮೆ ಸ್ವತಃ ಶ್ಯಾಮಸುಂದರರೆ ಈ ವೇಷದಲ್ಲಿ ಇರುತ್ತಿದ್ದರೆಂಬುದು ಕುತೂಹಲದ ಸಂಗತಿಯಾಗಿದೆ. ಈ ಸಂಘಟನೆಯ ಮೂಲಕ ಶ್ಯಾಮಸುಂದರ ಅವರು ಸಾಧಿಸಿದ್ದು ಅಷ್ಟಿಷ್ಟಲ್ಲ. ಇಂದು ದಲಿತ ಉಸಿರು ಕಟ್ಟಿಸುವ ವಾತಾವರಣದಿಂದ ಹೊರಗೆ ಬರಲು ಸಾಧ್ಯವಾಗಿದ್ದರೆ, ಸ್ವಚ್ಛಂದವಾಗಿ ಜೀವನ ನಡೆಸುತ್ತಿದ್ದರೆ, ಅದಕ್ಕೆ ಪ್ರಮುಖ ಕಾರಣರು ಡಾ.ಅಂಬೇಡ್ಕರ್. ಡಾ. ಅಂಬೇಡ್ಕರ್ ನಂತರದಲ್ಲಿ ಶ್ಯಾಮಸುಂದರ ಅವರೂ ಒಬ್ಬರು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. □

ಸಂವಾದ

ಉಪಸಂಪಾದಕರು, ಸಹಾಯಕರು, ಡಿ.ಟಿ.ಪಿ. ಆಪರೇಟರ್‌ಗಳು ಬೇಕಾಗಿದ್ದಾರೆ.

'ಸಂವಾದ' ಪ್ರಕಾಶನ ಮತ್ತು ಮಾಸಪತ್ರಿಕೆಯಲ್ಲಿ ಕೆಲಸ ಮಾಡಲು ಪೂರ್ಣಾವಧಿ ಉಪಸಂಪಾದಕರು ಹಾಗೂ ಸಹಾಯಕರು ಹಾಗೂ ಡಿ.ಟಿ.ಪಿ. ಆಪರೇಟರ್‌ಗಳು ಬೇಕಾಗಿದ್ದಾರೆ. ಕರಡು ತಿದ್ದುವುದು, ಲೇಖಕರನ್ನು ಭೇಟಿ ಮಾಡುವುದು, ಪ್ರಸಾರ ಮತ್ತು ಮುದ್ರಣ ಕೆಲಸಗಳನ್ನು ನಿರ್ವಹಿಸುವುದು ಇವೇ ಮೊದಲಾದ ಕೆಲಸಗಳನ್ನು ಉಪಸಂಪಾದಕರು, ಸಹಾಯಕರು ಮಾಡಬೇಕಾಗುತ್ತದೆ. ಆಯ್ಕೆಯಾದವರಿಗೆ ಆಕರ್ಷಕ ವೇತನ ನೀಡಲಾಗುವುದು. ಶೈಕ್ಷಣಿಕ ಅರ್ಹತೆ ಮುಖ್ಯವಲ್ಲ. ಕನ್ನಡ ಭಾಷೆ ಮತ್ತು ಬರವಣಿಗೆಯಲ್ಲಿ ಪ್ರಭುತ್ವ ಇರುವವರಿಗೆ ಆದ್ಯತೆ ನೀಡಲಾಗುವುದು.

ಡಿ.ಟಿ.ಪಿ. ಆಪರೇಟರ್‌ಗಳಿಗೆ ಪೇಜ್‌ಮೇಕರ್, ಕೋರಲ್ ಡ್ರಾ, ಫೋಟೋ ಷಾಪ್ ತಿಳುವಳಿಕೆ ಅಗತ್ಯ. ಉಪಸಂಪಾದಕರು ಹಾಗೂ ಸಹಾಯಕರ ಆಯ್ಕೆಯಲ್ಲಿ ಡಿ.ಟಿ.ಪಿ. ತಿಳಿದವರಿಗೆ ಆದ್ಯತೆ ನೀಡಲಾಗುವುದು. ಆಸಕ್ತಕರು ಕೂಡಲೇ ಸಂಪಾದಕರನ್ನು ಕೆಳಕಂಡ ವಿಳಾಸದಲ್ಲಿ ಅಥವಾ ದೂರವಾಣಿಯಲ್ಲಿ ಸಂಪರ್ಕಿಸಬಹುದು

ಇಂದೂಧರ ಹೊನ್ನಾಪುರ, ನಂ. ೪೦೨, ೧ನೇ ಮುಖ್ಯರಸ್ತೆ ೨ನೇಬ್ಲಾಕ್,
ಹೆಚ್.ಬಿ.ಆರ್ ಬಡಾವಣೆ, ಬೃಂದಾವನ ನಗರ, ಬೆಂಗಳೂರು-೫೬೦ ೦೪೩.
ದೂರವಾಣಿ: ೦೮೦-೨೫೪೪೦೫೦೬, ಮೊಬೈಲ್: ೯೪೪೮೦೪೮೩೦೬

ಬಾಬಾರಲ್ಲಿ ಮೊರೆ

○ ಜಂಬಣ್ಣ ಅಮರಚಿಂತ

ಜಜ್ಜನೆ ಜರಿದೆವು ನಾವು ಜಜ್ಜನೆ ಜರಿದೆವು
ಜಲಕ್ಕನೆ ನಾವು ಜಾರಿ ಹೋದೆವು ಭೀಮಯ್ಯ

ಬಿಬ್ಬನೆ ಬಿರಿದೆವು ನಾವು ಬಿಬ್ಬನೆ ಬಿರಿದೆವು

ಬಿರಿ ಬಿರಿದು ಉದುರಿದ ಹೂವಾದೆವು ಬಾಬಾಯತ
ಇಡಿಯಾಗಿದ್ದವರು ನಾವು ಬಿಡಿ ಬಿಡಿಯಾದೆವು
ಮತ್ತೆ ಇಡಿಯಾಗುವ ಪರಿ ತೋರಿಸು ಭೀಮಯ್ಯ

ದಲಿತರನು ಸಂಘಟಿಸಿದ ದಲಿತ ಸೂರ್ಯ ನೀನು
ನಮ್ಮೊಳಗೆ ತುಂಬಿದ ತಮಂಧ ಓಡಿಸಯ್ಯಾ

ನೀ ಎಳೆದು ತಂದ ರಥ ನಿಂತಲ್ಲಿ ನಿಂತಿದೆ
ನಿಂತ ನೆಲೆ ಹುದುಲಾಗಿ ಪರಿವರ್ತನೆಗೊಂಡಿದೆ

ನಮ್ಮ ಹುದಲಲ್ಲಿ ನಾವು ಮುಳುಗಿ ತೇಲುತ್ತಿರುವೆವು
ಮುಳುಗುವ ನಮ್ಮನು ಮೇಲಕ್ಕೆ ಎತ್ತಯ್ಯಾ

ಕಾರಿರುಳ ಕತ್ತಲೆ ಮತ್ತೆ ಸುತ್ತಿ ಸುತ್ತಿ ಬರುತ್ತಿದೆ
ಬೆಳಕಿನ ಪ್ರವಾಸಕ್ಕೆ ನಮ್ಮನು ಅಣಿಗೊಳಿಸಯ್ಯಾ

ಬಸವದೃಷ್ಟಿ ಪ್ರೇರಿತ
ದಲಿತ ಶರಣ - ವಚನಕಾರರು ೨

ಒಳನೋಟ

ಮಧ್ಯಯುಗೀನ ಕರ್ನಾಟಕದಲ್ಲಿ ಬಸವ ಪ್ರೇರಿತ ಸಾಮಾಜಿಕ - ಧಾರ್ಮಿಕ - ಸಾಂಸ್ಕೃತಿಕ ಆಂದೋಲನೆಯು ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆಯಾಗಿದೆ. ಬಸವಣ್ಣ ದೈಹಿಕ, ಸಾಮಾಜಿಕ ವೈಚಾರಿಕ ಶೋಷಣೆಯಿಲ್ಲದ, ಮಾನವೀಯ ಮೌಲ್ಯ ಗಳನ್ನು ಆಧರಿಸಿದ ಹೊಸ ಸಮಾಜದ ಕಾಣ್ಕೆಯನ್ನು ವಾಸ್ತವ ರೂಪಕ್ಕೆ ಇಳಿಸಲು ಅಂದಿನ ಜನತೆಯನ್ನು ಹೊಡೆದೆಬ್ಬಿಸಿದನು. ಅವನ ಚಳವಳಿ ಹಿತಾಸಕ್ತ ವರ್ಗಗಳಿಗೆ ದುಃಸ್ವಪ್ನವಾದರೆ, ಜನ ಸಾಮಾನ್ಯರಿಗೆ ಸರ್ವಾಂಗೀಣ ಬಿಡುಗಡೆಯ ಮಾರ್ಗವಾಯಿತು. ಈ ಬಂಧಮುಕ್ತ ಜನರಲ್ಲಿ, ಶತಮಾನಗಳಿಂದಲೂ ಸರ್ವತೋಪರಿ ತುಳಿಯಲ್ಪಟ್ಟ ದಲಿತ ಜನಾಂಗವೂ ಸೇರಿದುದು ಭಾರತೀಯ ಇತಿಹಾಸದಲ್ಲೆ ಮಹತ್ತರ ಸಾಧನೆಯಾಗಿದೆ.

○ ಶಂಕರ ಮ. ಪಾಟೀಲ

(ಕಳೆದ ಸಂಚಿಕೆಯಿಂದ)

ದಲಿತ ಶೂದ್ರ ವರ್ಗಗಳಿಂದ ಬಂದ ಶರಣರ ಜೀವನ ಶೈಲಿಯಲ್ಲಿ ಮೇಲ್ವರ್ಗದವರ ಶಿಷ್ಟತೆ, ನಯ ನಾಜೂಕು ಇರುವುದು ಸಾಧ್ಯವಿಲ್ಲ. ಇಂಥ ಶಿವಭಕ್ತರ ಮನೆಗೆ ಹೋಗಿ, 'ಭಕ್ತರ ನಡೆ, ಭಕ್ತರ ನುಡಿಯ ವಿಚಾರಿಸಿದಡೆ' 'ಭಾಂಡ ಭಾಜನದ ಶುದ್ಧಿಯನರಸಿದಡೆ, ಜಲಶುದ್ಧಿಯನರಸಿದಡೆ, ವಾಕ್‌ಶುದ್ಧಿಯನರಸಿದಡೆ, ಆ ಭಕ್ತರ ಹಸ್ತ ಮುಟ್ಟಲಾಗ ದೆಂದಡೆ' ಅವರೆಲ್ಲ ಪಂಚಮಹಾಪಾತಕಕ್ಕೆ ಗುರಿಯಾದವರು ಎಂದು ಉರಿಲಿಂಗ ಪೆದ್ದಿ ಹೇಳುವದನ್ನು ನೋಡಿದಾಗ ಸಮತಾ ಆಂದೋಲ ನೆಯ ಸೂಕ್ಷ್ಮತೆಗಳ ಅವನ ಅರಿವಿನ ಆಳ ನಮ್ಮನ್ನು ಬೆರಗುಗೊಳಿಸುತ್ತದೆ.

ಮನುಷ್ಯ ಮನುಷ್ಯರ ನಡುವಿನ ವಿಷಮತೆಯನ್ನು ಹುಟ್ಟುಹಾಕಿದ ಚಾತುರ್ವರ್ಣ ವ್ಯವಸ್ಥೆಯನ್ನು ವಿರೋಧಿಸುತ್ತ ಸಮರ್ಥನೆಗಾಗಿ ವೈದಿಕ ವಾಙ್ಮಯದಲ್ಲಿಯ ಉಕ್ತಿಗಳನ್ನೆ ಉದಾಹರಿಸುವ ಉರಿಲಿಂಗ ಪೆದ್ದಿಯು ಒಂದು ವಚನದಲ್ಲಿ ಒಂದು ಕತೆಯನ್ನೆ ಹೇಳುತ್ತಾನೆ. ಬ್ರಾಹ್ಮಣರು ಹೊಲೆಯರು ಬಂಧುಗಳೆ ಆಗಿದ್ದಾರೆ. ಇಬ್ಬರೂ ಜಮದಗ್ನಿಗೆ ಹುಟ್ಟಿದವರು. ರೇಣುಕಾದೇವಿಯ ಮಗನೇ ಬ್ರಾಹ್ಮಣ, ಮಾತಂಗಿಯ ಮಗನೆ ಹೊಲೆಯ. ಇವರಿಬ್ಬರಲ್ಲಿ 'ಸಂವಾದವು ಬೇಡ' ಎಂದು, ಭಾರದ್ವಾಜ, ವಿಶ್ವಾಮಿತ್ರ, ಅಗಸ್ತ್ಯ ನಾರದ, ಕೌಂಡಿಲ್ಯ ಈ ಐವರ ಸಾಕ್ಷಿಯಲ್ಲಿ 'ವಿಭಾಗ' ಮಾಡಿಕೊಟ್ಟರು. ಅದು ಹೀಗೆ: ಗ್ರಾಮದೊಳಗಣ ಸೀಮೆಯ ಗೃಹ ಬ್ರಾಹ್ಮಣರಿಗೆ, ಗ್ರಾಮದ ಹೊರಗಣ ಸೀಮೆಯ ಗೃಹ ಹೊಲೆಯರಿಗೆ, ಸತ್ತ ಹಸುವನೆಳೆದುಕೊಂಡು ಹೋಗುವವರು ಹೊಲೆಯರು, ಹದಿನೆಂಟು ಜಾತಿಯವರಿಂದ ಜೀವದ ಹಸುವನ್ನು ಗೋದಾನವೆಂದು ಕೊಂಡು ಒಯ್ಯುವವರು ಬ್ರಾಹ್ಮಣರು. ಇಬ್ಬರ ನಡುವೆ 'ಸೊಮ್ಮು ಸಂಬಂಧವಿಲ್ಲವೆಂದು' ಕಣ್ಣಿಗೆ ಬಿದ್ದರೆ ತೊಲಗಿ ಹೋಗುವಂತೆ 'ಸಂಬೋಳಿ ಎಂದು ನಾಮಾಂಕಿತವ ಕೊಟ್ಟು' 'ತೊರೆ ಪತ್ರ'ವನ್ನು ಬರೆಯಿಸಿದರು. ಅಸ್ಪೃಶ್ಯರಾಗಿದ್ದವರು ಇಷ್ಟ ಲಿಂಗೋಪಾಸಕರಾಗಿ ಶರಣರಾದ ಮೇಲೂ, ದಾರಿಯಲ್ಲಿ, ಉಚ್ಚವರ್ಣೀಯರನ್ನು ಕಂಡಾಗ, ಜನ್ಮಜಾತವಾಗಿ ಬಂದ ಸಂಸ್ಕಾರದ ಪ್ರಭಾವ ದಿಂದಾಗಿ ತಪ್ಪಿ 'ಸಂಬೋಳಿ ಎಂದು ಕೂಗುವ ಸಂಭವವನ್ನು ಅರಿತು ಕೊಂಡ ಉರಿಲಿಂಗ ಪೆದ್ದಿಯು ಈ ಕತೆ ಬರುವ ವಚನದ ಪ್ರಾರಂಭದಲ್ಲಿ 'ಭಕ್ತಿ ಹೀನನ ಬಟ್ಟೆಯಲ್ಲಿ ಕಂಡು ನೆಟ್ಟನೆ ಶಿವಭಕ್ತ ಜೋಹಾರ ಎಂದಡೆ' ಅವನ ಶಿವಪೂಜೆ ವ್ಯರ್ಥವೂ ಅಯೋಗ್ಯವೂ ಆಗುವುದೆಂದು ಹೇಳಿ, ಸುರಾಪಾನದಲ್ಲಿ ಮಜ್ಜನ ಮಾಡಿದಂತೆ, ಹೇಲೊಳಗಣ ಹುಳುವ ಕೋಳಿ ಕೆದರಿದಂತೆ ಮುಂತಾದ ಒಂಭತ್ತು ಉಪಮೆಗಳನ್ನು ಕೊಟ್ಟಿದ್ದಾನೆ.

ಉರಿಲಿಂಗ ಪೆದ್ದಿಯ ಈ ವಚನ ಹಾಗೂ ಇಂತಹವೆ ಇನ್ನಿತರ ವಚನಗಳು ವೈದಿಕ ಆರ್ಯ ಹಾಗು ಮೂಲ ನಿವಾಸಿಗಳ ಸಂಘರ್ಷ, ಆರ್ಯರ ಕುಶಲ ಸಾಮಾ ಜಿಕ ರಚನೆಯ ತಂತ್ರಗಳು, ವರ್ಣ ಜಾತಿಗಳ ನಿರ್ಮಾಣ ಇವುಗಳ ಸಾಮಾಜಿಕ ಅಧ್ಯಯ ನಕ್ಕೆ ಅಮೂಲ್ಯ ಸಾಧನಗಳಾಗಿವೆ.

ಕಾಳವ್ವೆ

ಉರಿಲಿಂಗ ಪೆದ್ದಿಯ ಹೆಂಡತಿ ಕಾಳವ್ವೆಯೂ ಗಂಡನಿಗೆ ಸಮನಾ ಗಿಯೆ ಪರಿವರ್ತನೆಗೊಂಡು ಶರಣಳಾಗಿ ಜ್ಞಾನ ವಿದ್ವತ್ತು ಅರಿವುಗಳನ್ನು ಸಂಪಾದಿಸಿ ದಳು. ಅವಳ ಕೇವಲ ೧೨ ವಚನಗಳು ದೊರೆತಿವೆ. ಅವಳೂ ಕೂಡ ಸಂಸ್ಕೃತದ ಉಕ್ತಿಗಳನ್ನು ಬಳಸಿದ್ದಾಳೆ. ಪ್ರಾಮಾಣಿಕವಾದ ಕಾಯಕ, ಶಿವಾಚಾರನಿಷ್ಠೆ ಪ್ರಸಾದಗಳ ಕುರಿತು ಬರೆದ ವಚನಗಳಲ್ಲದೆ, ಅವಳು ತಮ್ಮ ಜಾತಿಯನ್ನು ಕೀಳೆಂದು ಭಾವಿಸುವವರನ್ನು ಕಟು ವಾದ ಶಬ್ದಗಳಲ್ಲಿ ಟೀಕಿಸಿದ್ದಾಳೆ, 'ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ' ಎಂದು ಸವಾಲು ಹಾಕುತ್ತಾಳೆ.

ಕುರಿ ಕೋಳಿ ಕಿರಿ ಮೀನು ತಿಂಬವರೆಲ್ಲಾ ಅದು ಹೇಗೆ ಕುಲಜರು, ಶಿವನಿಗೆ ಪಂಚಾಮೃತ ನೀಡುವ ಗೋಮಾಂಸವ ತಿನ್ನುವ ಮಾದಿಗನೇಕೆ ಕೀಳು ಜಾತಿಯವನು ಎಂದು ಪ್ರಶ್ನಿಸಿ, ಹಸುವಿನ ಚರ್ಮದಿಂದ ಮಾಡಿದ ಸಿದ್ದಲಿಕೆ, ಸಗ್ಗಳ ಎಂಬ ಚೀಲಗಳಲ್ಲಿ ತುಂಬಿದ ತುಪ್ಪ ನೀರುಗಳನ್ನು ಸೇವಿಸುವ ವಿಪ್ರರಿಗಿಂತ ಮಾದಿಗರೆ ಶ್ರೇಷ್ಠ ಅಲ್ಲವೆ ಎಂದು ದಿಟ್ಟತನದಿಂದ ವಾದಿಸುತ್ತಾಳೆ.

ಭಾರತದ ದಲಿತ ವರ್ಗದ ಅತ್ಯಂತ ಪ್ರಾಚೀನ ಲೇಖಕಿ ಹಾಗೂ ವಿಚಾರವಂತೆಯಾದ ಕಾಳವ್ವೆ ಉರಿಲಿಂಗ ಪೆದ್ದಿಗೆ ಅನುರೂಪಳಾದ ಹೆಂಡತಿಯಾಗಿದ್ದಾಳೆ.

ಮಾದಾರ ಚನ್ನಯ್ಯ

ಬಸವಣ್ಣನಿಂದ ಎಲ್ಲರಿಗಿಂತಲೂ ಹೆಚ್ಚು ಗೌರವಿಸಲ್ಪಟ್ಟ ಶರಣನೇ ಮಾದಾರ ಚನ್ನಯ್ಯ. ತನ್ನ ವಚನಗಳಲ್ಲಿ ೨೯ ಸಲ ಅವನನ್ನು ನೆನೆಯುತ್ತಾನೆ ಬಸವಣ್ಣ. ಇತರ ವಚನಕಾರರೂ ಅವನನ್ನು ಪ್ರಶಂಸಿದ್ದಾರೆ. ನಂತರದ ಕವಿಗಳಲ್ಲಿ ಹರಿಹರನಿಂದ ಮೊದಲುಗೊಂಡು ಶರಣರ ಕಥೆಗಳನ್ನು ಹೇಳಿದ ಎಲ್ಲ ಪ್ರಮುಖ ಕವಿಗಳೂ ಚನ್ನಯ್ಯನ ಕಥೆಯನ್ನು ವರ್ಣಿಸಿದ್ದಾರೆ. ಮೇಲುಕೀಳೆಂಬ ವಿಷಮತೆಯನ್ನು ತೊಡೆದುಹಾಕಲು ಬಸವಾದಿ ಶರಣರು ಕೈಕೊಂಡ ಆಂದೋಲನೆಯತ್ತ ಜನಮನವನ್ನು ಸೆಳೆಯುವಲ್ಲಿ ಕೇಂದ್ರ ಸಂಕಲ್ಪನೆಯ ರೂಪದಲ್ಲಿ ಈ ಕತೆ ಕೆಲಸ ಮಾಡಿರಬಹುದಾಗಿದೆ. ಅಂತೆಯೆ ಅದಕ್ಕೆ ಎಲ್ಲಿಲ್ಲದ ಪ್ರಶಸ್ತಿ.

ಈ ಆಖ್ಯಾಯಿಕೆಯ ಪ್ರಕಾರ, ಕಾಂಚಿಪಟ್ಟಣದ ಕರಿಕಾಲ

ಚೋಳರಾಜನ ಕುದುರೆಗಳಿಗೆ ಹುಲ್ಲು ತಂದು ಹಾಕುವ ಕೈಂಕರ್ಯವನ್ನು ಮಾಡುವ ಮಾದಾರ ಚನ್ನಯ್ಯ ಒಬ್ಬ ಗುಪ್ತ ಶಿವಭಕ್ತ. ಅವನ ಸದಾಚಾರಯುಕ್ತ ಸದ್ಭಕ್ತಿಗೆ ಮೆಚ್ಚಿದ ಶಿವನು ಚನ್ನಯ್ಯನ ಗುಡಿಸಲಿಗೆ ಹೋಗಿ ಅವನು ಕೊಟ್ಟ ಅಂಬಲಿಯನ್ನೇ ಉಂಡು ಸಂತೃಪ್ತನಾಗುತ್ತಾನೆ. ಕರಿಕಾಲ ಚೋಳನು ನಿತ್ಯದಂತೆ ವಿವಿಧ ಭಕ್ಷ್ಯ ಭೋಜ್ಯಗಳನ್ನು ದೇವಾಲಯದಲ್ಲಿ ಶಿವನಿಗೆ ಎಡೆ ಮಾಡಿದಾಗ ಚನ್ನನ ಅಂಬಲಿಯಿಂದ ಹೊಟ್ಟೆ ತುಂಬಿದ ಶಿವನು ಚೋಳನ ಮೃಷ್ಟಾನ್ನವನ್ನು ಮುಟ್ಟಲೆ ಇಲ್ಲ. ದುಃಖಿತನಾದ ಅರಸನು ಪ್ರಾಣತ್ಯಾಗಕ್ಕೆ ಸಿದ್ಧನಾದಾಗ ಶಿವನು ಅವನಿಗೆ ಚನ್ನಯ್ಯನ ಮನೆಯಲ್ಲಿ ಅಂಬಲಿಯನ್ನು ಸೇವಿಸಿದ್ದನ್ನು ತಿಳಿಸುತ್ತಾನೆ. ಇಂಥ ಪರಮ ಶಿವಭಕ್ತ ತನ್ನ ರಾಜ್ಯದಲ್ಲೇ ಇರುವನಲ್ಲಾ ಎಂದುಕೊಂಡು ರಾಜನು ಚನ್ನಯ್ಯನ ಮನೆಗೆ ಹೋಗಿ ಅವನ ಪಾದಕ್ಕೆ ಬಿದ್ದು ಶಿವಾಲಯಕ್ಕೆ ಮೆರವಣಿಗೆಯಲ್ಲಿ ಅವನನ್ನು ಕರೆತರುತ್ತಾನೆ. ತನ್ನ ಗುಪ್ತ ಭಕ್ತಿಯನ್ನು ಶಿವ ಬಯಲಿಗೆಳೆದನೆಂದು ದುಃಖಿಸಿ ಶಿವನನ್ನು ಆಕ್ಷೇಪಿಸಿ ಜೀವ ಬಿಡಲು ಚನ್ನಯ್ಯ ಸಿದ್ಧನಾಗುತ್ತಾನೆ. ಆಗ ಶಿವ ಪ್ರತ್ಯಕ್ಷನಾಗಿ ಚನ್ನಯ್ಯನನ್ನು ಕೈಲಾಸಕ್ಕೆ ಕರೆದೊಯ್ದು ಗಣ ಪದವಿಯನ್ನು ಕೊಡುತ್ತಾನೆ.

ಈ ಕಥೆಯ ಜನಪ್ರಿಯತೆ ಹೆಚ್ಚುತ್ತಲೆ ಹೋಗಿ ಚನ್ನಯ್ಯನ ಅಂಬಲಿ ಸಾಕ್ರಟೀಸನ ಹೆಮ್ ಲೊಕ್‌ದಂತೆ ಒಂದು ಪ್ರತೀಕವಾಗಿ, ಆಶಯ ಸಂಕೇತವಾಗಿ ನಿಂತಿದೆ; ಶರಣರ ಚಳವಳಿಯ ವ್ಯಾಪ್ತಿಯ ಹೆಚ್ಚಳಕ್ಕೆ ಕಾರಣ ವಾಗಿದೆ.

ಮಾದಾರ ಚನ್ನಯ್ಯನ ಹೆಸರಿನಲ್ಲಿ 'ಕೈ ಉಳಿ ಕತ್ತಿ ಅಡಿ ಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮ ರಾಮರಾಮನ' ಎಂಬ ಅಂಕಿತವುಳ್ಳ ಹತ್ತು ವಚನಗಳು ಉಪಲಬ್ಧವಿವೆ. ಐತಿಹಾಸಿಕ ವಿಶ್ಲೇಷಣೆಯ ಆಧಾರದ ಮೇಲೆ ಅಂಬಲಿಯ ಚನ್ನಯ್ಯ ಹಾಗೂ ವಚನಕಾರ ಚನ್ನಯ್ಯ ಇಬ್ಬರೂ ಬೇರೆ ಬೇರೆ ಎಂಬ ಅಭಿಪ್ರಾಯವೂ ವ್ಯಕ್ತಪಡಿಸಲ್ಪಟ್ಟಿದೆ. ಇಬ್ಬರೂ ಒಬ್ಬನೆ ಎಂದು ಆಧಾರಪೂರ್ವಕ ಸಿದ್ಧವಾಗುವವರೆಗೆ ಈ ಇಬ್ಬರು ಚನ್ನಯ್ಯರ ವಾದ ಸರಣಿಗೆ ಆಸ್ಪದವುಂಟು.

ತನ್ನ ಕಾಯಕದ ಪರಿಭಾಷೆಯನ್ನೆ ಬಳಸಿ ವಚನ ರಚಿಸಿದ ಚನ್ನಯ್ಯ ಜಾತಿಯ ಸಮಸ್ಯೆಯನ್ನು ಪ್ರಮುಖವಾಗಿ ಪ್ರಸ್ತಾಪಿಸುತ್ತಾನೆ. 'ನಡೆನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆ ಸೂತಕವಿಲ್ಲ... ಆಚಾರವೇ ಕುಲ ಅನಾಚಾರವೇ ಹೊಲೆ' ಎಂಬ ಅವನ ನುಡಿಗಳು ಬಸವಣ್ಣನ ವಚನಗಳಿಗೆ ಮಾರ್ದನಿಗೊಡುತ್ತವೆ. ಸಪ್ತರ್ಷಿಗಳೆಲ್ಲರೂ ಕೀಳು ಕುಲದವರು ಎಂಬುದು ಗೊತ್ತಿದ್ದೂ ತಮ್ಮ ಕುಲ ಘನವೆಂದು ಹೋರುವ ಹೊತ್ತುಹೋಕರನ್ನು ಅವನು ಮೂದಲಿಸಿದ್ದಾನೆ.

ಬಸವಣ್ಣನ ಹಿರಿಯ ಸಮಕಾಲೀನನಾದ ಮಾದಾರ ಚನ್ನಯ್ಯ ವಚನಕಾರರಲ್ಲಿ ಮೊದಲಿಗನು ಎಂದೂ ಹೇಳಬಹುದಾಗಿದೆ.

ಮಾದರ ಧೂಳಯ್ಯ

ಮಾದರ ಕುಲದ ಇನ್ನೊಬ್ಬ ಶರಣ ವಚನಕಾರ ಧೂಳಯ್ಯ. ವಚನ ಸಂಖ್ಯೆಯ ಮಾನದಿಂದ ದಲಿತ ವಚನಕಾರರಲ್ಲಿ ಎರಡನೆಯ ಸ್ಥಾನ ಪಡೆದಿರುವ ಇವನ ೧೦೬ ವಚನಗಳು ದೊರೆತಿವೆ. 'ಕಾಮ ಧೂಮ ಧೂಳೇಶ್ವರ' ಎಂಬುದು ಇವನ ವಚನಾಂಕಿತ. ಪಾದರಕ್ಷೆಗಳನ್ನು ಹೊಲಿಯುವ ಕಾಯಕದ ಇವನ ವಚನಗಳಲ್ಲಿ ಆ ವೃತ್ತಿಯ ಪರಿಭಾಷೆಯನ್ನು ಬಳಸಲಾಗಿದೆ. ತನ್ನ ಕಾಯಕದಲ್ಲಿ ನಿರತವಾದಾಗ ಶಿವನೇ ಬಂದರೂ ಉದಾಸೀನನಾಗಿದ್ದ ಎನ್ನುವಂಥ ಪ್ರಚಲಿತ ಕಥೆಯು ಅವನ ವಚನದಲ್ಲೂ ಕಾಣಿಸಿಕೊಂಡಿದೆ. ಆ ವಚನ ಹೀಗಿದೆ :

ಇತ್ತಲೇಕಯ್ಯಾ ಕಾಯದ ತಿತ್ತಿಯ ಹೊತ್ತಾಡುವನ ಮುಂದೆ ?
ನಿನ್ನ ಭಕ್ತರ ಠಾವಿನಲ್ಲಿ ಹೋಗಿ ಮುಕ್ತಿಯ ಮಾಡು,
ನೀ ಹೊತ್ತ ಬಹುರೂಪ ತಪ್ಪದೆ ರಜತದ ಬೆಟ್ಟದ ಮೇಲಕ್ಕೆ ಹೋಗು,
ನಿನ್ನ ಭಕ್ತರ ಮುಕ್ತಿಯ ಮಾಡು,
ಕಾಮ ಧೂಮ ಧೂಳೇಶ್ವರನ ಕರುಣದಿಂದ ನೀನೆ ಬದುಕು.

ಈ ವಚನದಲ್ಲಿ ಕಾಯಕನಿಷ್ಠೆಯ ಜತೆಯಲ್ಲಿಯೆ, ತನಗೆ ದೊರೆತ ಸ್ವತಂತ್ರ ವಿಚಾರಶಕ್ತಿಯ ದಿಟ್ಟ ಆವಿಷ್ಕಾರವೂ ಕಂಡುಬರುತ್ತದೆ. ನಿನ್ನ ಭಕ್ತರಿಗೆ ಮುಕ್ತಿಕೊಡುತ್ತ ನೀನೆ ಬದುಕು ಹೋಗು, ನನ್ನ ಗೊಡವೆಗೆ ಬರಬೇಡ ಎಂದು ಹೇಳುವ ಕೆಚ್ಚು ಈ ವಚನದಲ್ಲಿ ಮೂಡಿದೆ.

ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣವ ಸತಿ ನೋಡಬಹುದೆ ಎಂಬರು.
ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ ?
ಪತಿಯಿಂದ ಬಂದ ಸೋಂಕು ಸತಿಯ ಕೇಡಲ್ಲವೆ ?
ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕ್ಕೆ
ಭಂಗವಾರಿಗೆಂಬುದ ತಿಳಿದಲ್ಲಿಯೆ
ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಸಲೆ ಸಂದಿತ್ತು.

ಧೂಳಯ್ಯ ಡೋಹರ ಕಕ್ಕಯ್ಯನ ಮಗನೆಂಬ ಪ್ರತೀತಿ ಇದೆ. ಆದರೆ ಇವನ ಬಗ್ಗೆ ವಿವರಗಳು ದೊರೆಯದೆ ಇರುವುದು ಆಶ್ಚರ್ಯಕರವಾಗಿದೆ. ಎರಡು ಕೃತಿಗಳಲ್ಲಿ ಇವನಿಗೆ ಸಂಬಂಧಪಟ್ಟ ಕಥೆಯೊಂದು ಬಂದಿದೆ. ಈ ಕಥೆಯ ಪ್ರಕಾರ ಧೂಳಯ್ಯನ ಮನೆಯ ಬಚ್ಚಲ ನೀರಿನಲ್ಲಿ ಹೊರಳಾಡಿ ವಿಪ್ರನೊಬ್ಬ ದಿವ್ಯಾಂಗವನ್ನು ಪಡೆದನಲ್ಲದೆ ೭೦೦ ಜನರು ತಮ್ಮ ಕುಷ್ಠರೋಗವನ್ನು ನಿವಾರಿಸಿಕೊಂಡರು. ಶರಣರ ಆಂದೋಲನೆಯ ನಂತರ ಇದೇ ತರಹದ ಹಲವಾರು ಕಥೆಗಳು ಹುಟ್ಟಿಕೊಂಡವು.

ಚಪ್ಪಲಿ ಹೊಲಿಯುವ ಕ್ರಿಯೆಯನ್ನು ಆಧ್ಯಾತ್ಮಿಕ ಅನುಭವಕ್ಕೆ ಹೊಂದಿಸಿಕೊಳ್ಳುವ ಅವನ ನಿರೂಪಣಾ ಶೈಲಿಯು ಅಚ್ಚರಿಗೊಳಿಸುವಂತಹುದಿದೆ.

ಅಸ್ಪೃಶ್ಯ ವಚನಕಾರರಲ್ಲಿ ಸಾಹಿತ್ಯಕ ಗುಣದ ಸುಂದರ ವಚನಗಳನ್ನು ಬರೆದಿರುವವರಲ್ಲಿ ಅವನು ಅಗ್ರಗಣ್ಯ ಎಂದು ವಚನ ಸಾಹಿತ್ಯ ಅಧ್ಯಯನಕಾರರಾದ ಡಾ॥ಚಿದಾನಂದಮೂರ್ತಿಗಳು ಅಭಿಪ್ರಾಯಪಟ್ಟಿದ್ದಾರೆ.

ಢಕ್ಕೆಯ ಮಾರಯ್ಯ

ಢಕ್ಕೆಯ ಬ್ರಹ್ಮಯ್ಯ ಎಂಬ ಹೆಸರಿನಲ್ಲಿರುವ, 'ಕಾಲಾಂತಕ ಭೀಮೇಶ್ವರ ಲಿಂಗ' ಎಂಬ ಅಂಕಿತವುಳ್ಳ ೯೦ ವಚನಗಳನ್ನು ಬರೆದವನೆ ನಂತರದ ಕಾವ್ಯಗಳಲ್ಲೆಲ್ಲ ಉಲ್ಲೇಖಗೊಂಡಿರುವ ಢಕ್ಕೆಯ ಮಾರಯ್ಯ ಎಂಬುದು ಈಗ ಸರ್ವಸಮ್ಮತ ಅಭಿಪ್ರಾಯವಾಗಿದೆ.

ಕೀಳುದೈವಗಳ ಆರಾಧಕರು ಹೆಚ್ಚಾಗಿ ದಲಿತ ವರ್ಗದವರು. ಅವರ ಈ ದೈವಗಳ ಪೂಜೆ ಸಾರ್ವಜನಿಕ ಸ್ವರೂಪದ್ದಾಗಿ, ಒಂದು ಬಗೆಯ ಜಾನಪದ ಕಲಾಭಿವ್ಯಕ್ತಿಯ ರೂಪವನ್ನು ಪಡೆಯುವುದನ್ನು ಕಾಣುತ್ತೇವೆ. ಮಾರಿಯನ್ನು ಕುಣಿಸುವದು ಇಂಥ ಒಂದು ಧಾರ್ಮಿಕ ರೂಪದ ಮನರಂಜನೆಯ ಪ್ರಕಾರವಾಗಿದೆ. ಬೇವಿನ ಸೊಪ್ಪಿನಿಂದ ಅಲಂಕರಿಸಿಕೊಂಡು, ಎಡಗೈಯಲ್ಲಿ ಮೊರದಲ್ಲಿ ಮಾರಿಯನ್ನು ಇಟ್ಟುಕೊಂಡು ಢಕ್ಕೆಯನ್ನು ಬಾರಿಸುತ್ತ ಮಾರಿಯನ್ನು ಕುಣಿಸುತ್ತ ಮನೆಮನೆಗೆ ಹೋಗಿ ಭಿಕ್ಷೆ ಬೇಡುವುದು ದಲಿತ ವರ್ಗದವರ ಒಂದು ಜೀವನೋಪಾಯದ ಮಾರ್ಗ. ಈ ಮಾರಿ ಕುಣಿಸುವ ಕಸುಬನ್ನೆ ತನ್ನ ಕಾಯಕವನ್ನಾಗಿ ಮಾಡಿಕೊಂಡು ಆ ಮೂಲಕ ಜನಜಾಗೃತಿಯನ್ನು ಮಾಡುವ ಮಹತ್ಕಾರ್ಯವನ್ನು ಢಕ್ಕೆಯ ಮಾರಯ್ಯ ಸಾಧಿಸಿದನು.

ಮಾರಯ್ಯ ತನ್ನ ವಚನಗಳಲ್ಲಿ ಮಾರಿ ಕುಣಿತದ ಕ್ರಿಯೆಗಳ ರೂಪಕಗಳನ್ನು ವಿಪುಲವಾಗಿ ಬಳಸಿದ್ದಾನೆ. ಈ ವಚನ ನೋಡಿ –

ಕಾಯನೆಂಬ ಢಕ್ಕೆ, ಕ್ರೀ ಭಾವವೆಂಬ ಹೊದಕೆ
ಅರಿವೆಂಬ ನೇಣಿನಲ್ಲಿ ಸ್ಥೂಲ ಸೂಕ್ಷ್ಮವೆಂಬ ಹೊಡೆಚೆಂಡು ಕಟ್ಟಿ
ಹೊಯ್ವುತ್ತಿದೆ ಢಕ್ಕೆ, ಕಾಲಾಂತರ ಭೀಮೇಶ್ವರ ಲಿಂಗವಲ್ಲ ದಿಲ್ಲಾ
ಎಂದು.

ತನ್ನ ಕಾಯಕದ ಅಂಗವಾದ ಮಾರಿಯನ್ನು ಕೀಳುದೈವವೆಂದು, ಅಂಧ ಶ್ರದ್ಧೆಯೆಂದು ಬಿಟ್ಟುಕೊಡದೆ, ಅದನ್ನೆ ತನ್ನ ತತ್ವಚಿಂತನೆಗೆ ರೂಪಕವಾಗಿಸಿಕೊಂಡು ಆ ಮೂಲಕವೆ ಷಡುಸ್ಥಲದ ತತ್ವಗಳನ್ನು ಅವನು ವಿವರಿಸುತ್ತಾನೆ. ತನ್ನ ಮೊರದಲ್ಲಿರುವವಳು 'ಅರಿದವರಿಗೆ ದೇವಿ ಮರೆದವರಿಗೆ ಮಾರಿ' ಎನ್ನುತ್ತಾನೆ. ಮಾರಿ ಮನುಷ್ಯನಲ್ಲಿರುವ ವಿಕಾರದ ಸಂಕೇತ; 'ಅಂಗವೆಂಬ ಮೊರದಲ್ಲಿ ವಿಕಾರವೆಂಬ ಕೋಣನೇರಿ ತಾಯಿ ಬಂದಳಯ್ಯಾ ಮೂರು ಮುಖವಾಗಿ.' ಲಿಂಗವನ್ನು ಅರಿಯದೆ ಹೋದವರನ್ನು ಈ ತಾಯಿ ಹೊಲಬುದಪ್ಪಿಸುತ್ತಾಳೆ.

ತನ್ನ ಮಾರಿಯ ಕುಣಿತದ ಬಗ್ಗೆ ಮಾರಯ್ಯನಿಗೆ ಯಾವ ಕೀಳರಿಮೆಯೂ ಇಲ್ಲ. 'ದೇವಂಗೆಂದು ಕುರಿತು ಆವ ಕಾಯಕವ ಮಾಡಿದಡೂ ಕಾಲಾಂತರ ಭೀಮೇಶ್ವರ ಲಿಂಗಕ್ಕೆ ಅರ್ಪಿತವು' ಎಂದು ಅವನು ಹೇಳಿಕೊಳ್ಳುತ್ತಾನೆ. ಈ ದಲಿತ ಪ್ರಜ್ಞೆ ಹಾಗೂ ಶಿಷ್ಟ ಪ್ರಜ್ಞೆಯ ಸಂಘರ್ಷವೇ ಇವನ ಕುರಿತು ಮುಂದಿನ ಕವಿಗಳು ಹೇಳುವ ಕಥೆಯ ಮರ್ಮವಾಗಿದೆ. ಜೇಡರ ದಾಸಿಮಯ್ಯ ತಾನು ಪಡೆದ ತವನಿಧಿಯಿಂದಾಗಿ ಅಹಂಕಾರಿಯಾದಾಗ ಅವನಿಗೆ ಪಾಠ ಕಲಿಸಿದವನು ಶಂಕರ ದಾಸಿಮಯ್ಯನೆಂಬ ಶರಣನು. 'ಪರದೇವ ಭಂಜನೆಯ ಸಿರಿಯ ಗರ್ವ'ದ ಈ ಶಂಕರ ದಾಸಿಮಯ್ಯನು, ಕೀಳು ದೇವತೆಯ ಉಪಾಸನೆ ಮಾಡುತ್ತಾನಲ್ಲ ಎಂದು ಮಾರಯ್ಯನನ್ನು ಹಂಗಿಸಿ ತನ್ನ ಉರಿಗಣ್ಣನ್ನು ತೆರೆದು ಮಾರಿಯನ್ನು ಸುಟ್ಟು ಬಿಡಲು ಹೇಳಿದನು. ಆದರೆ ಮಾರಿ ಆ ಉರಿಯನ್ನೆ ನುಂಗಿ ಚೀರಾಡುತ್ತ ಕುಣಿದಾಡಿತು. ಮಾರಯ್ಯ ಮಾರಿಯನ್ನು ತನ್ನ ಇಷ್ಟಲಿಂಗದಲ್ಲಿ ಅಡಗಿಸಿದನು. ಶಂಕರ ದಾಸಿಮಯ್ಯ ಅಪಮಾನಿತನಾದಾಗ ಬಸವಣ್ಣ ಬಂದು ಮಾರಯ್ಯನ ಮಹತಿಯನ್ನು ಶಂಕರ ದಾಸಿಮಯ್ಯನಿಗೆ ತಿಳಿಸಿಕೊಟ್ಟನು ಎಂದೂ ಒಂದೆಡೆ ಉಲ್ಲೇಖ ಇದೆ.

ವೈದಿಕ ಪರಂಪರೆಯಲ್ಲಿ ಸ್ತ್ರೀ ಶೂದ್ರ ಸಮೀಕರಣದಿಂದ ಉಂಟಾದ ಸ್ತ್ರೀ ಸ್ವಾತಂತ್ರ್ಯ ಹರಣವನ್ನು ಶರಣರು ಪ್ರಖರವಾಗಿ ವಿರೋಧಿಸಿದರು. ಸ್ತ್ರೀ ಪುರುಷ ವಿಷಮತೆಯ ಕುರಿತು ಹಲವಾರು ವಚನಗಳು ಜನಪ್ರಿಯವಾಗಿವೆ. ಢಕ್ಕೆಯ ಮಾರಯ್ಯನ ಈ ವಚನವು ಈ ಸಂದರ್ಭದಲ್ಲಿ

ಗಮನಾರ್ಹವಾಗಿದೆ :

ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣವ ಸತಿ ನೋಡಬಹುದೆ ಎಂಬರು.
ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ ?
ಪತಿಯಿಂದ ಬಂದ ಸೋಂಕು ಸತಿಯ ಕೇಡಲ್ಲವೆ ?
ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕ್ಕೆ
ಭಂಗವಾರಿಗೆಂಬುದ ತಿಳಿದಲ್ಲಿಯೆ
ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಸಲೆ ಸಂದಿತ್ತು.

ಪತಿಯ ಗುಣಗಳನ್ನು ಹೆಂಡತಿಯು ಏಕೆ ಪರೀಕ್ಷಿಸಬಾರದು ಎಂಬ ದಿಟ್ಟ ಸವಾಲನ್ನು ಪುರುಷ ಪ್ರಧಾನ ಶಿಷ್ಟ ಸಂಸ್ಕೃತಿಗೇನೆ ಎಸೆಯುತ್ತಾನೆ ಮಾರಯ್ಯ.

ತನ್ನ ಕಸುಬನ್ನೆ ಅಧ್ಯಾತ್ಮದ ಎತ್ತರಕ್ಕೆ ಏರಿಸುವ ಮಾರಯ್ಯನ ವಚನಗಳು ಶರಣರ ಅನುಭಾವದ ತಾತ್ವಿಕ ವಿವರಣೆಗಳ ಸುಂದರ ಸರಳ ಅಭಿವ್ಯಕ್ತಿಗಳಾಗಿವೆ. ಶಿಲೆಯು ಶಿಲ್ಪಿಯ ಕೈಯಲ್ಲಿ 'ಭಾವ ಹಿಂಗಿ ಕುರುಹಾಯಿತ್ತು' ಆಚಾರ್ಯನ ಕೈಯಲ್ಲಿ 'ಭಾವ ಹಿಂಗಿ ಕಳೆಯಾಯಿತ್ತು', ಪೂಜಿಸುವಾತನ ಚಿತ್ತದಲ್ಲಿ 'ಕಳೆ ನೆಲೆಯಾಯಿತ್ತು' ಚಿತ್ತ ವಸ್ತುವಿನಲ್ಲಿ ಬೆರೆದು ಕಾಲಾಂತಕ ಭೀಮೇಶ್ವರ ಲಿಂಗವಾಯಿತ್ತು. ಇಷ್ಟಲಿಂಗ ಮೂಲಕ ಲಿಂಗಾಂಗ ಸಾಮರಸ್ಯದ ಈ ಶಬ್ದಚಿತ್ರ ಮನದಲ್ಲಿ ಆಳವಾಗಿ ನಿಲ್ಲುವಂಥದು.

ದಲಿತ ವರ್ಗದ ಅಶಿಕ್ಷಿತನಾದ ಮಾರಯ್ಯನ ಭಾಷೆಯ ಸೊಗಸು ಆಕರ್ಷಣೀಯವಾಗಿದೆ. ಡಾ॥ ಚಿದಾನಂದಮೂರ್ತಿಗಳ ಅಭಿಪ್ರಾಯದಲ್ಲಿ 'ಅವನು ಮೊರದಲ್ಲಿ ಮಾರಿಯನ್ನು ಕುಣಿಸುವಂತೆ ತನ್ನ ವಚನಗಳಲ್ಲಿ ಕನ್ನಡ ಭಾಷೆಯನ್ನು ಕುಣಿಸಿದ್ದಾನೆ.'

ಅನಾಮಿಕ ನಾಚಯ್ಯ

ದಿಕ್ಕು ದೆಸೆಗಳೇ ಇಲ್ಲದ ಜನಜಂಗುಳಿಯಾದ ಅಸ್ಪೃಶ್ಯ ಜನರಿಗೆ ಹೊಲೆಮಾದಿಗರು, ಶ್ವಪಚರು, ಪಂಚಮರು ಅಂತ್ಯಜರು, ಕನಿಷ್ಠರು, ಚಂಡಾಲರು ಮುಂತಾದ ಹೆಸರುಗಳ ಜತೆಯಲ್ಲಿ ಇನ್ನೊಂದು ಹೆಸರು ಅನಾಮಿಕ ಎಂದು. ಅಂದರೆ ಅವರು ಹೆಸರೆ ಇಲ್ಲದವರು ಅಥವಾ ಹೆಸರಿಗೆ ಅರ್ಹರಲ್ಲದವರು. ಹೆಸರು ಹಿಡಿದು ಕರೆಯಬಾರದಂಥವರೂ ಎನ್ನಬಹುದು. ಅಂದರೆ ಬಾಯಲ್ಲಿ ಅವರ ಹೆಸರು ಬಂದರೆ ಮೈಲಿಗೆ ಉಂಟುಮಾಡುವವರು. ನಾಚಯ್ಯ ಎಂಬ ಶರಣನು ಇಂಥವನು. ಅವನ ಹೆಸರೆ ಅನಾಮಿಕ ನಾಚಯ್ಯ ಎಂದು ಉಲ್ಲೇಖಗೊಂಡಿದೆ.

ಈ ಅನಾಮಿಕ ನಾಚಯ್ಯನ ೫ ವಚನಗಳು ಸಿಕ್ಕಿವೆ. ಆದರೆ ಅವನ ಬಗ್ಗೆ ಯಾವ ವಿವರವೂ ಯಾವುದೆ ಕಾವ್ಯ ಚರಿತ್ರೆ ಗ್ರಂಥಗಳಲ್ಲಿ ದೊರೆಯುವುದಿಲ್ಲ. ಪುರಾಣ ಪದ್ಧತಿಯ ಕಥೆಗಳಾವುವೂ ಇವನ ಹೆಸರಿನ ಸುತ್ತ ಬೆಳೆದಿಲ್ಲ. ನಾಚಯ್ಯನ ವಚನಗಳಲ್ಲಿ ಸಮಾಜ ವಿಮರ್ಶೆ ಕಂಡು ಬರುತ್ತದೆ. ಸಮಾಜದಲ್ಲಿಯ ವಂಚಕರೆ ನಿಜವಾದ ಅನಾಮಿಕರು ಎಂದು ಹೇಳುವ ಈ ವಚನ ನೋಡಿ :

ಹಸಿವಿಂಗೆ ಲಯವಿಲ್ಲ, ವಿಷಯಕ್ಕೆ ಕುಲವಿಲ್ಲ
ಮರಣಕ್ಕೆ ಮನ್ನಣೆಯಿಲ್ಲ, ಆಸೆಗೆ ಹವಣಿಲ್ಲ,
ವಂಚಕನನಾಮಿಕ, ನಾಚಯ್ಯ ಪ್ರಿಯ ಚನ್ನರಾಮಯ್ಯ

ವಂಚಕನ ಹಸಿವಿಗೆ ಕೊನೆಯೆಂಬುದಿಲ್ಲ, ಇಲ್ಲಿ ದಲಿತ ವರ್ಗದವರ ನಿರಂತರ ಹಸಿವೂ, ಶ್ರೀಮಂತರ ಹೊಟ್ಟೆಬಾಕತನದ ಹಸಿವೂ ಎರಡೂ ಧ್ವನಿತವಾಗಿವೆ. ಶ್ರೀಮಂತರ ಇಂದ್ರಿಯ ಸುಖಕ್ಕೆ ಕನಿಷ್ಠ ವರ್ಗದ ಹೆಂಗಸರನ್ನು

> **ಮರ್ಮವ ನುಡಿವರೆಂದು ಸಮನಿಸಲಾರೆ**
> **ತಮ್ಮಾ ನಿಮ್ಮನೆತ್ತಿಕೊಂಡು ನೊಂದೆ**
> **ತಮ್ಮಾ ನಿಮ್ಮನಿಳುಹಲಾರದೆ ನೊಂದೆ.**
> **ತಮ್ಮಾ ಅಗಮ್ಯ ನಾಚಯ್ಯ**
> **ಪ್ರಿಯ ಚನ್ನರಾಮೇಶ್ವರನ**
> **ನೆಮ್ಮಿ ತಮ್ಮನ ನಿಳುಹಿದೆ.**

ಸೆಳೆಯುವಾಗ ಅವರಿಗೆ ಕುಲ ಅಡ್ಡ ಬರುವುದಿಲ್ಲ, ಅವರು ಮರಣಕ್ಕೂ ಅಂಜುವವರಲ್ಲ, ಅವರ ಆಸೆಗೆ ಇತಿಮಿತಿ ಎಂಬುದಿಲ್ಲ, ಇಂಥ ವಂಚಕರೆ ನಿಜವಾದ ಅನಾಮಿಕರು. 'ವಂಚಕನನಾಮಿಕ' ಎನ್ನುವಲ್ಲಿ ನಾಚಯ್ಯನ ಅನುಭವಗಳ ರೊಚ್ಚು ಎದ್ದು ಕಾಣುತ್ತದೆ.

ನಾಚಯ್ಯನ ಇನ್ನೊಂದು ವಚನ ಅರ್ಥಗರ್ಭಿತವೂ ಭಾವಭರಿತವೂ ಆಗಿದ್ದು ಅದರಲ್ಲಿ ಅವನ ಜೀವನದ ಅಂಶಗಳು ಹುದುಗಿದಂತಿವೆ :

ಮರ್ಮವ ನುಡಿವರೆಂದು ಸಮನಿಸಲಾರೆ
ತಮ್ಮಾ ನಿಮ್ಮನೆತ್ತಿಕೊಂಡು ನೊಂದೆ
ತಮ್ಮಾ ನಿಮ್ಮನಿಳುಹಲಾರದೆ ನೊಂದೆ.
ತಮ್ಮಾ ಅಗಮ್ಯ ನಾಚಯ್ಯ ಪ್ರಿಯ ಚನ್ನರಾಮೇಶ್ವರನ
ನೆಮ್ಮಿ ತಮ್ಮನ ನಿಳುಹಿದೆ.

ನೀಚಕುಲದಿಂದ ಬಂದು ಶರಣ ಧರ್ಮ ಸ್ವೀಕರಿಸಿ ವಚನಗಳನ್ನು ಬರೆಯಲು ಪ್ರಾರಂಭಿಸಿದ ನಂತರದ ಅವನ ಮನದಲ್ಲಿಯ ದ್ವಂದ್ವಗಳ ಅನುಭೂತಿಯ ತಲಸ್ಪರ್ಶಿ ಅಭಿವ್ಯಕ್ತಿಯಾಗಿದೆ ಈ ವಚನ.

ಹೆಂಡದ ಮಾರಯ್ಯ

ಹೆಂಡದ ಮಾರಯ್ಯನ ಕುರಿತು ವಿವರಗಳಾವುವೂ ಉಪಲಬ್ಧವಿಲ್ಲ. ಚರಿತ್ರೆ ಪುರಾಣಗಳಲ್ಲಿ ಅವನ ಬಗ್ಗೆ ಉಲ್ಲೇಖ ದೊರೆಯುವುದಿಲ್ಲ. ಅವನ ಹೆಸರಿನ ಮೇಲಿಂದಲೇ ಅವನು ಹೆಂಡದಂಗಡಿಯನ್ನು ಇಟ್ಟುಕೊಂಡು ಉಪಜೀವಿಸುತ್ತಿದ್ದನೆಂಬುದು ತಿಳಿದುಬರುವುದು. ಬಸವ ಮಾರ್ಗವನ್ನವಲಂಬಿಸಿ ಶರಣನಾದ ಮೇಲೆ ಅವನು ಹೆಂಡ ಮಾರುವುದನ್ನು ಬಿಟ್ಟಿರಬೇಕು. ಅವನು ಅರವಟ್ಟಿಗೆಯನ್ನು ತೆರೆದು ತಂಪನ್ನ ಸಿಹಿನೀರನ್ನು ಪೂರೈಸುವ ಕಾಯಕ ಮಾಡುತ್ತಿದ್ದನೆಂದೂ ನೀರು ಕುಡಿಯ ಬಂದವರಿಗೆ ಶುದ್ಧ ಶಿವಶರಣರ ಆಚರಣೆಯನ್ನೇ ಬೋಧಿಸುತ್ತಿದ್ದನೆಂದೂ ಶ್ರೀ ಫ.ಗು. ಹಳಕಟ್ಟಿಯವರು ಅಭಿಪ್ರಾಯಪಟ್ಟಿದ್ದಾರೆ.

'ಧರ್ಮೇಶ್ವರ ಲಿಂಗ' ಎಂಬ ಅಂಕಿತವುಳ್ಳ ಮಾರಯ್ಯನ ೧೨ ವಚನಗಳು ದೊರೆತಿವೆ. ಈ ವಚನಗಳಲ್ಲಿ ಹೆಂಡದ ವ್ಯವಸಾಯದ ಪರಿಭಾಷೆಯನ್ನು, ಅಲ್ಲಿಯ ಕ್ರಿಯೆಗಳ ಪ್ರತಿಮೆಗಳನ್ನು ಕಾಣಬಹುದು. 'ಆಣವ ಮಾಯಾ ಕಾರ್ಮಿಕವೆಂಬ ಮೂರು ಸುರೆ'ಗಳು 'ಆಸೆಯೆಂಬ ಮಧುಪಾನ' 'ದೃಷ್ಟದ ಸುರಾಪಾನ' ಇತ್ಯಾದಿ ಶಬ್ದ ಪುಂಜಗಳನ್ನು ಅವನು ಬಳಸುತ್ತಾನೆ. 'ಮದ್ದಿನ ಸುರೆಯ ತೊಗಲ ತಿತ್ತಿಯಲಿ ತುಂಬಿ, ಒಪ್ಪದಲಿ ನಿಲಿಸಲಿಕೆ, ಅದು ತನ್ನ ಉತ್ಪಾತದಿಂದ ತಿತ್ತಿ ಹಾರಿ, ನೆಲಕ್ಕೆ ಅಪ್ಪಳಿಸಿ ಬೀಳೂದ ಕಂಡೆ' ಎಂಬಲ್ಲಿ ಅದೇ ತಾನೆ ಭಟ್ಟಿ ಇಳಿಸಿದ ಹೆಂಡವನ್ನು ತೊಗಲ ಚೀಲದಲ್ಲಿ ತುಂಬಿ ಬೂಚು ಹಾಕಿ ಇಟ್ಟಾಗ, ಒಳಗಡೆ ಇನ್ನೂ ನಡೆಯುತ್ತಿರಬಹುದಾದ ರಾಸಾಯನಿಕ ಕ್ರಿಯೆಯಿಂದ ಸ್ಫೋಟವಾಗಿ ತಿತ್ತಿ ನೆಗೆದು ಬೀಳುವ ಸಾಮಾನ್ಯ ಘಟನೆಯನ್ನು ಉಲ್ಲೇಖಿಸಿ ಮುಂದೆ ಒಂದು ಸುಂದರ ಪ್ರತಿಮೆಯನ್ನು ನಿರ್ಮಿಸುತ್ತಾನೆ. 'ಕಾಯದ ತಿತ್ತಿಯಲ್ಲಿ ಜೀವ ಹೊಕ್ಕು ತ್ರಿವಿಧ ಮಲವಂ ಕಚ್ಚಿ ನೆಡುವುದಕ್ಕೆ ಕಾಲಿಲ್ಲದೆ, ನುಡಿವುದಕ್ಕೆ ಬಾಯಿಲ್ಲದೆ, ನೋಡುವುದಕ್ಕೆ ಕಣ್ಣಾಲಿ ಮರೆಯಾಯಿತ್ತು.' ಲಿಂಗ ಚೈತನ್ಯವಿಲ್ಲದ ಜೀವದ ಸಮರ್ಪಕ ಚಿತ್ರಣವಿದು. ಶರಣನಾದ ಮಾರಯ್ಯ ತಯಾರಿಸುವ ಸುಧೆ ಎಂಥದು ನೋಡಿ:' ಅಂಗದ ಅಗ್ನಿಯಲ್ಲಿ ಬೇಯಿಸಿ ಮೂರು ಸಂಗವಡೆದ (ಗುರುಲಿಂಗ ಜಂಗಮ) ಮಡಕೆಯ ಓಡಿನಲ್ಲಿ, ಶ್ರುತ, ದೃಷ್ಟ ಅನುಮಾನವೆಂಬ (ಜ್ಞಾನ ನಿರ್ಮಿತಿಯ ಮಾರ್ಗಗಳು) ಕೋಲಿನಲ್ಲಿ ಕಡೆಯಲಾಗಿ, ರಸ ಒಳಗಾಗಿ ಹಿಪ್ಪಿ ಹೊರಗಾಯಿತ್ತು ಆ ಸುಧೆಯ ತುಂಬಿ ತಂದೆ'. ಆದರೆ 'ನಾ ಮಾರಬಂದ ಸುಧೆಯ ಕೊಂಬವರಾರೂ ಇಲ್ಲ' ಎಂದು ಅವನು ನೊಂದುಕೊಳ್ಳುತ್ತಾನೆ. ಆದರೆ ಈ ಶರಣನ ಜ್ಞಾನ ಸುಧೆ ಎಂಥದು? ಅದು 'ಬ್ರಹ್ಮ ಕಲ್ಪವ ಕೆಡಿಸಿತ್ತು' 'ವಿಷ್ಣುವಿನ ಗೊತ್ತ ಕಿತ್ತಿತ್ತು' 'ರುದ್ರನ ಅಗಡವ (ತುಂಟತನ) ಕಿತ್ತಿತು' ಈ ಶರಣ ರಸಾಯನ 'ಅರಿದುಕೊಂಡಲ್ಲಿ ಸುಧೆ, ಮರೆದು ಕೊಂಡಲ್ಲಿ ಸುರೆ' ಯಾಗುತ್ತದೆ.

ಇನ್ನು ಕೆಲವು ವಚನಗಳಲ್ಲಿ ಮಾರಯ್ಯ ಚಿಕಿತ್ಸಾ ದೃಷ್ಟಿಯ ವಿಚಾರವಂತ ಎಂಬುದು ಗಮನಕ್ಕೆ ಬರುತ್ತದೆ. ತತ್ವ ಚಿಂತನೆಯಲ್ಲಿ ಅವನು ಸಂದೇಹವಾದಿ (Sceptic) ಯ ಹಾಗೆ ನುಡಿಯುತ್ತಾನೆ. 'ನಾವರಿದುದಿಲ್ಲ, ಸುಮ್ಮಗಿರಿ ನೀವು' ಎಂದು ಒಂದು ಕಡೆ ಹೇಳುತ್ತಾನೆ.

....

ಶರಣರಿಗೆ ಲಿಂಗವಿಲ್ಲ, ನಾವು ಪೂಜಕರಲ್ಲ
ಭಕ್ತಿಯೆಂಬುದಾವುದು ? ಅರ್ಧ ಶರೀರ ಶಿವನಾರು?
ದಕ್ಷಿಣಂಗೆ ಮಹೇಶ್ವರನಾರು ? ಭೃಂಗೀಶ್ವರನೊಬ್ಬನೆ?
ಮತ್ತೆ ಕಂಡುದಿಲ್ಲ, ಧರ್ಮೇಶ್ವರ ಲಿಂಗಾ.

ಎಂದು ಪ್ರಶ್ನೆಗಳನ್ನು ಕೇಳುತ್ತ ತನ್ನ ವೈಚಾರಿಕ ಪ್ರಜ್ಞೆಯನ್ನು ಪ್ರಕಟಗೊಳಿಸುತ್ತಾನೆ. ಅವನ ಈ ವಚನಗಳು ಆಳವಾದ ಅಭ್ಯಾಸವನ್ನು ನಿರೀಕ್ಷಿಸುತ್ತವೆ.

ಹೆಂಡದ ಮಾರಯ್ಯನ ವಚನಗಳು, ಸಂಖ್ಯೆಯಲ್ಲಿ ಕಡಿಮೆಯಾದರೂ ಸತ್ವದಲ್ಲಿ ಹಿರಿಯದಾಗಿವೆ. ಅವನ ನುಡಿಗಳು ಮುತ್ತಿನ ಹಾರದಂತಿವೆ.

ಆಕರ ಗ್ರಂಥಗಳು

೧. ಸಮಗ್ರ ವಚನ ಸಂಪುಟ, ಕರ್ನಾಟಕ ಸರ್ಕಾರ ೧೯೯೩, ೨೦೦೧ ಸಂಪುಟಗಳು ೫ ರಿಂದ ೯.
೨. ಬಸವೇಶ್ವರರ ಸಮಕಾಲೀನರು, ಬಸವ ಸಮಿತಿ, ಬೆಂಗಳೂರು, ತೃತೀಯ ಮುದ್ರಣ ೧೯೮೯.
೩. ಡಾ॥ ಎಂ. ಚಿದಾನಂದ ಮೂರ್ತಿ, ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೮೫.
೪. ಬಸವ ಮತ್ತು ದಲಿತೋದಯ, ಬಸವ ಸಮಿತಿ ಬೆಂಗಳೂರು ೧೯೯೧.
೫. ಎಚ್.ಎಸ್. ಶಿವಪ್ರಕಾಶ : ಮಧ್ಯಕಾಲೀನ ಸಾಹಿತ್ಯ ಸಂಸ್ಕೃತಿಯ ವಿವಿಧ ನೆಲೆಗಳು, ಪ್ರಬಂಧ - ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ ಗ್ರಂಥದಲ್ಲಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩.
೬. ಫ.ಗು. ಹಳಕಟ್ಟಿ: ಏಳು ನೂರಾ ಎಪ್ಪತ್ತು ಅಮರ ಗಣಾಧೀಶ್ವರರು

ಎರಡನೆಯ ಸ್ವಾತಂತ್ರ್ಯ ಹೋರಾಟ

ವಿಶ್ಲೇಷಣೆ

ಪಾಶ್ಚಾತ್ಯ ಚಿಂತನೆಯ ನೆಲೆಯೇ ನಮಗಿಂದು ಅಗತ್ಯವಿದೆಯೆ? ಅವರು ಯಾವ ಸಂದರ್ಭದಲ್ಲಿ ಯಾಕಾಗಿ ಈ ಪರಿಕಲ್ಪನೆಗಳನ್ನು ಕಟ್ಟಿಕೊಂಡರೋ ಅದೇ ಪರಿಕಲ್ಪನೆಗಳ ಅರ್ಥದಲ್ಲಿಯೇ ನಾವಿಂದು ಅವುಗಳನ್ನು ಗ್ರಹಿಸಬೇಕೆ? ಹಾಗೆ ಗ್ರಹಿಸಿದ್ದೇ ಆದರೆ ದೇಶ ಅಥವಾ ದೇಶೀ ವಾದದ ಪರಿಕಲ್ಪನೆಗೇನರ್ಥ. ನಮ್ಮತನವನ್ನು ನಾವರಿಯದೆ ಹೋದಾಗ ಅನ್ಯರ ಚಿಂತನೆಗಳನ್ನು ಅನುಸರಿಸಬೇಕಾದ ಅನಿವಾರ್ಯತೆ ಒದಗುತ್ತದೆ. ಇದನ್ನಿಲ್ಲಿ ಚರ್ಚಿಸಲು ಕಾರಣ 'ರಾಷ್ಟ್ರೀಯತೆ' 'ರಾಷ್ಟ್ರೀಯವಾದ'ದ ಪರಿಕಲ್ಪನೆಗಳನ್ನು ನಮಗಿಂದು, ನಮಗೆ ಬೇಕಾದ ನೆಲೆಯಲ್ಲಿ ಬಳಸುವ ಅಗತ್ಯವಿದೆ.

○ ಡಾ॥ ಅರವಿಂದ ಮಾಲಗತ್ತಿ

(ಕಳೆದ ಸಂಚಿಕೆಯಿಂದ)

ಪಾಶ್ಚಾತ್ಯ ಚಿಂತನೆಯ ನೆಲೆಯೇ ನಮಗಿಂದು ಅಗತ್ಯವಿದೆಯೆ? ಅವರು ಯಾವ ಸಂದರ್ಭದಲ್ಲಿ ಯಾಕಾಗಿ ಈ ಪರಿಕಲ್ಪನೆಗಳನ್ನು ಕಟ್ಟಿಕೊಂಡರೋ ಅದೇ ಪರಿಕಲ್ಪನೆಗಳ ಅರ್ಥದಲ್ಲಿಯೇ ನಾವಿಂದು ಅವುಗಳನ್ನು ಗ್ರಹಿಸಬೇಕೆ? ಹಾಗೆ ಗ್ರಹಿಸಿದ್ದೇ ಆದರೆ ದೇಶ ಅಥವಾ ದೇಶೀವಾದದ ಪರಿಕಲ್ಪನೆಗೇನರ್ಥ. ನಮ್ಮತನವನ್ನು ನಾವರಿಯದೆ ಹೋದಾಗ ಅನ್ಯರ ಚಿಂತನೆಗಳನ್ನು ಅನುಸರಿಸಬೇಕಾದ ಅನಿವಾರ್ಯತೆ ಒದಗುತ್ತದೆ. ಇದನ್ನಿಲ್ಲಿ ಚರ್ಚಿಸಲು ಕಾರಣ 'ರಾಷ್ಟ್ರೀಯತೆ' 'ರಾಷ್ಟ್ರೀಯವಾದ'ದ ಪರಿಕಲ್ಪನೆಗಳನ್ನು ನಮಗಿಂದು, ನಮಗೆ ಬೇಕಾದ ನೆಲೆಯಲ್ಲಿ ಬಳಸುವ ಅಗತ್ಯವಿದೆಯೇ ವಿನಃ ಪಾಶ್ಚಾತ್ಯರು ಬಳಸಿದ ಪರಿಕಲ್ಪನೆಯಲ್ಲಿ ಬಳಸಿದ್ದೇ ಆದರೆ ಅದಕ್ಕೆ ಅರ್ಥವಿಲ್ಲವೆನಿಸುತ್ತದೆ. ನಮ್ಮತನವೇ ನಮಗೆ ಸಾಮರ್ಥ್ಯವಾಗಬಲ್ಲದು. ಅನುಕರಣೆ ಸಮಸ್ಯೆಯಿಂದ ಹೊರತರುವಲ್ಲಿ ಸೋಲುತ್ತದೆ!.

ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿಯೂ ರಾಷ್ಟ್ರ - ರಾಷ್ಟ್ರೀಯತೆ - ರಾಷ್ಟ್ರೀಯವಾದ ಎಂಬ ಪದಗಳು ಬಳಕೆಯಲ್ಲಿದ್ದವು. ಇವುಗಳ ಅರ್ಥ ಮತ್ತು ವ್ಯಾಪ್ತಿ ದೇಶೀಯತೆಯ ಪರಿಕಲ್ಪನೆಗೂ ರಾಷ್ಟ್ರೀಯತೆಯ ಪರಿಕಲ್ಪನೆಗೂ ಅಂತರ ವಿಲ್ಲದೆ ಬಳಸಿರುವುದನ್ನು ಕಾಣುತ್ತೇವೆ. ಅಂದಿನ ಸಂದರ್ಭದಲ್ಲಿ ರಾಷ್ಟ್ರವನ್ನು ಕಟ್ಟುವ ಪರಿಕಲ್ಪನೆಯೇ ಪ್ರಧಾನವಾಗಿದ್ದರ ಹಿನ್ನೆಲೆಯಲ್ಲಿಯೇ ಈ ಪದಗಳು ಬಳಕೆಯಾಗಿರುವುದು ಕಂಡುಬರುತ್ತದೆ. ಆದರೆ ಇಂದು ಅದೇ ಅರ್ಥದಲ್ಲಿ ಬಳಸಲಾಗದು. ಕಾರಣ; ಅಂದು ಬ್ರಿಟಿಷರ ಹಿಡಿತ ದಿಂದ ಭಾರತವನ್ನು ಸ್ವತಂತ್ರಗೊಳಿಸುವುದೇ ಆಗಿತ್ತು. ಹೀಗಾಗಿ ರಾಷ್ಟ್ರದ ಪರಿಕಲ್ಪನೆ ವಿರೋಧಿಸುವ ಶಕ್ತಿಯಾಗಿ ಬ್ರಿಟಿಷರನ್ನು ಹೊರ ತಳ್ಳುವ ಆಶಯ ಹೊಂದಿತ್ತು. ಇಂದಿನ ರಾಷ್ಟ್ರೀಯ ಪರಿಕಲ್ಪನೆ ಅದೇ ಅರ್ಥದಲ್ಲಿಟ್ಟುಕೊಂಡು ಹೋಗಲು ಸಾಧ್ಯವಿಲ್ಲ, ಕಾರಣ ರಾಷ್ಟ್ರೀಯತೆಯ ಮೂಲವೇ ನಮ್ಮನ್ನು ನಾವು ಆಳಿಕೊಳ್ಳಬೇಕು ಎಂಬ ಧೋರಣೆ. ಈ ಧೋರಣೆಯೇ ರಾಷ್ಟ್ರದ ಸ್ವತಂತ್ರ ಅಸ್ತಿತ್ವಕ್ಕೆ ನಾಂದಿಯಾಗಿರುವುದನ್ನು ಪ್ರಪಂಚದ ಇತಿಹಾಸದಿಂದ ಅರಿಯಲು ಸಾಧ್ಯವಾಗುತ್ತದೆ. ಹೀಗಾಗಿ ರಾಷ್ಟ್ರದ ಭೌತಿಕ ರೂಪಕ್ಕಿಂತ ಇಂದಿನ ಸಂದರ್ಭದಲ್ಲಿ ತಾತ್ವಿಕ ರೂಪ ಹೆಚ್ಚು ಮಹತ್ವದ್ದೆನಿಸುತ್ತದೆ. 'ರಾಷ್ಟ್ರ' ಮತ್ತು 'ದೇಶ' ಎಂಬ ಪದಗಳನ್ನು ಭಿನ್ನ ಅರ್ಥದಲ್ಲಿ ಗ್ರಹಿಸುವ ಅಗತ್ಯವಿರುವುದರಿಂದ ಅವುಗಳ ಕೇಂದ್ರ ಭಾವ - ಅರ್ಥ - ಗ್ರಹಿಕೆ ಗಳನ್ನು ಕಟ್ಟಿಕೊಡುವ ಅಗತ್ಯವಿದೆ. 'ರಾಷ್ಟ್ರ'ಕ್ಕೆ ಸಂವಿಧಾನವೇ ಉಸಿರಾಗಿರುವುದರಿಂದ ಅದು ಮೂರ್ತ ರೂಪದ ಮತ್ತು ಬೌದ್ಧಿಕ ರೂಪದ ನೆಲೆಯನ್ನೇ ಆಶ್ರಯಿಸುತ್ತದೆ. 'ದೇಶ' ಭೌಗೋಳಿಕ ಹಾಗೂ ಪರಂಪರೆ ನೆಲೆಗಳನ್ನು ನೆಚ್ಚಿದ್ದು ಭಾವನಾತ್ಮಕವಾಗಿರುವುದೇ ಅಧಿಕ. ಒಂದು ಪ್ರಜ್ಞಾಪೂರ್ವಕವಾದರೆ ಇನ್ನೊಂದು ಅಪ್ರಜ್ಞಾಪೂರ್ವಕವಾದ ಪ್ರವೃತ್ತಿಯನ್ನು ಹೊಂದಿರುತ್ತದೆ. ಆದರೆ ಇವೆರಡೂ ತಮ್ಮ ತಮ್ಮ ನೆಲೆಯಿಂದ ಪ್ರದೇಶಕ್ಕೆ ನಿಷ್ಠೆಯನ್ನು ತೋರಿಸುತ್ತವೆ. 'ಸ್ವತಂತ್ರ ಮನುಷ್ಯ'ನ 'ಸ್ವತಂತ್ರ ರಾಷ್ಟ್ರ' 'ಸ್ವತಂತ್ರ ದೇಶೀ'ದ ಸ್ವರೂಪದ ನೆಲೆಯಾಗುವುದರೊಂದಿಗೆ ಸ್ವಾತಂತ್ರ್ಯ, ಸಮಾನತೆ, ಕರ್ತವ್ಯ, ವ್ಯಕ್ತಿಗೌರವ, ನ್ಯಾಯ ಗೌರವ ಇಂಥ ಅಂಶಗಳು ಜಾಗತಿಕ ಪರಿಕಲ್ಪನೆಗೆ ವಿಸ್ತರಿಸಬೇಕು.

ಭಾರತದ ಎರಡನೆಯ ಸ್ವಾತಂತ್ರ್ಯ ಹೋರಾಟ

ಸಾಮ್ರಾಜ್ಯಶಾಹಿ ಪರಿಕಲ್ಪನೆಯಿಂದ ರಾಷ್ಟ್ರದ ಪರಿಕಲ್ಪನೆ ರೂಪುಗೊಳ್ಳುವಾಗ ಜನಾಂಗ ಮೂಲ ಚರಿತ್ರೆ, ಒಂದೇ ಭಾಷೆ ಇಂಥ ಮಾನ ದಂಡಗಳನ್ನು ಆಶ್ರಯಿಸಿ ನಡೆದದ್ದು ಒಂದು ಘಟ್ಟದ ಮಾರ್ಗವಾಗಿ ಕಂಡುಬಂದಂತೆ 'ನಮ್ಮ ನಾವೇ ಆಳಿ ಕೊಳ್ಳಬೇಕು' ಎನ್ನುವುದೂ ಬೀಜಮಂತ್ರವಾಗಿತ್ತು. ಜಾಗತೀಕರಣದ ಈ ಸಂದರ್ಭದಲ್ಲಿ ಮತ್ತೆ ಆ ಸ್ವರೂಪ ಪಲ್ಲಟವಾಗುವ ನೆಲೆಗಳಿವೆ. ಎಂದರೆ ಒಬ್ಬ ವ್ಯಕ್ತಿಗೆ ತಾನು ಹುಟ್ಟಿದ ನೆಲೆಯೇ 'ಸ್ವದೇಶ'ವಾಗುತ್ತದೆ. ಇಲ್ಲಿ ಬೇರೊಬ್ಬರು ಬಂದು ಆಳುವುದು ಸರಿಯಲ್ಲ ಎಂಬ ಧೋರಣೆ ಮನೆಮಾಡಿದ್ದು ಒಂದು ಸ್ವರೂಪವಾದರೆ, ಬೇರೆಯವರ ಆಡಳಿತದಲ್ಲಿ ಒಂದು ವರ್ಗ ಬದುಕಲು ಬಯಸುವುದು ಮತ್ತೊಂದು ಬೆಳವಣಿಗೆಯ ಮಾರ್ಗ ವಾಗಿದ್ದನ್ನೂ ಅರಸೊತ್ತಿಗೆಯ ಕಾಲಘಟ್ಟದಲ್ಲಿ ವಸಾಹತುಶಾಹಿ ವ್ಯವಸ್ಥೆ ಯಲ್ಲಿ ಗಮನಿಸುತ್ತೇವೆ. ಈಗ ನಾವು ಎದುರಿಸುತ್ತಿರುವುದು ಇಂಥದೇ ಸ್ಥಿತಿಯಾಗಿದೆ. ಆದರೆ ಇದು ಭೌಗೋಳಿಕ ಕೇಂದ್ರಿತ ಸ್ವರೂಪದ್ದಲ್ಲ ಬದಲಾಗಿ ಬೌದ್ಧಿಕ ಮತ್ತು ತಾತ್ವಿಕ ಸ್ವರೂಪದ್ದಾಗಿದೆ.

೨ ಜಾಗತೀಕರಣ ಮತ್ತು ದೇಶಿದಂಗೆ

ಪ್ರಭುತ್ವದ ಪ್ರೀತಿಯಲ್ಲಾಗುವ ವ್ಯತ್ಯಾಸವೇ ರಾಷ್ಟ್ರೀಯತೆಯಲ್ಲಾಗುವ ಬದಲಾವಣೆ ಗಳಾಗಿಬಿಡುತ್ತವೆ. ಕ್ರಮೇಣ ಇವು ದೇಶೀ ನೆಲೆಯಲ್ಲಿ ಕರಗಿ ಅಂತರ್ಗತ ವಾಗಲು ಹವಣಿಸುತ್ತವೆ. ಇಲ್ಲಿ ಮುಖ್ಯವಾಗಬೇಕಾದದ್ದು ಎಲ್ಲ ರಾಷ್ಟ್ರ ಗಳ ಸಮಾನತೆಯೊಂದಿಗೆ ಸ್ವಾತಂತ್ರ್ಯ ಹಾಗೂ ಸಹೋದರತ್ವವನ್ನೂ ಕಾಪಾಡಿಕೊಂಡು ಹೋಗುವ ಬೀಜ ಮಂತ್ರ. ಭೌತಿಕವಾಗಿ ಆಳುವ ಪ್ರಕ್ರಿಯೆಗೆ ಬದಲಾಗಿ ಬೌದ್ಧಿಕವಾಗಿ ಆಳುವ ಪ್ರಕ್ರಿಯೆಗೆ ಒಳಗಾದ ಸಂದರ್ಭವಿದು. ಹೀಗಾಗಿ ಇಲ್ಲಿ ಬೌದ್ಧಿಕ ಹಾಗೂ ಭಾವನಾತ್ಮಕ ಸಂಘರ್ಷಗಳೇ ಭಿನ್ನ ನೆಲೆ, ಭಿನ್ನ ಸ್ವರೂಪಗಳಲ್ಲಿ ಜಾಗತಿಕವಾಗಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಮುಖಾಮುಖಿಯಾಗುತ್ತ ಹೋಗುತ್ತವೆ ಎನ್ನುವುದನ್ನು ಲಕ್ಷಿಸಬೇಕು. ಆದ್ದರಿಂದ ಇಂದು ಇದು ನಮಗೆ **'ಎರಡನೆ ಸ್ವಾತಂತ್ರ್ಯ ಹೋರಾಟ'**ವಾಗಿದೆ. ಈ ಹೋರಾಟ 'ಬೌದ್ಧಿಕವಾಗಿ' ನಾವು ನಮ್ಮನ್ನು ಆಳಿಕೊಳ್ಳಲು ಮಾಡುವ ಸಂಗ್ರಾಮವಾಗಬೇಕಿದೆ.

ಈ ಬೌದ್ಧಿಕ ಆಳ್ವಿಕೆ ಆರ್ಥಿಕ, ಸಾಂಸ್ಕೃತಿಕ, ಭಾಷಿಕ, ಧಾರ್ಮಿಕ ಹಾಗೂ ಭೌಗೋಳಿಕ ಆಯಾಮಗಳನ್ನು ಆಂತರಿಕವಾಗಿ ಪಡೆದುಕೊಂಡಿದೆ. ಇಂಥಲ್ಲಿ ದೇಶೀಯತೆ ಮತ್ತು ರಾಷ್ಟ್ರೀಯತೆಗಳೆರಡೂ ಸೇರಿಯೆ ಎದುರಿಸುವ ಸ್ಥಿತಿ ಇಂದು ಎದುರಾಗಿದೆ. ಆಡಳಿತವೂ ನಮ್ಮದೆ ನಿರ್ಣಯವೂ ನಮ್ಮದೆ ಆಗಿರುವುದರಿಂದ ನಮ್ಮ ರಾಷ್ಟ್ರದ ಪ್ರಭುತ್ವ ಪ್ರೀತಿಯೊಂದಿಗೆ ಎಂದರೆ ರಾಷ್ಟ್ರೀಯವಾದದೊಂದಿಗೆ ಮತ್ತು ದೇಶೀವಾದದೊಂದಿಗೆ ಜಾಗತೀಕರಣವನ್ನು ಎದುರಿಸಬೇಕಾಗಿದೆ. ಇಂಥ ಸಂದರ್ಭದಲ್ಲಿ ರಾಷ್ಟ್ರೀಯವಾದ ಹಾಗೂ ದೇಶೀವಾದಗಳ ಮುಖಾಮುಖಿಯಲ್ಲಿ ಸಂಘರ್ಷವು ತಪ್ಪಿದ್ದಲ್ಲ, ಈ ಸಂಘರ್ಷದ ವಿರೋಧಾಭಾಸಗಳೊಂದಿಗೆ ಉತ್ತರಿಸುವುದು ಅನಿವಾರ್ಯ ಎನ್ನುವು

ದನ್ನು ನಾವು ಅರಿತಿರಬೇಕಾಗಿದೆ. ಮತ್ತು ನಮ್ಮ ಹೋರಾಟ ಅಥವಾ ಸಂಘರ್ಷ ನಮ್ಮತನವನ್ನು ಕಾಯ್ದುಕೊಂಡು ಸಮಗ್ರ ಮಾನವ ಕುಲದ ಏಳ್ಗೆ ಬಗ್ಗೆ ಆಲೋಚಿಸುವ ನಿಟ್ಟಿನೆಡೆಗೆ ತಿರುಗಬೇಕಿದೆ. 'ಭಿನ್ನತೆಯಲ್ಲಿ ಏಕತೆ' ಅಥವಾ 'ವೈವಿಧ್ಯತೆಯಲ್ಲಿ ಏಕತೆ' ಎಂಬ ಮಂತ್ರವನ್ನು ಎತ್ತಿ ಹಿಡಿಯಬೇಕಿದೆ.

ಅವರೊಡನಿದ್ದೂ ಅವರಂತಾಗದೆ ಬದುಕುವ ಬದುಕು

ಜಾಗತೀಕರಣದಿಂದ ಜಗತ್ತಿನ ಸಂಪನ್ಮೂಲಗಳ ಸದ್ಬಳಕೆ ಯಾಗಬಹುದು ಮತ್ತು ತಂತ್ರಜ್ಞಾನ, ಆರ್ಥಿಕತೆ, ರಾಜಕೀಯ ಸ್ಥಿತ್ಯಂತರಗಳು, ಪರಿಸರದಲ್ಲಾಗುವ ಬದಲಾವಣೆಗಳು, ಮಾನವ ವಿಭಜನೆಗಳು ಇಂಥವುಗಳ ಬೆಳವಣಿಗೆ ಮತ್ತು ಸ್ತಿಮಿತತೆಯಲ್ಲಿ ಮೇಲುಗೈ ಸಾಧಿಸುವ ಸಾಧ್ಯತೆಗಳಿವೆಯಾದರೂ ಜಾಗತೀಕರಣದ ಗುರಿ ಇದೇ ಅಲ್ಲ ಎನ್ನುವುದರ ಮನವರಿಕೆ ನಮಗಿರಬೇಕು. ಹೀಗಾಗಿ ಈ ಪಯಣದ ತತ್ವ ಈ ಕೆಳಗಿನ ಅಂಶಗಳನ್ನು ಕೇಂದ್ರೀಕರಿಸಿರಬೇಕು.

1. ಪ್ರಪಂಚದ ಅಧಿಶಕ್ತಿಯ ಶೋಧ ಮತ್ತು ಬದ್ಧತೆ.
2. ಯುದ್ಧ ಮಾಡಿ ನಂತರ ಗಾಯಕ್ಕೆ ಮುಲಾಮು ಸವರುವುದು ಅಪರಾಧ.

ರಾಷ್ಟ್ರೀಯತೆ ಮತ್ತು ಅಂತರರಾಷ್ಟ್ರೀಯತೆಯ ಅರ್ಥವೇ ಇದರಲ್ಲಡಗಿದೆ ಎನ್ನುವ ಅರಿವಿನ ಮೇಲೆ ಬಸಿರೊಡೆದು ಚಿಗುರಿ ಬೃಹದಾಕಾರದಲ್ಲಿ ಬೆಳೆಯ ಬೇಕಾಗಿದೆ.

ಇಂದು ವಿದೇಶಿಗರನ್ನು ನಾವಾಗಿಯೆ ಸ್ವಾಗತಿಸಿ ಮಣೆಹಾಕಿ ಅತಿಥಿ ಸತ್ಕಾರ ನೀಡುತ್ತಾ ಗೌರವಾತಿಥ್ಯದ ಪರಿಕಲ್ಪನೆಯೊಂದಿಗೆಯೇ ಅತಿಥಿಯನ್ನು ಸಂದೇಹದ ಚಿತ್ತ ದಿಂದ ನೋಡುತ್ತಾ ಬದುಕುವ ಸಂದಿಗ್ಧ ಸ್ಥಿತಿ ಇದೆ. ನಾವೇ ಅವರೊಡನಿದ್ದೂ ಅವರಂತಾಗದೆ ಬದುಕುವ ಸ್ಥಿತಿ ನಮ್ಮದಾ ಗಿದೆ. ಒಂದು ರೀತಿಯಲ್ಲಿ ಈ ಸಂಬಂಧ ಅದ್ವೈತದ ಸ್ವರೂಪದ್ದು ಒಂದು ಸೇಬಿಕಾಯಿಯಲ್ಲಿ ಬೀಜವೂ ಇರುತ್ತದೆ. ಖಂಡವೂ ಇರುತ್ತದೆ. ಕಾಯಿಯಲ್ಲಿ ಬೀಜವಿ ದ್ದರೂ ಆ ಬೀಜ ತನ್ನ ಅಸ್ತಿತ್ವವನ್ನು ಪ್ರತ್ಯೇಕವಾಗಿಯೇ ಕಾಯ್ದುಕೊಂಡಿರುತ್ತದೆ. ಒಂದು ಹಣ್ಣಿನಲ್ಲಿ ಬೀಜಗಳು ಹಲವಾರಿದ್ದು ಖಂಡಗಳೊಂದಿಗೆ ಬೆರೆತೂ ಬೆರೆಯ ದಂತಿದ್ದು ಆ ಹಣ್ಣಿನಲ್ಲಿಯೇ ಬದುಕುತ್ತಿರುತ್ತವೆ. ಇದು ಜಾಗತಿಕ ಪರಿಕಲ್ಪನೆಯ ಇರುವಿಕೆ ಯಾಗಬೇಕು. ಆದರೆ ಯಾವುದೇ ಬೀಜ ತನ್ನ ಅಸ್ತಿತ್ವವನ್ನು ಬಿಟ್ಟುಕೊಟ್ಟು ಬದುಕಲು ಸಿದ್ಧವಿಲ್ಲದಾಗ್ಯೂ ಅಲ್ಲಿ ಸ್ನೇಹ ಸಾಧ್ಯ ವಿದೆ. ಆ ಸ್ನೇಹಕ್ಕೆ ಆ ಹಣ್ಣಿನಲ್ಲಿರುವ ಖಂಡವೇ ತಾತ್ತ್ವಿಕತೆಗೆ ಪೂರಕವಾಗಿರುತ್ತದೆ. ಮತ್ತು ಮೇಲಿನ ಸೊಪ್ಪೆ ಏಕಸೂತ್ರತೆ ಗೊಂದು ಬಂಧವಾಗಿರುತ್ತದೆ.

ಇಂದು ಚಲೇಜಾವ್ ಚಳುವಳಿಗೆ ವಿರುದ್ಧವಾಗಿ 'ಆಜಾವ್ ಚಳವಳಿ' ಎಂಬ ಸ್ವಯಂ ಆಹ್ವಾನಿತ ಮನಸ್ಥಿತಿಯ ಸಾಧ್ಯತೆಗಳೂ ಇಲ್ಲಿ ತುಂಬ ಕಡಿಮೆ, ಏಕೆಂದರೆ ಆರ್ಥಿಕ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಪ್ರಕ್ರಿಯೆ ಗಳನ್ನು ನಾವು 'ಸ್ವಾಗತ' ಮಾಡುವುದಕ್ಕಿಂತ ಮುಂಚೆ ನಮ್ಮಲ್ಲಿ ಯಾವುದೇ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳದೆ ಅಣೆ ಕಟ್ಟಿನ ನೀರನ್ನು ಬಿಟ್ಟು ಬಿಟ್ಟಿರುವ ಸ್ವರೂಪದ್ದು, ಬಿಟ್ಟ ನೀರು ಎಲ್ಲಿ ಹೋಗುತ್ತದೆ, ಎಲ್ಲಿ ನಿಲ್ಲುತ್ತದೆ ಎಲ್ಲಿ ಹೆಚ್ಚು ರಭಸದಿಂದ ಹರಿಯುತ್ತದೆ. ಇಂಥ ಯಾವುದೇ ಮುಂದಾಲೋಚನೆ ಗಳಿಲ್ಲದೆ ಈ ತ್ರಿಕರಣದ ಶಕ್ತಿಯ ಆಹ್ವಾಹನೆಯನ್ನೂ ಮಾಡಿಕೊಂಡದ್ದು ಮೂಲಭೂತ ಕಾರಣವಾಗಿದೆ. ಇದಕ್ಕೆ ಮುಖ್ಯ ಕಾರಣ ನಮ್ಮ ರಾಜಕೀಯ ನಾಯಕರೇ ಎನ್ನುವುದ ಕ್ಕಿಂತ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಯಲ್ಲಿಯ ದೌರ್ಬಲ್ಯ ಗಳೂ ಕಾರಣವೆನಿಸುತ್ತದೆ. ಇದರೊಂದಿಗೆ ನಮ್ಮ ರಾಜ ಕೀಯ ನಾಯಕರ ಸ್ವಾರ್ಥ ಹಾಗೂ ಅಧಿಕಾರದಾಸೆಗಳು ಎರಡನೆ ಹಂತದಲ್ಲಿ ನಿಲ್ಲುವಂತೆ ಮೂರು-ನಾಲ್ಕನೆಯ ಹಂತ ದಲ್ಲಿ ನಿಲ್ಲುವ ಕಾರಣಗಳೂ ಇವೆ.

ಐದು ವರ್ಷದ ಸೀಮಿತಾವಧಿಯ ಆಡಳಿತ 'ಮುಂದಾಲೋಚನೆ'ಗೆ ಮಣೆ ಹಾಕಲು ಅವಕಾಶವಾಗದೆ



ಇರುವ ಅವಧಿಯಲ್ಲಿ ಸರಕಾರ ಆಡಳಿತದಲ್ಲಿ ಉಳಿದು ಕೊಳ್ಳುವ ಅಥವಾ ನಡೆಸಿಕೊಂಡು ಹೋಗುವುದೇ ಸಾಹಸದ ಕೆಲಸವಾದುದು. 'ಸಂಯುಕ್ತ ಸರಕಾರ'ಗಳ ಆಡಳಿತ ಪದ್ಧ ತಿಯೇ ಸಲೀಸಾಗಿ ಉಸಿರಾಡಿಸಿಕೊಂಡು ಬದುಕುವ ಕಾಲ ಎದುರಾದುದು. ಮತ್ತೆ ಈ ಸ್ವರೂಪದ ಅತಂತ್ರ ಸ್ಥಿತಿಯ ನಡುವೆ ರಾಜಕೀಯ ಪಕ್ಷಗಳು ದೇಶದ ಹಿತಾಸಕ್ತಿಗಿಂತ ಪಕ್ಷದ ಹಿತಾಸಕ್ತಿ ಪ್ರಧಾನವಾಗಿ ಪರಿಗಣಿಸಿದ್ದು ಕಣ್ಣಿಗೆ ಒಡೆದು ಕಾಣುವಂಥವುಗಳಾಗಿವೆ. ಈ ಸ್ಥಿತಿಯ ಅತಂತ್ರ ಆಡಳಿತದ ಬದುಕಿನೊಂದಿಗೆ ಪೂರ್ವ ತಯಾರಿ ಇಲ್ಲದ ನಮ್ಮ ಇರುವಿಕೆ 'ಆಜಾವ್' ಎಂಬ ಆಹ್ವಾನ ನೀಡುವ ಧ್ವನಿ ನಮ್ಮಲ್ಲಿ ರೂಪಿತ ವಾಗುತ್ತಿಲ್ಲ, ಹೀಗಾಗಿ ಈಗ ನಮ್ಮ ಸ್ಥಿತಿ ಏನಿದ್ದರೂ 'ಎದುರಾ ಗುವ ಶಕ್ತಿಗೆ ಪ್ರತಿಕ್ರಿಯಿಸುವ ಸ್ವರೂಪ ದಲ್ಲಿದ್ದೇವೆಯೇ ವಿನಃ ನಿರಾಕರಿಸುವ ಖಚಿತ ಧ್ವನಿಯ ಸ್ವರೂಪದಲ್ಲಿಲ್ಲ.'

ದೇಶೀಯತೆ - ರಾಷ್ಟ್ರೀಯತೆ ಹಾಗೂ ಸಾಂಸ್ಕೃತಿಕ ದಂಗೆ

ಈ ಖಚಿತ ಧ್ವನಿಯ ಸ್ವರೂಪ ರೂಪ ಪಡೆಯ ಬೇಕಾದರೆ ನಮ್ಮ ರಾಜಕೀಯ ಇರುವಿಕೆಯ ಸ್ಥಿತಿಯಲ್ಲಿಯೂ ಬದಲಾಗಬೇಕಿದೆ ಹಾಗೂ ಖಾಸಗಿ ಸಂಸ್ಥೆಗಳಂತೆ ಸರ ಕಾರವೂ ಒಂದು ಸಂಸ್ಥೆಯಾಗಿ ವರ್ತಿಸುವ ಧೋರಣೆಯಿಂದ ತಪ್ಪಿಸಿಕೊಳ್ಳಬೇಕಿದೆ. ಆದ್ದರಿಂದ ರಾಜಕೀಯ ವ್ಯವಸ್ಥೆಯೂ ಮೂರ್ತರೂಪದೆಡೆಗೆ ತುಡಿಯಲು ಭಾವನಾತ್ಮಕ ಅಲೆಯ ಸ್ಫೋಟದ ಅಗತ್ಯದೊಂದಿಗೆ ದೇಶ ಹಿತಾಸಕ್ತಿಯ ತಂತ್ರಗಾರಿಕೆಯೂ ಆದರ್ಶಪ್ರಾಯವಾಗಬೇಕಿದೆ. ತ್ರಿಕರಣಕ್ಕೆ ಕ್ರಿಯಾತ್ಮಕವಾದ ಪ್ರತಿ ವ್ಯವಸ್ಥೆ ಅಥವಾ ಪರ್ಯಾಯ ವ್ಯವಸ್ಥೆ ರೂಪಿಸಿಕೊಳ್ಳಬೇಕಿದೆ.

ಇಂಥಲ್ಲಿ ನಾವು ಅಳವಡಿಸಿಕೊಳ್ಳಬೇಕಾದ ಮತ್ತೊಂದು ಮಹತ್ತ್ವದ ಸಾಂಸ್ಕೃತೀಕರಣದ ತ್ರಿನೇತ್ರ ಸೂತ್ರವೆಂದರೆ ಇದು ಈ ಹಿಂದೆ ಚರ್ಚಿಸಿದ ನವಪಂಥ, ಪರಂಪರ ಪಂಥದ, ಒಡಂಬಡಿಕೆ ಪಂಥದ ವಿಚಾರಗಳು ಅಂತರ್ಗತಗೊಳಿಸಿಕೊಂಡು ರೂಪಧಾರಣ ಮಾಡಿರುತ್ತದೆ. ಆ ತ್ರಿನೇತ್ರ ಸೂತ್ರವೆಂದರೆ

1. ನಿರಾಕರಣ
2. ಸ್ವೀಕರಣ
3. ಪರಿಷ್ಕರಣ

ಈ ಸೂತ್ರ ಅಂತರಂಗ ಹಾಗೂ ಬಹಿರಂಗ ಎರಡೂ ನೆಲೆಗಳಿಂದಲೂ ಒಂದು ಗುಣವಾಗಿ ಅನ್ವಯ ವಾಗಬೇಕು. ಎಂದರೆ ನಮ್ಮಲ್ಲಿಯೇ ಈಗ ಇರುವ ವ್ಯವಸ್ಥೆ ನೆಲೆಗಳು ಮತ್ತು ಹೊರಗಿನಿಂದ ಆಕ್ರಮಣ ಮಾಡುವ ನೆಲೆಗಳೆರಡಕ್ಕೂ ಈ ಸೂತ್ರ ಅನ್ವಯಿಸಬೇಕು. ಹೊಸತನದ ಆಕ್ರಮಣವಾದಾಗ ಇರುವ ವ್ಯವಸ್ಥೆ ಆರಂಭದಲ್ಲಿ ಎಲ್ಲವನ್ನೂ ನಿರಾಕರಿಸುವ ಪ್ರವೃತ್ತಿಯನ್ನು ತೋರಿಸುತ್ತದೆ. ಕ್ರಮೇಣ ಹೊಸತನದ ನೆಲೆಗಳನ್ನು ಪರಿಷ್ಕರಿಸಿ ಸ್ವೀಕರಿಸುವ ಸಾಂತ್ವನದ ಗುಣ ವ್ಯಕ್ತವಾಗುತ್ತದೆ. ಅದರಲ್ಲಿಯೇ ಕೆಲವಷ್ಟನ್ನು ಸಹ್ಯವೆನಿಸಿ ಯಥಾಸ್ಥಿತಿಯಲ್ಲಿ ಸ್ವೀಕರಿಸಿ ಬಿಡುತ್ತದೆ. ಈ ಕ್ರಿಯೆ ಹೊರಗಿ ನಿಂದ ಆಕ್ರಮಿಸುವ ಸಂಗತಿಗಳಿಗೆ ಸಂಬಂಧಿಸಿ ನಡೆದಂತೆ, ನಮ್ಮ ಆಂತರಿಕ ವ್ಯವಸ್ಥೆಯ ಇರುವಿಕೆಯಲ್ಲಿಯೂ ಈ ಸಾಂಸ್ಕೃ ತೀಕರಣದ ತ್ರಿನೇತ್ರ ಸೂತ್ರ ಪ್ರವೇಶಿಸಿ ಬದಲಾವಣೆಯನ್ನು ತಂದುಬಿಡುತ್ತದೆ. ಹೀಗಾಗಿ ಈ ಸೂತ್ರದ ಅರಿವು ಮತ್ತು ಅನ್ವಯ ಈ ಸಂದರ್ಭದಲ್ಲಿ ಅಷ್ಟೇ ಅಗತ್ಯವಾಗಿದೆ. ದೇಶೀವಾದ ಮತ್ತು ರಾಷ್ಟ್ರೀಯವಾದ ಇವೆರಡೂ ಆಂತರಿಕ ವ್ಯವಸ್ಥೆಯ ಪ್ರತೀಕವಾಗಿ ಎಚ್ಚರವನ್ನು ವಹಿಸಿ ಜಾಗತೀಕರಣಕ್ಕೆ ಮುಖಾಮುಖಿಯಾಗುತ್ತ ಎದುರಿಸಬೇಕಿದೆ.

ಇಂಥ ವಾತಾವರಣವನ್ನು ರೂಪಿಸಲು ನಮಗೆ ಸಹಾಯಕಾರಿಯಾಗುವಂತಹದು ನವೋದಯ ಸಂದರ್ಭ ದಲ್ಲಿ ಎದ್ದ ರಾಜಕೀಯ ಮನೋಭಾವದ ಅಲೆ ಜಾಗೃತ ಗೊಳ್ಳಬೇಕಿದೆ. ಮನೋಭಾವದ ಅಲೆಗಳಲ್ಲಿ ಇಂದಿನ ಅಂದಿನ ಕಾಲದ ವ್ಯತ್ಯಾಸದ ಸ್ತರಗಳನ್ನು ಗುರುತಿಸಿಕೊಂಡು ಒತ್ತು ನೀಡುವ ಅಗತ್ಯವಿದೆ.

ಈ ಅಗತ್ಯತೆಗೆ ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರೀಯವಾದ ಎನ್ನುವ ನೆಲೆಗಳು ಅಡಿಪಾಯವಾಗಬೇಕು. ಹಾಗೆಯೇ ದೇಶೀ, ದೇಶೀಯತೆ, ದೇಶೀಯವಾದದ ಚಿಂತನೆ ಸಾಮಾಜಿಕ, ಧಾರ್ಮಿಕ ನೆಲೆಯಿಂದ ಮುಖಾಮುಖಿಯಾಗಿ ಎದ್ದು ನಿಲ್ಲುವಂತಾಗಬೇಕು. ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರೀಯವಾದ ಎನ್ನುವುದು ರಾಜಕೀಯ ನೆಲೆಯಿಂದ ಹಾಗೂ ದೇಶೀ, ದೇಶೀಯತೆ, ದೇಶೀವಾದ ಎನ್ನುವುದು ಸಮಾಜಿಕ, ಧಾರ್ಮಿಕ ನೆಲೆಯಿಂದ ಮುಖಾಮುಖಿಯಾಗಿ

> **ರಾಷ್ಟ್ರೀಯತೆ ಮತ್ತು ದೇಶೀಯತೆ ಎಂಬ ಭಾವನೆಗಳೇ ತುಂಬ ಪ್ರಬಲವಾದವು. ಈ ಭಾವನೆಗಳನ್ನು ನಾವು ಯಾವ ಕಾರಣಕ್ಕಾಗಿ ಮತ್ತು ಯಾವ ಉದ್ದೇಶಕ್ಕಾಗಿ ಬಳಸುತ್ತೇವೆ ಎನ್ನುವುದು ಅತಿ ಮುಖ್ಯವಾದುದು. ಜಾಗತೀಕರಣದ ಸಂದರ್ಭದಲ್ಲಿ ಇವುಗಳನ್ನು ನಾವು ರಚನಾತ್ಮಕವಾದ ಕಾರಣಗಳಿಗಾಗಿ ಮತ್ತು ನಮ್ಮ ಅಸ್ತಿತ್ವದ ಸಂರಕ್ಷಣೆಯೊಂದಿಗೆ ಮುನ್ನುಗ್ಗುವುದಕ್ಕಾಗಿ ಬಳಸುತ್ತಿದ್ದೇವೆ.**

ಎದ್ದು ನಿಲ್ಲುವಂತಾಗಬೇಕು. ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಉಪರಾಷ್ಟ್ರೀಯತೆ ಪರಿಕಲ್ಪನೆ ರಾಷ್ಟ್ರೀಯತೆ ನೆಲೆಗಳೊಂದಿಗೆ ನಿಂತಂತೆ ಈಗಲೂ ಪೂರಕವಾಗಿ ಎದ್ದು ನಿಲ್ಲುವಂತಾಗಬೇಕು. ಇದರೊಂದಿಗೆ ಮೇಲೆ ರಾಷ್ಟ್ರೀಯತಾವಾದದ ನೆಲೆ ಆಂತರಿಕ ಹಾಗೂ ತೃತೀಯ ಜಗತ್ತಿನ ರಾಷ್ಟ್ರಗಳ ಅಂತಾರಾಷ್ಟ್ರೀಯವಾದಕ್ಕೆ ಮಣೆ ಹಾಕುವಂತಾಗಬೇಕಿದೆ. ಹೀಗಾದಾಗ ಮುಂದುವರೆದ ರಾಷ್ಟ್ರಗಳ ಹೆಗಲ ಮೇಲೆ ಕೈ ಹಾಕಿದ್ದಕ್ಕೆ ಅರ್ಥ ಬರುತ್ತದೆ.

ಈ ಸಂದರ್ಭದಲ್ಲಿ ಮುಂದುವರೆದ ರಾಷ್ಟ್ರಗಳು ತಮ್ಮ ಅಸ್ತಿತ್ವವನ್ನು ಬಿಟ್ಟುಕೊಡಲು ಎಂದು ಮುಂದಾಗಲಾರವು. ಅವುಗಳ ಕಾರ್ಯತಂತ್ರಕ್ಕೆ ಪ್ರತಿವ್ಯವಸ್ಥೆಯನ್ನು ರೂಪಿಸುವುದು ಅನಿವಾರ್ಯ. 'ಪಹೆಲಾ ಪೇಟೋಬಾ ಬಾದಮೆ ವಿಠೋಬಾ' ಎನ್ನುವ ಧೋರಣೆಯೂ ಅಷ್ಟೇ ಅಗತ್ಯ. ಎಂದರೆ, 'ಮೊದಲು ನಮ್ಮ ತನ - ನಂತರ ಎಲ್ಲಾ' ಎನ್ನುವ ತಂತ್ರ ಬೇಕು.

ಇಲ್ಲಿ ಸ್ಪಷ್ಟಪಡಿಸಬೇಕಾದ ಸಂಗತಿ ಎಂದರೆ ರಾಷ್ಟ್ರೀಯತೆ - ರಾಷ್ಟ್ರೀಯವಾದ ಎನ್ನುವುದು ರಾಷ್ಟ್ರದ ಕುರಿತ ರಾಜಕೀಯ ಅಸ್ತಿತ್ವದ ಧೋರಣೆಗಳ ಒಂದು ಪೂರ್ವನಿರ್ಧಾರಿತ ಮೊತ್ತವಲ್ಲ. ಈ ಹಿಂದೆ ದೇಶೀವಾದ ಎಂದರೆ, 'ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಹುಟ್ಟುವ ಒಂದು ಎಚ್ಚರದ ಆಲೋಚನಾ ಕ್ರಮ' ಎಂದು ಹೇಳಿದೆ. ಇದು ಒಡೆದು ಕಟ್ಟುವ ಧನಾತ್ಮಕ ಶಕ್ತಿಯನ್ನು ಹೊಂದಿರುತ್ತದೆ. ಇದು ಹೊರಕಣ್ಣಿಗೆ ಕಾಣುವಂತಹ ಸ್ವರೂಪದ್ದಲ್ಲ. ಪರಕೀಯತೆಯನ್ನು ತಂದು ಹೇರಿದಾಗಲೂ ತನಗೆಷ್ಟು ಬೇಕೋ ಅಷ್ಟು ಮಾತ್ರ ತೆಗೆದುಕೊಂಡು ಇನ್ನುಳಿದುದ್ದನ್ನು ಅಥವಾ ನಿರ್ಜೀವ ಎನಿಸಿದ್ದನ್ನು ಸಮುದ್ರ ಹೊರಹಾಕುವಂತೆ ಹೊರಹಾಕಿಬಿಡುತ್ತದೆ. ರಾಷ್ಟ್ರೀಯವಾದವೂ ಇದೇ ಪ್ರಕ್ರಿಯೆಯಿಂದ ಕೂಡಿದ್ದು, ಅದು ಸಂವಿಧಾನಾತ್ಮಕವಾದ ದೇಶಿನೆಲೆಯಿಂದ ಕೂಡಿದ ಎಚ್ಚರದ ಒಂದು ಆಲೋಚನಾ ಕ್ರಮವಾಗಿದೆ. ಈ ಕಾರಣದಿಂದಾಗಿಯೇ ದೇಶಿವಾದ ಜನಮುಖಿಯಾದರೆ ರಾಷ್ಟ್ರೀಯವಾದ ಸಂವಿಧಾನಮುಖಿ ಎಂದು ಕರೆಯಲಾಗಿದೆ. ಇವುಗಳ ಬೇರುಗಳನ್ನರಿತವರು, ಎಂದರೆ ಭೂತ, ವರ್ತಮಾನದ ನಡಿಗೆಯನ್ನು ಅರಿತವರು, ಇದರ ಸವಾರಿ ಮಾಡಬಲ್ಲ ಸಾಮರ್ಥ್ಯ ಹೊಂದಿರುತ್ತಾರೆ. ತಮ್ಮ ನಿರೀಕ್ಷೆ ಯಂತೆ ಭವಿಷ್ಯತ್ತನ್ನು ರೂಪಿಸಿಕೊಳ್ಳುವ ದೃಢತೆ ಅಥವಾ ಖಚಿತತೆಯನ್ನು ಹೊಂದಿರುತ್ತಾರೆ. ಇದರ ಅರಿವನ್ನು ಹೊಂದ ಬೇಕಾದದ್ದು ಪ್ರಜಾಪ್ರಭುತ್ವ ದೇಶದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಹೀಗಾಗಿ ದೇಶೀವಾದ ಮತ್ತು ರಾಷ್ಟ್ರೀಯವಾದ ಎನ್ನುವುದು ಯಾರೊಬ್ಬರ ಆಲೋಚನೆಯ ಮೊತ್ತದ ಸೊತ್ತಲ್ಲ. ಅದು ವ್ಯಕ್ತಿನಿಷ್ಠವಲ್ಲ. ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಹುಟ್ಟುವ ಬಹುಮುಖಿ ಅಸ್ತಿತ್ವದ ಹೊಸ ಎಚ್ಚರದಿಂದ ಬಳಸುವ ಮಾನದಂಡಗಳ ಮೊತ್ತ. ಈ ಮೊತ್ತವೇ ಸಂಯುಕ್ತವಾದ ಎಂದು ಕರೆಯಿಸಿಕೊಳ್ಳುತ್ತದೆ.

ಭಿನ್ನ ರಾಜ್ಯಗಳ ರಾಜಕೀಯ ಅಸ್ತಿತ್ವದ ಚಿಂತನಕ್ರಮವನ್ನು ಪ್ರತಿಪಾದಿಸುವ ಉಪರಾಷ್ಟ್ರೀಯತೆಯ ಚಿಂತನೆಗಳು ಆಯಾ ರಾಜ್ಯದ ದೇಶೀ ಚಿಂತನೆ ಮೇಲೆ ಅವಲಂಬಿತವಾಗಿದ್ದು ಪರಸ್ಪರ ದೇಶೀಯತೆ, ರಾಷ್ಟ್ರೀಯತೆಗಳು ಭಾವನಾತ್ಮಕ ಸಂಬಂಧ ಸಾಧಿಸಿ ದೇಶೀವಾದಕ್ಕೂ, ರಾಷ್ಟ್ರೀಯವಾದಕ್ಕೂ ತಿರುಗುವಂತಾಗಬೇಕು, ಇವು ಒಂದಕ್ಕೊಂದು ಕೊಡುಕೊಳ್ಳುವಿಕೆಯ ಮೇಲೆ ಅಸ್ತಿತ್ವವನ್ನು ರೂಪಿಸಿಕೊಂಡು ನಿಧಾನವಾಗಿ ಬೆಳೆಯುವಂತಾಗಬೇಕು. ಈ ಇತ್ಯಾತ್ಮಕ ಸಂಬಂಧ ಮೂರನೆಯ ಆಲೋಚನಾ ಕ್ರಮವನ್ನು ರೂಪಿಸುವಂಥದ್ದು. ಈ ಕೂಡಿಕೆಯ ಮಥನೋತ್ಪತ್ತಿಯ ನೆಲೆಯೇ ಸಂಯುಕ್ತವಾದ.

ರಾಷ್ಟ್ರೀಯತೆ ಮತ್ತು ದೇಶೀಯತೆ ಎಂಬ ಭಾವನೆಗಳೇ ತುಂಬ ಪ್ರಬಲವಾದವು. ಈ ಭಾವನೆಗಳನ್ನು ನಾವು ಯಾವ ಕಾರಣಕ್ಕಾಗಿ ಮತ್ತು ಯಾವ ಉದ್ದೇಶಕ್ಕಾಗಿ ಬಳಸುತ್ತೇವೆ ಎನ್ನುವುದು ಅತಿ ಮುಖ್ಯವಾದುದು. ಜಾಗತೀಕರಣದ ಸಂದರ್ಭದಲ್ಲಿ ಇವುಗಳನ್ನು ನಾವು ಬಳಸುತ್ತಿದ್ದೇವೆ, ರಚನಾತ್ಮಕವಾದ ಕಾರಣಗಳಿಗಾಗಿ ಮತ್ತು ನಮ್ಮ ಅಸ್ತಿತ್ವದ ಸಂರಕ್ಷಣೆಯೊಂದಿಗೆ ಮುನ್ನುಗ್ಗುವುದಕ್ಕಾಗಿ ಬಳಸುತ್ತಿದ್ದೇವೆ, ಎನ್ನುವ ಸ್ಪಷ್ಟವಾದ ಅರಿವು ನಮಗಿರಬೇಕು. ಹೀಗಾದಾಗ ಮಾತ್ರ ತಮಂಧದಿಂದ ಬೆಳಕಿನೆಡೆಗೆ ಚಲಿಸಲು ಸಾಧ್ಯವಾಗುತ್ತದೆ. ಆಗ ರಾಷ್ಟ್ರವನ್ನು ಮುಸುಕಿದ ಮಬ್ಬಿನಿಂದ ಬೆಳಕಿ ನೆಡೆಗೆ ಕರೆದುಕೊಂಡು ಹೋದಂತಾಗುತ್ತದೆ. ಹೀಗೆ ಎಲ್ಲ ರಾಷ್ಟ್ರಗಳು ತಮ್ಮತನದೊಂದಿಗೆ ಹೋರಾಡಲು ಸನ್ನದ್ಧವಾಗಿರು ತ್ತವೆ ಎನ್ನುವ ವಾಸ್ತವದ ಎಚ್ಚರವೂ ಇರಬೇಕು. ಈ ಹೋರಾಟ ನಮ್ಮ ಎಚ್ಚರ, ಬೆಳವಣಿಗೆಯ ಪ್ರತೀಕವೆಂದೇ ಭಾವಿಸಬೇಕು. ಹೀಗಾದಾಗ ಮಾತ್ರ ಪ್ರಪಂಚವನ್ನೂ ಮುಸುಕಿದ ಮಬ್ಬಿನಿಂದ ಹೊರತಂದಂತಾಗುತ್ತದೆ. ಪ್ರತಿಯೊಂದು ರಾಷ್ಟ್ರ ಪರಮಾಧಿಕಾರವುಳ್ಳದ್ದಾಗಿದ್ದು ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದ ಪರಮಾಧಿಕಾರದಲ್ಲಿ ಹಸ್ತಕ್ಷೇಪ ಮಾಡುವುದನೆಂದೂ ಸಹಿಸಲಾರದು. ಅದಕ್ಕೆ ಮುಖ್ಯ ಕಾರಣ ರಾಷ್ಟ್ರೀಯತೆ ಎನ್ನುವುದೇ ಆಗಿದೆ.

ಪ್ರತಿಯೊಂದು ರಾಷ್ಟ್ರದ ದೇಶೀಯತೆಯನ್ನು ಮತ್ತು ಪ್ರತಿಯೊಂದು ದೇಶದ ರಾಷ್ಟ್ರೀಯತೆಯನ್ನು ರಕ್ಷಿಸುವುದು ನಾಗರಿಕರ ಲಕ್ಷಣವಾಗಬೇಕು. ಇದರರ್ಥ ಮಾನವೀಯತೆ ಮತ್ತು ಸಮಗ್ರ ಸಂಸ್ಕೃತಿಯನ್ನು ರಕ್ಷಿಸಿದಂತೆ. ಒಂದು ಇನ್ನೊಂದನ್ನು ಕಬಳಿಸಿ ಬೆಳೆಯುವುದಕ್ಕಿಂತ ತಾನೂ ಬೆಳೆದು ಇನ್ನೊಂದನ್ನೂ ಬೆಳೆಸುವ ನೀತಿ ಅನುಸರಿಸಬೇಕು. ಬೆಳೆಸುವ ನೀತಿಯನ್ನು ಅನುಸರಿಸಲಾಗದಿದ್ದರೆ ಕನಿಷ್ಠ ಪಕ್ಷ ಅದಕ್ಕೇ ಬೆಳೆಯಲು ಬಿಡಬೇಕು. ಪ್ರತಿಯೊಂದು ಮಾನವ ಸಮೂಹ ವೈವಿಧ್ಯಮಯವಾದ ಶಾಸನಗಳನ್ನು ವೈವಿಧ್ಯತೆಯಿಂದಲೇ ಕೂಡಿರಬೇಕೆಂಬ ತತ್ವವನ್ನು ಅನುಸರಿಸುವಂತಾಗಬೇಕು ಮತ್ತು ಇದರಿಂದರಿಂದಲೇ 'ಅಂತರ ರಾಷ್ಟ್ರೀಯತೆ'ಯ ಜೀವ ಮಿಡಿಯುವಂತಾಗಬೇಕಿದೆ ಹಾಗೂ ಬಹುಮುಖಿ ರಾಷ್ಟ್ರೀಯತೆಯ ಅಸ್ತಿತ್ವವಾದವೇ ಜಾಗತಿಕ ನೆಲೆಯಾಗಬೇಕು.

ಈ ಧೋರಣೆಯಿಂದಾಗಿ ಪ್ರತಿಯೊಂದು ರಾಷ್ಟ್ರವೂ ತನ್ನ ಅಸ್ತಿತ್ವದ ಲಾಭ ಪಡೆಯುವುದರೊಂದಿಗೆ ಪ್ರಪಂಚದ ಸಮಗ್ರ ಮಾನವ ಸಂಸ್ಕೃತಿಯನ್ನು ವಿಕಾಸಗೊಳಿಸಿದಂತಾಗುತ್ತದೆ. ಯಾವ ಮಾನವ ಕುಲವೂ ಸ್ವತಂತ್ರವಲ್ಲ, ಒಂದಿನ್ನೊಂದರ ಸಂಪರ್ಕವಿಲ್ಲದೆ ವಿಕಾಸ ಸಾಧ್ಯವಿಲ್ಲ, ಹೀಗಾಗಿ ಪ್ರತಿಯೊಂದು ರಾಷ್ಟ್ರವೂ ತನ್ನ ದೇಶೀಯತೆಯನ್ನು ಉಳಿಸಿಕೊಂಡೂ ಆಧುನಿಕತೆಯ ವಿಭಿನ್ನ ಆಸಕ್ತಿಗಳೊಂದಿಗೆ ಸಾಮಾನ್ಯ ಹೊಂದಾಣಿಕೆಯಿಂದ ಮುಂದುವರೆದಾಗಲೇ 'ಸಮಗ್ರ ಮಾನವ ವಿಕಾಸ' ಎನ್ನುವುದಕ್ಕೆ ಅರ್ಥವಿದೆ. ಇಲ್ಲದೆ ಹೋದರೆ ಕತ್ತಲೆಡೆಗೆ ಕ್ರಮಿಸಿದಂತೆಯೇ ಸರಿ. ಈ ಪಯಣ ಜಗತ್ತಿನ ಶಾಂತಿಗಾಗಿ ಆಗದೆ ಅಶಾಂತಿಗಾಗಿ ಪಯಣಗೆಂದಂತಾಗುತ್ತದೆ.

ಜಾಗತೀಕರಣದ ನಂತರದ ನಮ್ಮ ದೇಶದ ವಿದ್ಯಮಾನಗಳನ್ನು ಗಮನಿಸಿದರೆ ಕಾಣುವುದು ಭದ್ರವಿಲ್ಲದ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು. ಡಾ. ಅಂಬೇಡ್ಕರ್ ಅವರು ಹೇಳುವಂತೆ 'ಪ್ರಜಾಪ್ರಭುತ್ವ ವ್ಯವಸ್ಥೆ ಭದ್ರವಾಗಿರ ಬೇಕೆಂದರೆ ಬಲಿಷ್ಠವಾದ ಕೇಂದ್ರ ಸರಕಾರವಿರಬೇಕು' ಎನ್ನುವುದು. ಈ ಅಭದ್ರ ಹಾಗೂ ಸಂಜಾತ ಸ್ವರೂಪಿ ಕೇಂದ್ರ ಸರಕಾರ ಮತ್ತು ವಿಭಿನ್ನ ಪಕ್ಷಗಳ ರಾಜ್ಯ ಸರಕಾರದ ಅನಿಶ್ಚಿತ ಆಡಳಿತ ರೂಪ ಇವು ಎರಡನ್ನೂ ದೇಶ ಎದುರಿಸುವ ಸಂದರ್ಭದಲ್ಲಿ ಬಂದ ಉದಾರೀಕರಣ ಯಾವ ಸ್ವರೂಪ ದ್ದೆಂದರೆ; ಈ ಹಿಂದೆ ಭಾರತಕ್ಕೆ ವಸಾಹತುಶಾಹಿ ಬರುವ ಮುನ್ನ ದೇಶೀ ಅರಸರು ಪರಸ್ಪರ ಕಚ್ಚಾಡಿಕೊಂಡು ತಮ್ಮ ಅಸ್ತಿತ್ವದ ಹರಣ ಮಾಡಿಕೊಂಡಿದ್ದಕ್ಕೆ ಇಂದಿನ ಕಾಲದ ರಾಜ ಕೀಯ ಸ್ಥಿತಿ ಸಮಾನಾಂತರವಾಗಿದೆ. ರಾಜ್ಯ ಮತ್ತು ಕೇಂದ್ರ ಸರಕಾರಗಳಲ್ಲಿ ಆರ್ಥಿಕ ನೀತಿಯ ತಾಳಮೇಳ ಇಲ್ಲದಿರುವುದು ಪರಸ್ಪರ ರಾಜ್ಯ- ರಾಜ್ಯಗಳಲ್ಲಿಯೇ ನಡೆಯುತ್ತಿರುವ ಅನಾರೋಗ್ಯಕರ ಪೈಪೋಟಿ ಹಾಗೂ ಸಮರ್ಥ ನೀತಿಸಂಹಿತೆಗಳಿಲ್ಲದೆ ನಡೆದದ್ದೇ ಮಾರ್ಗ ಎಂಬ ತತ್ವಕ್ಕೆ ಜೋತು ಬಿದ್ದಿರುವುದರಿಂದ. ಇವೆಲ್ಲ ಭಾರತದ ಇತಿಹಾಸವನ್ನು ಮರುಕಳಿಸುವಂತೆ ಭಾಸವಾಗುತ್ತವೆ. ಪೂರ್ವಸಿದ್ಧತೆಯ ಕಾಲುವೆಗಳಿಲ್ಲದೆ ಬಿಟ್ಟ ತನ್ನ ಅಣೆಕಟ್ಟಿನ ನೀರಿಗೆ ತಾನೇ ಕಂಗಾಲಾದ ಸ್ಥಿತಿ ಇದು.

ಹೀಗಾಗಿ ಈ ಸಂದರ್ಭದಲ್ಲಿ ಸಮಾಜಮುಖಿಯಾಗಿ, ಜನಮುಖಿಯಾಗಿ ಎದ್ದು ನಿಲ್ಲುವ ದೇಶೀವಾದಕ್ಕೆ ಸ್ಪಂದಿಸುವುದಕ್ಕೆ ರಾಜಕೀಯ ಮುಖಿಯಾದ ರಾಷ್ಟ್ರೀಯವಾದದ ಅಗತ್ಯವಿದೆ. ಹೀಗೆ ನಾವು ದೇಶೀವಾದ ಮತ್ತು ರಾಷ್ಟ್ರೀಯವಾದವನ್ನು ಪ್ರತ್ಯೇಕಿಸುವುದರೊಂದಿಗೆ ರಾಷ್ಟ್ರೀಯತೆ, ರಾಷ್ಟ್ರೀಯವಾದಕ್ಕೆ ಮರುವ್ಯಾಖ್ಯಾನ ಮಾಡುವುದರೊಂದಿಗೆ ಹೊಸ ಸಂವೇದನೆಯಿಂದ ಎಚ್ಚರಿಸುವ ಆಗತ್ಯವಿದೆ. ಸಮಾಜ ಚಿಂತಕರು ದೇಶೀವಾದಕ್ಕೂ, ರಾಷ್ಟ್ರೀಯವಾದಕ್ಕೂ ಕೊಂಡಿಯಂತೆ ಕೆಲಸ ಮಾಡಬೇಕಿದೆ. ಅಭದ್ರ ಸರಕಾರಗಳ ರಾಜಕೀಯ ನಾಯಕರಿಗೆ ಸಾಮಾಜಿಕ ರಾಜಕೀಯ ಚಿಂತಕರೇ ಮಿದುಳಾಗಬೇಕಿದೆ, ಮಾರ್ಗದರ್ಶಕರಾಗಬೇಕಿದೆ. ರಾಜಕೀಯ ನಾಯಕರು ಅಧಿಕಾರದ ಸದಾವಕಾಶಕ್ಕಾಗಿ ತಂತ್ರಗಾರಿಕೆಯನ್ನು ಪ್ರಯೋಗಿಸುವುದರಲ್ಲಿಯೇ ಅವರು ತಮ್ಮ ಬೌದ್ಧಿಕ ಶ್ರಮವನ್ನು ವ್ಯಯ ಮಾಡುತ್ತಿದ್ದಾರೆ ಮತ್ತು ಜಾಗತೀಕರಣವನ್ನು ಇವರು ತಮ್ಮ ಗದ್ದುಗೆಗೆ ಮೆಟ್ಟಲುಗಳಂತೆ ಬಳಸಿಕೊಳ್ಳುತ್ತಿದ್ದಾರೆ. ಈ ಸ್ವರೂಪದ ಸ್ಥಿತಿಯಲ್ಲಿರುವ ರಾಜಕೀಯ ನಾಯಕರಿಗೆ ದೇಶದ ಭವಿಷ್ಯತ್ತಿನ ಬದುಕಿನೆಡೆಗೆ ಗಮನ ಗೌಣವಾಗಿ ವರ್ತಮಾನದ ಇರುವಿಕೆಯೇ ಪ್ರಧಾನವಾಗಿದೆ ಮತ್ತು

ಪ್ರಧಾನವಾಗುತ್ತಿದೆ. ನಮ್ಮ ದೇಶದ ಸಮ್ಮಿಶ್ರ ಸರಕಾರಗಳ ದೌರ್ಬಲ್ಯವನ್ನೇ ಜಾಗತೀಕರಣದ ಸಂದರ್ಭದಲ್ಲಿ ಪ್ರಜಾಸತ್ತಾತ್ಮಕ ಶಕ್ತಿಯಾಗಿ ಪರಿವರ್ತಿಸಲು 'ದೇಶೀಪ್ರಜ್ಞೆ' ಮತ್ತು 'ರಾಷ್ಟ್ರೀಯಪ್ರಜ್ಞೆ'ಯಿಂದ ಮಾತ್ರ ಸಾಧ್ಯ. ಈ ಸಂಮಿಶ್ರ ಸರಕಾರದ ಇರುವಿಕೆಯೇ ರಾಜತಾಂತ್ರಿಕ ನೀತಿಗೆ ಅಡಿಪಾಯ ಮಾಡಿಕೊಳ್ಳಲು ಮತ್ತು ಜಾಗತಿಕ ಮಟ್ಟದ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಿದೆ ಎಂಬ ನಂಬಿಕೆ ನಮ್ಮಲ್ಲಿ ಬಲಗೊಳ್ಳಬೇಕಿದೆ. ಹೀಗಾಗಿ ರಾಜಕೀಯ ಮುಖಿಯಾದ ರಾಷ್ಟ್ರೀಯವಾದದ ಅಲೆಯನ್ನು ಎಬ್ಬಿಸುವ ಜವಾಬ್ದಾರಿಯೂ ಸಾಮಾಜಿಕ ಅಥವಾ ಸಾಂಸ್ಕೃತಿಕ ಚಿಂತಕರ ಮೇಲೆಯೇ ಇದೆ ಎನ್ನುವುದನ್ನು ಅರಿಯಬೇಕಿದೆ. ಪರಸ್ಪರ ರಾಜ್ಯ ಸರಕಾರಗಳ ಖಾಸಗಿ ಆಡಳಿತ ಚಿಂತನೆಗಿಂತ ರಾಷ್ಟ್ರ ಹಿತರಕ್ಷಿತ ಚಿಂತನೆಗೆ ಮುಂದಾಗಬೇಕಿದೆ. ಆಗ ಕೇಂದ್ರ ಸರಕಾರದ ಖಾಸಗಿ ಆಡಳಿತ ಚಿಂತನೆ ಹಿಂದೆ ಸರಿದು ಸಂಯುಕ್ತ ನೆಲೆ ರೂಪುಗೊಳ್ಳುತ್ತದೆ. ಪರಸ್ಪರ ರಾಜ್ಯಗಳ ರಾಜನೀತಿಯ ಚಿಂತನೆಗಳು ಭಾವನಾತ್ಮಕ ರೂಪ ಪಡೆದಾಗ ಸಂಯುಕ್ತತೆಯ ಕಡೆಗೆ ವಾಲುತ್ತವೆ. ರಾಷ್ಟ್ರೀಯವಾದ ಮತ್ತು ದೇಶೀಯವಾದವನ್ನು ಹೀಗೆ ಪ್ರತ್ಯೇಕಪಡಿಸುವುದರಿಂದ ರಾಜಕೀಯ ವ್ಯವಸ್ಥೆ ಹಾಗೂ ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆ ಮುಖಾಮುಖಿ ಮಾಡಲು ಸಾಧ್ಯವಾಗುತ್ತದೆ. ಈ ಎರಡೂ ಮಾರ್ಗಗಳ ಚಿಂತನೆಯ ನೆಲೆಗಳು ಸದಾಕಾಲ ಒಂದೇ ಸ್ವರೂಪದವುಗಳಾಗಿರುವುದಿಲ್ಲ. ಹೀಗಾಗಿ ಈ ಗ್ರಹಿಕೆಯ ವ್ಯಾಖ್ಯಾನ ಅಥವಾ ಪರಿಕಲ್ಪನೆಗಳನ್ನು ಗುರುತಿಸಿಕೊಳ್ಳುವ ಅಗತ್ಯವಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಚಿಂತನೆಯೇ ಜಾಗತೀಕರಣದಂತಹ ಸಂದರ್ಭದಲ್ಲಿ ಪ್ರಧಾನವಾಗಬೇಕು. ಆದರೆ ಇಂದು ಏಕಮುಖ ರಾಷ್ಟ್ರೀಯವಾದವೇ ಪ್ರಧಾನವಾಗಿದೆ. ಎಂದರೆ ರಾಷ್ಟ್ರೀಯವಾದ ರಾಜಕಾರಣದ ಮುಖವಾಣಿಯಾಗಬಾರದು. ಅದು ದೇಶೀವಾದದೊಂದಿಗೆ ಬೆರೆತು ಹೊಸ ಒಡಂಬಡಿಕೆಯ ರೂಪ ತಾಳಬೇಕು. ಈ 'ರಾಷ್ಟ್ರೀಯವಾದ' ಹಾಗೂ 'ದೇಶೀವಾದ'ದ ಹದವತ್ತಾದ ಒಡಂಬಡಿಕೆ ಸಾಧಿಸುವುದು ಮೂಲೋದ್ದೇಶವಾಗಬೇಕು.

ಈ ಸ್ವರೂಪದ ರಚನಾತ್ಮಕವಾದ ಚಿಂತನೆ ದೇಶೀವಾದದ ನೆಲೆಯಿಂದಲೂ ಹಾಗೂ ರಾಷ್ಟ್ರೀಯವಾದದ ನೆಲೆಯಿಂದಲೂ ಏಕಕಾಲಕ್ಕೆ ನಡೆದಾಗ, ಈ ಎರಡೂ ವಾದಗಳ ಮುಖಾಮುಖಿಯಿಂದ ಸ್ಫುರಿಸುವ ಚಿಂತನೆಗಳೇ 'ಸಂಯುಕ್ತವಾದ'ಕ್ಕೆ ನೆಲೆಗಳಾಗುತ್ತವೆ. ಈ ಹಿನ್ನೆಲೆಯನ್ನು ಜಾಗತೀಕರಣಕ್ಕೆ ಈ ಮೂರೂ ತಾತ್ವಿಕ ಸಂವೇದನೆಯ ಸೆಲೆಗಳ ಮೂಲಕ ರಚನಾತ್ಮಕವಾದ ಆಂದೋಲನಕ್ಕೆ ಮುಂದಾಗಬೇಕಿದೆ. ಇದಕ್ಕೆ ಸಾಂಸ್ಕೃತಿಕವಾದ ಹಾಗೂ ಸಾಮಾಜಿಕವಾದ ಸ್ಫೋಟದ ಅಗತ್ಯವಿದೆ. ಎಂದರೆ 'ಸಾಂಸ್ಕೃತಿಕ ದಂಗೆ'ಯ ರೂಪವನ್ನು ಅದು ಬೇಡುತ್ತದೆ.

ಈ ಹಿಂದೆ ನಾನು ದೇಶೀವಾದದ ಕುರಿತು ಬರೆಯುವಾಗಲೆಲ್ಲಾ 'ಸಂಯುಕ್ತವಾದ'ದ ಕುರಿತು ಮಾತನಾಡಿದ್ದು ಇದೆ. ಈ ಸಂಯುಕ್ತವಾದ ಅಂತಿಮ ಘಟ್ಟದಲ್ಲಿ ರೂಪುಗೊಳ್ಳುವಂತಹದು ಎಂದು ಭಾವಿಸುವ ಅಗತ್ಯವಿಲ್ಲ. ದೇಶೀವಾದ ಹಾಗೂ ರಾಷ್ಟ್ರೀಯವಾದಗಳು ಒಳರೂಪ ಪಡೆಯಲು ತುಡಿಯುತ್ತಿರುವಾಗಲೇ ಇದು ಕಾಣಿಸಿಕೊಳ್ಳುತ್ತದೆ. ದೇಶೀವಾದದ ಬೀಜಾಂಕುರದಲ್ಲಿಯೇ ರಾಷ್ಟ್ರೀಯವಾದ ಅಡಗಿದಂತೆ ಸಂಯುಕ್ತವಾದವೂ ಇವೆರಡರ ಸಂಪಾದನೆಯಲ್ಲಡಗಿದೆ. ಇದನ್ನರಿತು ನಾವು ಕಾರ್ಯೋನ್ಮುಖರಾಗಬೇಕಿದೆ. □



ಚಂದ್ರಹಾಸ ಬಾಲಕನ ಬಾಲಲೀಲೆ

○ ಡಾ. ಎಲ್. ಬಸವರಾಜು

ಇಂದೂಧರ ಹೊನ್ನಾಪುರ,
ಕೇಳಿ
ನಮ್ಮ ಚಂದ್ರ ಹಾಸಬಾಲಕನ ಬಾಲಲೀಲೆಯನ್ನು:
ಕೆಲಸದ ಮನೆಯಲ್ಲಿ
ಉಳುವ ಕಳೆಕೀಳುವ ತೋಟದಲ್ಲಿ ಹೊಲದಲ್ಲಿ
ಮಾರುಕಟ್ಟೆಯಲ್ಲಿ
ಬೀದಿ ಬೀದಿಯಲ್ಲಿ
ಮಾತಾಡಿದ್ದನ್ನು ಕೇಳಿ ಕೇಳಿ – ಅ
ಧರೆಗೆ ದೊಡ್ಡವರ ಮಗು
ತಾಯ ಹೊಟ್ಟೆಯಲ್ಲಿದ್ದಾಗಲೇ
ಇಂಗ್ಲೀಷನ್ನು ಕಲಿತಾಗಿತ್ತು!
ಅಷ್ಟರಲಿ –
ಆ ಇಂಗ್ಲೀಷನ್ನು ಮಕ್ಕಳಿಗೆ
ಒಂದನೇ ತರಗತಿಯಿಂದಲೋ ಎಂದು ಚಳುವಳಿ
ಮೂರನೇ ತರಗತಿಯಿಂದ ಕಲಿಸಬೇಕೋ
ಚರ್ಚೆ ನಡೆದಿತ್ತು ಸಭೆಸಮಾರಂಭಗಳಲ್ಲಿ!
ಆಗ –
ಹೊಟ್ಟೆಯಲ್ಲಿದ್ದ ಆ ಮಗು
ವ್ಹಾಟ್ ನಾನ್ ಸೆನ್ಸ್ ಎನ್ನುತ್ತ
ಅವಸರವಸರವಾಗಿ ಹೊರಬಂದು–
ಒ ಕೆ ಓ ಕೇ ನಾನು
ಶಿಶುವಿಹಾರದಿಂದಲೇ
ಇಂಗ್ಲೀಷಭ್ಯಾಸವನ್ನು ಮುಂದುವರಿಸುತ್ತೇನೆ
ದೇಶವೆಲ್ಲಾ ನಮ್ಮದು – ಇಂಗ್ಲೀಷೂ ನಮ್ಮದು !
ಹಿಂದೂ ಸಾಗರ ದಾಟಿ
ಸಾಗರಾಂತರ ಬಂಡವಾಳ ಹೂಡಲು
ಬೇಕು ನಮಗೆ ಇಂಗ್ಲೀಷು –
ಎನ್ನುತ್ತ
ಆ ಚಳುವಳಿಗಾರರ
ಪ್ರತಿಕೃತಿ ಭೂತ ಪ್ರೇತಗಳಿಗೆ ಬೆಂಕಿಹಚ್ಚಿತ್ತು !

ನವರತ್ನಗಳು ಎಲ್ಲಿ ಹೋದವು?

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಬಂಡಾವಾಳ ಹಿಂತೆಗೆತವು ಖಾಸಗೀಕರಣದ ಒಂದು ನೀತಿಯಾಗಿ ಬಂದಿತಷ್ಟೆ. ಜನಸಾಮಾನ್ಯನಿಗೆ ಇದು ಖಾಸಗೀಕರಣಕ್ಕೆ ಇರುವ ಮತ್ತೊಂದು ಹೆಸರು ಎಂದು ವಿವರಿಸಿ ಹೇಳಬೇಕಾಗಿಲ್ಲ. ಪ್ರಜ್ಞಾವಂತ ವ್ಯಕ್ತಿಗೆ ಬಂಡಾವಾಳ ಹಿಂತೆಗೆತವೇ ಖಾಸಗೀಕರಣ. ಈ ಕಾರ್ಯಕ್ರಮವು ೧೯೯೧ ರಲ್ಲಿ ಆರಂಭವಾಗಿ ಕೇವಲ ಒಂದೇ ವರ್ಷದಲ್ಲಿ ಸರ್ಕಾರವು ರೂ.೩೦೩.೭೭/– ಕೋಟಿ ಗಳಿಸಿತು. ಹೀಗೆ, ೧೯೯೧ ರಿಂದ ೨೦೦೫ರ ಹೊತ್ತಿಗೆ ಬಾರತ ಸರ್ಕಾರವು ಈ ಬಂಡಾವಾಳ ಹಿಂತೆಗೆತದಿಂದ ರೂ.೪೭.೬೪ ಬಿಲಿಯನ್ ಹಣವನ್ನುಗಳಿಸಿತು. ಈ ಬೃಹತ್ ಮೊತ್ತವು ಬಂದಿದಾದರು ಎಲ್ಲಿಂದ? ಬಂಡಾವಾಳ ಹಿಂತೆಗೆತ ಇಲಾಖೆ, ಹಣಕಾಸು ಸಚಿವಾಲಯದ ಪ್ರಕಾರ ೧೯೯೧ ರಿಂದ ೨೦೦೫ರ ನಡುವೆ ಸರ್ಕಾರಗಳಿಸಿದ ಮೊತ್ತ ರೂ. ೧೦೨.೫೭ ಬಿಲಿಯನ್. ಅಂದರೆ ಈ ಮೊತ್ತದಲ್ಲಿ ಕೇವಲ ರೂ೯.೫೩ ಬಿಲಿಯನ್ ನಷ್ಟದಲ್ಲಿದ್ದ ಸಾರ್ವಜನಿಕ ಉದ್ದಿಮೆಗಳಿಂದ ಬಂದಿತ್ತು. ಅಂದರೆ, ಉಳಿದ ಶೇ೯೦.೭ರಷ್ಟು ಹಣ ಬಂದದ್ದು ಲಾಭದಾಯಕವಾಗಿ ನಡೆಯುತ್ತಿದ್ದ ಸಾರ್ವಜನಿಕ ಉದ್ದಿಮೆಗಳಿಂದಲೇ ಆಗಿತ್ತು. ೧೯೯೧ರಿಂದಲೇ ನಿರಂತರವಾಗಿ ಬಂದ ಸರ್ಕಾರಗಳು ಈ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು ತಮ್ಮ ಗುರಿಯಾಗಿಸಿ ಕೊಡಿದ್ದು, ಎನ್.ಡಿ.ಎ ಸರ್ಕಾರ ಬಂದ ನಂತರ ತನ್ನ ಅಂತಿಮ ಸ್ವರೂಪವನ್ನು ಕಂಡಿತು. ಇದೀಗ ಕಾಂಗ್ರೆಸ್‌ನ ನಾಯಕತ್ವದಲ್ಲಿ ಯು.ಪಿ.ಎ ಸರ್ಕಾರವು ಇನ್ನಷ್ಟು ದೃಢ ಸಂಕಲ್ಪದೊಂದಿಗೆ ಖಾಸಗೀಕರಣದ ಧುರೀಣನಾದ ಡಾ.ಮನಮೋಹನ್ ಸಿಂಗ್‌ನ್ನನ್ನು ಮುಂಚೂಣಿಯಲ್ಲಿರಿಸಿದೆ.

ಈ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳು ಭಾರತೀಯ ಆರ್ಥಿಕತೆಯ ಬೆನ್ನೆಲುಬಾಗಿದ್ದು ಅಂತರಾಷ್ಟ್ರೀಯ ಮಟ್ಟದಲ್ಲೂ ಸ್ಪರ್ಧಾತ್ಮಕ ವಾಗಿದ್ದವು. ಈ ಕಾರಣದಿಂದಲೇ ಅವುಗಳನ್ನು ನವರತ್ನಗಳೆಂದು ಕರೆದದ್ದು. ಹಾಗೆಯೇ ಕೆಲವು ಸಣ್ಣ ಸಾರ್ವಜನಿಕ ಉದ್ದಿಮೆಗಳೂ ಸಹ ಮಿನಿ–ನವರತ್ನಗಳೆಂದು ಖ್ಯಾತಿಗಳಿಸಿವೆ.

೧೯೯೧ ರಲ್ಲಿ ಡಾ. ಮನಮೋಹನ್ ಸಿಂಗ್ ಆರ್ಥಿಕ ಉದಾರೀ ಕರಣವನ್ನು ಜಾರಿಯಾಗಿಸುವಾಗ ಬಂದ ಮುಖ್ಯ ಪ್ರಶ್ನೆಯೆಂದರೆ 'ಸಾರ್ವ ಜನಿಕ ವಲಯದ ಉದ್ದಿಮೆಗಳನ್ನು ಏನು ಮಾಡುವುದು?' ಏಕೆಂದರೆ ಕೆಲವು ಸಾರ್ವಜನಿಕ ವಲಯದ ಉದ್ದಿಮೆಗಳು ಹಲವಾರು ವರ್ಷಗಳಿಂದ ನಷ್ಟವನ್ನು ಅನುಭವಿಸುತ್ತಾ ನಡೆಯುತ್ತಿದ್ದವು. ಇವು ರಾಜ್ಯದ ಭಂಡಾರಕ್ಕೆ ಹೊರೆಯಾದವಲ್ಲದೆ, ಇವನ್ನು ಸಾರ್ವಜನಿಕವಾಗಿ ಬೆಂಬಲಿ ಸುತ್ತಿದ್ದವರಿಗೆ ಮುಜುಗರ ಉಂಟುಮಾಡಲಾರಂಭಿಸಿದವು.

ಇದರಿಂದಾಗಿ ಡಾ. ಮನಮೋಹನ್ ಸಿಂಗ್‌ಗೆ ನೈತಿಕ ಬೆಂಬಲ ದೊರೆತಂತಾಗಿ, ಟೀಕಾಕಾರರ ಬಾಯಿ ಮುಚ್ಚಿತು. ಖಾಸಗೀ ರಂಗಕ್ಕೆ ಇದರಿಂದ ಬಾರಿ ಜಯ ದೊರೆತಂತಾಯಿತು. ಹೀಗೆ ರೋಗಗ್ರಸ್ತ ಈ ಉದ್ದಿಮೆಗಳನ್ನು ಒಂದೊಂದಾಗಿ ಬದಲಾಯಿಸುವ ಪ್ರಕ್ರಿಯೆ ಆರಂಭ ವಾಯಿತು. ಆದರೆ ಬಿ.ಹೆಚ್.ಇ.ಎಲ್. ಬಂಡಾವಾಳ ಹಿಂತೆಗೆತ ಪ್ರಕ್ರಿಯೆ ಆಗುವ ತನಕ, ಖಾಸಗೀ ಉದ್ದಿಮೆಗಳು ಹೇಗೆ ತಮ್ಮನ್ನೇ ತಾವು ಗಟ್ಟಿಗೊಳಿಸಿಕೊಂಡವು ಎಂಬುದನ್ನು ಯಾರೂ ಅರಿಯಲಾಗಿರಲಿಲ್ಲ.

ಈ ಬಿ.ಹೆಚ್.ಇ.ಎಲ್. ಬಂಡಾವಾಳ ಹಿಂತೆಗೆತ ಪ್ರಕ್ರಿಯೆಯ ಬಗ್ಗೆ ನಾನು ಸಂಶೋಧನೆ ಕೈಗೊಂಡಾಗಲಷ್ಟೇ ನವರತ್ನಗಳ ಸಮಸ್ಯೆ ಎದುರಾದುದು. ಈ ಬಿ.ಹೆಚ್.ಇ.ಎಲ್. ಅಂಥ ನವರತ್ನಗಳಲ್ಲಿ ಒಂದಾಗಿತ್ತು. ನಾವಿಂದು ಭಾರತದಲ್ಲಿ ನೋಡುತ್ತಿರುವಂತೆ, ಯಾವುದೇ ನಾಗರಿಕ ಸಮಾಜದಲ್ಲಿ ಆಳುವ ಜನ ಇಷ್ಟು ಕ್ರೂರವಾಗಿ ಸಾರ್ವಜನಿಕ ನಂಬಿಕೆಯನ್ನು ಕೊಲೆಮಾಡುತ್ತಾರೆಂದು ಊಹಿಸಲಿಕ್ಕೆ ಸಾಧ್ಯವೇ?

ಈ ನವರತ್ನಗಳೆಂದು ಕರೆಯಲಾಗಿರುವ ಸಾರ್ವಜನಿಕ ಉದ್ದಿಮೆಗಳನ್ನು ಸರ್ಕಾರ ಹೇಗೆ ಮಾರಾಟ ಮಾಡುತ್ತಿದೆ ಎಂಬುದನ್ನು ಈ ಕೆಳಗಿನ ಪಟ್ಟಿ ತೋರಿಸುತ್ತದೆ:

ಈ ನವರತ್ನಗಳಲ್ಲಿ ಸರ್ಕಾರದ ಪಾಲು ಶೇ. ೫೮.೧೯ಕ್ಕೆ ಇಳಿದಿದೆ. ಉಳಿದ ಪಾಲು ಹಣಕಾಸು ಸಂಸ್ಥೆಗಳು, ಖಾಸಗೀ ಕಂಪನಿಗಳು, ವಿದೇಶಿ ಹೂಡಿಕೆದಾರರು ಮತ್ತು ಸಾರ್ವಜನಿಕ ಶೇರುದಾರರಲ್ಲಿ ಹಂಚಿಹೋಗಿದೆ. ಇಲ್ಲಿರುವ ಪ್ರಶ್ನೆಯೆಂದರೆ ಸಾರ್ವಜನಿಕ ವಲಯದಲ್ಲಿನ ಸರ್ಕಾರದ ಪಾಲು ಇನ್ನಷ್ಟು ಕಮ್ಮಿಯಾಗುವುದೇ ಅಥವಾ ಹೆಚ್ಚುವುದೇ? ಎಂಬುದಾಗಿದೆ. ಭಾರತೀಯ ಪೆಟ್ರೋ ಕೆಮಿಕಲ್ಸ್ ಕಂಪನಿಯಲ್ಲಿನ ಸರ್ಕಾರದ ಪಾಲು ಕಮ್ಮಿಯಾಗಿದೆ. ಹಾಗೆಯೇ ವಿದೇಶಿ ಸಂಚಾರ ನಿಗಮದಲ್ಲೂ ಆಗಿದೆ. ಪೆಟ್ರೋ ಕೆಮಿಕಲ್ಸ್ ರಿಲಯನ್ಸ್ ಕೈಯಲ್ಲಿದ್ದರೆ, ವಿದೇಶಿ ಸಂಚಾರ ನಿಗಮವು ಟಾಟಾದವರ ಕೈಗೆ ಹೋಗಿದೆ. ಭಾರತೀಯ ಪೆಟ್ರೋ ಕೆಮಿಕಲ್ಸ್ ೨೦೦೧ರ ವರೆಗೆ ಸರ್ಕಾರದ ಕೈಯಲ್ಲೇ ಇದ್ದು ಅಧಿಕ ಲಾಭ ತರುತ್ತಿದ್ದವು. ಹಾಗೆಯೇ ೨೦೦೨ ರವರೆಗೆ ವಿದೇಶಿ ಸಂಚಾರ್ ನಿಗಮವೂ ಸಹ ಟಾಟಾದವರ ಕೈಗೆ ಹೋಗುವ ಮೊದಲು ಅಧಿಕ ಲಾಭವನ್ನು ತರುತ್ತಿತ್ತು.

ಅಂದರೆ ಉಳಿದ ನವರತ್ನಗಳೂ ಸಹ ಐಟಿಸಿಎಲ್, ವಿಎಸ್‌ಎನ್‌ಎಲ್ ಅಥವಾ ಮಾರುತಿಯಂತೇ ಹೋಗುತ್ತಿವೆಯಲ್ಲವೇ ? ೧೧ ನವರತ್ನಗಳ ಒಟ್ಟಾರೆ ವಾರ್ಷಿಕ ಆದಾಯವು೭೯.೮೧ ಬಿಲಿಯನ್ ಡಾಲರ್‌ನಷ್ಟಿತ್ತು. ಇದು ಪಾಕಿಸ್ತಾನದ ತಲಾದಾಯದ ೫೯.೮೮ ಬಿಲಿಯನ್ ಡಾಲರ್ ಗಿಂತಲೂ ಅಧಿಕವಾಗಿದೆ.

ಕೆಲವು ವರ್ಷಗಳ ಹಿಂದೆ ಮಧ್ಯಪ್ರದೇಶದ ವೈದ್ಯಕೀಯ ಕಾಲೇಜುಗಳಿಗೆ ಕೆಲವು ಆದಿವಾಸಿ ವಿದ್ಯಾರ್ಥಿಗಳು ನಕಾರಾತ್ಮಕ ಅಂಶಗಳ ಹೊರತಾಗಿಯೂ ಪ್ರವೇಶಕ್ಕೆ ಅರ್ಹರೆಂದು ಘೋಷಿಸಲಾಗಿತ್ತು. ದಿಗ್ವಿಜಯ್ ಸಿಂಗ್‌ರ ಮುಂದಾಳುತನದಲ್ಲಿ ಸರ್ಕಾರವು ವೈದ್ಯ ಕೀಯ ಕಾಲೇಜುಗಳಿಗೆ ಎಸ್ಸಿ/ಎಸ್ಟಿ ಕೋಟಾವನ್ನು ತುಂಬಿಸಿ ಕೊಳ್ಳಲು ಬದ್ಧ ವಾಗಿತ್ತು. ನಕಾರಾತ್ಮಕ ಅಂಶಗಳ ವ್ಯವ ಸ್ಥೆಯು ಒಂದು ರೀತಿಯಲ್ಲಿ ಅನುಕೂ ಲವೇ ಆಗಿತ್ತು. ಇದು ಎಲ್ಲಾ ಕಡೆ ಬಹಳ ಸುದ್ದಿಯಾಯಿತು.

ಮೇ ೩೧ ರಂದು ರಾಜಸ್ಥಾನದ ಪ್ರೌಢ ಶಿಕ್ಷಣ ಮಂಡಳಿಯು ಕ್ಲಾಸ್ ೧೨ರ ಫಲಿತಾಂಶಗಳನ್ನು ಘೋಷಿಸುವುದರ ಮೂಲಕ ಒಂದು ಇತಿಹಾಸವನ್ನು ಸೃಷ್ಟಿಸಿತ್ತು. ಈ ಪರೀಕ್ಷೆಗಳಲ್ಲಿ ಯಾರು ಉನ್ನತ ಶ್ರೇಣಿಯನ್ನು ಪಡೆದುಕೊಂಡಿದ್ದಾರೆಂದು ತಿಳಿಯಲು ಎಲ್ಲರೂ ಕಾತರರಾಗಿರುತ್ತಾರೆ. ಹೀಗೆ ಉನ್ನತ ಶ್ರೇಣಿ ಪಡೆದವರು ಬೇಗನೆ ಮನೆ ಮಾತಾಗುತ್ತಾರೆ. ಏಕೆಂದರೆ ಅವರ ಸಂದರ್ಶನಗಳನ್ನು ಫೋಟೋ ಸಮೇತ ಎಲ್ಲಾ ದಿನಪತ್ರಿಕೆಗಳು ಪ್ರಕಟಿಸುತ್ತಾರೆ.

ಈ ವರ್ಷ ಇದೇ ಪರೀಕ್ಷೆಗಳಲ್ಲಿ ವಿಕಾಸ್‌ಸಿಂಗ್ ಜಾದವ್ ಮತ್ತು ರಾಜೇಂದ್ರಸಿಂಗ್ ಮೀನಾ ಜೊತೆಯಾಗಿ ಮೊದಲ ಸ್ಥಾನವನ್ನು ಪಡೆದರು. ದಲಿತ ವಿದ್ಯಾರ್ಥಿಯಾದ ವಿಕಾಸ್ ಮತ್ತು ಆದಿವಾಸಿಯಾದ ರಾಜೇಂದ್ರಸಿಂಗ್ ಮೀನಾ ತಮ್ಮ ಅವಿರತ ಶ್ರಮದಿಂದಾಗಿ ಬೆಳ್ಳಿತಟ್ಟೆಯಲ್ಲಿ ಬಂದವರನ್ನು ಹಿಂದಕ್ಕೆ ಸರಿಸಿದ್ದರು.

ನಾಗರೀಕ ಸೇವೆಯಲ್ಲಿರುವವರು, ಉದ್ಯಮಪತಿಗಳು, ಭೂಮಾಲೀಕರು, ಸಂಪಾದಕರು, ಪ್ರೊಫೆಸರುಗಳು ಮತ್ತು ಕುಲಸಚಿವರುಗಳ ಮಕ್ಕಳು ಒಡ್ಡಿದ ಸವಾಲುಗಳನ್ನು ವಿಕಾಸ್ ಮತ್ತು ರಾಜೇಂದ್ರಸಿಂಗ್ ಯಶಸ್ವಿಯಾಗಿ ಎದುರಿಸಿದ್ದರು.

ದಲಿತ್ ಡೈರಿ

ಬಂಡಾವಾಳ ಹಿಂತೆಗೆತವು ಖಾಸಗೀಕರಣದ ಒಂದು ನೀತಿಯಾಗಿ ಬಂದಿತಷ್ಟೆ. ಈ ಕಾರ್ಯಕ್ರಮವು ೧೯೯೧ ರಲ್ಲಿ ಆರಂಭವಾಗಿ ಕೇವಲ ಒಂದೇ ವರ್ಷದಲ್ಲಿ ಸರ್ಕಾರವು ರೂ. ೩೦೩೭೭/ ಕೋಟಿ ಗಳಿಸಿತು.ಅಂದರೆ ಈ ಮೊತ್ತದಲ್ಲಿ ಕೇವಲ ರೂ. ೯.೫೩ ಬಿಲಿಯನ್ ನಷ್ಟದಲ್ಲಿದ್ದ ಸಾರ್ವಜನಿಕ ಉದ್ದಿಮೆಗಳಿಂದ ಬಂದಿತ್ತು. ಅಂದರೆ, ಉಳಿದ ಶೇ.೯೦.೭ ರಷ್ಟು ಹಣ ಬಂದದ್ದು ಲಾಭದಾಯಕವಾಗಿ ನಡೆಯುತ್ತಿದ್ದ ಸಾರ್ವಜನಿಕ ಉದ್ದಿಮೆಗಳಿಂದಲೇ ಆಗಿತ್ತು. ೧೯೯೧ರಿಂದಲೇ ನಿರಂತರವಾಗಿ ಬಂದ ಸರ್ಕಾರಗಳು ಈ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು ತಮ್ಮ ಗುರಿಯಾಗಿಸಿ ಕೊಡಿದ್ದು, ಎನ್.ಡಿ.ಎ ಸರ್ಕಾರ ಬಂದ ನಂತರ ತನ್ನ ಅಂತಿಮ ಸ್ವರೂಪವನ್ನು ಕಂಡಿತು.

❍ಅನು: ಡೊಮಿನಿಕ್ ಡಿ

ತಾರೆಗಳನ್ನು ಹೊಡೆದುರುಳಿಸಲಾಯ್ತು

'ಜಾದವ್' ಮತ್ತು 'ಮೀನಾ' ಎನ್ನೋ ಹೆಸರುಗಳು ದಲಿತ ಮತ್ತು ಆದಿವಾಸಿಗಳಿಗೆ ಮಾತ್ರ ಸೀಮಿತವಾಗಿದೆ. ಕೆಲವು ವರ್ಷಗಳ ಹಿಂದೆ ಮಧ್ಯ ಪ್ರದೇಶದ ಕಥೆಯನ್ನು ಎಲ್ಲೆಡೆ ಹಬ್ಬಿಸಿದ ಮಾಧ್ಯಮದವರು ಈ ಇಬ್ಬರ ಸಾಧನೆಯನ್ನು ಮೌನವಾಗಿಸಿಬಿಟ್ಟರು.

ವಾರಪತ್ರಿಕೆಯಾದ ಸಹಾರ ಸಾಮಿ ಮತ್ತು ದೈನಿಕ ಭಾಸ್ಕರ ದಿನಪತ್ರಿಕೆಗಳು ಮಾತ್ರ ಈ ಸಾಧನೆಯನ್ನು ಪ್ರಕಟಿಸಿದ್ದವು.

ವಿಕಾಸ್ ೬೫೦ ಅಂಕಗಳಲ್ಲಿ ೫೭೫ ಅಂಕಗಳನ್ನು (ಶೇ.೮೮.೪೬) ಪಡೆದಿದ್ದ. ಆತ ಇಂಗ್ಲೀಷ್‌ನಲ್ಲಿ ೯೨, ರಾಜಕೀಯ ಶಾಸ್ತ್ರದಲ್ಲಿ ೧೫೦ ರಲ್ಲಿ ೧೩೭ ಮತ್ತು ಹಿಂದಿಯಲ್ಲಿ ೮೯ನ್ನು ಗಳಿಸಿದ್ದ. ಈತ ಹೈಸ್ಕೂಲಿನಲ್ಲಿ ಶೇ.೮೬ ರಷ್ಟು ಅಂಕ ಪಡೆದು ರಾಜ್ಯದಲ್ಲೇ ೫೯ನೇ ಸ್ಥಾನವನ್ನು ಪಡೆದಿದ್ದ.

ವಿಕಾಸ್‌ನ ತಾಯಿ ಅನಕ್ಷರಸ್ಥಳಾಗಿದ್ದು, ತಂದೆಯು ಕಿರಿಯ ಬ್ಯಾಂಕ್ ಉದ್ಯೋಗಿಯಾಗಿರುವಾಗಲೇ ಯಾವುದೋ ಕಾರಣಕ್ಕಾಗಿ ಕೆಲಸದಿಂದ ತೆಗೆಯಲಾಯಿತು. ಈ ಪ್ರಕರಣವನ್ನು ನ್ಯಾಯಾಲಯದಲ್ಲಿ ನಿಭಾಯಿಸಲಾಗುತ್ತಿದೆ. ಒಂದು ಎಕರೆಗಿಂತ ಕಡಿಮೆ ಇರುವ ಭೂಮಿಯಲ್ಲಿ ಕುಟುಂಬದವರೆಲ್ಲರೂ ದುಡಿದು ಆತನ ವಿದ್ಯಾಭ್ಯಾಸಕ್ಕೆ ನೆರವಾಗಿದ್ದರು.

ವಿಕಾಸ್ ತನ್ನ ಇತರ ಏಳುಮಂದಿ–ಪೋಷಕರು, ಮೂರು ಮಂದಿ ಒಡಹುಟ್ಟಿದವರು ಮತ್ತು ಅಜ್ಜಿಯೊಡನೆ ಒಂದೇ ಕೋಣೆಯ ಮನೆಯಲ್ಲಿ ಜೀವಿಸುತ್ತಿದ್ದಾನೆ. ಈ ಮನೆಯಲ್ಲಿ ಅವಶ್ಯಕವಾದ ಶೌಚಾಲಯ, ನಲ್ಲಿ ನೀರು ಮತ್ತು ವಿದ್ಯುತ್ ಏನೂ ಇಲ್ಲ. ಒಂದು ಟಿ.ವಿ., ದೂರವಾಣಿ ಅಥವಾ ರೆಫ್ರಿಜರೇಟರ್‌ಗಳೆಲ್ಲಾ ಆ ಕುಟುಂಬಕ್ಕೆ ಇನ್ನೂ ಕನಸಿನ ಸಂಗತಿಗಳೇ ಆಗಿದ್ದವು. ವಿಕಾಸ್‌ಗೆ ಒಂದು ಕೈಗಡಿಯಾರ ಅಥವಾ ಸೈಕಲ್ ಸಹ ಇಲ್ಲ.

ಆತನ ತಂಗಿ ರಜನಿಕುಮಾರಿ ಹೈಸ್ಕೂಲ್‌ನಲ್ಲಿ ಶೇ.೫೭ ಅಂಕಗಳನ್ನು ೨೦೦೪ರಲ್ಲಿ ಗಳಿಸಿದ್ದರೂ ಸಹ ಆರ್ಥಿಕ ಕಾರಣದಿಂದಾಗಿ ವಿದ್ಯಾಭ್ಯಾಸ ಅಲ್ಲಿಗೇ ನಿಂತಿತು.

ಆದರೆ ಪ್ರೌಢಶಾಲೆಯಲ್ಲಿ ಆತ ತನ್ನ ಫಲಿತಾಂಶದೊಡನೆ ಎಲ್ಲರನ್ನೂ ಚಕಿತಗೊಳಿಸಿದಾಗ ಆತನ ಅಭ್ಯಾಸಕ್ಕೆಂದು ಒಂದು ಪ್ರತ್ಯೇಕ ಗುಡಿಸಲೊಂದನ್ನು ಕಟ್ಟಿಕೊಡಲಾಯಿತು. ಅದನ್ನೇ ಆತನ ಇನ್ನಿಬ್ಬರು ೮ನೇ ಮತ್ತು ೬ನೇ ತರಗತಿಗಳಲ್ಲಿದ್ದ ಸಹೋದರರು ಹಂಚಿಕೊಂಡಿದ್ದರು. ವಿಕಾಸನಿಗೆ ಟ್ಯೂಷನ್ ಅಥವಾ ಗೈಡುಗಳೂ ಇರಲಿಲ್ಲ.

ರಾಜೇಂದ್ರಸಿಂಗ್ ಮೀನಾ, ವಿಕಾಸ್‌ನಂತೆಯೇ ಒಂದು ಬಡ ಕುಟುಂಬದಿಂದಲೇ ಬಂದವನು. ಆತ ತನ್ನ ವಿದ್ಯಾಭ್ಯಾಸಕ್ಕಾಗಿ ಟ್ಯೂಶನ್ ತೆಗೆದುಕೊಂಡಿದ್ದ. ಇವರಿಬ್ಬರೂ ಸಹ ಸರ್ಕಾರಿ ಶಾಲೆಗಳಲ್ಲೇ ಓದಿದವರು.

ವಿಕಾಸ್‌ನಿಗೆ ಆತನ ಹೈಸ್ಕೂಲ್ ಫಲಿತಾಂಶವೇ ಭವಿಷ್ಯವನ್ನು ನಿರ್ಧರಿಸಿದಂತಿದೆ. ಆತ ಇಂಥ ಅದ್ಭುತ ಪ್ರದರ್ಶನ ನೀಡದಿದ್ದಲ್ಲಿ ಆತನ ಸಹೋದರಿಯಂತೆಯೇ ತನ್ನ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಗುತ್ತಿತ್ತು.

ದಲಿತರು/ಆದಿವಾಸಿಗಳು ವಿದ್ಯಾಭ್ಯಾಸದಲ್ಲಿ ಪ್ರಾವೀಣ್ಯತೆಯನ್ನು ಪಡೆಯುತ್ತಿರುವುದನ್ನು ಈ ಅನುಭವಗಳು ಎತ್ತಿ ಹಿಡಿಯುತ್ತವೆ. ಇಂಥ ಅನೇಕ ಮಂದಿ ಅಮೇರಿಕಾ ಮತ್ತು ಬ್ರಿಟಿಷ್ ವಿಶ್ವವಿದ್ಯಾಲಯಗಳಲ್ಲಿ ಬೋಧಿಸುತ್ತಿದ್ದಾರೆ.

ರಾಜಸ್ಥಾನದ ಊಳಿಗಮಾನ್ಯ ರಾಜ್ಯದ ಧೂಳಿನಲ್ಲಿ ಶೋಧಿಸುತ್ತಿರುವ ತಾರೆಗಳೆಂದರೆ ಈ ದಲಿತ/ಆದಿವಾಸಿ ತಾರೆಗಳಾದ ವಿಕಾಸ್ ಮತ್ತು ರಾಜೇಂದ್ರ. ಇಂತಹ ಮಿಲಿಯಗಟ್ಟಲೆ ದಲಿತ/ಆದಿವಾಸಿ ವಿದ್ಯಾರ್ಥಿಗಳು ಬಡತನ ಮತ್ತು ಪ್ರತಿಕೂಲ ಸಾಮಾಜಿಕ ಸನ್ನಿವೇಶಗಳಿಂದಾಗಿ ಕತ್ತಲೆಯಲ್ಲೇ ಮರೆಯಾಗಿ ಬಿಡುತ್ತಾರೆ. ಸರ್ಕಾರಗಳು ತಮ್ಮದೇ ಆದ ಸಿದ್ಧಾಂತಗಳೊಡನೆ ಬಂದು ಹೊರಟು ಹೋಗುತ್ತವೆ. ಆದರೆ ದಲಿತ/ಆದಿವಾಸಿಗಳಿಗೆ ಶಿಕ್ಷಣವೆನ್ನುವುದನ್ನು ಸ್ವಾತಂತ್ರ್ಯ ನಂತರದಲ್ಲೂ ಈ ಸರ್ಕಾರಗಳು ಇನ್ನೂ ತಮ್ಮ ಸಮಸ್ಯೆಯೆಂದು ಭಾವಿಸಿಲ್ಲ.



ಡಾ. ಮನಮೋಹನ್ ಸಿಂಗ್

ವಿಕಾಸ್ ಮತ್ತು ರಾಜೇಂದ್ರರಂಥ ಅನೇಕರು ಇತರರಿಗಿಂತಲೂ ಹೆಚ್ಚಾಗಿ ಶೋಭಿಸಲು ಬೀದಿಗಳಲ್ಲಿ ಕಾಯುತ್ತಿದ್ದಾರೆ.

ವಿಕಾಸ್‌ನನ್ನು ಸಂಪರ್ಕಿಸುವುದಾದರೆ
ಗ್ರಾಮ ಮತ್ತು ಅಂಚೆ : ಪಿಪ್‌ಲ್ಲಾ, ಜಿಲ್ಲೆ : ಭಾರತ್‌ಪುರ
ರಾಜಸ್ಥಾನ, ಪಿನ್ : ೩೨೧ ೦೨೧.

ಡ್ರಾಗನ್‌ಗಳೇಕೆ ಗರ್ಜಿಸುತ್ತಿವೆ?

ರಾಶಿ ರಾಶಿ ಮಾಹಿತಿಯನ್ನು ಹೊರತುಪಡಿಸಿಯೂ ಸಹ ಚೈನಾದ ಆರ್ಥಿಕ ಬೆಳವಣಿಗೆಯು ಭಾರತೀಯ ಪ್ರಜ್ಞಾವಂತನಿಗೆ ಇನ್ನೂ ನಿಗೂಢವಾಗಿಯೇ ಉಳಿದಿದೆ. ಜಾಗತಿಕ ಮಟ್ಟದಲ್ಲಿ ಚೈನಾದ ವಹಿವಾಟು ಎರಡು ಅಂಕಿ (ಶೇ.೮.೮೩)ಗಳನ್ನು ತಲುಪಲು ದಾಪುಗಾಲಿಡುತ್ತಿದ್ದರೆ ಭಾರತದ ರಫ್ತು ಒಂದಂಕಿಯನ್ನು (ಶೇ.೦.೯) ತಲುಪಲೂ ಸಹ ಹೆಣಗಾಡುತ್ತಿದೆ. ಚೈನಾದ ತಲಾದಾಯವು (೧,೯೯೪ ಬಿಲಿಯನ್ ಡಾಲರ್) ಭಾರತದ ತಲಾದಾಯ ೪,೭೪೬ ಬಿಲಿಯನ್ ಡಾಲರ್‌ನ ಎರಡರಷ್ಟಿದೆ.

ಚೈನಾದಲ್ಲಿ ೧೦೦೦ ಜನರಿಗೆ ೧೬.೨೩ ಕಾರುಗಳು ಮತ್ತು ೪೭೮ ಟಿ.ವಿ.ಗಳಿದ್ದರೆ ೧೦೦೦ ಭಾರತೀಯರಿಗೆ ೮.೬೨ ಕಾರುಗಳು ಮತ್ತು ೧೦೨ ಟಿ.ವಿ.ಗಳು ಇವೆ. ಕೈಗಾರಿಕಾ ಕ್ರಾಂತಿಯಲ್ಲಂತೂ ಚೈನಾ ದಾಪುಗಾಲಿಡುತ್ತಿದೆ. ಅದರ ಆರ್ಥಿಕತೆಗೆ ಉತ್ಪಾದನಾ ಘಟಕದ ಕೊಡುಗೆ ಶೇ.೫೨.೯ ರಷ್ಟಿದೆ. ಅದೇ ಭಾರತದಲ್ಲಿ ಕುಂಟುತ್ತಾ ಸಾಗಿರುವ ಕೈಗಾರಿಕೆಗಳ ಕೊಡುಗೆ ಶೇ.೨೮.೪ ರಷ್ಟೇ ಉಳಿದಿದೆ.

ಹಾಗೆಯೇ ಚೈನಾದ ಸೌಂದರ್ಯ ಉದ್ಯಮದ ವಹಿವಾಟು ೨೪ ಬಿಲಿಯನ್ ಡಾಲರ್‌ಗಳಲ್ಲಿ ನಿಂತರೆ ಭಾರತದ ಸೌಂದರ್ಯ ಉದ್ಯಮದ ಒಟ್ಟಾರೆ ಗಳಿಕೆ ೨ ಬಿಲಿಯನ್ ಡಾಲರ್‌ಗಿಂತಲೂ ಕಮ್ಮಿಯಿದೆ. ಈಗಿನ ಫಾರ್ಚುನ್ ಮ್ಯಾಗಝಿನ್ ಈ ಪ್ರಕ್ರಿಯೆಗಳನ್ನು ಅರ್ಥೈಸಲು ಪ್ರಯತ್ನಿಸಿದೆ. ಅದು ಚೈನಾದ ಬೆಳವಣಿಗೆಯನ್ನು ಮತ್ತು ಭಾರತದ ಜಡತ್ವವನ್ನು ಅರ್ಥೈಸಲು ಸಹಕಾರಿಯಾಗಿದೆ.

ಕಳೆದ ಮೇನಲ್ಲಿ ಈ ಮ್ಯಾಗಜಿನ್ ತನ್ನ ೭೫ನೇ ವರ್ಷಾಚರಣೆಯ ಸಲುವಾಗಿ ಬೀಜಿಂಗ್‌ನಲ್ಲಿ ವಿಚಾರ ಸಂಕಿರಣವೊಂದನ್ನು ಹಮ್ಮಿಕೊಂಡಿತ್ತು. ಚೈನಾದ ಯಶೋಗಾಥೆಯನ್ನು ಮಾತನಾಡುತ್ತಾ ಒಬ್ಬ ಭಾಗ್ಯಾರ್ಥಿ ಹೇಳಿದ್ದೇನೆಂದೆ, "ಚೈನಾದ ಬಹುಮುಖ್ಯ ಅಂಕಿ–ಅಂಶಗಳಲ್ಲಿ ಶೋಭಾಯಮಾನವಾದುದ್ದೆಂದರೆ ಕಳೆದ ೨೦ ವರ್ಷಗಳಲ್ಲಿ ಅದು ದಿನಕ್ಕೆ ಒಂದು ಡಾಲರ್‌ಗಿಂತ ಕಮ್ಮಿ ಗಳಿಕೆಯಿದ್ದ ೪೦೦ ಮಿಲಿಯನ್ ಜನರನ್ನು (ಒಟ್ಟು ಜನಸಂಖ್ಯೆ ೧.೩ ಬಿಲಿಯನ್) ಬಡತನದಿಂದ ಮೇಲೆತ್ತಿರುವುದೇ ಆಗಿದೆ."

ಈ ಬೀಜಿಂಗ್ ಸಮ್ಮೇಳನದ ನೀತಿಯೆಂದರೆ, "ಆರ್ಥಿಕತೆ ಬೆಳೆಯಬೇಕಾದರೆ ಬಡತನ ಕೊನೆಗೊಳ್ಳಬೇಕು. ಸಾಮೂಹಿಕ ಮಾರುಕಟ್ಟೆ ಸೃಷ್ಟಿಯಾಗಬೇಕು."

"ಹೇಗೆ ಬೃಹತ್ ನಿರ್ಧಾರಗಳನ್ನು ಕೈಗೊಳ್ಳುವುದು" ಎಂಬುದೇ ಆ ಮ್ಯಾಗಜಿನ್‌ನ ಗುರಿಯಾಗಿತ್ತು. "ಚರಿತ್ರೆಯನ್ನು ಸೃಷ್ಟಿಸಿದ ೨೦" ವಾಣಿಜ್ಯ ನಿರ್ಧಾರಗಳನ್ನು ಆ ಸಂಚಿಕೆ ಪ್ರಕಟಿಸಿತ್ತು. ೪ನೇ ರ್‍ಯಾಂಕ್ ಪಡೆದುದು ೧೯೧೪ ಜನವರಿಯಲ್ಲಿ ಹೆನ್ರಿ ಫೋರ್ಡ್ ಮಾಡಿದ ನಿರ್ಧಾರವಾಗಿತ್ತು. ಅಂದೇ ಫೋರ್ಡ್ ಮೋಟರ್ಸ್ ಕಂಪನಿ ಸ್ಥಾಪನೆಯಾಯಿತು.

ಆತ ಅಂದು "ಇನ್ನು ಮೇಲೆ ದಿನವೊಂದಕ್ಕೆ ಪ್ರತಿಯೊಬ್ಬ ಕಾರ್ಮಿಕನಿಗೂ ೫ ಡಾಲರ್" ಎಂದು ಘೋಷಿಸಿದ. ಆಗ ಇದ್ದ ಕೂಲಿ ದಿನಕ್ಕೆ .೩೪ ಡಾಲರ್ ಆಗಿತ್ತು. ಜನವರಿಯ ಚಳಿಯನ್ನು ಲೆಕ್ಕಿಸದೇ ಬೆಳಿಗ್ಗೆ ೭.೩೦ಕ್ಕೆ ೧೦,೦೦೦ ಜನ ಕಂಪನಿಯ ಗೇಟ್‌ನಲ್ಲಿ ನೆರೆದಿದ್ದರು. ಈ ಫೋರ್ಡ್‌ನ ನಿರ್ಧಾರವನ್ನು ಮ್ಯಾಗಜಿನ್ ಈ ರೀತಿ ವರ್ಣಿಸಿತ್ತು. "ಒಂದೇ ಒಂದು ಘೋಷಣೆಯಿಂದ ಫೋರ್ಡ್ ಸಮೂಹ ಮಾರುಕಟ್ಟೆ ಮತ್ತು ಕಾರನ್ನು ತಯಾರಿಸಿದ್ದ."

ನಮ್ಮೆದುರು ಎರಡು ಮಾದರಿಗಳಿವೆ : ಜಗತ್ತಿನ ದೊಡ್ಡ ಕೈಗಾರಿಕಾ ಆರ್ಥಿಕತೆಯನ್ನು ಹೊಂದಿರುವ ಅಮೇರಿಕಾ ಹಾಗೂ ಬಹು ಬೇಗ ಬೆಳೆಯುತ್ತಿರುವ ಚೈನಾ ಇನ್ನೊಂದೆಡೆ ಇದೆ. ವೈವಿಧ್ಯಮಯ ಸಂಸ್ಕೃತಿ–ನಾಗರಿಕತೆಗಳು ಸನ್ನಿವೇಶವನ್ನು ಹೊರತುಪಡಿಸಿಯೂ ಅವರ ಯಶಸ್ವಿಯಾದ ಆರ್ಥಿಕತೆಗೆ ಒಂದು ಸಾಮಾನ್ಯ ಲಕ್ಷಣ ಕಂಡುಬರುತ್ತದೆ. ಅಂದರೆ ಉದ್ಯಮವು ಪದಾರ್ಥಗಳು ಮತ್ತು ಗ್ರಾಹಕರನ್ನು ಒಮ್ಮೆಗೇ ತಯಾರು ಮಾಡಬೇಕಾಗುತ್ತದೆ.

ಮಾರ್ಚ್ ೨೮, ೨೦೦೦ ದಂದು ಭಾರತದ ಒಬ್ಬ

ದ್ವೇಷ ಅಂತರ್ಗತವಾಗಿದೆ

ಗೌರವಾನ್ವಿತ ಉದ್ಯಮಿಯೊಬ್ಬ ರಾಷ್ಟ್ರಪತಿಯುವರಿಂದ ಪದ್ಮವಿಭೂಷಣ ಪ್ರಶಸ್ತಿ ಪಡೆದಿದ್ದ. ಅದೇ ದಿನ ಲಕ್ನೋದಲ್ಲಿ ಕಾರ್ಮಿಕರು ತಮ್ಮ ಕೂಲಿ ಹೆಚ್ಚಿಸಬೇಕಂದು ಒತ್ತಾಯಿಸಿ ಆಟೋ ತಯಾರಿಕಾ ಘಟಕವನ್ನು ಸುಟ್ಟಿದ್ದರು. ಅವರ ಬೇಡಿಕೆ ತಿಂಗಳಿಗೆ ೪೦೦೦ ರೂ. ಸಂಬಳ ಬೇಕೆಂಬುದೇ ಆಗಿತ್ತು. ಅವರಿಗೆಲ್ಲಾ ರೂ.೩೦೦೦ ಕ್ಕಿಂತಲೂ ಕಮ್ಮಿ ವೇತನ ನೀಡುತ್ತಿದ್ದರು.

ದುರಂತವೆಂದರೆ ಲಕ್ನೋದ ಈ ಮೋಟಾರ್ ತಯಾರಿಕಾ ಕೇಂದ್ರವು ಭಾರತದ ಮಧ್ಯಮ ಮತ್ತು ವಾಣಿಜ್ಯ ವಾಹನಗಳ ಮಾರುಕಟ್ಟೆಯಲ್ಲಿ ಶೇ.೬೬, ಶೇ.೬೭ ರಷ್ಟು ಸಣ್ಣ ವಾಣಿಜ್ಯ ವಾಹನ ಹಾಗೂ ಪ್ಯಾಸೆಂಜರ್ ಕಾರ್‌ಗಳ ಮಾರುಕಟ್ಟೆ ಶೇ.೨೬ ರಷ್ಟನ್ನು ಹೊಂದಿದೆ. ಈ ಕಂಪನಿಯು ದೆಹಲಿಯಲ್ಲಿ ಪದ್ಮವಿಭೂಷಣ ಪ್ರಶಸ್ತಿ ಗಳಿಸಿದವನಿಗೇ ಸೇರಿತ್ತು.

ಅಂದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸಿದ ಇಂಡಿಯಾದ ದೊಡ್ಡ ಸಂಸ್ಥೆ ತನ್ನ ಕಾರ್ಮಿಕರಿಗೆ ತಿಂಗಳಿಗೆ ರೂ.೩೦೦೦/– ಕ್ಕಿಂತ ಕಮ್ಮಿ ವೇತನ ನೀಡುತ್ತಿತ್ತು. ಈ ಕಂಪನಿಯು ಅರ್ಥಶಾಸ್ತ್ರದ ಮೂಲಭೂತ ನಿಯಮವನ್ನು ವಿರೋಧಿಸಿ ಕೇವಲ ಪದಾರ್ಥವನ್ನು ಮಾತ್ರ ತಯಾರಿಸುತ್ತಿದ್ದು, ಅದಕ್ಕೆ ಅಗತ್ಯವಾದ ಗ್ರಾಹಕರನ್ನಲ್ಲ. ರೂ.೩೦೦೦ ವೇತನ ಗಳಿಸುವ ಕಾರ್ಮಿಕನೊಬ್ಬ ಮಾರುಕಟ್ಟೆಯನ್ನು ಪ್ರವೇಶಿಸುವುದಾದರೂ ಹೇಗೆ ?

ಈ ದೃಷ್ಟಿಯಲ್ಲಿ ಸಕಾರಾತ್ಮಕ ಕ್ರಿಯೆಗೆ ಏಕೆ ಖಾಸಗೀ ಕಂಪನಿಗಳು ಭಾರತದಲ್ಲಿ ವಿರೋಧವನ್ನು ವ್ಯಕ್ತಪಡಿಸುತ್ತಿವೆ ಎಂಬುದನ್ನು ಗಮನಿಸಬೇಕಾಗುತ್ತದೆ. ಗ್ರಾಹಕ ವ್ಯಾಪ್ತಿಯನ್ನು ಬೆಳೆಸದೆ ಈ ಉದ್ಯಮವು ತನ್ನ ದುರಂತವನ್ನು ತಾನೇ ತಂದುಕೊಳ್ಳುತ್ತಿದೆ.

ನೌಕರಿ ಎನ್ನೋದು ರಾಜ್ಯಾಂಗಕ್ಕೆ ಸೇರಿದ ಸಂಗತಿಯಾಗಿದೆ. ದೆಹಲಿಯ ಒಬ್ಬ ಸರ್ಕಾರಿ ನೌಕರನಾಗಿರುವ ಚಾಲಕ ರೂ.೭೧೦೦/–ನ್ನು ಮೊದಲ ತಿಂಗಳಲ್ಲೇ ವೇತನವಾಗಿ ಪಡೆಯುತ್ತಾನೆ. ಇದರೊಡನೆ, ಮೆಡಿಕಲ್, ವಿಮೆ, ರಜೆ, ನಿವೃತ್ತಿ ವೇತನ ಮುಂತಾದ ಭತ್ಯೆಗಳೂ ಸಹ ಸೇರಿವೆ.

ಖಾಸಗೀ ಕಂಪನಿಯಲ್ಲಿ ನೌಕರಿ ಪಡೆದಿರುವ ಯಾವುದೇ ಚಾಲಕನಿಗೂ ಈ ವೇತನ ದೊರೆಯುವುದಿಲ್ಲ. ಮುಂಬೈನಲ್ಲಿರುವ ಮೊದಲ ೫ ಖಾಸಗೀ ಕಂಪನಿಗಳು ತಮ್ಮ ಮೊದಲ ವರ್ಷದ ಕಾರ್ಮಿಕರಿಗೆ ರೂ.೧೦,೦೦೦/–ಗಳ ವೇತನ ನೀಡಲಾರರು. ಏಕೆ ಭಾರತೀಯ ಕೈಗಾರಿಕೋದ್ಯಮ ಬೆಳೆಯುತ್ತಿಲ್ಲ ಮತ್ತು ಚೈನಾ ಆ ನಿಟ್ಟಿನಲ್ಲಿ ತೀವ್ರವಾಗಿ ಬೆಳೆಯುತ್ತಿದೆ ಎಂಬ ಸತ್ಯವನ್ನು ಬೇಧಿಸುವುದಾದರೆ, "ಭಾರತೀಯ ಕೈಗಾರಿಕೆಯನ್ನು ಕುಂಠಿತಗೊಳಿಸಿರುವ ಅಪರಾಧಿ ಯಾರೆಂದರೆ ಖಾಸಗೀ ವಲಯವೇ ಆಗಿದೆ."

ಭಾರತೀಯ ಖಾಸಗೀ ಕಂಪನಿಗಳು ಬೃಹತ್ ಲಾಭ ಮಾಡಲು ಮತ್ತು ಅಧಿಕ ಮೊತ್ತವನ್ನು ತಯಾರಿಸುವ ಕಂಪನಿಗಳಾಗಿ ಬಯಸುತ್ತವೆಯೇ? ಈ ದೇಶದ ಬ್ರಾಂಡ್‌ಗಳು ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆಯುತ್ತಿಲ್ಲ ಏಕೆ? ಈ ಸೂಕ್ಷ್ಮ ಪ್ರಶ್ನೆಗಳನ್ನು ಪರಿಶೀಲಿಸಿದಲ್ಲಿ ತಿಳಿಯುವ ಸಂಗತಿಯೆಂದರೆ ಭಾರತೀಯ ಖಾಸಗಿ ವಲಯವು ದಲಿತರಿಗೆ ಮತ್ತು ಆದಿವಾಸಿಗಳಿಗೆ ಮಾರುಕಟ್ಟೆ ಪ್ರವೇಶವನ್ನು ನಿಷೇಧಿಸಿದೆ.

ದಿನವೊಂದಕ್ಕೆ ಒಂದು ಕಂಪನಿಯು ೧೦೦ ಪ್ರೆಶರ್ ಕುಕ್ಕರ್‌ಗಳನ್ನು ತಯಾರಿಸುತ್ತಿದೆಯಾದರೆ ಅದರ ಉತ್ಪಾದನಾ ವೆಚ್ಚ ರೂ.೨೦೦ (ಒಂದು ಪ್ರೆಶರ್ ಕುಕ್ಕರ್‌ಗೆ) ಗಳಾಗಬಹುದು. ಆದರೆ ೧೦೦೦ ಕುಕ್ಕರ್‌ಗಳನ್ನು ದಿನವೊಂದಕ್ಕೆ ತಯಾರಿಸುವುದಾದರೆ ಒಂದರ ಬೆಲೆ ರೂ.೧೪೮೦ಕ್ಕೆ ಇಳಿಯಬಹುದಾಗಿದೆ. ಈ ಕಡಿತದಿಂದಾಗಿ ಭಾರತೀಯ ಪ್ರೆಶರ್ ಕುಕ್ಕರ್ ಜಾಗತಿಕವಾಗಿ ಸ್ಪರ್ಧೆಗೆ ಇಳಿಯುತ್ತದೆ.

ಚೈನಾದ ಸರಕುಗಳು ತಮ್ಮ ನಾಡಲ್ಲೇ ಸಾಮೂಹಿಕ ಗ್ರಾಹಕ ಬಳಗವನ್ನು ಹೊಂದಿರುವುದರಿಂದ ಅವು ಜಗತ್ತಿನಾದ್ಯಂತ ಕಮ್ಮಿ ಬೆಳೆಯಲ್ಲಿ ಎಲ್ಲಾ ಅಂಗಡಿಗಳಲ್ಲೂ ಮಾರಾಟವಾಗುತ್ತವೆ. ಭಾರತದಲ್ಲೂ ಇದೇ ರೀತಿಯ ಗ್ರಾಹಕ ತಳಹದಿ ಇಲ್ಲವಾದ್ದರಿಂದ ೧೦೦೦ ಪ್ರೆಶರ್ ಕುಕ್ಕರ್‌ಗಳ ಉತ್ಪಾದನಾ ವೆಚ್ಚ ಇಳಿಯುವುದೇ ಇಲ್ಲ. ಭಾರತದಲ್ಲಿ ಕೇವಲ ೩೪% ರಷ್ಟು ಜನ ಮಾತ್ರ ಪ್ರೆಶರ್ ಕುಕ್ಕರ್ ಬಳಸುತ್ತಾರೆ. ಹೀಗಿರುವಲ್ಲಿ ಪ್ರೆಶರ್ ಕುಕ್ಕರ್ ಉದ್ಯಮ ಬೆಳೆಯುವುದಾದರೂ ಹೇಗೆ ?

ಭಾರತದ ೭೩೦ ಮಿಲಿಯನ್ ಗ್ರಾಮೀಣ ಜನರಲ್ಲಿ ಕೇವಲ ೩೦% ಮಾತ್ರ ಹಲ್ಲುಜ್ಜಲು ಬ್ರಶ್ ಬಳಸುತ್ತಾರೆ. ಭಾರತದ ಮೌಖಿಕ ಹಾರೈಕೆಯ ಉದ್ಯಮದ ಒಟ್ಟಾರೆ ಗಳಿಕೆ ೧೬ ಬಿಲಿಯನ್ ರೂ. ಗಳಾಗಿವೆ. (ಟೂತ್ ಪೇಸ್ಟ್ ೯.೫ ಬಿಲಿಯನ್, ಟೂತ್ ಪೌಡರ್ ೩.೯ ಮಿಲಿಯನ್ ಮತ್ತು ಬ್ರಶ್ ೨.೮ ಬಿಲ್ಲಿಯನ್ ೭೩೦ ಮಿಲಿಯನ್ ಗ್ರಾಮೀಣ ಜನ ಕೇವಲ ಬ್ರಶ್‌ನ್ನು ಬಳಸುವುದಾದರೆ ಈ ಉದ್ಯಮ ೫೩.೩೩ ಬಿಲಿಯನ್ ರೂ.ಗಳಾಗುತ್ತವೆ. ಅಂದರೆ ೩೧೨.೮ ರಷ್ಟು ಬೆಳವಣಿಗೆ !

ಗ್ರಾಹಕ ವರ್ತನೆಯಲ್ಲಿ ಒಂದು ಸಾಮಾನ್ಯ ಲಕ್ಷಣವನ್ನು ಕಾಣಬಹುದಾಗಿದೆ ಯಾರಾದರೂ ಒಂದು ಪ್ರೆಶರ್ ಕುಕ್ಕರ್ ಕೊಳ್ಳುವುದಾದರೆ ಅದರೊಡನೆ ಒಂದು ಹೆಂಚನ್ನು, ಕೆಲವು ಚಮಚಗಳನ್ನು ಕೊಳ್ಳಲಾಗುತ್ತಿದೆ. ಅಂದರೆ ಆ ಇಡೀ ಉದ್ಯಮವೇ ಬೆಳೆಯುತ್ತದೆ. ಹಾಗೆಯೇ ಒಬ್ಬ ವ್ಯಕ್ತಿ ಬ್ರಶ್ ಬಳಸುವುದಾದರೆ ಆ ವ್ಯಕ್ತಿ ಶಾಂಪೂವನ್ನೂ ಸಹ ಬಳಸುತ್ತಾನೆ. ಹಾಗೆಯೇ ಶಾಂಪೂವನ್ನು ಕೊಳ್ಳುವ ವ್ಯಕ್ತಿ ಒಂದು ಫ್ಯಾನ್ ಅಥವಾ ಕಲರ್ ಟಿ.ವಿ. ಮತ್ತು ರೆಫ್ರಿಜಿರೇಟರ್‌ಗಳನ್ನು ಬಳಸಿದ ಮಾರುಕಟ್ಟೆಯಿಂದ ಕೊಳ್ಳುತ್ತಾನೆ.

ಮಾರುಕಟ್ಟೆಗೆ ತನ್ನದೇ ಆದ ತರ್ಕವೊಂದಿದೆ. ಅದು ಗ್ರಾಹಕರನ್ನು ಉತ್ತಮ ಬದುಕನ್ನು ಬಯಸುವುದರತ್ತ ದೂಡುತ್ತದೆ. ಈ ಗ್ರಾಹಕರು ಮತ್ತು ಗ್ರಾಹಕ ಸಂಸ್ಕೃತಿ ಕೈಗಾರಿಕೋದ್ಯಮವನ್ನು ಪ್ರೇರೇಪಿಸುತ್ತದೆ. ಒಂದು ಮೌಖಿಕ ಉದ್ಯಮವು ಬೆಳೆಯುವುದಾದಲ್ಲಿ ಅದರೊಡನೆ ಹೊಸ ಕಟ್ಟಡಗಳು, ಅದಕ್ಕೆ ಅಗತ್ಯವಾದ ಸ್ಟೀಲು, ಮರದ ಸಾಮಗ್ರಿಗಳು, ವಿದ್ಯುತ್ ಉಪಕರಣಗಳು, ಟ್ರಕ್ಕುಗಳು, ಚಾಲಕರು ಇತ್ಯಾದಿ ಬೇಕಾಗುತ್ತವೆ. ಹೀಗೆ ಒಂದೊಂದು ಕೈಗಾರಿಕೆಯು ಕೂಡಾ ಮತ್ತೊಂದನ್ನು ಬೆಳೆಸುವುದರಲ್ಲಿ ಪಾತ್ರ ವಹಿಸುತ್ತದೆ. ಈ ಪ್ರತಿಕ್ರಿಯೆ ಸರಣಿಯೋಪಾದಿಯಲ್ಲಿರುತ್ತದೆ. ಈ ಬೆಳವಣಿಗೆಯು ಕೇವಲ ಕೌಶಲ್ಯಭರಿತ ಅಥವಾ ಕೌಶಲ್ಯಹೀನ ಕಾರ್ಮಿಕರನ್ನಷ್ಟೇ ಬೆಳೆಸುತ್ತದಲ್ಲದೆ ಮ್ಯಾನೇಜರ್, ಕಚೇರಿ ಸಿಬ್ಬಂದಿ, ಡೀಲರ್ಸ್, ಮಾರಾಟಗಾರರು ಮತ್ತು ಸರಬರಾಜುದಾರರನ್ನು ಬೆಳೆಸುತ್ತದೆ. ಹೀಗಾದಾಗ ನೂರಾರು ಮಂದಿ ಚಾರ್ಟರ್ಡ್ ಅಕೌಂಟೆಂಟ್‌ಗಳು ವಹಿವಾಟನ್ನು ಲೆಕ್ಕಾಚಾರ ಮಾಡಲು ಬೇಕಾಗುತ್ತಾರೆ. ಆದರೆ ಇದಕ್ಕೆಲ್ಲ ಅಗತ್ಯವಾಗಿ ಆಂತರಿಕ ಗ್ರಾಹಕ ಸಮೂಹದ ಆಧಾರವೊಂದು ಬೇಕಾಗುತ್ತದೆ.

ಕೊರಿಯರ್ ಕಂಪನಿಗಳು ತಮ್ಮರವಾನೆದಾರರಿಗೆ ಎಷ್ಟು ವೇತನವನ್ನು ಪಾವತಿಸುತ್ತಿದೆ. ಕಳೆದ ತಿಂಗಳು ನನ್ನ ಮನೆಗೆ ಬಂದ ಪ್ರತಿಯೊಬ್ಬ ಕೊರಿಯರ್ ವ್ಯಕ್ತಿಯನ್ನು ಒಳಗೆ ಕರೆದು ಆತನಿಗೆ ತಂಪಾದ ಪಾನೀಯವನ್ನು ನೀತಿ ಸಂದರ್ಶನ ನಡೆಸಿದ್ದೆ. ಅವರಲ್ಲಿ ಅನೇಕರಿಗೆ ಸಿಗುವ ವೇತನವೆಂದರೆ ರೂ.೧೫೦೦ ದಿಂದ ೨೫೦೦ ರೂ. ಆಗಿದೆ. ಅದರಲ್ಲಿ ಒಬ್ಬನ ವಿಶೇಷವೆಂದರೆ ಹಬ್ಬದ ದಿನಗಳಲ್ಲಿ ಆತ ಒಂದು ಪ್ಯಾಕೆಟ್ಟಿಗೆ ೧ ರೂ.ವನ್ನು ವಿಶೇಷವಾಗಿ ಪಡೆಯುತ್ತಾನಲ್ಲದೆ ಆತನ ಮಾಸಿಕ ವೇತನ ೩,೫೦೦ ರೂ. ಆಗಿತ್ತು. ದೆಹಲಿಯ ನಗರದಲ್ಲಿ ೩,೫೦೦ ರೂ. ತಿಂಗಳೊಂದಕ್ಕೆ ಏನೇನೂ ಸಾಲದು. ಹೀಗಿರುವಲ್ಲಿ ಒಬ್ಬ ವ್ಯಕ್ತಿ ಗ್ರಾಹಕನಾಗಲು ಸಾಧ್ಯವೇ ಇಲ್ಲ. ಆತ ಒಂದು ಟಿ.ವಿ., ರೆಫ್ರಿಜರೇಟರನ್ನು ಕೊಳ್ಳಲಾಗದು ಮತ್ತು ತನ್ನ ಮಕ್ಕಳನ್ನು ಶಾಲೆಗೆ ಕಳಿಸಲಾಗದು. ಇದಕ್ಕೆ ತದ್ವಿರುದ್ಧವಾಗಿ ಅಂಚೆ ಇಲಾಖೆಯಲ್ಲಿ ಜುಲೈ ೧, ೨೦೦೫ ರಂದು ಕೆಲಸಕ್ಕೆ ಸೇರಿಕೊಂಡ ನೌಕರನೊಬ್ಬ ಆಗಸ್ಟ್ ತಿಂಗಳ ಮೊದಲನೆಯ ದಿನ ೬,೦೬೨ ರೂ.ಗಳನ್ನು ವೇತನವಾಗಿ ಪಡೆಯುತ್ತಾನೆ. ಈತನಿಗೆ ವಾರ್ಷಿಕ ಭತ್ಯೆಗಳು ಇದ್ದು, ನಿವೃತ್ತಿ ವೇತನವೂ ಸಹ ಇರುತ್ತದೆ. ಈ ವೇತನದಿಂದಾಗಿ ಆತ ಮಾರುಕಟ್ಟೆಯನ್ನು ಪ್ರವೇಶಿಸುತ್ತಾನೆ. ಆದರೆ ಖಾಸಗಿ ವಲಯದಲ್ಲಿರುವ ನೌಕರರು ಅಲ್ಪಸಂಖ್ಯಾತರಗಿದ್ದು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಅಧಿಕ ವೇತನವನ್ನು ಪಡೆಯುತ್ತಾ, ಅವನ್ನು ಮಾತ್ರ ಬೆಳೆಸುತ್ತಾರಲ್ಲದೆ ಭಾರತೀಯ ಕೈಗಾರಿಕೆಯನ್ನಲ್ಲ.

ಭಾರತೀಯ ಸಮಸ್ಯೆ ಎಂದರೆ ದಲಿತರ ಸಮಸ್ಯೆಯಲ್ಲದೆ ತನ್ನದೇ ಆದ ನಿಗಮ ವಲಯವನ್ನು ಹೊಂದಿಲ್ಲದೆ ಇರುವುದು.

ಕಾರ್ಮಿಕನೊಬ್ಬನಿಗೆ ಕಂಪೆನಿಯು ೨.೫೦೦ ರೂ ತಿಂಗಳ ವೇತನ ನೀಡುವುದಾದರೆ, ಈ ಪ್ರಕ್ರಿಯೆಯಲ್ಲಿ ಅದು ೩,೦೦೦ ರೂ.ಗಳನ್ನು ಉಳಿಸುತ್ತದೆ. ಇದೇ ಕಾರ್ಮಿಕನಿಗೆ ೪,೦೦೦ ರೂ.ಗಳನ್ನು ಪಾವತಿಸುವುದಾದರ ಆತ ಗ್ರಾಹಕ ವಲಯವನ್ನು ಬೆಳೆಸುವಲ್ಲಿ ಭಾಗವಹಿಸುತ್ತಾನೆ.

೧೫ ಕಾರ್ಮಿಕರನ್ನು ಒಳಗೊಂಡ ಕಂಪೆನಿಯ ಲಾಭವು ರೂ.೧೫,೦೦೦ಕ್ಕೆ ಇಳಿಯುತ್ತದೆಂದು ಭಾವಿಸೋಣ. ಈ ಕಂಪೆನಿಯು ೧೦೦ ಕಾರ್ಮಿಕರನ್ನು ಇಟ್ಟುಕೊಂಡಲ್ಲಿ ಏನಾಗುತ್ತದೆ. ತಿಂಗಳೊಂದಕ್ಕೆ ಅದು ೧.೫ ಲಕ್ಷ ಲಾಭವನ್ನು ಪಡೆಯಬಹುದು. ಆದರೆ ಗ್ರಾಹಕ ಸಮೂಹವಿಲ್ಲದಿದ್ದಲ್ಲಿ ಈ ಕೈಗಾರಿಕೆಯು ಕೇವಲ ೧೦ ಜನ ಕಾರ್ಮಿಕರನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ತನ್ನ ಕಾರ್ಮಿಕರಿಗಾಗಿ ಹೆನ್ರಿಪೋರ್ಡ್ ಒಂದು ಯೋಜನೆಯನ್ನು ತಯಾರಿಸಿದ್ದ.

ಒಬ್ಬ ಉದ್ಯಮಿಯ ಆದರ್ಶವೆಂದರೆ ತನ್ನ ಕಾರ್ಮಿಕರು ಉತ್ತಮವಾಗಿ ಬಟ್ಟೆ ಧರಿಸಿ ಖುಷಿಯಿಂದಿರುವುದನ್ನು ನೋಡಬೇಕು. ಖಾಸಗಿ ವಲಯವು ದಲಿತರು/ಆದಿವಾಸಿಗಳನ್ನು ದೊಡ್ಡ ಸಂಖ್ಯೆಯಲ್ಲಿ ನೌಕರಿಗೆ ತೆಗೆದುಕೊಳ್ಳುವ ಮೂಲಕ ತನ್ನ ಲಾಭವನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ಇದು ಇಂದಿಗೂ ಸಾಧ್ಯವಾಗಿಲ್ಲ. ಅಂದರೆ ಈ ದೇಶವೂ ಸಹ ಸಂಕಷ್ಟಕ್ಕೊಳಗಾಗಿದೆ. ಹಾಗೆಯೇ ದಲಿತರು ಮತ್ತು ಆದಿವಾಸಿಗಳು. ಮುಕ್ತ ಆರ್ಥಿಕತೆ, ಮುಚ್ಚಿದ ಮನಸ್ಸುಗಳು ಇದೆಂಥ ದ್ವಂದ್ವ?

ಭಾರತದಲ್ಲಿ ಬೌದ್ಧಧರ್ಮವನ್ನು ಪುನರುಜ್ಜೀವನಗೊಳಿಸಿದ್ದು ಜಾಗತಿಕವಾಗಿ ಗೊತ್ತಿರುವಂತೆ ಡಾ.ಬಿ.ಆರ್. ಅಂಬೇಡ್ಕರ್ ತನ್ನ "ಬುದ್ಧ ಮತ್ತು ಆತನ ಧರ್ಮ" ಕೃತಿಯಲ್ಲಿ ಅಂಬೇಡ್ಕರವರು ಹೀಗೆ ಬರೆದಿದ್ದಾರೆ. "ಜಗತ್ತಿನಲ್ಲಿ ಧರ್ಮಗಳನ್ನು ಸ್ಥಾಪಿಸಿದ ಮಹಾನುಭಾವರಲ್ಲಿ ಬೌದ್ಧಧರ್ಮದ ಸ್ಥಾಪಕ ಒಂದು ವಿಚಿತ್ರವಾದ ಸಮಸ್ಯೆಯನ್ನು ಮಂಡಿಸುತ್ತಾನೆ. ಇದು ದ್ವಂದ್ವಾರ್ಥಕಾರಿಯಾಗಿದೆ ಎಂದರೆ ಉತ್ಪ್ರೇಕ್ಷೆಯೇನಲ್ಲ."

ಅಂಬೇಡ್ಕರವರು ಬುದ್ಧನ ತ್ಯಾಗ ಅಥವಾ ಪಾರಿವ್ರಜ ಸಿದ್ಧಾಂತವನ್ನು ಪ್ರಶ್ನಿಸುತ್ತಾರೆ. ಅಂಬೇಡ್ಕರವರ ಪ್ರಕಾರ,ಬುದ್ಧ ಒಂದು ಸಾವು, ಒಬ್ಬ ರೋಗಿಷ್ಠ ಮತ್ತು ಮುದಿಪ್ರಾಯದ ವ್ಯಕ್ತಿಯನ್ನು ನೋಡಿ ಪಾರಿವ್ರಜವನ್ನು ಕೈಗೊಂಡನೆಂದು ಸಾಂಪ್ರದಾಯಿಕರಾಗಿ ಉತ್ತರಿಸಲಾಗುತ್ತದೆ. ಇದು ಅಸಂಬದ್ಧವಾದುದು ಅಂಬೇಡ್ಕರ್‌ರವರ ಪ್ರಕಾರ, 'ಬುದ್ಧ ತನ್ನ ೨೯ನೇ ವಯಸ್ಸಿಗೆ ಬರುವ ಕೂಡಲೇ ಸಾವು, ರೋಗಿಷ್ಠ ಜನ, ಮುದುಕರನ್ನು ಗಮನಿಸಿದ್ದಾನೆ. ಹಾಗಾದರೆ ಆತನ ತ್ಯಾಗಕ್ಕೂ ನಿಜವಾದ ಕಾರಣವೇನು ಎಂಬುದಕ್ಕೂ ಒಂದು ಹೊಳಹನ್ನು ನೀಡುತ್ತಾರೆ.

ಸಮಾಕಾಲೀನ ಭಾರತದಲ್ಲಿ ದಲಿತರು ಒಂದು ಬೃಹತ್ ಬದಲಾವಣೆಯನ್ನು ಕಾಣುತ್ತಿದ್ದಾರೆ. ವಿದ್ಯಾವಂತ ದಲಿತರು, ಅಂಬೇಡ್ಕರ್‌ರವರ ನಿಜವಾದ ಹಿಂಬಾಲಕರಾಗಿ,

ಗಳೇನು? ಆ ಕೃತಿಯಲ್ಲಿ ಕಾರಣ ವಿವರಿಸಿರುವುದು: 'ಯುದ್ಧ ಮತ್ತು ಶಾಂತಿ'.

ಬುದ್ಧನು ಹುಟ್ಟಿದ್ದು ಸಾಕ್ಯರ ಗಣರಾಜ್ಯದಲ್ಲಿ. ಈ ಸಾಕ್ಯರ ಗಣರಾಜ್ಯವು ಒಂದು ಪ್ರಜಾಸತಾತ್ತ್ವಕ ವ್ಯವಸ್ಥೆಯನ್ನು ಹೊಂದಿದ್ದು ಅದನ್ನು ಹಲವಾರು ಪಂಗಡಗಳು ಮುನ್ನಡೆಸುತ್ತಿದ್ದವು ಅಂದು ಸಾಕ್ಯಜನ ಬಂದು ಸಂಘ ಅಥಾವಾ ಒಕ್ಕೂಟದ ಮಾದರಿಯಲ್ಲಿ ರಾಜನಿಗೆ ನಿರ್ಧಾರ ಕೈಗೊಳ್ಳಲು ನೆರವಾಗುತ್ತಿದ್ದರು. ಈ ಒಕ್ಕೂಟವು ಅಂತಿಮ ನಿರ್ಧಾರದ ಮಂಡಲಿಯಾಗಿತ್ತು. ಸಾಕ್ಯ ಗಣರಾಜ್ಯವು ರೋಹಿಣಿ ನದಿ ದಂಡೆಯ ಮೇಲೆ ಸ್ಥಾಪಿತವಾಗಿದ್ದು ಮತ್ತೊಂದು ಬದಿಯಲ್ಲಿ ವೈರಿಗಳಾದ ಕೋಲಿಗಳ ಗಣರಾಜ್ಯವಿತ್ತು. ಈ ಗಣರಾಜ್ಯಗಳ ನಾಗರೀಕರು ತಮ್ಮ ಬೇಸಾಯಕ್ಕಾಗಿ ರೋಹಿಣಿ ನದಿಯನ್ನೇ ಅವಲಂಭಿಸಿದ್ದರು. ನಮ್ಮ ರಾಜ್ಯ ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಎದುರಿಸುತ್ತಿರುವ ಸಮಸ್ಯೆಯಂತೆಯೇ ಆಗ ರೋಹಿಣಿ ನದಿ ನೀರಿಗಾಗಿ ಜಗಳ ನಡಿಯುತ್ತಿತ್ತು. ಅದರಲ್ಲಿ ಬರಗಾಲ ಮತ್ತು ಕ್ಷಾಮ ಬಂದಾಗಲಂತೂ ನೀರಿಗಾಗಿ ರಕ್ತದ ಕೋಡಿಯೇ ಆ ಎರಡು ಗಣರಾಜ್ಯಗಳ ನಡುವೆ ಹರಿಯುತ್ತಿತ್ತು.

ಅಂಥದ್ದೊಂದು ಸನ್ನಿವೇಶವು ಆ ಗಣರಾಜ್ಯಗಳ ನಡುವೆ ಸೃಷ್ಟಿಯಾಯ್ತು. ಕೋಲಿಸಾ ಜನಕ್ಕೆ ಪಾಠ ಕಲಿಸಲು ಸೌಕ್ಯ ಒಕ್ಕೂಟವು ನಿರ್ಧರಿಸುತ್ತದೆ. ಸಿದ್ಧಾರ್ಥ ಗೌತಮನು ಈ ಗಣರಾಜ್ಯಗಳ ಮುಖ್ಯಸ್ಥರ ನಡುವೆ ಸಂಧಾನಕಾರನಾಗಿ ಯುದ್ಧ ಬೇಡವೆಂದು ಕೋರುತ್ತಾನೆ. ಒಕ್ಕೂಟಗಳೆರಡು ಯುದ್ಧಕ್ಕಾಗಿ ನವರೆಸುತ್ತಿದ್ದವು. ಸೈನ್ಯದ ಮುಖ್ಯಸ್ಥ ಸಿದ್ಧಾರ್ಥನಿಗೆ ತನ್ನ ಕ್ಷಾತ್ರಿಯ ನೀತಿಯನ್ನು ನೆನಪಿಸಿದರೂ ಸಹ, ಸಿದ್ಧಾರ್ಥನು ಶಾಂತಿಯ ಪಟ್ಟನ್ನು ಸಡಿಲಿಸಲಿಲ್ಲ. ಅದರ ಬದಲು ಸಂಧಾನಕ್ಕಾಗಿ ಆತ ಬಯಸಿದ್ದ.

ಒಂದೆಡೆ ಯುದ್ಧಕ್ಕಾಗಿ ನಿಂತರೆ ಮತ್ತೊಂದೆಡೆ ಶಾಂತಿಗಾಗಿ ಬದ್ಧತೆ ವ್ಯಕ್ತವಾಗಿತ್ತು. ತನ್ನ ಶಾಂತಿಯ

ನಿಜವಾದ ಬುದ್ಧ

ಬೌದ್ಧ ಧರ್ಮವನ್ನು ಸ್ವೀಕರಿಸುತ್ತಿದ್ದಾರೆ. ಈ ಮೂಲಕ ಒಂದು ವಿದ್ಯಾವಂತ ಪರಂಪರೆಯೇ ಏರ್ಪಡುತ್ತದೆ. ಬೌದ್ಧ ಧರ್ಮದ ಕುರಿತ ಸಂಶೋಧನೆ ಮತ್ತು ಬರವಣಿಗೆಗಳು ಇಂದು ಒಂದು ವಿದ್ಯ ಮಾನವಾಗಿ ಬೆಳೆಯುತ್ತಿದೆ. ಹೀಗಿರುವಲ್ಲಿ ಆನಂದ್, ಶ್ರೀಕೃಷ್ಣ ಎನ್ನೋ ಸಿವಿಲ್‌ಸರ್ವೆಂಟ್ ಬೌದ್ಧ ಧಮ್ಮದ ಬಗ್ಗೆ ನಿಜವಾದ ವಿದ್ವಾಂಸರಾಗಿ ಹೊರಹೊಮ್ಮಿದ್ದಾರೆ. ಅವರ ಇತ್ತೀಚಿನ ಕೃತಿ, 'ಗೌತಮ ಬುದ್ಧ ಮತ್ತು ಆತನ ಉಪದೇಶ' ದೆಹಲಿಯಲ್ಲಿ ಜುಲೈ ೭ರಂದು ಪ್ರಕಟವಾಯಿತು.

ಅಂಬೇಡ್ಕರವರನ್ನು ಅನುಸರಿಸುತ್ತಾ ಆನಂದ್, ಶ್ರೀಕೃಷ್ಣ,ಬುದ್ಧನ ಪಾರಿವ್ರಜದ ಬಗ್ಗೆ ವಿವರವಾದ ಸಂಗತಿಗಳನ್ನು ನೀಡುತ್ತಾರೆ. ಮೊದಲನೆಯದಾಗಿ, ಬುದ್ಧ ಪ್ರಾಪಂಚಿಕ ಬದುಕನ್ನು ತ್ಯಾಗಮಾಡಿದಾಗ ಆತನ ತಂದೆ ಮತ್ತು ಚಿಕ್ಕಮ್ಮ ೭೦ ವರ್ಷ ವಯಸ್ಸಿನವರಾಗಿದ್ದರು. ಹಾಗಾಗಿ ಬುದ್ಧ ಮುದಿ ಪ್ರಾಯದವರನ್ನು ಈ ಹಿಂದೆ ನೋಡಿರಲಿಲ್ಲ ಎನ್ನೋದು ಸರಿಯಲ್ಲ, ಹಾಗೆಯೇ ಆತ ತನ್ನ ೨೯ನೇ ವಯಸ್ಸಿಗೆ ಒಂದು ಸಾವು, ರೋಗಸ್ಥ ವ್ಯಕ್ತಿಯನ್ನು ನೋಡಿರಲಿಲ್ಲ ಅನ್ನುವುದು ಸಹ ಅಸಂಗತವಾದುದು. ಹಾಗಾದರೆ ಆತನ ತ್ಯಾಗಕ್ಕೆ ತಕ್ಷಣದ ಕಾರಣ

ನಿಲುವಿಗಾಗಿ ಸಿದ್ಧರ್ಥ ಬೆಲೆಯನ್ನು ತೆರಬೇಕಾಯ್ತು. ಸೌಕ್ಯ ಪರಂಪರೆಗೆ ಪೂರಕವಾಗಿ ಆತ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗುತ್ತಾನೆ. ಏಕೆಂದರೆ ಒಕ್ಕೂಟದ ಬಹು ಮತ ಈತನ ವಿರುದ್ಧ ಇತ್ತು. ಈ ಪ್ರಶ್ನೆಗೆ ತಾನೇ ಹೊಣೆ ಹೊತ್ತು ಪಾರಿವ್ರಜವನ್ನು ಸ್ವೀಕರಿಸುತ್ತಾನೆ.

ಈ ಪಾರಿವ್ರಜವನ್ನು ಸ್ವೀಕರಿಸುವಾಗ ಆತನ ತಂದೆ ಶುದ್ದೋಧನ ಮತ್ತು ತಾಯಿ ಗೌತಮಿಯರ ನಡುವೆ ನಡೆಯುವ ಸಂಭಾಷಣೆಯನ್ನು ಕೃತಿ ಅದ್ಭುತವಾಗಿ ದಾಖಲಿಸುತ್ತದೆ.

ಈ ಸಂವಾದ ತೋರಿಸುವಂತೆ ೨೯ನೇ ವಯಸ್ಸಿಗೆ ಸಿದ್ಧಾರ್ಥನು ಶಾಂತಿ ಸಿದ್ಧಾಂತವನ್ನು ಅರಿತವನಾಗಿದ್ದ. ತನ ಕಾಳಜಿ ಕೇವಲ ತನ್ನ ಕುಟುಂಬ, ಸಾಕ್ಯ ಬಳಗ ಅಥಾವಾ ಕೋಲಿಗಳಿಗೆ ಮಾತ್ರವಿರದೆ ಇಡೀ ಮಾನವ ಕುಲಕ್ಕೆ ವ್ಯಾಪಿಸಿತ್ತು. ರೋಹಿಣಿ ನದಿಯ ವಿವಾದ ಕೇವಲ ಒಂದು ಘಟನೆಯಾಗಿತ್ತಷ್ಟೆ ಆನಂದ್ ಕೃಷ್ಣ ಈ ಕೃತಿಯೊಂದಿಗೆ ನಿಜ ಅಂಬೇಡ್ಕರ್ ಶೈಲಿಯಲ್ಲೇ ಬುದ್ಧನನ್ನು ಮತ್ತಷ್ಟು ಪ್ರೀತಿಪೂರ್ವಕವಾಗಿ ಚಿತ್ರಿಸಿದ್ದಾರೆ.

ರಾಜ್‌ಕುಮರ್‌ನಿಂದ ಪ್ರಕಟವಾಗಿರುವ ಈ ಕೃತಿಯ ಬೆಲೆ ರೂ.೨೫೦/- □

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಪಸೇನದಿ ಪ್ರಶ್ನಿಸಿದ ಸಾಧ್ವಿ ಖೇಮಾಳಿಗೆ; ಸಾವಿನ ಬಳಿಕ ಏನು ?!

ಬುದ್ಧಾಯಣ

೧

ಜನಕ್ಕೇ ಬೆಳಕಾದ ಬುದ್ಧನ ಕಥೆಗಳು ಅಪಾರ. ಬುದ್ಧ ತನ್ನ ಪ್ರವಾಸದ ಕಾಲದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಅವರಿಗೆ ಮಾರ್ಗದರ್ಶನ ಮಾಡಲು ಕಥೆಗಳನ್ನು ಹೇಳುತ್ತಿದ್ದ. ಇದು ಜನರನ್ನು ತಿದ್ದಲು ಅತ್ಯಂತ ಸಮರ್ಥ ಮಾರ್ಗವೆಂದೇ ಇಂದಿಗೂ ಜನ ತಿಳಿದಿದ್ದಾರೆ. ಬುದ್ಧ ಹೇಳಿದ ಇಂಥ ನೂರಾರು ಕಥೆಗಳು ಇಂದು ವಿವಿಧ ರೂಪದಲ್ಲಿ ಲಭ್ಯವಿದೆ. ಸಿ.ಎಚ್. ರಾಜಶೇಖರ್ ಅಂಥ ಹಲವು ಕಥೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು 'ಸಂವಾದ' ಓದುಗರಿಗಾಗಿ ನೀಡುತ್ತಿದ್ದೇವೆ.

○ಸಿ.ಎಚ್.ರಾಜಶೇಖರ್

ಕೋಸಲದ ದೊರೆ ಪಸೇನದಿಗೆ ಕಾಡಿದ ಪ್ರಶ್ನೆಗಳೆಂದರೆ, ಮನುಷ್ಯನ ಮರಣದ ಬಳಿಕ ಏನು? ಏನಾಗುತ್ತಾನೆ? ಎಲ್ಲಿಗೆ ಹೋಗುತ್ತಾನೆ? ದೇಹವು ಜಡವಾದಂತೆ, ಆತ್ಮವೂ ಜಡವಾಗುತ್ತದೆಯೇ ಅಥವಾ ಆತ್ಮಕ್ಕೆ ಪ್ರತ್ಯೇಕ ಜೀವವಿದ್ದು ಅದು ಜಡ ದೇಹದಿಂದ ಪ್ರತ್ಯೇಕಗೊಳ್ಳುತ್ತದೆಯೇ? ಹಾಗೆ ಪ್ರತ್ಯೇಕಗೊಂಡ ಆತ್ಮವು ಎಲ್ಲಿಗೆ ಹೋಗುತ್ತದೆ? ಪರಮಾತ್ಮನ ಬಳಿಗೆ? ಸಾಮಾನ್ಯರ ಕಥೆ ಹಾಗಿರಲಿ. ತಥಾಗತನಾದ ನನ್ನ ಪ್ರಿಯ ಗುರು ಬುದ್ಧ ಕೂಡ ಮರಣಕ್ಕೆ ತುತ್ತಾಗುತ್ತಾನೆಯೆ? ಜ್ಞಾನೋದಯಗೊಂಡ ಆ ಮಹಾತ್ಮನನ್ನು ಸಾವು ಆವರಿಸುತ್ತದೆಯೇ? ಆತ ಸಾವನ್ನು ಗೆದಿಯಲಾರನೇ? ಒಂದು ಪಕ್ಷ ಆತ ಸತ್ತರೆ ಎಲ್ಲಿಗೆ ಹೋಗುತ್ತಾನೆ? ಅಥವಾ ಸತ್ತ ನಂತರವೂ ಆ ಪೂಜ್ಯ ಬದುಕಿರುತ್ತಾನೆಯೇ?

ಪುರ್ನಜನ್ಮ ಎಂದರೆ ಏನು? ಯಾವುದರ ಪುರ್ನಜನ್ಮ? ಸಾವಿನ ನಂತರ ಮನುಷ್ಯ ಮತ್ತೆ ಹುಟ್ಟುತ್ತಾನೆಯೆ? ಹುಟ್ಟಿದರೆ ಸತ್ತವನೇ ಮತ್ತೆ ಹುಟ್ಟುತ್ತಾನೆಯೆ? ಅಥವಾ ಬೇರೊಬ್ಬ ಹುಟ್ಟುತ್ತಾನೆಯ? ಬೇರೊಬ್ಬ ಹುಟ್ಟುವುದಾದರೆ ಅದನ್ನು ಪುರ್ನಜನ್ಮ ಎಂದು ಹೇಗೆ ಕರೆಯಲು ಸಾಧ್ಯ? ಸತ್ತ ನಂತರದ ಮನುಷ್ಯನ ಮೊದಲ ಮೂಲ ದ್ರವ್ಯಗಳೇ ಒಂದಾಗಿ ತದ್ರೂಪಿ ದೇಹವನ್ನು ಪುನರ್ ನಿರ್ಮಿಸುವುದು ಸಾಧ್ಯವೆ? ಒಂದು ಪಕ್ಷ ಹಾಗೆ ಹುಟ್ಟಿದ ಮನುಷ್ಯನಿಗೆ ಮೊದಲ ಚಿತ್ತವೃತ್ತಿ ಕುಶಲತೆ, ಒಳ್ಳೆಯ ಅಥವಾ ಕೆಟ್ಟ ಗುಣಗಳು ಪುರ್ನಾರಾವರ್ತನೆಗೊಳ್ಳಲು ಸಾಧ್ಯವೆ? ಇಂಥಹ ನೂರಾರು ದ್ವಂದ್ವಗಳು ಅವನಲ್ಲಿ ಮನೆ ಮಾಡಿ ತಲ್ಲಣಿಸುತ್ತಿದ್ದವು.

ತನ್ನ ಧ್ವಂಧ್ವಗಳಿಗೆಲ್ಲ ಸರಿ ಉತ್ತರ ನೀಡಬಲ್ಲ ಒಬ್ಬನಿದ್ದರೆ ಆತನೇ ಗೌತಮಬುದ್ಧ ಎಂಬ ಸ್ವಷ್ಟ ಅರಿವು ಕೂಡ ಆತನಲ್ಲಿತ್ತು. ಆದರೆ ಇತ್ತೀಚಿನ ರಾಜಕಾರಣದ ಜಂಜಾಟದಲ್ಲಿ ದೇಶದ ಎಲ್ಲೆಡೆ ಅಲೆಯುತ್ತಿದ್ದ. ಇಂತಹ ಒಂದು ಸಂದರ್ಭದಲ್ಲಿ ದೊರೆ ಪಸೇನದಿಯೂ ಸಾಕೇತದಿಂದ ಶ್ರಾವಸ್ತಿಯ ಕಡೆ ಪಯಣ ಬೆಳೆಸಿದ್ದ. ಮಾರ್ಗ ಮಧ್ಯೆಯ ತೋರಣವತ್ತುವಿನಲ್ಲಿ ಆತನು ಒಂದು ರಾತ್ರಿ ತಂಗುವ ಅಪೇಕ್ಷೆ ಪಟ್ಟ, ರಾಜ ಪರಿವಾರದವರು ಇದಕ್ಕೆ ಎಲ್ಲಾ ಸಿದ್ಧತೆಯನ್ನು ಮಾಡಿದರು. ಅಂದು ರಾತ್ರಿ ಯಾರಾದರು ಒಬ್ಬ ಸಂನ್ಯಾಸಿ ಅಥವಾ ಬ್ರಾಹ್ಮಣನೊಂದಿಗೆ ಕಾಲಕ್ಷೇಪ ಮಾಡಬೇಕೆಂಬ ಬಯಕೆ ಉಂಟಾಯಿತು. ತನ್ನ ಆಸ್ಥಾನದ ಪಂಡಿತನೊಬ್ಬನನ್ನು ಕರೆದು;

'ಎಲೈ ಗುಣವಂತನೇ, ಇಲ್ಲಿ ಬಾ. ಈ ದಿನ ನಾನು ಕಾಲಕ್ಷೇಪ ಮಾಡಲು ನೆರವಾಗುವ ಒಬ್ಬ ಯೋಗ್ಯ ಸನ್ಯಾಸಿ ಅಥವಾ ಬ್ರಾಹ್ಮಣನನ್ನು ಹುಡುಕು' ಎಂದ. ಅದಕ್ಕೆ ಉತ್ತರವಾಗಿ ಆ ಪಂಡಿತನು;

'ಹಾಗೇ ಆಗಲಿ ಪ್ರಭುವೇ...!' ಎಂದ. ಆ ಪಂಡಿತ ತೋರಣವತ್ತುವನ್ನೆಲ್ಲಾ ಸುತ್ತಿದ್ದ. ಆದರೆ ದೊರೆಗೆ ಯೋಗ್ಯನಾದ, ದೊರೆಯ ಜ್ಞಾನದಾಹಕ್ಕೆ ಸರಿಯಾಗಿ ಉತ್ತರಿಸಬಲ್ಲ ಯಾರೂ ಸಿಗಲಿಲ್ಲ. ಆದರೆ ಆಕಸ್ಮಿಕವಾಗಿ ಅದೇ ಸಂದರ್ಭದಲ್ಲಿ ತೋರಣವತ್ತುವಿನಲ್ಲಿ ಬುದ್ಧನ ಪರಮ ಭಿಕ್ಷುಣಿ ಆದ ಸಾಧ್ವಿ ಖೇಮಾಳು ತಂಗಿದ್ದಳು. ಈ ವಿಷಯ ದಿಂದ ಸಂತೋಷಗೊಂಡ ಆ ಪಂಡಿತನು ದೊರೆಯ ಬಳಿ ಬಂದು;

'ಮಹಾಪ್ರಭು, ತಮ್ಮ ಯೋಗ್ಯತೆಗೆ ಸರಿಸಮನಾದ ಯಾವ ಬ್ರಾಹ್ಮಣನಾಗಲಿ, ಸನ್ಯಾಸಿ ಆಗಲಿ ಈ ಆಸುಪಾಸಿನಲ್ಲಿ ಇಲ್ಲ. ಆಕಸ್ಮಿಕವಾಗಿ ಸಾಧ್ವಿ ಖೇಮಾಳು ಇದೇ ಊರಿನಲ್ಲಿ ತಂಗಿದ್ದಾರೆ. ಆಕೆ ಬುದ್ಧನ ಪರಮ ಶಿಷ್ಯೆ. ಉತ್ತಮ ಜ್ಞಾನಿ. ಸುಸಂಸ್ಕೃತೆ ಅಪಾರ ಪರಿಜ್ಞಾನವುಳ್ಳವಳು. ವಿಸ್ತ್ರತ ವಿದ್ಯಾಸಂಪನ್ನೆ ಯಶಸ್ವೀ ವಾಚಾಳಿಯಾದ ಈಕೆ ದೇಶ ವಿದೇಶಗಳಲ್ಲಿ ಪ್ರಖ್ಯಾತಳು ಮತ್ತು ಸ್ಥಿತಪ್ರಜ್ಞೆಯುಳ್ಳವಳು' ಎಂದ.

ಈ ಶುಭ ಸಮಾಚಾರದಿಂದ ಸಂತೋಷಗೊಂಡ ದೊರೆ ಪಸೇನದಿಯು ಸಾಧ್ವಿ ಖೇಮಾಳನ್ನು ಭೇಟಿ ಮಾಡಲು ಹೊರಟ. ಆಕೆಯನ್ನು ಸಂಧಿಸಿ ನಮಸ್ಕರಿಸಿ ಒಂದು ಪಕ್ಕದಲ್ಲಿ ಕುಳಿತು ಉಭಯ ಕುಶಲೋಪರಿಯನ್ನು ವಿಚಾರಿಸಿದ ನಂತರ, ತಾನು ಬಂದ ವಿಷಯ, ತನ್ನನ್ನು ಕಾಡುತ್ತಿರುವ ಪ್ರಶ್ನೆ ಮತ್ತು ಸಂಶಯಗಳನ್ನು ತಿಳಿಸಿದ. ಆಕೆಯನ್ನು ಕುರಿತು ಹೀಗೆ ಪ್ರಶ್ನಿಸಿದ 'ಪೂಜ್ಯಳೇ, ಮರಣದ ನಂತರ ಏನು ? ತಥಾಗತನು ಮರಣದ ನಂತರವೂ ಉಳಿದಿರುತ್ತಾನೆಯೇ?'

'ಎಲೈ ದೊರೆಯೇ, ಮಾಹಮಹಿಮನು ಆ ಬಗ್ಗೆ ಏನನ್ನೂ ವ್ಯಕ್ತಪಡಿಸಿಲ್ಲ.

'ಪೂಜ್ಯಳೇ, ಮರಣದ ನಂತರ ಏನು? ಇದಕ್ಕೆ ಕಾರಣವೇನು? ಮಹಾಮಹಿಮನು ಈ ವಿಚಾರವನ್ನು ಏಕೆ ಪ್ರಕಟಿಸಿಲ್ಲ?'

'ಎಲೈ ದೊರೆಯೇ, ಮೊದಲೇ ಗೊಂದಲಗೊಂಡ ಮನುಕುಲವನ್ನು ಮತ್ತೂ ಗೊಂದಲಗೊಳಿಸುವುದು ಥರವೆ? ಪಾರಮಾರ್ಥಿಕ ಎಂಬುದು ಬೌದ್ಧಿಕ ಅನುಭವಕ್ಕೆ, ಅನುಭಾವಕ್ಕೆ ನಿಲುಕದ ವಿಷಯ. ಊಹೆಯನ್ನು, ಕಲ್ಪನೆಯನ್ನು, ಕನಸನ್ನು, ಕೃತ್ರಿಮವನ್ನು ನೆಚ್ಚಿ ನಡೆಯುವುದು, ಪ್ರಕಟಿಸಿ ಮೆರೆಯುವುದು ಗೊಂದಲವನ್ನು, ಧ್ವಂಧ್ವವನ್ನು ಹೆಚ್ಚಿಸಿದಂತಲ್ಲವೆ? ಆ ಮೂಲಕ ಧರ್ಮದ ಮುದ್ರೆ ಒತ್ತಿದ್ದೇ ಆದರೆ, ಶೋಷಣೆಗೆ ಪುಷ್ಠಿಕೊಟ್ಟಂತೆ ಅಲ್ಲವೆ?!'

'ಎಲೈ ದೊರೆಯೇ, ನಿನಗೊಂದು ಪ್ರಶ್ನೆಯನ್ನು ಕೇಳುತ್ತೇನೆಃ ಗಂಗಾನದಿಯಲ್ಲಿರುವ ಅಸಂಖ್ಯಾತ ಮರಳಿನ ಕಣಗಳನ್ನು ಎಷ್ಟೆಂದು ಹೇಳಬಲ್ಲೆಯ? ಒಬ್ಬ ಅಥವಾ ಅಸಂಖ್ಯಾತ ಲೆಕ್ಕಿಗರಿಂದ ಎಣಿಸಿ ಉತ್ತರಿಸಬಲ್ಲೆಯಾ?!'

'ಪೂಜ್ಯಳೇ, ಖಂಡಿತ ಸಾಧ್ಯವಿಲ್ಲ....!'

'ಎಲೈ ದೊರೆಯೇ, ಸಮುದ್ರದ ಬಗ್ಗೆ ನಿಖರವಾಗಿ ಹೇಳಬಲ್ಲೆಯಾ? ನೀರಿನ ಪ್ರಮಾಣ ಎಷ್ಟೆಂದು ಅಳೆಯಬಲ್ಲೆಯಾ ? ಅಥವಾ ಅದಕ್ಕಾಗಿ ಸಹಸ್ರಾರು ಈಜುಗಾರರನ್ನು ನೇಮಿಸಿ ನಿಖರ ಉತ್ತರ ನೀಡಬಲ್ಲೆಯಾ?'

'ಪೂಜ್ಯಳೇ, ಇಲ್ಲ.. ಇದೂ ಕೂಡ ಖಂಡಿತ ಸಾಧ್ಯವಿಲ್ಲ...!'

'ಎಲೈ ದೊರೆಯೇ, ಅದು ಏಕೆ ಹಾಗೆ ?'

'ಪೂಜ್ಯಳೇ, ಮರಳಾಗಲಿ, ಸಮುದ್ರವಾಗಲಿ ಅಗಾಧವಾದದ್ದು. ಆಳವಾದದ್ದು. ವಿಸ್ತಾರವಾದದ್ದು ಮತ್ತು ಅಳತೆಗೆ ಮೀರಿದ್ದು'

'ಎಲೈ ದೊರೆಯೇ, ನಾವು ಈ ಮಿತಿಯನ್ನು ಅರ್ಥಮಾಡಿಕೊಳ್ಳಬೇಕು. ತಥಾಗತನು ಇದನ್ನು ಬೇರೆಲ್ಲರಿಗಿಂತ ಸ್ಪಷ್ಟವಾಗಿ, ನಿಖರವಾಗಿ ಅರ್ಥಮಾಡಿಕೊಂಡಿದ್ದಾನೆ. ಹಾಗಾಗಿ ಈ ಬಗ್ಗೆ ಇಲ್ಲಸಲ್ಲದ್ದನ್ನು ಉತ್ತರಿಸುವ ಬದಲು ಏನನ್ನೂ ಉತ್ತರಿಸಲಿಲ್ಲ. ಬದಲಿಗೆ ನನಗೆ ಗೊತ್ತಿಲ್ಲ ಎನ್ನಲೂ ಇಲ್ಲ. ಗೊತ್ತಿದೆ ಎನ್ನಲು ಇಲ್ಲ. ನನಗೆ ಪಾರಮಾರ್ಥಿಕದ ಗೊಡವೆಯೇ ಬೇಡವೆಂದ. ಕಾರಣವಾದಕ್ಕೆ ಸಿಲುಕದೆ ಇದ್ದುದ್ದನ್ನು ಗಂಭಿರವಾಗಿ ಪರಿಗಣಿಸದೇ ಮೌನವಾಗಿ ನಕ್ಕು ತಿರಸ್ಕರಿಸಿದ.'

'ಎಲೈ ದೊರೆಯೇ, ಯಾರಾದರೂ ಕೇವಲ ಭಾವನೆಯ ಆಧಾರದ ಮೇಲೋ, ಬುದ್ಧನ ಬಗ್ಗೆ ನಮಗಿರುವ ಅಪಾರ ಪ್ರೀತಿಯ ಆಧಾರದಿಂದಲೋ, ತಥಾಗತನು ಮರಣದ ನಂತರ ಇರುತ್ತಾನೆಂದಾಲಿ, ಅಥವಾ ಇರುವುದಿಲ್ಲ ಎಂದಾಗಲಿ ವಾದಿಸುವುದು

ಸತ್ಯಕ್ಕೆ ಎಸಗಿದ ಅಪಚಾರವೇ ಸರಿ. ಅದಕ್ಕೆ ಬದಲಾಗಿ ತಥಾಗತನು ಮಹಾಸಾಗರದಂತೆ ಗಹನ, ಸೀಮಾತೀತ ಮತ್ತು ಅಳತೆಗೆ ಸಿಗದಾತ ಎಂಬುದು ಹೆಚ್ಚು ಸಮಂಜಸ. ದೊರೆಯೇ, ಇದೇ ರೀತಿ ಪ್ರತ್ಯಕ್ಷಣ, ಕಾರ್ಯ ಚಟುವಟಿಕೆಗಳು ಮತ್ತು ಪ್ರಜ್ಞೆಗಳ ಆಧಾರದ ಮೇಲೆ ತಥಾಗತನ ವ್ಯಾಖ್ಯೆಯನ್ನು ಕೊಡಲು ಯಾರಾದರೂ ಪ್ರಯತ್ನಿಸಿದರೆ ಅದು ನಿರರ್ಥಕ, ಏಕೆಂದರೆ, ನಮ್ಮ ಪ್ರಜ್ಞೆಯ ಮಿತಿಗೆ ಹೊರತಾದದ್ದು, ಪ್ರಜ್ಞೆಯನ್ನು ಮೀರಿದ್ದು, ಮತ್ತು ಪ್ರಜ್ಞಾತೀತವಾದದ್ದೇ ಯಾವಾಗಲೂ ಆಳವಾದದ್ದು, ಅಳತೆ ಮೀರಿದ್ದು, ಸೀಮಾತೀತವಾದದ್ದು ಅಥವಾ ಮರಳು ಮತ್ತು ಸಮುದ್ರದ ರೂಪತಾಳಿದ್ದು, ತಥಾಗತನು ಈ ಕಾರಣಕ್ಕಾಗಿಯೇ ಸತ್ಯವು ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಸದಾ ಬದಲಾಗುತ್ತಿರುತ್ತದೆ. ಬದಲಾವಣೆಯೇ ಅದರ ನಿಜ ಸ್ವರೂಪ. ಹಾಗಾಗಿ ಅಂತಿಮ ಸತ್ಯ ಎಂಬುದಿಲ್ಲ, ನಿಮ್ಮ ನಿಮ್ಮ ಅನಿಸಿಕೆ ಮತ್ತು ತೀರ್ಮಾನಗಳೇ ಅಂತಿಮ. ಆದರೆ ಅದರ ಹಿಂದೆ ಅರಿವು ಮತ್ತು ಪ್ರಜ್ಞೆ ಇರಲಿ ಎಂದ. ಆತ ಇದೇ ಮನುಕುಲದ ಮಿತಿಯೂ ಹೌದು ಸತ್ಯವೂ ಹೌದೆಂದ. ಅರ್ಥವಾಯಿತೇ ದೊರೆಯೇ...!?' ಎಂದಳು. ಆಗ ದೊರೆ ಪಸೇನದಿಯು ತನ್ನೆರಡು ಕೈಗಳನ್ನು ಎತ್ತಿ ತಲೆಬಾಗಿ ಹೀಗೆ ವಂದಿಸುತ್ತಾನೆ;

'ಅರ್ಥವಾಯಿತು ಪೂಜ್ಯಳೇ, ಅರ್ಥವಾಯಿತು! ಅದ್ಭುತ ತಾಯಿ, ನಿನ್ನ ವಾದ ಅದ್ಭುತ ಮತ್ತು ಸತ್ಯಕ್ಕೆ ಸಮೀಪ.! ನೀನು ನಿಜಕ್ಕೂ ಬುದ್ಧನ ಪರಮಶಿಷ್ಯಳೇ ಸರಿ..!!' ಎಂದ.

★ ★ ★

ಬುದ್ಧನೆಂದ ಪಸೇನದಿಗೆ ; ಪ್ರಶ್ನಿಸದಿರು ಸಾವಿನ ಬಳಿಕ ಏನೆಂದು?

ಕೋಸಲದ ದೊರೆ ಪಸೇನದಿಯು ತೋರಣ ವತ್ತುವಿನಲ್ಲಿ ಸಾಧ್ವಿ ಖೇಮಾಳನ್ನು ಸಂಧಿಸಿ ಸಾವಿನ ಬಳಿಕ ಏನು? ಎಂಬ ಪ್ರಶ್ನೆಯ ಬಗ್ಗೆ ಅವಳಿಂದ ಪ್ರವಚನ ಪಡೆದ ಮೇಲೆ ಬಹಳ ಹರ್ಷಚಿತ್ತನಾಗಿದ್ದ, ಆದರೂ ಅವನ ಒಳ ಮನಸ್ಸು ಈ ಬಗ್ಗೆ ಒಮ್ಮೆ ಬುದ್ಧನನ್ನು ಸಂಧಿಸಲೇಬೇಕು ಮತ್ತು ಪ್ರಶ್ನಿಸಬೇಕೆಂದು ಹಾತೊರೆಯುತ್ತಿತ್ತು, ಒಮ್ಮೆ ಬುದ್ಧ ಮತ್ತು ಅವನ ಭಿಕ್ಷು ಸಹೋದರರನ್ನು ತನ್ನ ರಾಜ್ಯಕ್ಕೆ ಆಹ್ವಾನಿಸಿದ. ಬುದ್ಧನು ಶ್ರಾವಸ್ತಿಯ ಚೇತನವನದಲ್ಲಿ ಬೀಡು ಬಿಟ್ಟಿದ್ದ.

ಬುದ್ಧನನ್ನು ಸಂಧಿಸಿದ ದೊರೆ ಪಸೇನದಿಯು ಭಕ್ತಿಗೌರವದಿಂದ ವಂದಿಸಿ ಸಮೀಪವೇ ಕುಳಿತು ಹೀಗೆ ಪ್ರಶ್ನಿಸಿದ:

'ಮಹಾಪ್ರಭು, ಬಹುದಿನದಿಂದ ನನ್ನನ್ನು ಕಾಡುತ್ತಿರುವ ಪ್ರಶ್ನೆಯೊಂದಿದೆ. ಅದನ್ನು ತಮ್ಮನ್ನೇ ನೇರವಾಗಿ ಪ್ರಶ್ನಿಸುವುದು ಸೂಕ್ತವೆಂದು ಬಗೆದು ವಿನಂತಿಸಿಕೊಳ್ಳುತ್ತಿರುವೆ. ಮರಣದ ನಂತರ ತಥಾಗತನು ಬದುಕಿರುವನೆ?'

'ಎಲೈ ದೊರೆಯೇ, ಈ ವಿಷಯ ನನ್ನಿಂದ ವ್ಯಕ್ತವಾಗಿಲ್ಲ'

'ಮಹಾಪ್ರಭು, ಹಾಗಾದರೆ, ತಥಾಗತರು ಮರಣದ ನಂತರ ಬದುಕಿರುವುದಿಲ್ಲವೆ?'

'ಎಲೈ ದೊರೆಯೇ, ಈ ಪ್ರಶ್ನೆಗೆ ಕೂಡ ನಾನೆಲ್ಲು ಉತ್ತರಿಸಿಲ್ಲ'

'ಮಹಾಪ್ರಭು, ಪರಮಾತ್ಮ ಅಥವಾ ದೇವರಿದ್ದಾನೆಯೆ ?'

'ಎಲೈ ದೊರೆಯೇ, ಈ ಪ್ರಶ್ನೆಗೆ ಕೂಡ ನಾನು ಉತ್ತರಿಸಿಲ್ಲ'

'ಮಹಾಪ್ರಭು, ಆತ್ಮ ಎಂಬುದು ಇದಿಯೆ?'

'ಎಲೈ ದೊರೆಯೇ, ಈ ಪ್ರಶ್ನೆಗೆ ಕೂಡ ನಾನು ಉತ್ತರಿಸಿಲ್ಲ'

'ಮಹಾ ಪ್ರಭು, ಪುರ್ನಜನ್ಮ ಎಂಬುದು ಉಂಟೆ?'

'ಎಲೈ ದೊರೆಯೇ, ಈ ಪ್ರಶ್ನೆಗೆ ಕೂಡ ನಾನು ಉತ್ತರಿಸಿಲ್ಲ'

'ಮಹಾಪ್ರಭು, ಸ್ವರ್ಗ - ನರಕಗಳುಂಟೆ?'

'ಎಲೈ ದೊರೆಯೇ, ಈ ಪ್ರಶ್ನೆಗೆ ಕೂಡ ನಾನು ಉತ್ತರಿಸಿಲ್ಲ'

'ಮಹಾಪ್ರಭು, ಅತಿಮಾನುಷ ಶಕ್ತಿ ಮತ್ತು ಪವಾಡಗಳು ನಿಜವೆ?'

'ಎಲೈ ದೊರೆಯೇ, ಈ ಪ್ರಶ್ನೆಗೆ ಕೂಡ ನಾನು ಉತ್ತರಿಸಿಲ್ಲ'

'ಮಹಾಪ್ರಭು, ಇದಕ್ಕೆ ಕಾರಣವೇನು? ನಿಮಿತ್ತವೇನು? ಈ ಘಹನವು, ಗಂಭೀರವೂ, 'ಮೂಲಭೂತವೂ ಆದ ಈ ವಿಷಯಗಳು ತಮ್ಮಿಂದ ಏಕೆ ಉತ್ತರ ಪಡೆದಿಲ್ಲ?'

'ಎಲೈ ದೊರೆಯೇ, ಈ ಎಲ್ಲವೂ ಊಹೆ, ಕಲ್ಪನೆ, ಕನಸು, ಕುತಂತ್ರ, ವ್ಯವಸ್ಥಿತ ಸಂಚು, ಪರಾವಲಂಬಿತನ ಹಾಗೂ ಶೋಷಣೆಗೆ ಮೂಲವಾದದ್ದರಿಂದ ನನ್ನ ಪ್ರಜ್ಞೆಯ ಮಿತಿಗೆ ಅತೀತವಾದದ್ದರಿಂದ. ನನ್ನ ಅಲ್ಪ ಆಯುಷ್ಯದ ಮಿತಿಗೆ ಸವಾಲಾದುದ್ದರಿಂದ. ನನ್ನ ಪಂಚೇಂದ್ರಿಯಗಳಿಗೆ ಸ್ಪರ್ಶಿಸದೆ ಇದ್ದುದ್ದಕ್ಕೆ ನನ್ನ ಅನುಭವ, ಅನುಭಾವ, ಇರುವಿಕೆ, ಆಗುವಿಕೆ ಮತ್ತು ಸ್ಪರ್ಶಕ್ಕೆ ನಿಲುಕದೇ ಇದ್ದುದ್ದರಿಂದ. ಈ ಯಾವುದರ ಹಿನ್ನೆಲೆಯಲ್ಲಿಯೂ ಕಾರ್ಯಕಾರಣ ಸಂಬಂಧ ಇಲದೇ ಇರುವುದರಿಂದ. ಈ ಎಲ್ಲವನ್ನೂ ಮೌನವಾಗಿ ತಿರಸ್ಕರಿಸಿದೆ'.

'ವಿಚಿತ್ರ ಮಹಾಪ್ರಭು, ಆದರೆ ಕರ್ಮ ಸಿದ್ಧಾಂತವನ್ನು ನೇರವಾಗಿ, ಸ್ಪಷ್ಟವಾಗಿ, ಕಟುವಾಗಿ ಟೀಕಿಸಲು ಕಾರಣವೇನು?'

'ಎಲೈ ದೊರೆಯೇ, ಅದು ಬದುಕಿಗೆ ನೇರವಾಗಿ ಸಂಬಂಧಿಸಿದ್ದು ಎಂಬ ಕಾರಣಕ್ಕೆ! ಅಸಮಾನತೆ ಮತ್ತು ಶೋಷಣೆಗೆ ಮೂಲ ಎಂಬ ಕಾರಣಕ್ಕೆ! ಇದೂ ಕೂಡ ಊಹೆ, ಕಲ್ಪನೆ ಮತ್ತು ಕೃತ್ರಿಮಕ್ಕೆ ಮೂಲಮಂತ್ರ ಎಂಬ ಕಾರಣಕ್ಕಾಗಿ!'

'ಮಹಾಪ್ರಭು, ಈ ಕಾರಣಗಳಿಗಾಗಿ ಪಾರಮಾರ್ಥ್ಯವನ್ನೇ ಅಲ್ಲಗಳೆಯುವುದು ಸಮಂಜಸವೇ? ಇದರಿಂದ ಒಮ್ಮೆಲೆ ಮನುಷ್ಯ ತತ್ತರಿಸಿ ಹೋಗುವುದಿಲ್ಲವೆ? ಇದು ಪ್ರವಾಹಕ್ಕೆ ಎದುರಾಗಿ ಈಜುವ ನಿಲುವಲ್ಲವೆ? ಇದು ಅನ್ಯಾಯವಲ್ಲವೆ?'

'ಎಲೈ ದೊರೆಯೇ, ಯಾವುದು ಅನ್ಯಾಯ?! ತೋರಿಕೆಗಾಗಿ ನಟನೆ ಮಾಡುವುದು ಅನ್ಯಾಯವಲ್ಲವೆ? ಮತ್ತೋಬ್ಬರನ್ನು ಮೆಚ್ಚಿಸಲಿಕ್ಕಾಗಿ ಸುಳ್ಳು ಹೇಳುವುದು ಅನ್ಯಾಯವಲ್ಲವೆ? ಸತ್ಯವನ್ನು ಸತ್ಯವೆಂದು, ಅಸತ್ಯವನ್ನು ಅಸತ್ಯ ಎಂದು ಸ್ಪಷ್ಟವಾಗಿ ಪ್ರತಿಪಾದಿಸುವುದು ಅನ್ಯಾಯವೆ?'

'ಎಲೈ ದೊರೆಯೇ, ಹಾಗಾದರೆ ನಿನಗೊಂದು ಪ್ರಶ್ನೆಯನ್ನು ಕೇಳುತ್ತೇನೆ. ನಿನಗೆ ಯಾವುದು ಸೂಕ್ತವೆನಿಸುತ್ತದೋ ಹಾಗೆ ಉತ್ತರಿಸು. ನೀನಾಗಲಿ, ನಿನ್ನ ಸಿಬ್ಬಂದಿಗಳಾಗಲಿ, ಅಸಂಖ್ಯಾತ ಲೆಕ್ಕಿಗರಾಗಲಿ ಗಂಗಾನದಿಯಲ್ಲಿನ ಮರಳ ಕಣಗಳ ಸಂಖ್ಯೆಯನ್ನು ನಿಖರವಾಗಿ ಹೇಳಬಲ್ಲಿರಾ? ಅಥವಾ ಸಮುದ್ರದ ಆಳ, ಅಗಲ, ಉದ್ದ ಮತ್ತು ನೀರಿನ ಪ್ರಮಾಣವನ್ನು ಹೇಳಬಲ್ಲಿರಾ?'

'ಮಹಾಪ್ರಭು, ಸಾಧ್ಯವಿಲ್ಲ, ಖಂಡಿತಾ ಸಾಧ್ಯವಿಲ್ಲ, ಏಕೆಂದರೆ ಇದು ನನ್ನ ಮಿತಿಗೆ ಮೀರಿದ್ದು, ನನ್ನ ಊಹೆ, ಕನಸು ಮತ್ತು ಕಲ್ಪನೆಗೆ ಮೀರಿದ್ದು..!'

'ಎಲೈ ದೊರೆಯೇ, ನಾನು ಕೂಡ ಇದನ್ನೇ ಹೇಳಿದ್ದು..! ಇದಕ್ಕಿಂತ ಹೊಸದನ್ನು, ಭಿನ್ನವಾದುದ್ದನ್ನು ಏನೂ ಹೇಳಲಿಲ್ಲ...!!!'

'ಅದ್ಭುತ ಪ್ರಭು ! ಅದ್ಭುತ ! ಆಶ್ಚರ್ಯಕರ, ಆದೆಷ್ಟು ವಿಚಿತ್ರ ಪ್ರಭು!! ಗುರು ಶಿಷ್ಯರಿಬ್ಬರ ಅರ್ಥ ವಿವರಣೆಯೂ ಅಕ್ಷರ ಮತ್ತು ಅರ್ಥ ಎರಡರಲ್ಲಿಯೂ ಹೊಂದಾಣಿಕೆ, ಸಾಂಗತ್ಯ ಮತ್ತು ಉತ್ಕೃಷ್ಟತೆ ಇದೆ'

'ಮಹಾಪ್ರಭು, ಈ ಹಿಂದೆ ಒಮ್ಮೆ ನಿಮ್ಮ ಪರಮಶಿಷ್ಯಳಾದ ಸಾಧ್ವಿ ಖೇಮಾಳನ್ನು ಸಂಧಿಸಿ ಇದೇ ಪ್ರಶ್ನೆಗಳನ್ನು ಕೇಳಿದೆ. ಇದೇ ಉತ್ತರವನ್ನು ಪಡೆದೆ. ಅಕ್ಷರ ಮತ್ತು ಅರ್ಥಗಳಲ್ಲಿ ಎಂಥಹ ಸಾಮ್ಯವಿದೆ. ಉತ್ಕೃಷ್ಟ ತಂದೆಯೇ, ಉತ್ಕೃಷ್ಟ..!'

'ಹೌದು, ಮಹಾಪ್ರಭು ನಿನ್ನಂತಹ ಗುರುವನ್ನು, ನೀನು ತರಬೇತುಗೊಳಿಸಿದ ಶಿಷ್ಯರನ್ನು ಪಡೆದ ಭರತ ಖಂಡವೇ ಧನ್ಯ...!!' ಎಂದ. □

'ಎಲೈ ದೊರೆಯೇ, ನಿನಗೊಂದು ಪ್ರಶ್ನೆಯನ್ನು ಕೇಳುತ್ತೇನೆ: ಗಂಗಾನದಿಯಲ್ಲಿರುವ ಅಸಂಖ್ಯಾತ ಮರಳಿನ ಕಣಗಳನ್ನು ಎಷ್ಟೆಂದು ಹೇಳಬಲ್ಲೆಯ? ಒಬ್ಬ ಅಥವಾ ಅಸಂಖ್ಯಾತ ಲೆಕ್ಕಿಗರಿಂದ ಎಣಿಸಿ ಉತ್ತರಿಸಬಲ್ಲೆಯಾ?!'

'SAMVADA' Kannada Monthly, SEPTEMBER 2005 RNI-KAR KAN/2002/9246 CPMG/KA/BGW-706/2003-05

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು

ಡೆಂಗಿ ಜ್ವರ ಎಂದರೇನು?

ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಖಾಯಿಲೆ. ಈ ಖಾಯಿಲೆಯು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಬಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ರಕ್ತ ಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು

1. ಡೆಂಗಿ ಹರಡುವ ಈಜಿಪ್ಟೈ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.

2. ಬಯಲಲ್ಲಿ ಟೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

3. ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ದರು, ಖಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದರಿಂದ ಈ ರೋಗವನ್ನು ತಡೆಗಟ್ಟಲು ಸುಲಭ ಹಾಗೂ ಸರಳ ವಿಧಾನ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ
ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

ಕರ್ನಾಟಕ ವಾರ್ತೆ
Karnataka Information